ಮಾನವಿಕ ಕರ್ಣಾಟಕ

ಸಂಪುಟ ೨ ಸಂಚಿಕೆ ೩

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೭೨

ಲೇಖಕರಿಗೆ ಸೂಚನೆಗಳು

೧ ಮಾನವಿಕ ಶಾಸ್ತ್ರ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಆವಶ್ಯಕವಾದ ಚಿತ್ರಗಳಿದ್ದರೆ ಅವನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು; ಅವುಗಳಲ್ಲಿ ಬದಲಾವಣೆಗಳೇನಾದರೂ ಆವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನಗಳನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆ ಮಾಡುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು–೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೨ ಸಂಚಿಕೆ ೩

೭

ಮೇ ಸಂಚಿಕೆ

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೭೨

MANAVIKA KARNATAKA, Kannada Quarterly of the University of Mysore. Volume 2, Number 3, May 1972. Edited by H. S. Krishnaswamy Iyengar and Dr. A. V. Narasimha Murthy.

ಪ್ರಧಾನ ಸಂಪಾದಕರು

ಡಾ. ಹಾ. ಮಾ. ನಾಯಕ

ಸಂಪಾದಕರು

ಎಚ್. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್

ಡಾ. ಎ. ವಿ. ನರಸಿಂಹಮೂರ್ತಿ

ಪ್ರಕಾಶಕರು

ಡಾ. ಪ್ರಭುಶಂಕರ

ಡೈರೆಕ್ಟರ್, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ

ಮುದ್ರಕರು

ಎಚ್. ನರಸಣ್ಣ

ಡೈರೆಕ್ಟರ್, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ

ವಿಷಯಸೂಚಿ

ಈ ಸಂಚಿಕೆಯ ಲೇಖಕರು

1 ಬಿ. ಕೆ. ಶಿವರಾಮಯ್ಯ, ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ಸಂಸ್ಕೃತ ವಿಭಾಗದಲ್ಲಿ ಅಧ್ಯಾಪಕರು

2 ಸದಾಶಿವಯ್ಯ, ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ಅರ್ಥಶಾಸ್ತ್ರ ವಿಭಾಗದಲ್ಲಿ ಸಂಶೋಧನ ವಿದ್ಯಾರ್ಥಿ

3 ಪ್ರೊ. ಪಿ. ಕೆ. ಪಾಟೀಲ್, ಮೈಸೂರು ವಿಶ್ವವಿದ್ಯಾನಿಲಯದ ಗ್ರಂಥಪಾಲಕರು, ಗ್ರಂಥಾಲಯ ವಿಜ್ಞಾನದ ಪ್ರಾಧ್ಯಾಪಕರು

4 ಡಾ. ಟಿ. ಆರ್. ರಾವ್, ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯಲ್ಲಿ ಮನಶ್ಶಾಸ್ತ್ರ ವಿಭಾಗದಲ್ಲಿ ಅಧ್ಯಾಪಕರು

5 ಟಿ. ಕೆ. ವಾಸುದೇವ ಭಟ್, ಮುಲ್ಕಿಯ ವಿಜಯ ಕಾಲೇಜಿನಲ್ಲಿ ಸಮಾಜಶಾಸ್ತ್ರ ಅಧ್ಯಾಪಕರು

6 ಡಾ. ಪಿ. ಗುರುರಾಜ ಭಟ್, ದಕ್ಷಿಣ ಕನ್ನಡ ಜಿಲ್ಲೆಯ ಕಲ್ಯಾಣಪುರದ ಮಿಲಾಗ್ರಿಸ್ ಕಾಲೇಜಿನ ಪ್ರಿನ್ಸಿಪಾಲರು

7 ಡಾ. ಅಬ್ದುಲ್ ಅಜೀಜ್, ಮೈಸೂರು ವಿಶ್ವವಿದ್ಯಾನಿಲಯದ ಅಂಚೆ ಮತ್ತು ತೆರಪಿನ ಶಿಕ್ಷಣ ವಿಭಾಗದಲ್ಲಿ ಅರ್ಥಶಾಸ್ತ್ರ ಪ್ರಾಧ್ಯಾಪಕರು

8 ಟಿ. ವಿ. ವೆಂಕಟಾಚಲ ಶಾಸ್ತ್ರೀ, ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಅಧ್ಯಾಪಕರು

9 ಕೆ. ಜಿ. ವಸಂತಮಾಧವ, ಮುಲ್ಕಿಯ ವಿಜಯ ಕಾಲೇಜಿನಲ್ಲಿ ಇತಿಹಾಸ-ರಾಜ್ಯಶಾಸ್ತ್ರ ಅಧ್ಯಾಪಕರು

10 ಡಾ. ಎಂ. ಮಾದಯ್ಯ, ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯಲ್ಲಿ ಅರ್ಥಶಾಸ್ತ್ರ ರೀಡರ್

11 ಡಿ. ಶ್ರೀನಿವಾಸ, ಮಂಡ್ಯದ ಪಿ.ಇ.ಎಸ್. ಕಾಲೇಜಿನಲ್ಲಿ ವಾಣಿಜ್ಯಶಾಸ್ತ್ರ ಅಧ್ಯಾಪಕರು

12 ಎಚ್. ಎ. ಖಾನ್, ಮೈಸೂರು ವಿಶ್ವವಿದ್ಯಾನಿಲಯದ ಗ್ರಂಥಾಲಯ ವಿಜ್ಞಾನ ರೀಡರ್

13 ಡಾ. ಕೆ. ಎಸ್. ಗುರುಬಸವೇಗೌಡ, ಮಾನಸಗಂಗೋತ್ರಿಯ ಭಾರತೀಯ ಭಾಷಾ ಸಂಸ್ಥಾನದಲ್ಲಿ ಸಹಾಯಕ ಸಂಶೋಧಕರು

14 ಸೀತಾರಾಮ ಜಾಗೀರ್‌ದಾರ್, ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಎಪಿಗ್ರಾಫಿಯ ಕರ್ನಾಟಿಕ ವಿಭಾಗದಲ್ಲಿ ಶಾಸನ ಸಹಾಯಕರು

15 ಕೆ. ಎಸ್. ನಂಜುಂಡಪ್ಪ, ಮಾನಸಗಂಗೋತ್ರಿಯ ಇತಿಹಾಸ ವಿಭಾಗದಲ್ಲಿ ಅಧ್ಯಾಪಕರು

16 ಕುಕ್ಕಿಲ ಕೃಷ್ಣಭಟ್ಟ, ಕನ್ನಡ–ಸಂಸ್ಕೃತ ವಿದ್ವಾಂಸರು, ಕಲಾ ವಿಮರ್ಶಕರು

17 ಕೆ. ಬಿ. ಪ್ರಭುಪ್ರಸಾದ್, ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರು

18 ಡಾ. ಎಚ್. ಎಂ. ಸದಾಶಿವಯ್ಯ, ಮಾನಸಗಂಗೋತ್ರಿಯ ಸಮಾಜಶಾಸ್ತ್ರ ವಿಭಾಗದಲ್ಲಿ ರೀಡರ್

19 ಎಸ್. ಚನ್ನಪ್ಪ, ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ವಿಷಯ ವಿಶ್ವಕೋಶದ ಉಪಸಂಪಾದಕರು

ಬಿ. ಕೆ. ಶಿವರಾಮಯ್ಯ

ಮಹಾಮಹೋಪಾಧ್ಯಾಯ ಡಾ. ಪಾಂಡುರಂಗ ವಾಮನ ಕಾಣೆ

ಭಾರತೀಯ ಸಂಸ್ಕೃತಿಯ ಸಾರವತ್ತಾದ ಅಂಶಗಳನ್ನು ಗ್ರಹಿಸಿ ಅವನ್ನು ಅನುಷ್ಠಾನಕ್ಕೆ ತಂದ ಮಹಾ ಪುರುಷರ ಪಂಕ್ತಿಯಲ್ಲಿ ಡಾ. ಕಾಣೆಯವರೂ ಸೇರಿದ್ದಾರೆ. ಅವರು ಬಾಲ್ಯದಿಂದಲೂ ತಮ್ಮ ಪ್ರತಿಭೆಯನ್ನು ಬೆಳಗಿಸಿಕೊಂಡು ಬಂದವರು. ಸಾರಸ್ವತ ಹಾಗೂ ಸಮಾಜ ಸೇವೆಗಳಿಗೋಸ್ಕರ ತಮ್ಮ ಧೀಶಕ್ತಿ ಜ್ಞಾನಾರ್ಜನೆಗಳನ್ನು ವೃದ್ಧಿಪಡಿಸಿಕೊಂಡು ತನ್ಮೂಲಕ ಜೀವನದ ಸಾರ್ಥಕ್ಯವನ್ನು ಕಂಡವರು. ಇಂತಹ ಎಲ್ಲ ಗುಣಗಳ ಸಮನ್ವಯವೇ ಅವರ ಕರ್ಮಯೋಗ; ಅದರ ಫಲ ಅವರ ಆತ್ಮದ ಔನ್ನತ್ಯ ಮತ್ತು ವಿಶ್ವಪ್ರೇಮ.

ಡಾ. ಕಾಣೆಯವರದು ವೈವಿಧ್ಯಮಯ ಜೀವನ. ವಿದ್ಯಾರ್ಥಿದಶೆಯಲ್ಲೇ ವಿಶಿಷ್ಟಸ್ಥಾನಾದಿಗಳನ್ನು ಪಡೆದರು. ಸಾಮಾಜಿಕ ಸುಧಾರಣೆಯಲ್ಲೂ ಸಂಸ್ಕೃತ ವಿದ್ಯೆಯಲ್ಲೂ ಶ್ರದ್ಧೆ ಆಸಕ್ತಿಯುಳ್ಳವರಾಗಿ ಅವುಗಳ ಬಗ್ಗೆ ವಿದ್ವತ್ಪೂರ್ಣ ಲೇಖನಗಳನ್ನು ಆಗಲೇ ಬರೆಯಲು ಪ್ರಾರಂಭಿಸಿದರು. ಮುಂದೆ ಮೊಟ್ಟಮೊದಲು ಪ್ರೌಢಶಾಲೆಯಲ್ಲಿ ಉಪಾಧ್ಯಾಯ ವೃತ್ತಿಗೆ ಸೇರಿದರು; ಶಿಕ್ಷಣ ವಿಧಾನಗಳಿಗೆ ಸಂಬಂಧಪಟ್ಟ ಪರೀಕ್ಷಾದಿಗಳಲ್ಲಿ ಉತ್ತೀರ್ಣರಾದರು. ಇಂಗ್ಲಿಷ್ ಮತ್ತು ಸಂಸ್ಕೃತ ಭಾಷಾ ಸಾಹಿತ್ಯಗಳಲ್ಲೂ ನ್ಯಾಯಾಂಗ ವಿಷಯಗಳಲ್ಲೂ ಸ್ನಾತಕ ಪದವಿಗಳು ಅವರಿಗೆ ಲಭಿಸಿದುವು. ಉಪಾಧ್ಯಾಯ ವೃತ್ತಿಗೆ ರಾಜೀನಾಮೆ ಸಲ್ಲಿಸಿ ಹೈಕೋರ್ಟಿನ ವಕೀಲರಾದರು. ಹಲವಾರು ಸಂದರ್ಭಗಳಲ್ಲಿ ಸಂಸ್ಕೃತ ಹಾಗೂ ನ್ಯಾಯಾಂಗ ವಿಷಯಗಳ ಗೌರವ ಪ್ರಾಧ್ಯಾಪಕರಾಗಿದ್ದರು. ಅನೇಕ ವಿಶ್ವವಿದ್ಯಾನಿಲಯಗಳ ಪರೀಕ್ಷಾ ಮಂಡಳಿಗಳು, ಮರಾಠಿ ಮತ್ತು ಸಂಸ್ಕೃತ ವಿದ್ವತ್ತಿಗೆ ಸಂಬಂಧಪಟ್ಟ ಕೆಲವು ಸಂಘ ಸಂಸ್ಥೆಗಳು, ಸಾಹಿತ್ಯ ಸಮ್ಮೇಳನಗಳು—ಇವುಗಳಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸಿ ಕೀರ್ತಿ ಪಡೆದರು. ಸಮಾಜ ಸುಧಾರಣೆಗಳ ವಿಚಾರದಲ್ಲಿ ಸತ್ಪರಿಣಾಮವುಂಟಾಗುವ ರೀತಿಯಲ್ಲಿ ವಿಶಿಷ್ಟ ಸೇವೆ ಸಲ್ಲಿಸಿದರು. ಸ್ವಲ್ಪ ಕಾಲ ಮುಂಬಯಿ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿದ್ದರು. ಅತ್ಯಮೂಲ್ಯವಾದ ಲೇಖನಗಳನ್ನೂ ಉದ್ಗ್ರಂಥಗಳನ್ನೂ ಬರೆದರು. ದೇಶಾದ್ಯಂತ ಪ್ರವಾಸದ ಅನುಭವವನ್ನು ಪಡೆದರು. ಕೆಲವು ವರ್ಷಗಳ ಪರ್ಯಂತ ಭಾರತೀಯ ಸಂಸತ್ತಿನ ಸದಸ್ಯರಾಗಿ ನಾಮಕರಣಗೊಂಡು ರಾಜಕೀಯ ಕ್ಷೇತ್ರದಲ್ಲೂ ದುಡಿದು ದೇಶಸೇವೆ ಜನಸೇವೆಗಳನ್ನು ಮಾಡಿದರು.

ಡಾ. ಕಾಣೆಯವರ ಬಹುಮುಖ ಜೀವನ ಎಷ್ಟು ಅಮೋಘವಾಗಿತ್ತೆಂಬುದನ್ನು ಅಲ್ಲಿಯ ಕೆಲವು ಮುಖ್ಯ ಘಟನೆಗಳಿಂದಲೂ ಸಾಧನೆಗಳಿಂದಲೂ ಗ್ರಹಿಸಬಹುದು. ಡಾ. ಕಾಣೆಯವರ ವಂಶಜರ ಸ್ವಂತ ಊರು ಮಹಾರಾಷ್ಟ್ರದ ರತ್ನಾಗಿರಿ ಜಿಲ್ಲೆಯ ದಾಪೋಲಿ. ಲೋಕಮಾನ್ಯ ತಿಲಕ್, ಗೋಖಲೆ ಮುಂತಾದ ಮಹಾಮಹಿಮರನ್ನು ಜಗತ್ತಿಗೆ ಕೊಟ್ಟ ಆ ಜಿಲ್ಲೆಯ ಪರಶುರಾಮ್ ಎಂಬಲ್ಲಿ 7–5–1880 ರಂದು ಅವರು ಜನ್ಮತಾಳಿದರು; ಹಾಗೆಯೇ ಅವರ ಜೀವಿತದಲ್ಲಿ ಅಂತಹ ಮಹಾತ್ಮರ ಮೇಲ್ಪಂಕ್ತಿಯ ಅನುಕರಣೆಯನ್ನು ಕಾಣಬಹುದು. ದಾಪೋಲಿಯಲ್ಲಿ ಹೈಸ್ಕೂಲು ವಿದ್ಯಾಭ್ಯಾಸವನ್ನು ಮುಗಿಸಿ ಅವರು

ತಮ್ಮ ಇಪ್ಪತ್ತೊಂದನೆಯ ವಯಸ್ಸಿನಲ್ಲಿ ಮುಂಬಯಿಯ ವಿಲ್ಸನ್ ಕಾಲೇಜಿನ ಮೂಲಕ ಬಿ. ಎ. ಪದವಿಯನ್ನು ಗಳಿಸಿದರು. ಆ ವೇಳೆಗಾಗಲೇ ಅವರಿಗೆ ಹಲವಾರು ಪಾರಿತೋಷಕಗಳು ದೊರಕಿದ್ದುವು. ಮುಂದಿನ ನಾಲ್ಕಾರು ವರ್ಷಗಳಲ್ಲಿ ಇಂಗ್ಲಿಷ್ ಮತ್ತು ಸಂಸ್ಕೃತ ಎಂ. ಎ., ಎಲ್‌ಎಲ್. ಎಂ. ಮತ್ತು ಶಿಕ್ಷಣ ವಿಚಾರದಲ್ಲಿ ಪದವಿ ಇವು ಅವರಿಗೆ ಲಭಿಸಿದುವು.

1904ರಲ್ಲಿ ಪ್ರಥಮತಃ ರತ್ನಾಗಿರಿಯ ಸರ್ಕಾರಿ ಪ್ರೌಢಶಾಲೆಯಲ್ಲಿ ಅವರು ಅಧ್ಯಾಪಕರಾದರು. ಮೂರು ವರ್ಷಗಳ ತರುವಾಯ ಮುಂಬಯಿಯ ಎಲ್ಫಿನ್‌ಸ್ಟನ್ ಪ್ರೌಢಶಾಲೆಗೆ ವರ್ಗಾಯಿಸಲ್ಪಟ್ಟು, ಅದೇ ಕಾಲೇಜಿನಲ್ಲಿ 1909ರಲ್ಲಿ ತಾತ್ಕಾಲಿಕವಾಗಿ ಸಂಸ್ಕೃತ ಪ್ರೊಫೆಸರ್ ಆಗಿದ್ದರು. 1911ರಲ್ಲಿ ಸರ್ಕಾರಿ ಹುದ್ದೆಗೆ ರಾಜೀನಾಮೆ ಸಲ್ಲಿಸಿ ಮುಂಬಯಿ ಹೈಕೋರ್ಟಿನ ವಕೀಲರಾದರು. 1916–1923ರ ಅವಧಿ ಯಲ್ಲಿ ವಿಲ್ಸನ್ ಕಾಲೇಜು ಹಾಗೂ ಮುಂಬಯಿಯ ಸರ್ಕಾರಿ ಲಾ ಕಾಲೇಜು– ಇಲ್ಲಿ ಕ್ರಮವಾಗಿ ಸಂಸ್ಕೃತದ, ನ್ಯಾಯಾಂಗ ವಿಚಾರಗಳ ಗೌರವ ಪ್ರಾಧ್ಯಾಪಕರಾಗಿದ್ದರು. ಮುಂಬಯಿಯಲ್ಲಿಯ ರಾಯಲ್ ಏಷ್ಯಾ ಟಿಕ್ ಸೊಸೈಟಿ, ಪುಣೆಯ ಭಂಡಾರ್‌ಕರ್ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್, ಲಂಡನ್ ಸ್ಕೂಲ್ ಆಫ್ ಓರಿಯಂಟಲ್ ಸ್ಟಡೀಸ್ ಮುಂತಾದ ಮಹಾಸಂಸ್ಥೆಗಳಲ್ಲಿ ಸದಸ್ಯತ್ವಾದಿ ಸ್ಥಾನಗಳನ್ನು ಪಡೆದು ಸೇವೆ ಸಲ್ಲಿಸಿದರು. 1953ರಿಂದ 1959ರ ವರೆಗೆ ಪಾರ್ಲಿಮೆಂಟಿನ ಸದಸ್ಯರಾಗಿ ನೇಮಕಗೊಂಡಿದ್ದರು. ಜೀವನದಲ್ಲಿ ಉದ್ದಕ್ಕೂ ಭಾರತೀಯ ಸಂಸ್ಕೃತಿಯ ಅನುಷ್ಠಾನ ಅಭಿವೃದ್ಧಿಗಳಲ್ಲಿ ಅತ್ಯಾಸಕ್ತಿಯುಳ್ಳ ವರಾಗಿದ್ದ ಅವರು ಸಾಹಿತ್ಯ ಸಮಾಜಗಳನ್ನು ಕುರಿತು ಅನೇಕ ಲೇಖನಗಳನ್ನೂ ಗ್ರಂಥಗಳನ್ನೂ ರಚಿಸಿದರು; ಐದು ಸಂಪುಟಗಳಲ್ಲಿ, ಸುಮಾರು ಮೂವತ್ತೈದು ವರ್ಷಗಳ ನಿರಂತರ ಪ್ರಯತ್ನದಿಂದ, ಅವರು ಬರೆ ದಿರುವ 'ಹಿಸ್ಟೊರಿ ಆಫ್ ಧರ್ಮಶಾಸ್ತ್ರ' ಎಂಬ ಹೆಸರಿನ ಉದ್ಗ್ರಂಥ 6,000 ಪುಟಗಳಿಗಿಂತಲೂ ಮಿಗಿಲಾಗಿದ್ದು ಗುಣೋತ್ಕರ್ಷದಿಂದ ಕೂಡಿ ಅವರ ಜೀವಿತದ ಉನ್ನತ ಸಾಧನೆಯೊಂದರ ನೇರ ಸಾಕ್ಷಿಯಾಗಿದೆ. ಈ ಗ್ರಂಥದ ಮೊದಲ ಸಂಪುಟ ಹೊರಬಂದದ್ದು 1930ರಲ್ಲಿ; ಆಗ ಡಾ. ಕಾಣೆ ಯವರಿಗೆ ಐವತ್ತು ವರ್ಷ ವಯಸ್ಸು. ಜೀವನದಲ್ಲಿ ಎಷ್ಟೋ ಎಡರು ತೊಡರುಗಳಿದ್ದರೂ ಅವನ್ನೆಲ್ಲ ದಿವ್ಯ ಸಾಹಸದಿಂದ ಎದುರಿಸಿ ತಮ್ಮ ಅಮೋಘ ಆದರ್ಶ ಧ್ಯೇಯಗಳಿಗನುಗುಣವಾಗಿ ಕಾರ್ಯ ಗಳನ್ನು ನಿರ್ವಹಿಸಿದ್ದರಿಂದ ಪರಿಪೂರ್ಣತೆಯ ಸಂತೃಪ್ತಿ ಅವರದಾಗಿದ್ದಿತು. ಇಡೀ ಜೀವಮಾನದಲ್ಲಿ ನಿಸ್ವಾರ್ಥತೆ, ತ್ಯಾಗಬುದ್ಧಿ, ಸತ್ಕ್ರಿಯಾಶೀಲತೆ ಇವುಗಳಿಗೆ ಆಕರದಂತಿದ್ದ ಅವರು 18–4–1972ರ ರಾತ್ರಿ ತಮ್ಮ 92ನೆಯ ವಯಸ್ಸಿನಲ್ಲಿ ಕಣ್ಮರೆಯಾದರು ; ಜಗತ್ತಿನ ಸಜ್ಜನಿಕೆಗೆ, ವಿದ್ವತ್ತಿಗೆ ಅಪಾರ ನಷ್ಟವುಂಟಾಯಿತು.

ಡಾ. ಕಾಣೆಯುವರ ಬರವಣಿಗೆ ಸಾಹಿತ್ಯ, ಧರ್ಮಶಾಸ್ತ್ರ ಇತ್ಯಾದಿ ವಿಷಯುಗಳನ್ನು ಕುರಿತ ಲೇಖನ ಗಳ ಮತ್ತು ಕೃತಿಗಳ ರೂಪದಲ್ಲಿ ವಿಪುಲವಾಗಿದೆ. ಸಂಸ್ಕೃತ ಕಾವ್ಯಗ್ರಂಥಗಳನ್ನು ಸಂಪಾದಿಸುವುದರ ಆಸಕ್ತಿಯಿಂದ ವೇದಾಂತ, ಪೂರ್ವಮೀಮಾಂಸಾಶಾಸ್ತ್ರಗಳ ವಿವೇಚನೆಯ ವರೆಗೆ ಅವರ ಅಧ್ಯಯನದ ಮತ್ತು ಬರವಣಿಗೆಯ ವ್ಯಾಪ್ತಿ; ಈ ಮಧ್ಯೆ ಅಲಂಕಾರಶಾಸ್ತ್ರ, ಧರ್ಮಶಾಸ್ತ್ರ, ಮಹಾಭಾರತ, ನ್ಯಾಯಾಂಗ ವಿಚಾರ, ಮಹಾರಾಷ್ಟ್ರದ ಭೂಗೋಳ ಮುಂತಾದವುಗಳ ಬಗ್ಗೆ ಇಂಗ್ಲಿಷಿನಲ್ಲಿ ಹಲವಾರು ಲೇಖನಗಳನ್ನು ಬರೆದಿರುವುದಲ್ಲದೆ, ಆ ವಿಷಯಗಳಲ್ಲಿ ಕೆಲವನ್ನು ಕುರಿತು ಉದ್ಗ್ರಂಥಗಳನ್ನೂ ರಚಿಸಿ ದ್ದಾರೆ. ಅಲ್ಲದೆ ಭಾರತರಾಮಾಯಣಕಾಲೀನ ಸಮಾಜಸ್ಥಿತಿ, ಸಂಸ್ಕೃತ ಸಾಹಿತ್ಯದ ಇತಿಹಾಸ, ಧರ್ಮ ಶಾಸ್ತ್ರ, ರಾಷ್ಟ್ರೀಯ ಶಿಕ್ಷಣ– ಮುಂತಾದ ವಿಷಯುಗಳನ್ನು ಕುರಿತು ಅನೇಕ ಮರಾಠೀ ಗ್ರಂಥಗಳನ್ನೂ ಲೇಖನಗಳನ್ನೂ ಅವರು ಬರೆದಿದ್ದಾರೆ. ವೈವಿಧ್ಯ, ಉಪಯುಕ್ತತೆ, ವ್ಯಾಪ್ತಿ ವೈಶಾಲ್ಯ ಇತ್ಯಾದಿ ಗುಣ ಗಳಿಂದ ಕೂಡಿದ ಆ ಗ್ರಂಥರಾಶಿಯಲ್ಲಿ ಸೂಚಕವಾಗಿ ಇಲ್ಲಿ ಕೆಲವು ಹೆಸರುಗಳನ್ನು ಕೊಡಲಾಗಿದೆ:
ಪೀಠಿಕೆ, ಟಿಪ್ಪಣಿಗಳೊಡನೆ ಅವರಿಂದ ಸಂಪಾದಿತವಾಗಿರುವ ಕೆಲವು ಗ್ರಂಥಗಳು :

1 ವಿಶ್ವನಾಥನ ಸಾಹಿತ್ಯದರ್ಪಣ
2 ಬಾಣಕವಿಯ ಕಾದಂಬರೀ
3 ಭವಭೂತಿಯ ಉತ್ತರರಾಮಚರಿತ
4 ಬಾಣಕವಿಯ ಹರ್ಷಚರಿತ

5 Dharmasutra of Sarika-Likhita—Reconstructed from Quotations
6 Vyavaharamayukha of Nilakantha
7 . Katyayana smritisaroddhara—Reconstructed from Quotations

ಸ್ವತಂತ್ರ ಗ್ರಂಥಗಳು:

8 History of Sanskrit Poetics
9 A Brief Sketch of Purvamimamsa system
10 Vedic Basis of Hindu Law
11 History of Dharmasastra (5 ಸಂಪುಟಗಳು)
12 ಸಂಸ್ಕೃತ ಸಾಹಿತ್ಯದ ಇತಿಹಾಸ (ಮರಾಠಿಯಲ್ಲಿ)

ಹೀಗೆ ವಿವಿಧ ಮಹಾಕಾರ್ಯಗಳಲ್ಲಿ ತೊಡಗಿ ಅವುಗಳಲ್ಲಿ ಅವರು ಪಡೆದ ಸಿದ್ಧಿಗೆ ಆಗಾಗ್ಗೆ ಅವರಿಗೆ ಹಿರಿಯ ಮನ್ನಣೆಗಳು ದೊರಕಿದುವು. ವಿದ್ಯಾರ್ಥಿದಶೆಯಲ್ಲೇ ಪಾರಿತೋಷಕಗಳು, ಗೌರವ ಪ್ರಾಧ್ಯಾಪಕ ಪದವಿ, ವಿಲ್ಸನ್ ಫಿಲೊಲಾಜಿಕಲ್ ಉಪನ್ಯಾಸಗಳನ್ನು ಕೊಡುವ ಸದವಕಾಶ, ಮುಂಬಯಿ ವಿಶ್ವವಿದ್ಯಾನಿಲಯದ ಹಾಗೂ ಲಂಡನ್ ಸ್ಕೂಲ್ ಆಫ್ ಓರಿಯಂಟಲ್ ಸ್ಟಡೀಸಿನ ಫೆಲೋ ಆಗಿರುವ ಮಾನ್ಯತೆ—ಇವನ್ನು ಇಲ್ಲಿ ಸಂದರ್ಭೋಚಿತವಾಗಿ ಸ್ಮರಿಸಿಕೊಳ್ಳಬಹುದು. ಇಷ್ಟೇ ಅಲ್ಲದೆ ಸಂಸ್ಕೃತ ಸಾಹಿತ್ಯಕ್ಕೆ ಸಂಬಂಧಪಟ್ಟ ಉತ್ತಮ ಗ್ರಂಥ ರಚನೆಯ ಗುರುತಾಗಿ ಅವರ 'ಹಿಸ್ಟೊರಿ ಆಫ್ ಧರ್ಮಶಾಸ್ತ್ರ, ಎಂಬ ಮಹಾಗ್ರಂಥಕ್ಕೋಸ್ಕರ ಅವರಿಗೆ ಸಾಹಿತ್ಯ ಅಕಾಡೆಮಿ ಸನ್ಮಾನ ದೊರಕಿತು. ಏಷ್ಯಾಟಿಕ್ ಸೊಸೈಟಿಯ ಕಡೆಯಿಂದ ಅವರಿಗೆ ರವೀಂದ್ರನಾಥ ಠಾಕೂರರ ಶತಮಾನೋತ್ಸವಕ್ಕೆ ಸಂಬಂಧಪಟ್ಟ ಲಾಂಛನ ಬಂದಿತು. ದೇಶವಿದೇಶಗಳಲ್ಲಿ ನಡೆದ ಇಂಟರ್‌ನ್ಯಾಶನಲ್ ಕಾಂಗ್ರೆಸ್ ಆಫ್ ಓರಿಯಂಟಲಿಸ್ಟ್ಸ್‌ನಂತಹ ಮಹಾಸಮ್ಮೇಳನಗಳ ಹಲವಾರು ಅಧಿವೇಶಗಳಲ್ಲಿ ಅವರಿಗೆ ಪ್ರಾತಿನಿಧ್ಯ ದೊರಕಿದ್ದಿತು. 1941ರಲ್ಲಿ ಡಾ. ಎಸ್. ಎಂ. ಕತ್ರೆ, ಶ್ರೀ ಪಿ. ಕೆ. ಗೋಡೆ ಮುಂತಾದ ಗಣ್ಯವಿದ್ವಾಂಸರು ಡಾ. ಕಾಣೆಯವರ ಸಾರಸ್ವತ ಸೇವೆಯ ಬಗ್ಗೆ ಅಪಾರ ಗೌರವವನ್ನು ಸೂಚಿಸಿ ಅವರಿಗೆ ಒಂದು ಸಂಭಾವನಾ ಗ್ರಂಥವನ್ನು ಸಮರ್ಪಿಸಿದರು. ಭಾರತ ಶಾಸ್ತ್ರದ ರಾಷ್ಟ್ರೀಯ ಪ್ರೊಫೆಸರ್ ಆಗಿ ಅವರು ನೇಮಕಗೊಂಡಿದ್ದರು. ಈ ಎಲ್ಲ ಮನ್ನಣೆಗಳಿಗೂ ಕಿರೀಟಪ್ರಾಯವಾಗಿ ಭಾರತ ಸರ್ಕಾರದಿಂದ ಅವರಿಗೆ 'ಭಾರತ ರತ್ನ' ಎಂಬ ಅತ್ಯುಚ್ಚ ಪ್ರಶಸ್ತಿ 1963ರಲ್ಲಿ ಲಭಿಸಿತು.

ಅದ್ವಿತೀಯ ಪಾಂಡಿತ್ಯ, ಅಸದೃಶ ಲೇಖನಶಕ್ತಿ, ಅಸಾಧಾರಣ ಕೀರ್ತಿ ಇವೆಲ್ಲವನ್ನೂ ಪಡೆದಿದ್ದ ಡಾ. ಕಾಣೆಯವರು ತುಂಬ ಸರಳ ಜೀವಿಗಳು. ಅವರಲ್ಲಿ ವಿನಯ ಮೂರ್ತಿಮತ್ತಾಗಿದ್ದಿತು. ಆದರ್ಶಗಳನ್ನು ಅನುಸರಿಸಿ, ದುಡಿದು ಅರ್ಹತೆಯನ್ನು ಪಡೆದ ವ್ಯಕ್ತಿತ್ವ ಅವರದು; ಅದು ಕೇವಲ ಆಶೋತ್ತರಗಳಿಗೆ ಎಂದೂ ಕಟ್ಟುಬಿದ್ದಿರಲಿಲ್ಲ. ವಕೀಲಿ ವೃತ್ತಿಯನ್ನು ಕೈಗೊಂಡ ಅನಂತರ ಕೆಲಸ ವರಮಾನಗಳೆರಡೂ ಹೆಚ್ಚುತ್ತಿದ್ದ ಸಂದರ್ಭದಲ್ಲಿ ಅವರು ತಮ್ಮ ಫೀಸನ್ನು ಇಮ್ಮಡಿಸಿ ಕಕ್ಷಿಗಾರರು ಹೆಚ್ಚು ಸಂಖ್ಯೆಯಲ್ಲಿ ಬರದಿರುವಂತೆ ಮಾಡಿದುದಾಗಿ ಒಂದು ಕಡೆ ಹೇಳಿದ್ದಾರೆ. ಡಾ. ಕಾಣೆಯವರು ಪ್ರಗತಿಪರ ಅಭಿಪ್ರಾಯವುಳ್ಳವರು. ಸಮಾಜಸುಧಾರಣೆಯ ಬಗ್ಗೆ ಅವರಿಗೆ ಆಸಕ್ತಿ ವಿಶೇಷವಾಗಿದ್ದರೂ ಅದು ದೀರ್ಘ ಅನುಭವ, ಆಳವಾದ ಅಧ್ಯಯನ ಇವುಗಳಿಂದ ಹದಗೊಂಡಿತ್ತು. "ಬಾಲ್ಯ ವಿವಾಹ ಹಿಂದಿನ ಪೀಳಿಗೆಯ ಸಮಸ್ಯೆಯಾಗಿದ್ದರೆ, ಅವಿವಾಹಿತ ತರುಣಿಯರ ಸಮಸ್ಯೆ ಮುಂದಿನ ಪೀಳಿಗೆಯದು" ಎಂದು ಒಂದು ಬಗೆಯ ತಿಳಿಹಾಸ್ಯದಲ್ಲಿ ಅವರು ಹೇಳಿದ್ದುಂಟು. ಒಟ್ಟಿನಲ್ಲಿ ಭಾರತೀಯ ಸಂಸ್ಕೃತಿಯ ಆಧಾರಪ್ರಾಯ ಮೌಲ್ಯಗಳನ್ನನುಸರಿಸಿ, ಅವುಗಳ ಬೆಳಕಿನಲ್ಲಿ ಸಮಾಜಸುಧಾರಣೆ ಮುಂತಾದವನ್ನು ಕೈಗೊಳ್ಳುವುದು ಸೂಕ್ತವೆಂಬುದು ಅವರ ಮತ.

ಇಂತಹ ಒಂದು ತುಂಬು ಜೀವನ ಭಾರತೀಯರ ಪುರಾತನ ಸಂಸ್ಕೃತಿಯ ಪ್ರತೀಕ. ನಿಸ್ವಾರ್ಥತೆ ನಿಷ್ಕಾಮಕರ್ಮಗಳಿಂದ ತನ್ಮಯವಾಗಿದ್ದ ಕಾರ್ಯಶಕ್ತಿ, ಅಮಿತೋತ್ಸಾಹ ಇವು ಅವರ ಜೀವನಕ್ಕೆ ಮಹತ್ವವನ್ನೂ ಮೆರಗನ್ನೂ ಕೊಟ್ಟಿದ್ದುವು. ದೈಹಿಕವಾಗಿದ್ದ ಕೆಲವು ತೊಂದರೆಗಳನ್ನು ಲೆಕ್ಕಿಸದೆ ಅವರು ವಿಶಿಷ್ಟ ಕಾರ್ಯತತ್ಪರತೆ, ಅಪಾರ ತಾಳ್ಮೆ, ಅಗಾಧ ವಿದ್ವತ್ತು ಇವುಗಳ ಮೂಲಕ ಯಶಸ್ಸು ಪಡೆದರು. ಒಂದು ಜೀವಿತದಲ್ಲಿ ಒಬ್ಬ ಮನುಷ್ಯ ಎಷ್ಟು ಅಮೋಘವಾದ ಕೆಲಸ ಮಾಡಬಲ್ಲನೆಂಬುದನ್ನು ಪ್ರತ್ಯಕ್ಷವಾಗಿ ತೋರಿಸಿಕೊಟ್ಟಿರುವ ಮಹಾಪುರುಷರ ಶ್ರೇಣಿಯಲ್ಲಿ ಡಾ. ಕಾಣೆಯವರೂ ಒಬ್ಬರು. ಇತ್ತೀಚೆಗೆ ಭಾರತ ದೇಶದ ಪ್ರಧಾನಿಯವರು ಹೇಳಿರುವಂತೆ, "ಡಾ. ಪಿ. ವಿ. ಕಾಣೆಯವರಲ್ಲಿ ಪ್ರಾಚೀನ ಹಾಗೂ ಆಧುನಿಕ ವಿದ್ವತ್ತಿನ ಉತ್ತಮಾಂಶಗಳು ಸೇರಿಕೊಂಡಿದ್ದುವು; ಅಲ್ಲದೆ ಧರ್ಮಶಾಸ್ತ್ರದ ಬಗೆಗೆ ಅವರ ಅದ್ಭುತ ಕೃತಿ ನಮ್ಮ ಸಂಸ್ಕೃತಿಯ ಪರಂಪರೆಯನ್ನು ಅರ್ಥಮಾಡಿಕೊಳ್ಳುವುದರಲ್ಲಿ ಅಮೂಲ ಸಹಾಯವನ್ನು ಸಲ್ಲಿಸಿದೆ."

ಸದಾಶಿವಯ್ಯ

ಸಹಕಾರ ಬ್ಯಾಂಕು ಮತ್ತು ವಾಣಿಜ್ಯ ಬ್ಯಾಂಕುಗಳ ನಡುವಣ ಹೊಂದಾವಣೆ ಸಮಸ್ಯೆ*

ಭಾರತ ಮುಖ್ಯವಾಗಿ ರೈತರ ನಾಡು. ವ್ಯವಸಾಯವೇ ದೇಶದ ಪ್ರಧಾನ ಉದ್ಯೋಗವಾಗಿದೆ. ಭಾರತದಲ್ಲಿ ಸೇಕಡ 70ರಷ್ಟು ಜನ ಕೃಷಿಯನ್ನೇ ಅವಲಂಬಿಸಿದ್ದಾರೆ. ರಾಷ್ಟ್ರೀಯ ವರಮಾನದ ಸೇ. 50ರಷ್ಟು ವ್ಯವಸಾಯದಿಂದ ಬರುತ್ತದೆ. ಆದ್ದರಿಂದ, ಭಾರತದ ಆರ್ಥಿಕ ಅಭಿವೃದ್ಧಿಯ ಯೋಜನಾ ಬದ್ಧ ಕಾರ್ಯಕ್ರಮದಲ್ಲಿ ವ್ಯವಸಾಯ ಕ್ಷೇತ್ರಕ್ಕೆ ವಿಶೇಷ ಗಮನ ನೀಡಲಾಗಿದೆ. ನ್ಯಾಯಸಮ್ಮತವಾದ ರೀತಿಯಲ್ಲಿ ರೈತರಿಗೆ ಅಗತ್ಯಪ್ರಮಾಣದ ಸಾಲ ಒದಗಿಸುವುದು ವ್ಯವಸಾಯಾಭಿವೃದ್ಧಿಗೆ ಸೇರಿದ ಒಂದು ಮುಖ್ಯ ಸಮಸ್ಯೆ. ಭಾರತದಲ್ಲಿ ವ್ಯವಸಾಯಾಭಿವೃದ್ಧಿಗೆ ಬೇಕಾಗುವ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳನ್ನು ಒದಗಿಸುವ ಸಲುವಾಗಿ ಸಹಕಾರ ಸಂಘಗಳು ಸ್ಥಾಪಿತವಾಗಿವೆ. 1967ರಲ್ಲಿ ವಾಣಿಜ್ಯ ಬ್ಯಾಂಕುಗಳ ಮೇಲೆ ವಿಧಿಸಲಾದ ಸಾಮಾಜಿಕ ಹತೋಟಿಯ ವರೆವಿಗೂ ಗ್ರಾಮೀಣ ಹಣಕಾಸು ಕ್ಷೇತ್ರದಲ್ಲಿ ಸಹಕಾರ ಸಂಘಗಳಿಗೆ ಮಾತ್ರ ಪ್ರಾಶಸ್ತ್ಯ ನೀಡಲಾಗುತ್ತಿತ್ತು. ಆದರೆ, ತದನಂತರ ಇತರ ಹಣಕಾಸಿನ ಸಂಸ್ಥೆಗಳಿಗೂ ಗಮನ ನೀಡಲಾಗುತ್ತಿದೆ. ನಿರ್ದಿಷ್ಟವಾಗಿ ಹೇಳುವುದಾದರೆ ವಾಣಿಜ್ಯ ಬ್ಯಾಂಕುಗಳು ಶ್ಲಾಘನೀಯ ರೀತಿಯಲ್ಲಿ ಗ್ರಾಮೀಣ ಹಣಕಾಸು ಕ್ಷೇತ್ರವನ್ನು ಪ್ರವೇಶಿಸಿ, ವ್ಯವಸಾಯೋದ್ಯಮಕ್ಕೆ ಬೇಕಾಗುವ ಸರ್ವವಿಧದ ಸಾಲಗಳನ್ನೂ ಪೂರೈಸುತ್ತಿವೆ. ಅಂದರೆ, ಪ್ರಸ್ತುತ ಪರಿಸ್ಥಿತಿಯಲ್ಲಿ ಸಹಕಾರ ಬ್ಯಾಂಕುಗಳು ಮತ್ತು ವಾಣಿಜ್ಯ ಬ್ಯಾಂಕುಗಳು ರೈತರಿಗೆ ಸಾಲ ಒದಗಿಸುತ್ತಿವೆ. ಇವೆರಡು ಸಂಸ್ಥೆಗಳು ಒಂದೇ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವಾಗ ಅನರ್ಥಕಾರಿ ಪೈಪೋಟಿಗಳು ಮತ್ತು ಅನಪೇಕ್ಷಣೀಯ ಪರಿಣಾಮಗಳು ಉಂಟಾಗುವುವೆಂಬ ಶಂಕೆ ಕೇಳಿಬರುತ್ತದೆ. ಆದರೆ, ಇತ್ತೀಚಿನ ವರ್ಷಗಳಲ್ಲಿ ವ್ಯವಸಾಯ ಕ್ಷೇತ್ರದ ಆಧುನಿಕೀಕರಣದ ಫಲವಾಗಿ ರೈತರ ಸಾಲದ ಆವಶ್ಯಕತೆ ಹೆಚ್ಚಾಗುತ್ತಿರುವುದರಿಂದ ಈ ಶಂಕೆಯನ್ನು ಅತಿಶಯೋಕ್ತಿಯೆಂದು ದೂರೀಕರಿಸಬಹುದು. ಆದರೂ ಇವೆರಡು ಸಂಸ್ಥೆಗಳ ನಡುವೆ ಹೊಂದಾವಣೆ ಅಗತ್ಯವೆಂದು ಸಾಮಾನ್ಯವಾಗಿ ಹೇಳಬಹುದು. ವಾಸ್ತವಿಕ ವಹಿವಾಟುಗಳಿಂದ ಕೂಡಿದ ಕೆಲವು ಪ್ರಮುಖ ಹೊಂದಾವಣೆ ಕ್ರಮಗಳನ್ನು ರೂಪಿಸುವ ಮೊದಲು, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ ಅನುಸರಿಸುತ್ತಿರುವ ಹೊಂದಾವಣೆ ಕ್ರಮಗಳ ಮತ್ತು ಕೃಷಿ ಹಣಕಾಸು ಕಾರ್ಪೊರೇಷನಿನ (ಅಗ್ರಿಕಲ್ಚರಲ್ ಫೈನಾನ್ಸ್ ಕಾರ್ಪೊರೇಷನ್) ಆಶ್ರಯದಲ್ಲಿ ರೂಪಿತವಾಗಿರುವ ಹೊಂದಾವಣೆ ವ್ಯವಸ್ಥೆಯ ಲಘು ಪರಿಚಯ ಅತ್ಯಾವಶ್ಯಕ.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ

ಜುಲೈ 1, 1955ರಲ್ಲಿ ಅಸ್ತಿತ್ವಕ್ಕೆ ಬಂದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ ಅಂದಿನಿಂದಲೂ ವ್ಯವ

* ಮೈಸೂರು ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ವಿಚಾರ ಗೋಷ್ಠಿಯ ಸದಸ್ಯರು ಈ ಲೇಖನ ಬರೆಯುವಲ್ಲಿ ನೀಡಿದ ಸಲಹೆ, ಸೂಚನೆಗಳಿಗಾಗಿ ನಾನು ಕೃತಜ್ಞನಾಗಿದ್ದೇನೆ.

ಸಾಯೋದ್ಯಮಕ್ಕೆ ಬೇಕಾಗುವ ಸಾಲ ಒದಗಿಸುತ್ತಿದೆ. ಈ ಬ್ಯಾಂಕಿನ ಸಾಲ ನೀಡಿಕೆಯ ವಿಧಾನ ಹೊಂದಾವಣೆಯ ಇರುವಿಕೆಯನ್ನು ಸ್ಪಷ್ಟಪಡಿಸುತ್ತದೆ. ಮುಖ್ಯವಾಗಿ ಹೇಳುವುದಾದರೆ, ಹೊಂದಾವಣೆಯನ್ನು ಏರ್ಪಡಿಸುವ ದೃಷ್ಟಿಯಿಂದ ಈ ಬ್ಯಾಂಕು ತನ್ನ ವ್ಯವಸಾಯ ಸಾಲವನ್ನು ಸಹಕಾರ ಬ್ಯಾಂಕುಗಳ ಮೂಲಕ ಕೊಡುತ್ತದೆ. (ಬ್ಯಾಂಕುಗಳ ಮೇಲಿನ ಸಾಮಾಜಿಕ ಹತೋಟಿ ಮತ್ತು 14 ಪ್ರಮುಖ ವಾಣಿಜ್ಯ ಬ್ಯಾಂಕುಗಳ ರಾಷ್ಟ್ರೀಕರಣಕ್ರಮಗಳ ಅನಂತರವಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ ಮತ್ತು ಇತರ ವಾಣಿಜ್ಯ ಬ್ಯಾಂಕುಗಳು ರೈತರಿಗೆ ನೇರವಾಗಿಯೂ ಸಾಲ ನೀಡುತ್ತಿವೆ.) ಕೆಲವು ವೇಳೆ ಅಪೆಕ್ಸ್ ಮತ್ತು ಕೇಂದ್ರ ಸಹಕಾರ ಬ್ಯಾಂಕುಗಳಿಗೆ ಓವರ್‌ಡ್ರಾಫ್ಟ್ ಸೌಕರ್ಯಗಳನ್ನು ಸಹ ಒದಗಿಸುವಾಗ ಅಪೆಕ್ಸ್ ಮತ್ತು ಕೇಂದ್ರ ಸಹಕಾರ ಬ್ಯಾಂಕುಗಳ ಒಪ್ಪಿಗೆ ಪಡೆಯಲಾಗುತ್ತದೆ. ಸಹಕಾರ ಚಳವಳಿಯ ವಿಶಿಷ್ಟತೆಯನ್ನು ಕಾಯ್ದುಕೊಳ್ಳುವುದೇ ಈ ಕ್ರಮದ ಮೂಲೋದ್ದೇಶ. ಇದಲ್ಲದೆ, ಸಹಕಾರ ಭೂ ಅಭಿವೃದ್ಧಿ ಬ್ಯಾಂಕುಗಳು ಹೊರಡಿಸುವ ಸಾಲಪತ್ರಗಳನ್ನು ಕೊಂಡು, ತನ್ಮೂಲಕ ದೀರ್ಘಾವಧಿ ಸಾಲದ ಪೂರೈಕೆಗೆ ನೆರವನ್ನು ನೀಡುತ್ತದೆ.

ಹೊಂದಾವಣೆ ಸಮಿತಿಗಳು

ವ್ಯವಸಾಯಾಭಿವೃದ್ಧಿಗೆ ವ್ಯವಸ್ಥಿತ ರೀತಿಯಲ್ಲಿ ಸಾಲ ಒದಗಿಸುವ ಸಲುವಾಗಿಯೂ ವಾಣಿಜ್ಯ ಬ್ಯಾಂಕುಗಳು ಗ್ರಾಮೀಣ ಹಣಕಾಸು ಕ್ಷೇತ್ರವನ್ನು ಪ್ರವೇಶಿಸುವುದರಿಂದ ಸಹಕಾರ ಬ್ಯಾಂಕುಗಳ ಮೇಲೆ ಉಂಟಾಗಬಹುದಾದ ದುಷ್ಪರಿಣಾಮಗಳನ್ನು ತಡೆಹಿಡಿಯುವ ಸಲುವಾಗಿಯೂ ಹೊಂದಾವಣೆ ಸಮಿತಿಗಳನ್ನು ಸ್ಥಾಪಿಸಲಾಗಿದೆ. ಈ ವ್ಯವಸ್ಥೆಯನ್ನು ರೂಪಿಸುವಲ್ಲಿಯೂ ಕಾರ್ಯಗತಗೊಳಿಸುವಲ್ಲಿಯೂ ಕೃಷಿ ಹಣಕಾಸು ಕಾರ್ಪೊರೇಷನ್ ಸಕ್ರಿಯ ಪಾತ್ರ ವಹಿಸುತ್ತಿದೆ. ಈ ವ್ಯವಸ್ಥೆಯನ್ವಯ, ಹೊಂದಾವಣೆ ಸಮಿತಿಗಳನ್ನು ರಾಷ್ಟ್ರಮಟ್ಟದಲ್ಲಿಯೂ ರಾಜ್ಯಮಟ್ಟದಲ್ಲಿಯೂ ಜಿಲ್ಲಾಮಟ್ಟದಲ್ಲಿಯೂ ಸ್ಥಾಪಿಸಲಾಗಿದೆ. ರಾಷ್ಟ್ರಮಟ್ಟದ ಹೊಂದಾವಣೆ ಸಮಿತಿ ಕೆಲವು ಹೊಂದಾವಣೆ ಕ್ರಮಗಳನ್ನು ಶಿಫಾರಸು ಮಾಡಿದೆ. ಸಹಕಾರ ಬ್ಯಾಂಕು ಮತ್ತು ವಾಣಿಜ್ಯ ಬ್ಯಾಂಕುಗಳ ನಡುವೆ ಗ್ರಾಮೀಣ ಹಣಕಾಸಿಗೆ ಸಂಬಂಧಪಟ್ಟಂತೆ ವಿಚಾರವಿನಿಮಯ ಏರ್ಪಡಿಸುವುದು, ಸಹಕಾರ ಬ್ಯಾಂಕುಗಳು ವಿಫಲಗೊಂಡಿರುವ ಪ್ರದೇಶಗಳಲ್ಲಿ ವಾಣಿಜ್ಯ ಬ್ಯಾಂಕುಗಳು ಕಾರ್ಯಾಚರಣೆ ನಡೆಸುವುದು, ವಾಣಿಜ್ಯ ಬ್ಯಾಂಕುಗಳ ಹಣದ ನೆರವನ್ನು ಸಹಕಾರ ಬ್ಯಾಂಕುಗಳ ಮೂಲಕ ಒದಗಿಸುವುದು—ಇವು ರಾಷ್ಟ್ರಮಟ್ಟದ ಹೊಂದಾವಣೆ ಸಮಿತಿ ಜಾರಿಗೆ ತಂದಿರುವ ಮುಖ್ಯ ಹೊಂದಾವಣೆ ಕ್ರಮಗಳೆನ್ನಬಹುದು. ಈ ಕ್ರಮಗಳ ದಕ್ಷತೆಯೆಷ್ಟೆಂಬುದರ ಪರೀಕ್ಷೆ ಮುಂದಿನ ವರ್ಷಗಳಲ್ಲಿ ಆಗಲಿದೆ.

ಹೊಂದಾವಣೆ ಕ್ರಮಗಳು

ಗ್ರಾಮೀಣ ಹಣಕಾಸು ಪೂರೈಕೆ: ಸಹಕಾರ ಬ್ಯಾಂಕುಗಳು ಮತ್ತು ವಾಣಿಜ್ಯ ಬ್ಯಾಂಕುಗಳು ವಿವಿಧ ವ್ಯವಸಾಯ ಚಟುವಟಿಕೆಗಳಿಗೆ ಸಾಲಗಳನ್ನು ನೀಡುವಾಗ ಅನುಸರಿಸಬಹುದಾದ ಕೆಲವು ಹೊಂದಾವಣೆ ಕ್ರಮಗಳನ್ನು ಈಗ ವಿವೇಚಿಸುವುದು ಅಗತ್ಯ. ವ್ಯವಸಾಯೋದ್ಯಮಕ್ಕೆ ಬೇಕಾಗುವ ಸಾಲವನ್ನು 1 ಉತ್ಪಾದನ ಸಾಲ, 2 ವಿನಿಯೋಜನ (ಇನ್‌ವೆಸ್ಟ್‌ಮೆಂಟ್) ಸಾಲ, 3 ಆಸ್ತಿಭಾರ ನಿರ್ಮಾಣಕ್ಕೆ ಬೇಕಾಗುವ ಸಾಲ ಮತ್ತು 4 ಕೃಷಿ ಸಂಬಂಧಿ ಚಟುವಟಿಕೆಗಳಿಗೆ ಬೇಕಾಗುವ ಸಾಲ ಎಂಬುದಾಗಿ ವಿಭಾಗಿಸಿ ಮುಂದುವರಿಯುವುದು ಸೂಕ್ತವೆನಿಸುತ್ತದೆ.

ಉತ್ಪಾದನ ಸಾಲ: ಕೃಷಿ ಉತ್ಪಾದನೆಯನ್ನು ಹೆಚ್ಚಿಸುವುದಕ್ಕೆ ಬೇಕಾಗುವ ಉತ್ತಮ ಬೀಜ, ಕೃಷಿ ಉಪಕರಣ, ಗೊಬ್ಬರ ಮೊದಲಾದವನ್ನು ಯೋಗ್ಯ ಪರಿಮಾಣದಲ್ಲಿ ಒದಗಿಸಿಕೊಳ್ಳಲು ಸಾಲ ಬೇಕಾಗುತ್ತದೆ. ಈ ರೀತಿಯ ಸಾಲವನ್ನು ಉತ್ಪಾದನ ಸಾಲವೆಂದು ವಿಂಗಡಿಸಬಹುದು. ಈ ಬಗೆಯ ಸಾಲವನ್ನು ವಾಣಿಜ್ಯ ಬ್ಯಾಂಕುಗಳು ರೈತರಿಗೆ ನೇರವಾಗಿಯೂ ಸಹಕಾರ ಬ್ಯಾಂಕುಗಳ ಮೂಲಕವೂ ನೀಡಬಹುದು. ನೇರ ಸಾಲವನ್ನು ಒದಗಿಸುವಾಗ, ಪತ್ತಿನ ಸಹಕಾರ ಸಂಘಗಳಿಂದ ಅಗತ್ಯ ಮೊತ್ತದ

ಸಾಲವನ್ನು ಪಡೆಯುವ ರೈತರನ್ನು ಗುರುತಿಸಿ ಅವರಿಗೆ ಮಾತ್ರ ಸಾಲ ಒದಗಿಸಬೇಕು. ಈ ಕ್ರಮ ಯಶಸ್ವಿಯಾಗಬೇಕಾದರೆ ವಾಣಿಜ್ಯ ಬ್ಯಾಂಕುಗಳು ಸಹಕಾರ ಬ್ಯಾಂಕುಗಳೊಡನೆ ನಿಕಟ ಸಂಬಂಧವನ್ನಿಟ್ಟುಕೊಂಡು ಅವುಗಳ ಸಾಲ ಕಾರ್ಯಾಚರಣೆಗಳನ್ನು ಪರಿಶೀಲಿಸುತ್ತಿರಬೇಕು.

ವಾಣಿಜ್ಯ ಬ್ಯಾಂಕುಗಳು ಸಹಕಾರ ಬ್ಯಾಂಕುಗಳ ಮೂಲಕ ರೈತರಿಗೆ ಸಾಲ ಕೊಡುವುದು ಹೊಂದಾವಣೆಯನ್ನು ಸಾಧಿಸುವ ಮತ್ತೊಂದು ಕ್ರಮವಾಗಿದೆ. ವಾಣಿಜ್ಯ ಬ್ಯಾಂಕುಗಳು ತಮ್ಮ ಹಣವನ್ನು ಕೆಲವು ವೇಳೆ ಅಪೆಕ್ಸ್ ಮತ್ತು ಕೇಂದ್ರ ಸಹಕಾರ ಬ್ಯಾಂಕುಗಳ ಮೂಲಕವೂ ಮತ್ತೆ ಕೆಲವು ವೇಳೆ ಪ್ರಾಥಮಿಕ ಸಹಕಾರ ಪತ್ತಿನ ಸಂಘಗಳ ಮುಖಾಂತರವೂ ಕೊಡಬಹುದು. ಎರಡನೆಯ ಮಾರ್ಗ ಅನುಸರಿಸುವಾಗ, ಅಪೆಕ್ಸ್ ಮತ್ತು ಕೇಂದ್ರ ಸಹಕಾರ ಬ್ಯಾಂಕುಗಳಿಂದ ಸಾಕಷ್ಟು ಹಣ ಪಡೆಯಲಾಗದಂಥ ಪ್ರಾಥಮಿಕ ಪತ್ತಿನ ಸಹಕಾರ ಸಂಘಗಳನ್ನು ಆರಿಸಿಕೊಳ್ಳುವುದು ಒಳ್ಳೆಯದು. ಇಲ್ಲಿಯೂ ಪರಸ್ಪರ ವಿಚಾರ ವಿನಿಮಯದ ಪ್ರಾಮುಖ್ಯವನ್ನು ಕಡೆಗಣಿಸುವಂತಿಲ್ಲ.

ವಿನಿಯೋಜನ ಸಾಲ: ವ್ಯವಸಾಯ ಕ್ಷೇತ್ರದಲ್ಲಿ ಕೈಕೊಳ್ಳುವ ವಿನಿಯೋಜನ ಕಾರ್ಯಕ್ರಮಗಳಿಗಾಗಿ ಒದಗಿಸುವ ಸಾಲವನ್ನು ವಿನಿಯೋಜನ ಸಾಲವೆಂದು ಹೇಳಬಹುದು. ಇದನ್ನು ದೀರ್ಘಾವಧಿ ಸಾಲವೆಂದೂ ಹೇಳಬಹುದು. ವಾಣಿಜ್ಯ ಬ್ಯಾಂಕುಗಳು ಈ ತರಹದ ಸಾಲವನ್ನು ರೈತರಿಗೆ ನೇರವಾಗಿ ಕೊಡುವಾಗ ಅವರು ಸಹಕಾರ ಭೂ ಅಭಿವೃದ್ಧಿ ಬ್ಯಾಂಕಿನಿಂದ ಸಾಕಷ್ಟು ಹಣವನ್ನು ಪಡೆದಿದ್ದಾರೆಯೇ, ಇಲ್ಲವೇ, ಎಂಬುದನ್ನು ತಿಳಿದುಕೊಳ್ಳಬೇಕು. ಭೂ ಅಭಿವೃದ್ಧಿ ಬ್ಯಾಂಕುಗಳ ಸಂಪನ್ಮೂಲ ಸ್ಥಿತಿಯನ್ನೂ ಭೂಮಿಯನ್ನು ಆಧಾರವಾಗಿಡುವ ಬಗ್ಗೆ ರೈತರ ಅಭಿಪ್ರಾಯವನ್ನೂ ಪರಿಗಣಿಸುವುದು ಅವಶ್ಯಕ.

ವಾಣಿಜ್ಯ ಬ್ಯಾಂಕುಗಳು ವಿನಿಯೋಜನ ಸಾಲವನ್ನು ಸಹಕಾರ ಭೂ ಅಭಿವೃದ್ಧಿ ಬ್ಯಾಂಕುಗಳ ಮೂಲಕ ಒದಗಿಸಿ ಹೊಂದಾವಣೆಯನ್ನು ಸಾಧಿಸಬಹುದು. ಈಗ ಅನುಸರಿಸುತ್ತಿರುವ ನೀತಿಯಂತೆ ಮುಂದೆಯೂ ವಾಣಿಜ್ಯ ಬ್ಯಾಂಕುಗಳು ಸಹಕಾರ ಭೂ ಅಭಿವೃದ್ಧಿ ಬ್ಯಾಂಕುಗಳು ಹೊರಡಿಸುವ ಡಿಬೆಂಚರುಗಳನ್ನು ಕೊಳ್ಳುವುದು ಅತ್ಯವಶ್ಯ. ಅಖಿಲಭಾರತ ಗ್ರಾಮೀಣ ಪತ್ತು ಅವಲೋಕನ ಸಮಿತಿ ಮಾಡಿರುವ ಶಿಫಾರಸಿನಂತೆ ವಾಣಿಜ್ಯ ಬ್ಯಾಂಕುಗಳು ಸಹಕಾರ ಭೂ ಅಭಿವೃದ್ಧಿ ಬ್ಯಾಂಕುಗಳಿಗೆ ತಾತ್ಕಾಲಿಕ ಸಾಲಗಳನ್ನು ಕಲ್ಪಿಸಿಕೊಡಬೇಕು1. ರಾಷ್ಟ್ರಮಟ್ಟದ ಹೊಂದಾವಣೆ ಸಮಿತಿ ತಳೆದಿರುವ ನಿಲುವನ್ನನುಸರಿಸಿ ವಾಣಿಜ್ಯ ಬ್ಯಾಂಕುಗಳು ಸಹಕಾರ ಭೂ ಅಭಿವೃದ್ಧಿ ಬ್ಯಾಂಕುಗಳ ಹುಂಡಿಗಳನ್ನು ಮರುವಟಾವಣೆ (ರೀಡಿಸ್ಕೌಂಟ್) ಮಾಡಬೇಕು2.

ಅಸ್ತಿಭಾರನಿರ್ಮಾಣಕ್ಕೆ ಬೇಕಾಗುವ ಸಾಲ: ವ್ಯವಸಾಯಾಭಿವೃದ್ಧಿಗೆ ಅಗತ್ಯವಾಗಿರುವ ಅಸ್ತಿಭಾರ ನಿರ್ಮಾಣಕ್ಕೆ ಸಾಕಷ್ಟು ಹಣವನ್ನೊದಗಿಸಲು ಸಹಕಾರ ಬ್ಯಾಂಕುಗಳು ಮುಂದೆ ಬರುತ್ತಿಲ್ಲ. ಆದ್ದರಿಂದ, ವಾಣಿಜ್ಯ ಬ್ಯಾಂಕುಗಳು ಈ ಕ್ಷೇತ್ರದಲ್ಲಿ ಗಮನಾರ್ಹ ಪ್ರಗತಿ ಸಾಧಿಸಬಹುದು. ಮೇಲಾಗಿ, ವಿವಿಧ ಸೇವಾ ಕೇಂದ್ರಗಳ ಸ್ಥಾಪನೆಗೂ ಅವುಗಳ ಕಾರ್ಯಾಚರಣೆಗೂ ವಾಣಿಜ್ಯ ಬ್ಯಾಂಕುಗಳು ಸಾಲ ಒದಗಿಸುವುದೆ ಒಳ್ಳೆಯದು. ಆದರೆ ಇವೇ ಸೇವಾ ಕೇಂದ್ರಗಳಿಂದ ಒದಗಿಸಲಾಗುವ ಸೌಕರ್ಯಗಳನ್ನು ಉಪಯೋಗಿಸಿಕೊಳ್ಳುವ ಸಲುವಾಗಿ ರೈತರು ಸಹಕಾರ ಬ್ಯಾಂಕುಗಳಿಂದ ಸಾಲ ಪಡೆಯಬಹುದು.

---

1 *All–India Rural Credit Review Committee, 1969*, Reserve Bank of India, p. 595

2 *Coordination between the Commercial and Co-operative Banking Sectors in Financing Agriculture*, Agricultural Finance Corporation, p. 17

ಕೃಷಿ ಸಂಬಂಧಿ ಚಟುವಟಿಕೆಗಳಿಗೆ ಬೇಕಾಗುವ ಸಾಲ: ಕೃಷಿಸಂಬಂಧಿ ಚಟುವಟಿಕೆಗಳಿಗೆ—ಪ್ರಾಣಿ ಸಂರಕ್ಷಣೆ, ಹೈನಗಾರಿಕೆ, ಕೋಳಿ ಮತ್ತು ಹಂದಿ ಸಾಕಣೆ, ತೋಟಗಾರಿಕೆ ಮುಂತಾದವಕ್ಕೆ—ಬೇಕಾಗುವ ಸಾಲವನ್ನು ಪೂರೈಸುವುದರಲ್ಲಿಯೂ ಸಹಕಾರ ಬ್ಯಾಂಕುಗಳ ಪ್ರಗತಿ ಅಷ್ಟಾಗಿ ಕಂಡು ಬರುವುದಿಲ್ಲ. ಆದ್ದರಿಂದ ವಾಣಿಜ್ಯಬ್ಯಾಂಕುಗಳು ಈ ಬಗೆಯ ಚಟುವಟಿಕೆಗಳಿಗೆ ನೇರ ಸಾಲ ಒದಗಿಸುವುದರಲ್ಲಿ ಯಾವ ಅಭ್ಯಂತರವೂ ಇಲ್ಲ. ಆದರೆ ಸಹಕಾರ ಬ್ಯಾಂಕುಗಳೊಡನೆ ನಿಕಟ ಸಂಪರ್ಕ ಹೊಂದುವುದು ಮತ್ತು ಪರಸ್ಪರ ವಿಚಾರ ವಿನಿಮಯ ನಡೆಸುವುದು ಹೊಂದಾವಣೆಯ ದೃಷ್ಟಿಯಿಂದ ಯೋಗ್ಯವೆಂದು ಅರಿಯಬೇಕು. ತನ್ಮೂಲಕ ಒಂದೇ ಯೋಜನೆಗೆ ವಾಣಿಜ್ಯ ಬ್ಯಾಂಕು ಮತ್ತು ಸಹಕಾರ ಬ್ಯಾಂಕುಗಳೆರಡೂ ಹಣ ಒದಗಿಸುವ ಸಾಧ್ಯತೆಯನ್ನು .ತಪ್ಪಿಸಬಹುದು.

ಕ್ಷೇತ್ರ ಧೋರಣೆ

ವಾಣಿಜ್ಯ ಬ್ಯಾಂಕುಗಳು ಕೃಷಿ ಅಭಿವೃದ್ಧಿಗೆ ಸಾಲ ಕೊಡುವುದಕ್ಕಾಗಿ ಕೆಲವು ಉತ್ಕೃಷ್ಟ ಕ್ಷೇತ್ರಗಳನ್ನು ಆರಿಸಿಕೊಳ್ಳುತ್ತಿರುವುದು ಇತ್ತೀಚಿನ ವಿದ್ಯಮಾನಗಳಿಂದ ತಿಳಿದುಬರುತ್ತದೆ. ಸಾಮಾನ್ಯವಾಗಿ, 'ಸಾಂದ್ರ ವ್ಯವಸಾಯ'ಕ್ಕೆ ಮತ್ತು 'ಅಧಿಕ ಇಳುವರಿ ಕೊಡುವ ಕಾರ್ಯಕ್ರಮ'ಕ್ಕೆ ಒಳಪಟ್ಟ ಕ್ಷೇತ್ರಗಳನ್ನು ಮಾತ್ರ ಆರಿಸಿಕೊಳ್ಳಲಾಗುತ್ತಿದೆ. ಇಂಥ ಪ್ರದೇಶಗಳಲ್ಲಿ ವಾಣಿಜ್ಯ ಬ್ಯಾಂಕುಗಳು ಮುಂದಾಳುತನ ವಹಿಸಿ ಬ್ಯಾಂಕಿಂಗ್ ಉದ್ಯಮದ ಬೆಳವಣಿಗೆಗೆ ಸಹಾಯಕವಾಗಬೇಕೆಂಬುದು ಇಂದಿನ ಮುಖ್ಯ ಧೋರಣೆಯಾಗಿದೆ. ಈ ಧೋರಣೆಯನ್ನು ಅನುಸರಿಸುವುದರಿಂದ ಎರಡು ಪ್ರಮುಖ ಸಮಸ್ಯೆಗಳನ್ನು ಬಗೆಹರಿಸಬಹುದು. ಮೊದಲನೆಯದಾಗಿ, ವಾಣಿಜ್ಯ ಬ್ಯಾಂಕುಗಳು ಮತ್ತು ಸಹಕಾರ ಬ್ಯಾಂಕುಗಳು ಎದುರಿಸಬೇಕಾದ ಹೊಂದಾವಣೆ ಸಮಸ್ಯೆಯನ್ನು ಸುಗಮಗೊಳಿಸಬಹುದು. ಎರಡನೆಯದಾಗಿ, ವಾಣಿಜ್ಯ ಬ್ಯಾಂಕುಗಳು ಗ್ರಾಮೀಣ ಹಣಕಾಸು ಕ್ಷೇತ್ರವನ್ನು ಈಗ ತಾನೇ ಪ್ರವೇಶಿಸುತ್ತಿರುವುದರಿಂದ ಸಿಬ್ಬಂದಿ ಕೊರತೆಯ ಸಮಸ್ಯೆಯನ್ನು ಎದುರಿಸಬೇಕಾಗುವುದು. ಈ ಸಮಸ್ಯೆಯನ್ನು ಸಹ ಕ್ಷೇತ್ರಧೋರಣೆಯನ್ನು (ಏರಿಯ ಅಪ್ರೋಚ್) ಅನುಸರಿಸುವ ಮೂಲಕ ನಿವಾರಿಸಬಹುದು.

ಸಂಪನ್ಮೂಲಗಳನ್ನು ರೂಢಿಸಿಕೊಳ್ಳುವಿಕೆ

ಭಾರತದ ಕೃಷಿ ಉದ್ಯಮ ಇತ್ತೀಚಿನ ವರ್ಷಗಳಲ್ಲಿ ಆಧುನಿಕೀಕರಣ ಹೊಂದುತ್ತಿರುವುದರಿಂದ ಈ ಕ್ಷೇತ್ರದಲ್ಲಿ ಕಂಡುಬರುತ್ತಿರುವ ಉಳಿತಾಯ ಸಾಮರ್ಥ್ಯ ದಿನೇದಿನೇ ಹೆಚ್ಚುತ್ತಿದೆ. ಆದ್ದರಿಂದ, ವಾಣಿಜ್ಯ ಬ್ಯಾಂಕು ಮತ್ತು ಸಹಕಾರ ಬ್ಯಾಂಕುಗಳು ಈ ಸಂಪನ್ಮೂಲಗಳನ್ನು ಸಮರ್ಥವಾಗಿ ರೂಢಿಸಿಕೊಳ್ಳುವುದು ಅಗತ್ಯ. ಈ ದೆಸೆಯಲ್ಲೂ ಎರಡು ಸಂಸ್ಥೆಗಳ ನಡುವೆ ಹೊಂದಾವಣೆ ಏರ್ಪಡಬೇಕು. ಅನುಸರಿಸಲು ಯೋಗ್ಯವಾದ ಹೊಂದಾವಣೆ ಕ್ರಮಗಳನ್ನು. ಎರಡು ಸನ್ನಿವೇಶಗಳನ್ನು ಗಮನದಲ್ಲಿಟ್ಟುಕೊಂಡು ವಿವೇಚಿಸಬಹುದು.

ಮೊದಲನೆಯದಾಗಿ. ವಾಣಿಜ್ಯ ಬ್ಯಾಂಕು ಮತ್ತು ಸಹಕಾರ ಬ್ಯಾಂಕುಗಳೆರಡೂ ಒಂದೇ ಪ್ರದೇಶದಲ್ಲಿ ಕಾರ್ಯೋನ್ಮುಖವಾಗಿರುವ ಸನ್ನಿವೇಶವನ್ನು ಪರಿಗಣಿಸೋಣ. ಈ ಸಂದರ್ಭದಲ್ಲಿ ಇವೆರಡು ಸಂಸ್ಥೆಗಳ ನಡುವೆ ಠೇವಣಿ ರೂಢಿಸಿಕೊಳ್ಳುವ ಕಾರ್ಯದಲ್ಲಿ ಸ್ಪರ್ಧೆ ಇರುವುದು ಅನಿವಾರ್ಯ. ಇದನ್ನು ಅಪೇಕ್ಷಣೀಯ ಸ್ಪರ್ಧೆಯನ್ನಾಗಿ ಮಾರ್ಪಡಿಸುವುದು ಇವೆರಡು ಸಂಸ್ಥೆಗಳ ಹಿತದೃಷ್ಟಿಯಿಂದ ಅವಶ್ಯಕ. ಮುಖ್ಯವಾಗಿ ಹೇಳುವುದಾದರೆ. ಸಹಕಾರ ಬ್ಯಾಂಕುಗಳು ವಾಣಿಜ್ಯ ಬ್ಯಾಂಕುಗಳಂತೆಯೇ ಬ್ಯಾಂಕಿಂಗ್ ಸೌಕರ್ಯಗಳನ್ನು ದಕ್ಷತೆಯಿಂದ ಒದಗಿಸಿ ಹೆಚ್ಚುಹೆಚ್ಚು ಠೇವಣಿಗಳನ್ನು ಪಡೆಯಲೆತ್ನಿಸಬೇಕು. ಈ ದಿಕ್ಕಿನಲ್ಲಿ ದಕ್ಷ ಹಾಗೂ ನುರಿತ ಸಿಬ್ಬಂದಿ ವರ್ಗದವರ ಆವಶ್ಯಕತೆ ತೀವ್ರವಾಗಿರುತ್ತದೆ.

ಠೇವಣಿಗಳ ಮೇಲೆ ಹೆಚ್ಚು ಬಡ್ಡಿದರವನ್ನು ಕೊಡುವುದರ ಮೂಲಕವೂ ಹೆಚ್ಚುಹೆಚ್ಚು ಠೇವಣಿಗಳನ್ನು ಒದಗಿಸಿಕೊಳ್ಳಬಹುದು. ಈ ಸಂದರ್ಭದಲ್ಲಿ ನಗರ ಠೇವಣಿಗಳ ಮೇಲಿನ ಬಡ್ಡಿದರಕ್ಕಿಂತ ಗ್ರಾಮೀಣ ಠೇವಣಿಗಳ ಮೇಲಿನ ಬಡ್ಡಿದರ ಮೇಲ್ಮಟ್ಟದಲ್ಲಿರಬೇಕೆಂದು ಅಖಿಲಭಾರತ ಗ್ರಾಮೀಣ

ಮತ್ತು ಅವಲೋಕನ ಸಮಿತಿ ಅಭಿಪ್ರಾಯಪಟ್ಟಿದೆ3. ಇದನ್ನು ಕಾರ್ಯಗತಗೊಳಿಸುವುದು ವಾಣಿಜ್ಯ ಬ್ಯಾಂಕು ಮತ್ತು ಸಹಕಾರ ಬ್ಯಾಂಕುಗಳ ಆದ್ಯ ಕರ್ತವ್ಯವಾಗಿದೆ.

ಅವಶ್ಯಕತೆಗೂ ಮೀರಿದ ಸಂಪನ್ಮೂಲಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುವುದು ಹೊಂದಾವಣೆ ಏರ್ಪಡಿಸುವ ಮತ್ತೊಂದು ಕ್ರಮ. ಉದಾಹರಣೆಗೆ ಅಪೆಕ್ಸ್ ಬ್ಯಾಂಕುಗಳು ಮತ್ತು ಸಹಕಾರ ಭೂ ಅಭಿವೃದ್ಧಿ ಬ್ಯಾಂಕುಗಳು ತಮ್ಮ ಹೆಚ್ಚಳ ಸಂಪನ್ಮೂಲವನ್ನು ವಾಣಿಜ್ಯ ಬ್ಯಾಂಕುಗಳಲ್ಲಿ ಇಡಬಹುದು4. ಇದೇ ರೀತಿಯಲ್ಲಿ ವಾಣಿಜ್ಯ ಬ್ಯಾಂಕುಗಳು ತಮ್ಮ ಹೆಚ್ಚಳ ಸಂಪನ್ಮೂಲವನ್ನು ಸಹಕಾರ ಬ್ಯಾಂಕುಗಳಲ್ಲಿ ವಿನಿಯೋಗಿಸಬಹುದು. ಈ ಕ್ರಮವನ್ನು ಕಾರ್ಯಗತಗೊಳಿಸುವಲ್ಲಿ ರಾಜ್ಯಮಟ್ಟದ ಹೊಂದಾವಣೆ ಸಮಿತಿಗಳು ಸಕ್ರಿಯ ಪಾತ್ರ ವಹಿಸಬೇಕೆಂದು ರಾಷ್ಟ್ರ ಮಟ್ಟದ ಹೊಂದಾವಣೆ ಸಮಿತಿ ಅಭಿಪ್ರಾಯಪಟ್ಟಿದೆ.

ಎರಡನೆಯ ಸನ್ನಿವೇಶದಲ್ಲಿ, ಬ್ಯಾಂಕಿಂಗ್ ಸೌಕರ್ಯಗಳಿಲ್ಲದ ಪ್ರದೇಶಗಳನ್ನು ಮತ್ತು ಕೇವಲ ವಾಣಿಜ್ಯ ಬ್ಯಾಂಕುಗಳು ಅಥವಾ ಸಹಕಾರ ಬ್ಯಾಂಕುಗಳು ಕಾರ್ಯೋನ್ಮುಖವಾಗಿರುವ ಪ್ರದೇಶಗಳನ್ನು ಕಾಣಬಹುದು. ಬ್ಯಾಂಕುಗಳ ಶಾಖೆಗಳನ್ನು ವಿಸ್ತರಿಸುವುದರ ಮೇಲೆ ಹತೋಟಿ ಹೊಂದುವುದರ ಮೂಲಕ ಈ ಸಂದರ್ಭದಲ್ಲಿ ಹೊಂದಾವಣೆ ಸಾಧಿಸಬಹುದು. ಈ ನಿಟ್ಟಿನಲ್ಲಿ ಬ್ಯಾಂಕು ಸೌಕರ್ಯಗಳನ್ನು ಹೊಂದಲು ಅರ್ಹವಾದ ಪ್ರದೇಶಗಳನ್ನು ಗುರುತಿಸಲು ಕೈಕೊಂಡ ಇತ್ತೀಚಿನ ಒಂದು ಅಧ್ಯಯನ5 ಬಹಳ ನೆರವಾಗುತ್ತದೆ. ಮೇಲಾಗಿ, ಭಾರತದ ರಿಸರ್ವ್ ಬ್ಯಾಂಕಿಗೆ ಶಾಖಾ ವಿಸ್ತರಣೆಯ ಮೇಲೆ ಹತೋಟಿ ಇರುವ ಸಂಗತಿಯೂ ಹೊಂದಾವಣೆ ಸಾಧನೆಗೆ ನೆರವಾಗುತ್ತದೆ.

ಒಟ್ಟಿನಲ್ಲಿ ಹೇಳುವುದಾದರೆ, ಸಹಕಾರ ಬ್ಯಾಂಕು ಮತ್ತು ವಾಣಿಜ್ಯ ಬ್ಯಾಂಕುಗಳ ನಡುವಿನ ಹೊಂದಾವಣೆ ಸಮಸ್ಯೆ ನಿಜವಾಗಿ ಕ್ಲಿಷ್ಟ ಸ್ವರೂಪದ್ದಾಗಿದೆ. ಈ ಸಮಸ್ಯೆಯನ್ನು ಬಿಡಿಸಿದಾಗ ಮಾತ್ರ ಗ್ರಾಮೀಣ ಹಣಕಾಸು ಕ್ಷೇತ್ರದ ಪ್ರಗತಿ ಕಂಡು ಬರುತ್ತದೆ. ಈ ಪ್ರಗತಿ ಕೃಷಿ ವಲಯವನ್ನು ಅಭಿವೃದ್ಧಿಗೊಳಿಸಿ ತನ್ಮೂಲಕ ರಾಷ್ಟ್ರದ ಸರ್ವತೋಮುಖ ಅಭಿವೃದ್ಧಿಗೆ ಅಡಿಗಲ್ಲಾಗಿ ಪರಿಣಮಿಸುತ್ತದೆ. ಆದ್ದರಿಂದ ಸಹಕಾರ ಬ್ಯಾಂಕು ಮತ್ತು ವಾಣಿಜ್ಯ ಬ್ಯಾಂಕುಗಳು ಹೊಂದಾವಣೆ ಸಮಸ್ಯೆಯ ಗಂಭೀರ ಸ್ವರೂಪವನ್ನು ಅರಿತು ಪ್ರಾಮಾಣಿಕತೆಯಿಂದ ಮತ್ತು ನಿಷ್ಠೆಯಿಂದ ಹೊಂದಾವಣೆ ಕ್ರಮಗಳನ್ನು ಕಾರ್ಯಗತಗೊಳಿಸಬೇಕು.

---

3 *Ibid.*, pp. 682–3

4 *Coordination between the Commercial and Co-operative Banking Sectors in Financing Agriculture*, Agricultural Finance Corporation, p. 11

5 V. M. Jakhade and H. B. Shivamaggi, *Inter-District Comparison of Agricultural Development and Spread of Banking Facilities in the Rural Areas*, *R.B.I. Bulletin*, October, 1969

ಅರ್ವಾಚೀನ ಜಗತ್ತಿನಲ್ಲಿ ಯಾವ ದೇಶವೂ ತಾನು ಸಂಪೂರ್ಣ ಸ್ವತಂತ್ರ ಆರ್ಥಿಕ ರಾಷ್ಟ್ರವೆಂದಾಗಲಿ, ಸಮಾಜವಾದಿ ರಾಷ್ಟ್ರವೆಂದಾಗಲಿ ಹೇಳಿಕೊಳ್ಳುವಂತಿಲ್ಲ. ಸರ್ವತಂತ್ರ ಸ್ವತಂತ್ರ ಸಮಾಜಗಳಲ್ಲಿ ತಲೆದೋರಿದ ಮನಸ್ಫೋಲಿ ಒಂದು ಬಗೆಯ ಸಾಮೂಹಿಕ ನಿಯಂತ್ರಣ .... "ಉತ್ಪಾದನೆಯನ್ನು ಯೋಜನಾಬದ್ಧವಾಗಿ ಮಾಡುವುದೂ, ಮನುಷ್ಯ ಜೀವನವನ್ನು ಪಂಜರಬದ್ಧವಾಗಿ ಮಾಡುವುದೂ ಒಂದೇ" ಎಂಬವರ ಸಾಲಿಗೆ ನಾವು ಸೇರಬೇಕೋ ಅಥವಾ ಜನಶಕ್ತಿಯ ಹೊರತು ಉಳಿದ ಭೂಮಿ, ಬಂಡವಾಳ, ಸಾಹಸಿ ಎಂಬ ವಿರಳ ಅವಯವಗಳನ್ನು ಆದಷ್ಟು ಮಿತವ್ಯಯವಾಗಿ, ಸಮಾಜದ ಹಿತಕ್ಕಾಗಿ ಬಳಸಿಕೊಳ್ಳುವಂಥ ಯೋಜನಾತ್ಮಕ ಪದ್ಧತಿಯನ್ನು ಒಲಿಯಬೇಕೋ ? ನಮ್ಮ ಆಯ್ಕೆಯ ಮೇಲೆ ನಮ್ಮ ದೇಶದ ಪುನರ್‌ರಚನೆ ನಡೆಯಬೇಕು. ಯೋಜನಾತ್ಮಕ ಸಮಾಜದಲ್ಲಿ ವೈಶೇಷಿಕ ವ್ಯಕ್ತಿತ್ವ ಕುಂಠಿತವಾಗುವುದು ನಿಜವಾದರೂ ಪ್ರಕೃತ ಪಶುಜೀವನವನ್ನು ನಡೆಸುತ್ತಿರುವ ಜನಕೋಟಿಯನ್ನು ಯಾವ ರೀತಿಯಿಂದಲಾದರೂ ಶೀಘ್ರವಾಗಿ ಉನ್ನತಿಯ ದಾರಿಯಲ್ಲಿ ನಡೆಸುವ ಮಾರ್ಗವನ್ನು ನಾವು ಆರಿಸಬೇಕು ಎಂಬುದರಲ್ಲಿ ಯಾರಿಗೂ ಆಕ್ಷೇಪವಿರಲಾರದು. ಮುಂಬರಿದ ದೇಶಗಳ ಉದಾಹರಣೆಯೂ ಅನುಭವವೂ ನಮಗಿರುವಾಗ, ಅವರ ದೋಷಗಳನ್ನು ತಿದ್ದಿಕೊಳ್ಳುವ ಅವಕಾಶವಿರುವಾಗ, ಸಂಕೋಚಕ್ಕೆ ಸರ್ವಥಾ ಎಡೆಯಿಲ್ಲ.[1]

—ಕು. ಶಿ. ಹರಿದಾಸ ಭಟ್ಟ

---

1 ಅರ್ಥಶಾಸ್ತ್ರ, ಕಾವ್ಯಾಲಯ, ಮೈಸೂರು, 1952, ಪು. 285-6

ಪ್ರೊ. ಪಿ. ಕೆ. ಪಾಟೀಲ್

ಕಾಲೇಜು ಗ್ರಂಥಾಲಯಗಳ ಸಾಧನ ಸೌಲಭ್ಯಗಳು

ಈ ಲೇಖನವಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಅಧಿಕಾರವ್ಯಾಪ್ತಿಯಲ್ಲಿರುವ ಕಾಲೇಜು ಗ್ರಂಥಾಲಯಗಳ ಸದ್ಯದ ಸ್ಥಿತಿಯನ್ನು ತೋರಿಸಿಕೊಡಲು ಯತ್ನಿಸಲಾಗಿದೆಯಲ್ಲದೆ ಸ್ನಾತಕಪೂರ್ವಘಟ್ಟದಲ್ಲಿ ಗ್ರಂಥಾಲಯದ ಸೇವೆಯನ್ನು ಉತ್ತಮಪಡಿಸಲು ಕೆಲವು ಸಲಹೆಗಳನ್ನು ಕೊಡಲಾಗಿದೆ. ಗ್ರಂಥಾಲಯಗಳ ಸ್ಥಿತಿಯ ಮೇಲೆ ಪರಿಣಾಮ ಬೀರುವ ಎಲ್ಲ ಅಂಶಗಳನ್ನೂ ಇಲ್ಲಿ ವಿವೇಚಿಸುವುದು ಸಾಧ್ಯವಾಗುವುದಿಲ್ಲ. ಗ್ರಂಥಾಲಯದ ಸ್ಥಿತಿಯನ್ನು ಉತ್ತಮಪಡಿಸಲು ಹೆಚ್ಚು ಗಮನ ನೀಡಬೇಕಾದ ಕೆಲವು ವಿಷಯಗಳನ್ನು ಎತ್ತಿತೋರಿಸಲು ಇಲ್ಲಿ ಯತ್ನಿಸಲಾಗಿದೆ. ಒಳ್ಳೆಯ ಗ್ರಂಥಾಲಯಸೇವೆಯನ್ನು ಕುರಿತ ವಿವೇಚನೆ ನಡೆಸುವಾಗ ಒಂದು ಅತ್ಯಂತ ಮುಖ್ಯ ಅಂಶವನ್ನು ಮರೆಯತಕ್ಕದ್ದಲ್ಲ: ಇತರ ಕ್ಷೇತ್ರಗಳಲ್ಲಿಯ ಸಮಸ್ಯೆಗಳಂತೆ ಗ್ರಂಥಾಲಯಸಮಸ್ಯೆಗಳಿಗೂ ದೇಶದ ಸಾಮಾಜಿಕ ಆರ್ಥಿಕ ರಾಜಕೀಯ ಪರಿಸ್ಥಿತಿಗಳಿಗೂ ನಿಕಟ ಸಂಬಂಧವುಂಟು. ಗ್ರಂಥಾಲಯಸೇವೆಗೆ ಆದ್ಯ ಪ್ರಾಶಸ್ತ್ಯ ನೀಡುವುದು ಅತ್ಯವಶ್ಯವೆಂಬುದಕ್ಕೆ ಒಳ್ಳೆಯ ಕಾರಣವುಂಟು. ಗ್ರಂಥಾಲಯಗಳ ಅಭಿವೃದ್ಧಿಯಾದರೆ ಅವುಗಳಿಂದ ನಮಗೆ ಆರ್ಥಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೌಲಭ್ಯಗಳು ಲಭ್ಯವಾಗುತ್ತವೆ. ಈ ದೃಷ್ಟಿಯಿಂದ ಕಾಲೇಜ್ ಗ್ರಂಥಾಲಯಗಳ ಸದ್ಯದ ಪರಿಸ್ಥಿತಿಗಳನ್ನು ಪರಿಶೀಲಿಸುವುದು ಅವಶ್ಯವಾಗಿದೆ.

ನಿಜವಾದ ಅರ್ಥದಲ್ಲಿ ಕಾಲೇಜ್ ಅಥವಾ ವಿಶ್ವವಿದ್ಯಾಲಯ ಗ್ರಂಥಾಲಯ ಒಂದು ಮಹಾದ್ವಾರ. ಪಾಂಡಿತ್ಯಪ್ರಪಂಚವನ್ನು ಪ್ರವೇಶಿಸಬಯಸುವ ಅಧ್ಯಾಪಕರೂ ವಿದ್ಯಾರ್ಥಿಗಳೂ ಈ ಮಹಾದ್ವಾರದ ಮೂಲಕವೇ ಸಾಗಬೇಕು. ಶಿಕ್ಷಣ ಸಂಸ್ಥೆಗಳಲ್ಲಿ ಗ್ರಂಥಾಲಯಗಳ ಪ್ರಾಮುಖ್ಯ ಎಷ್ಟೆಂಬುದನ್ನು 1948–49ರ ರಾಧಾಕೃಷ್ಣನ್ ಆಯೋಗದ ವರದಿಯಲ್ಲೂ 1966ರ ಶಿಕ್ಷಣ ಆಯೋಗದ (ಕೊಠಾರಿ) ವರದಿಯಲ್ಲೂ ಸ್ಪಷ್ಟವಾಗಿಯೂ ಖಚಿತವಾಗಿಯೂ ಒತ್ತಿಹೇಳಲಾಗಿದೆ. 'ಗ್ರಂಥಾಲಯಗಳು ಪುಸ್ತಕಗಳ ಉಗ್ರಾಣಗಳಾಗಿ ಮಾತ್ರ ಉಳಿಯುವಂಥ ಪ್ರವೃತ್ತಿಯುಂಟು. ಅವು ಅಷ್ಟೇ ಆಗಿ ಉಳಿಯಬಾರದು. ಅವು ಚೈತನ್ಯಪೂರ್ಣವಾಗಿರಬೇಕು, ವಯಸ್ಕರನ್ನು ಆಕರ್ಷಿಸಿ ಶಿಕ್ಷಿತರನ್ನಾಗಿ ಮಾಡಲು ಅವು ತೊಡಗಬೇಕು.' ಎಂದು ಕೊಠಾರಿ ಆಯೋಗದ ವರದಿ[1] ಹೇಳಿದೆ. ಈ ಮಾತು ವಿಶ್ವವಿದ್ಯಾಲಯ ಮತ್ತು ಕಾಲೇಜು ಗ್ರಂಥಾಲಯಗಳಿಗೂ ವಿಶಿಷ್ಟವಾಗಿ ಅನ್ವಯವಾಗುತ್ತದೆ.

ವಿಶ್ವವಿದ್ಯಾಲಯ ಗ್ರಂಥಾಲಯಗಳ ವಿಚಾರದಲ್ಲಿ ಹೇಳುವುದಾದರೆ, ಡಾ. ಸಿ. ಡಿ. ದೇಶಮುಖ್ ಮುಂತಾದವರ ಆಸಕ್ತಿಯಿಂದಾಗಿ ವಿಶ್ವವಿದ್ಯಾಲಯ ಅನುದಾನ ಆಯೋಗ ಅದರ ಸ್ಥಾಪನೆಯ ಕಾಲದಿಂದಲೂ ಆಗಿಂದಾಗ್ಗೆ ವಿಶ್ವವಿದ್ಯಾಲಯ ಗ್ರಂಥಾಲಯಗಳಿಗೆ ಪುಸ್ತಕಗಳನ್ನೂ ಪತ್ರಿಕೆಗಳನ್ನೂ ಕೊಳ್ಳಲೂ, ಹೊಸ ಭವನಗಳನ್ನು ನಿರ್ಮಿಸಿಕೊಳ್ಳಲೂ, ಅವುಗಳಲ್ಲಿ ಕೆಲಸ ಮಾಡುವ ಗ್ರಂಥಪಾಲರ ಸೇವಾಸ್ಥಿತಿಗಳನ್ನು ಉತ್ತಮಪಡಿಸಲೂ ಧಾರಾಳವಾಗಿ ಅನುದಾನ ನೀಡುತ್ತಿದೆ. ಕೆಲವು ಕಾಲೇಜುಗಳು ಕೂಡ ವಿಶ್ವವಿದ್ಯಾಲಯ ಅನುದಾನ ಆಯೋಗದಿಂದ ಸ್ವಲ್ಪಮಟ್ಟಿಗೆ ಅನುದಾನ ಪಡೆದಿವೆಯಾಗಲಿ. ವಿಶ್ವ

1 *Report of the Education Commission* (1964-66), p. 436

ವಿದ್ಯಾಲಯ ಗ್ರಂಥಾಲಯಗಳು ಪಡೆದಿರುವ ಪ್ರಮಾಣದಲ್ಲಿ ಇವು ಸಹಾಯ ಪಡೆದಿಲ್ಲ. ಶಾಲಾ ಗ್ರಂಥಾಲಯಗಳ ಕ್ಷೇತ್ರದಲ್ಲಿ ಸೇವೆಯನ್ನು ಉತ್ತಮಪಡಿಸಲು ಬೇಕಾದಷ್ಟು ಅವಕಾಶವುಂಟು. ಸ್ವಾತಂತ್ರ್ಯಾನಂತರಕಾಲದಲ್ಲಿ ಶಿಕ್ಷಣ ವಿಸ್ತರಣದೊಂದಿಗೆ ಶಾಲೆಗಳ ಸಂಖ್ಯೆಯೂ ಅಧಿಕವಾಗಿದೆ, ಅಧಿಕವಾಗುತ್ತಿದೆ. ನಮ್ಮ ಬಹುತೇಕ ಶಾಲೆಗಳಲ್ಲಿ ಹೇಳಿಕೊಳ್ಳುವಂಥ ಗ್ರಂಥಾಲಯಗಳೇ ಇಲ್ಲ. ಒಳ್ಳೆಯ ಗ್ರಂಥಾಲಯಗಳು ಇರುವಲ್ಲಿ ಅವನ್ನು ವಿದ್ಯಾರ್ಥಿಗಳೂ ಶಿಕ್ಷಕರೂ ಪೂರ್ತಿಯಾಗಿ ಬಳಸಿಕೊಳ್ಳುತ್ತಿಲ್ಲ. ಈ ಶಾಲೆಗಳಲ್ಲಿ ತರಬೇತಾದ ಗ್ರಂಥಪಾಲರಿಲ್ಲ. ಇದರಿಂದಾಗಿ ಈ ಗ್ರಂಥಾಲಯಗಳು ಕ್ರಮಕ್ರಮವಾಗಿ ಕ್ಷೀಣಿಸುತ್ತಿವೆ. ನಮ್ಮ ಶಾಲಾಗ್ರಂಥಾಲಯಗಳನ್ನು ಕಡೆಗಣಿಸುವುದು ರಾಷ್ಟ್ರಹಿತದೃಷ್ಟಿಯಿಂದ ಸರಿಯಲ್ಲ. ನಮ್ಮ ಬಾಲಕರು ಮೊಟ್ಟಮೊದಲ ಬಾರಿಗೆ ಪುಸ್ತಕಪ್ರಪಂಚವನ್ನು ದರ್ಶಿಸುವುದು ಅಲ್ಲಿ. ನಾನಾ ಪ್ರಭಾವಗಳಿಗೆ ಒಳಗಾಗಲು ಅದೊಂದು ಸುಸಂದರ್ಭ. ಏನನ್ನು ಓದಬೇಕು, ಏನನ್ನು ಓದಬಾರದು—ಎಂಬುದನ್ನು ಅವರು ಅಲ್ಲಿ ಕಲಿಯುತ್ತಾರೆ. ಶಾಲಾಮಟ್ಟದಲ್ಲಿ ಕಲಿತ ಓದುವ ಅಭ್ಯಾಸ ಉನ್ನತಮಟ್ಟದಲ್ಲಿ ಸ್ಥಿರವಾಗಿ ಉಳಿದು ಬೆಳೆಯುತ್ತದೆ. ಶಾಲೆಕಾಲೇಜುಗಳ ಮಟ್ಟಗಳಲ್ಲಿ ಒಳ್ಳೆಯ ಗ್ರಂಥಾಲಯ ಸೇವೆಯನ್ನೊದಗಿಸಲು ವಿಶ್ವವಿದ್ಯಾಲಯಮಟ್ಟದಲ್ಲಿ ಗ್ರಂಥಾಲಯಸೇವೆಯನ್ನು ಒದಗಿಸುವುದೆಂದರೆ, ಸರಿಯಾದ ಅಸ್ತಿಭಾರವಿಲ್ಲದೆ ಮಹಾಸೌಧವನ್ನು ಕಟ್ಟಲು ಯತ್ನಿಸಿದಂತಾಗುತ್ತದೆ.

ಗ್ರಂಥಾಲಯವೇ ಶಾಲೆ ಅಥವಾ ಕಾಲೇಜಿನ ಹೃದಯವೆಂದೂ ಶಾಲೆ ಅಥವಾ ಕಾಲೇಜಿನ ಎಲ್ಲ ಚಟುವಟಿಕೆಗಳೂ ಅಲ್ಲಿ ಉಗಮಿಸಬೇಕೆಂದೂ ಅನೇಕರು ಗ್ರಂಥಾಲಯದ ಪ್ರಾಶಸ್ತ್ಯವನ್ನು ಬಾಯಲ್ಲಿ ಹೇಳುತ್ತಿರುತ್ತಾರೆ: ನಿಜವಾದ ವಿಶ್ವವಿದ್ಯಾಲಯವೆಂದರೆ ಯಾವುದೆಂಬ ಬಗ್ಗೆ ಕಾರ್ಲೈಲ್ ನೀಡಿರುವ ವ್ಯಾಖ್ಯೆಯನ್ನು ಸಾರ್ವಜನಿಕ ವೇದಿಕೆಗಳ ಮೇಲೆ ಘೋಷಿಸುತ್ತಾರೆ. ಆದರೆ ವಾಸ್ತವವಾಗಿ ಶಿಕ್ಷಕರು ಮತ್ತು ಆಡಳಿತಗಾರರು ಇದರ ಬಗ್ಗೆ ಉದಾಸೀನರಾಗಿದ್ದಾರೆ. ಗ್ರಂಥಾಲಯಸೇವೆಯನ್ನು ಅಭಿವೃದ್ಧಿಪಡಿಸುವ ವಿಚಾರವಾಗಿ ಅವರು ತಳೆಯುವ ನಿಲುವು ನೇತ್ಯಾತ್ಮಕವಾದುದು. ಸರ್ಕಾರದ ಉನ್ನತಮಟ್ಟದಿಂದ ಹಿಡಿದು ಶಾಲೆಕಾಲೇಜುಗಳ ಮಟ್ಟದ ವರೆಗೆ ಎಲ್ಲ ಕ್ಷೇತ್ರಗಳಲ್ಲೂ ಇದೇ ಧೋರಣೆ ಕಂಡುಬರುತ್ತದೆ. ಕೆಲವು ಗ್ರಂಥಪಾಲರ ವಿಶೇಷ ಪ್ರಯತ್ನಗಳಿಂದಾಗಿ ಆಡಳಿತಮಂಡಳಿಯ ಕ್ರಿಯಾತ್ಮಕ ಬೆಂಬಲದಿಂದಾಗಿ ಕೆಲವು ಶಾಲೆಗಳೂ ಕಾಲೇಜುಗಳೂ ತಕ್ಕಮಟ್ಟಿಗೆ ಒಳ್ಳೆಯ ಗ್ರಂಥಾಲಯಸೇವೆಯನ್ನು ಒದಗಿಸಲು ಸಾಧ್ಯವಾಗಿದೆಯೆಂಬುದೇನೋ ನಿಜ. ಆದರೆ ಇಂಥ ನಿದರ್ಶನಗಳು ವಿಶಾಲ ಮರುಭೂಮಿಯ ನಡುವಣ ಓಯಸಿಸುಗಳಂತೆ ಬಲು ವಿರಳ.

ಗ್ರಂಥಪಾಲನಾಗಿ ವ್ಯಾಸಂಗನಿರತ ಸಾರ್ವಜನಿಕರೊಂದಿಗೆ ಅನುದಿನದ ಸಂಪರ್ಕ ಪಡೆದಿರುವವನಾಗಿ ನಾನು ಒಂದು ಮಾತನ್ನು ಇಲ್ಲಿ ಹೇಳತಕ್ಕದ್ದಿದೆ. ಉನ್ನತ ವ್ಯಾಸಂಗಸೌಲಭ್ಯ ಪಡೆದ ಸುಶಿಕ್ಷಿತರೆನಿಸಿಕೊಂಡವರಲ್ಲಿರುವ ಅತ್ಯಂತ ತೀವ್ರವಾದ ಕೊರತೆಯೆಂದರೆ ಕ್ರಿಯಾತ್ಮಕ ಅನಕ್ಷರತೆ. ಅರ್ಥವತ್ತಾಗಿ ಓದಬಲ್ಲ ಮಂದಿ ಇವರು. ಆದರೆ ಇವರು ಪುಸ್ತಕಗಳಿಂದ ಕಲಿಯಲೊಲ್ಲರು. ಕಾಲೇಜು ಶಿಕ್ಷಣ ಮುಗಿಸಿ ಹೊರಬರುವ ವಿದ್ಯಾರ್ಥಿಗಳ ವ್ಯಾಸಂಗಶಕ್ತಿ ಬಲು ಕಡಿಮೆ. ಗ್ರಂಥಾಲಯ ಮತ್ತು ಗ್ರಂಥಾಲಯಸೇವೆಯಿಂದ ವಿದ್ಯಾರ್ಥಿಗಳ ವ್ಯಾಸಂಗದ ಮೇಲೆ ಆಗಬಹುದಾದ ಉತ್ತಮ ಪರಿಣಾಮವೇನೆಂಬುದನ್ನು ಶಿಕ್ಷಣತಜ್ಞರು ಅರಿತಿಲ್ಲ. ಗ್ರಂಥಾಲಯದ ದ್ವಾರಪ್ರವೇಶ ಮಾಡದೆಯೇ ವಿದ್ಯಾರ್ಥಿ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣನಾಗಬಹುದಾಗಿದೆ. ಕೆಲವು ಪ್ರಗತಿಪರ ವಿಶ್ವವಿದ್ಯಾಲಯಗಳಲ್ಲೂ ಕಾಲೇಜುಗಳಲ್ಲೂ ಅನುಸರಿಸಲಾಗುತ್ತಿರುವ ನವೀನ ಪದ್ಧತಿಗಳೊಂದಿಗೆ ಹೋಲಿಸಿದರೆ ನಮ್ಮ ಬೋಧನೆ ಮತ್ತು ಪರೀಕ್ಷಾ ಪದ್ಧತಿಗಳು ತುಂಬ ಹಳೆಯವೆನಿಸುತ್ತವೆ. ಗ್ರಂಥಾಲಯದ ವ್ಯಾಪಕ ಸಾಧನಗಳನ್ನು ಬಳಸಿಕೊಂಡು ತನ್ನ ಪ್ರವರ್ತನಶೀಲತೆಯನ್ನೂ ಕರ್ತೃತ್ವಶೀಲತೆಯನ್ನೂ ತೋರಿಸುವುದು ಸಾಧ್ಯವಾಗುವಂತೆ ಸ್ನಾತಕಪೂರ್ವ ವಿದ್ಯಾರ್ಥಿಗೆ ಸಾಮಾನ್ಯವಾಗಿ ತರಬೇತು ನೀಡಲಾಗುತ್ತಿಲ್ಲ. ಬ್ರಿಟನ್ನಿನ ಸಸೆಕ್ಸ್ ವಿಶ್ವವಿದ್ಯಾಲಯದಲ್ಲಿ 1963-64ರಲ್ಲಿ ಸಮಾಜಶಾಸ್ತ್ರ ವಿದ್ಯಾರ್ಥಿಗಳು ಅಮೆರಿಕನ್ ಆರ್ಥಿಕ ಇತಿಹಾಸದಲ್ಲಿ 109 ಕೃತಿಗಳನ್ನೂ ಅಂತರರಾಷ್ಟ್ರೀಯ ಸಂಬಂಧಗಳಲ್ಲಿ 111 ಕೃತಿಗಳನ್ನೂ ಸಾಮಾಜಿಕ ಮನಶ್ಶಾಸ್ತ್ರದಲ್ಲಿ 125 ಕೃತಿಗಳನ್ನೂ ರಾಜಕೀಯ ಸಮಾಜಶಾಸ್ತ್ರದಲ್ಲಿ 133 ಕೃತಿಗಳನ್ನೂ ಬ್ರಿಟಿಷ್ ಆರ್ಥಿಕ ಇತಿಹಾಸದಲ್ಲಿ 141 ಕೃತಿಗಳನ್ನೂ ಅವಲೋಕಿಸಬೇಕೆಂದು ಅವರಿಗೆ ಸಲಹೆ ನೀಡಲಾಯಿತು.

ಇತರ ವಿಶ್ವವಿದ್ಯಾಲಯಗಳಲ್ಲಿ ಜೈವಿಕ ವಿಜ್ಞಾನಗಳ ವಿದ್ಯಾರ್ಥಿಗಳು ಪ್ರಥಮ ವರ್ಷದಲ್ಲಿ 7 ಅಥವಾ 8 ಶಿಷ್ಟ ಪಠ್ಯಪುಸ್ತಕಗಳನ್ನೂ ಎರಡನೆಯ ವರ್ಷದಲ್ಲಿ ಕನಿಷ್ಠ 25 ಪುಸ್ತಕಗಳನ್ನೂ ಓದಬೇಕೆಂದು ಸಲಹೆ ನೀಡಲಾಯಿತು. ಮೂರನೆಯ ವರ್ಷದಲ್ಲಿ ಅವರು ತಮ್ಮ ಕೆಲಸದ ವಿವಿಧ ಮುಖಗಳಿಗೆ ಸಂಬಂಧಿಸಿದಂತೆ ಕನಿಷ್ಠ 800 ಸಂಪುಟಗಳ ರಾಶಿಯಿಂದ ವಿಷಯ ಸಂಗ್ರಹಮಾಡಬೇಕೆಂದು ಕೋರಲಾಯಿತು. ಇಂಥವೇ ವಿಷಯಗಳಿಗೆ ಸಂಬಂಧಿಸಿದಂತೆ ಭಾರತೀಯ ವಿಶ್ವವಿದ್ಯಾಲಯಗಳಲ್ಲಿ ಎರಡು ಪುಸ್ತಕಗಳನ್ನು ಓದಬೇಕೆಂದು ಕೂಡ ಸಲಹೆ ನೀಡುವುದಿಲ್ಲ. ವಿದ್ಯಾರ್ಥಿಗಳ ಮಾರ್ಗದರ್ಶಿಗಳೆಂದರೆ ಊಹಾಪ್ರಶ್ನೆ ಪತ್ರಿಕೆಗಳು ಮತ್ತು ಸಿದ್ಧಗೊಳಿಸಿದ ಉತ್ತರಗಳು.

ಭಾರತದಲ್ಲಿ ಒಬ್ಬ ವಿಶ್ವವಿದ್ಯಾಲಯದ ಸಾಮಾನ್ಯ ವಿದ್ಯಾರ್ಥಿ ತರಗತಿಯ ಹಾಜರಿಯ ವೇಳೆಯಲ್ಲದೆ ದಿನಕ್ಕೆ ಒಂದು ಗಂಟೆಗೂ ಕಡಿಮೆಯನ್ನು ವ್ಯಾಸಂಗಕ್ಕಾಗಿ ವಿನಿಯೋಗಿಸುತ್ತಾನೆ. ಆದರೆ ಅಮೆರಿಕದಲ್ಲಿ ಸಾಮಾನ್ಯ ವಿದ್ಯಾರ್ಥಿಯೊಬ್ಬ ತರಗತಿ ಕೋಣೆಗಳ ಹೊರಗೆ ವ್ಯಾಸಂಗಕ್ಕಾಗಿ ವಿನಿಯೋಗಿಸುವ ಕಾಲ ದಿನಕ್ಕೆ 3–4 ಗಂಟೆಗಳು2.

ವಿಶ್ವವಿದ್ಯಾಲಯ ಅನುದಾನ ಆಯೋಗದ ಅಧ್ಯಕ್ಷರಾಗಿದ್ದ ಡಾ. ಸಿ. ಡಿ. ದೇಶಮುಖ್ ಅವರ ಅಭಿಪ್ರಾಯಗಳನ್ನು ಈ ಸಂದರ್ಭದಲ್ಲಿ ಉಲ್ಲೇಖಿಸುವುದು ಅನುಚಿತವಾಗಲಾರದು. ಗ್ರಂಥಾಲಯ ಸಮ್ಮೇಳನವನ್ನು ಉದ್ಘಾಟಿಸುತ್ತ ಅವರು ಆಡಿದ ಮಾತುಗಳು ಇವು: 'ನಾವು ಆಲೋಚಿಸಿರುವಂತೆ ಸಾಮಾನ್ಯವಾಗಿ ಸುಮಾರು 1,000 ವಿದ್ಯಾರ್ಥಿಗಳಿರುವ ಕಾಲೇಜಿನಲ್ಲಿ ಪ್ರತಿ ವಿದ್ಯಾರ್ಥಿಗೂ 50 ಗ್ರಂಥಗಳಂತೆ ಒಟ್ಟು 50,000 ಗ್ರಂಥಗಳಿರಬೇಕು. ವಿಶ್ವವಿದ್ಯಾಲಯದಲ್ಲಿ ಕನಿಷ್ಠ ಪಕ್ಷ ಆ ಸಂಖ್ಯೆಯ ಎರಡರಷ್ಟು, ಎಂದರೆ 1,00,000, ಇರಬೇಕು. ಎಂದರೆ ಪ್ರತಿ ವಿದ್ಯಾರ್ಥಿಗೂ ಮತ್ತು ಪ್ರತಿ ಅಧ್ಯಾಪಕನಿಗೂ 100 ಗ್ರಂಥಗಳಿರಬೇಕು. ಇದು ಆದರ್ಶ. ವಿದ್ಯಾರ್ಥಿ–ಅಧ್ಯಾಪಕ ಪ್ರಮಾಣ 20:1 ಇರುತ್ತದೆಂದು ನಮ್ಮ ಊಹೆ. ಇದು ಕೂಡ ಅಷ್ಟೇನೂ ಸೂಕ್ತವಾದ ಪ್ರಮಾಣವೇನೂ ಅಲ್ಲ.' ಡಾ. ದೇಶಮುಖರ ಈ ಹೇಳಿಕೆಯ ಪ್ರಕಾರ ನಮ್ಮ ಯಾವ ಕಾಲೇಜೂ ಈ ಶಿಷ್ಟತೆಯನ್ನು ನಿಲುಕುವುದಿಲ್ಲ. ಈಚೆಗೆ ಪ್ರಾರಂಭಿಸಲಾದ ಕಾಲೇಜುಗಳ ಪರಿಸ್ಥಿತಿ ಇನ್ನೂ ಕೆಳಮಟ್ಟದಲ್ಲಿದೆ. ಸಾಕಷ್ಟು ಸಾಧನಗಳಿಲ್ಲದಿದ್ದರೆ ಗ್ರಂಥಪಾಲ ಎಷ್ಟೇ ಪ್ರಯತ್ನಿಸಲಿ, ಅವನಿಗೆ ಎಷ್ಟೇ ಉತ್ಸಾಹವಿರಲಿ, ವ್ಯವಸ್ಥಾಪಕವರ್ಗದ ಬೆಂಬಲ ಎಷ್ಟೇ ಇರಲಿ, ಅಮೆರಿಕನ್ ಗ್ರಂಥಾಲಯಸಂಘದ ಆಶಯದಂತೆ ವಿದ್ಯಾಮಂಡಲಿ ಮತ್ತು ಸಮಾಜದ ಮುಖ್ಯ ಬೌದ್ಧಿಕ ಸಾಧನವಾಗುವ ಮತ್ತು ವಿದ್ಯಾರ್ಥಿಯಲ್ಲಿ ಒಳ್ಳೆಯ ವ್ಯಾಸಂಗದ ಆಜೀವ ಅಭ್ಯಾಸವನ್ನು ಬೆಳೆಯಲು ಚೋದನೆ ಹಾಗೂ ಪ್ರೋತ್ಸಾಹ ನೀಡುವ ಉದ್ದೇಶವನ್ನು ಅವನು ಸಾಧಿಸುವುದಕ್ಕಾಗುವುದಿಲ್ಲ.

ಮೈಸೂರು ವಿಶ್ವವಿದ್ಯಾನಿಲಯದಿಂದ ಮನ್ನಣೆ ಪಡೆದ ಕಾಲೇಜುಗಳಲ್ಲಿ ಲಭ್ಯವಿರುವ ಗ್ರಂಥಾಲಯ ಸಾಧನಗಳು, ಸೇವೆ ಮುಂತಾದವನ್ನು ಕಂಡುಹಿಡಿಯುವ ಉದ್ದೇಶದಿಂದ ವಿಶ್ವವಿದ್ಯಾನಿಲಯದ ಗ್ರಂಥಾಲಯ ವಿಜ್ಞಾನ ವಿಭಾಗ 1969ರಲ್ಲಿ ಒಂದು ಸರ್ವೇಕ್ಷಣ ನಡೆಸಿತು. ಈ ಸರ್ವೇಕ್ಷಣದ ಫಲಿತಾಂಶಗಳು ಉದ್ಬೋಧಕವಾಗಿವೆ. ಈ ಕೆಲವು ಕಾಲೇಜುಗಳಲ್ಲಿಯ ಸಾಧನಗಳು ಎಷ್ಟು ಅಲ್ಪವಾಗಿವೆಯೆಂಬುದು ಆಶ್ಚರ್ಯಕರ. ಡಾ. ಸಿ. ಡಿ. ದೇಶಮುಖರು ಸೂಚಿಸಿರುವ ಕನಿಷ್ಠ ಅಗತ್ಯಗಳನ್ನು ನಮ್ಮ ಯಾವ ಕಾಲೇಜು ಗ್ರಂಥಾಲಯವೂ ಪೂರೈಸುವ ಮಟ್ಟವನ್ನು ನಿಲುಕಿಲ್ಲ.

ಮೈಸೂರು ವಿಶ್ವವಿದ್ಯಾನಿಲಯದ ಮನ್ನಣೆ ಗಳಿಸಿದ ಕಾಲೇಜುಗಳ ಸಂಖ್ಯೆ 115. ಪುಸ್ತಕ ಸಂಗ್ರಹಣ, ವಿದ್ಯಾರ್ಥಿಗಳ ಸಂಖ್ಯೆ, ಅಧ್ಯಾಪಕರ ಸಂಖ್ಯೆ, ಗ್ರಂಥಾಲಯವನ್ನು ತೆರೆದಿರುವ ದಿನಗಳ ಸಂಖ್ಯೆ –ಇವನ್ನು ಕುರಿತ ಅಂಕಿಅಂಶಗಳನ್ನು ಪಡೆಯಲು ಸೂಕ್ತವಾದ ಪ್ರಶ್ನಾವಳಿಯೊಂದನ್ನು ರಚಿಸಿ, ಇದನ್ನು 82 ಸಂಸ್ಥೆಗಳಿಗೆ ಕೊಡಲಾಯಿತು. ಆದರೆ ಕೆಲವು ಸಂಸ್ಥೆಗಳು ನಮ್ಮ ಪ್ರಶ್ನಾವಳಿಗೆ ಉತ್ತರ ಕಳಿಸಲಿಲ್ಲ. ಇದಕ್ಕೆ ಕಾರಣವೇನೆಂಬುದು ಗೊತ್ತಿಲ್ಲ.

---

2 Bernard J. Toney, 'Indian University Libraries' in *College and Research Libraries*, Vol. 28, No. 6, Nov. 1967, p. 439

ಹಿಂದೆ ಹೇಳಿದ ವಿಧಾನದಿಂದ ಸಂಗ್ರಹಿಸಲಾದ ಅಂಕಿಅಂಶಗಳನ್ನು ವಿಶ್ಲೇಷಿಸಿ ಮುಂದೆ ಕೊಡಲಾಗಿದೆ:

ಪಟ್ಟಿ 1

ವಿವಿಧ ಬಗೆಯ ಕಾಲೇಜುಗಳ ಸಂಖ್ಯೆ

(ಎ) ಆರ್ಟ್ಸ್, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜುಗಳು	...	58
1 ಸರ್ಕಾರಿ ಕಾಲೇಜುಗಳು	...	11
2 ಸರ್ಕಾರೇತರ ಕಾಲೇಜುಗಳು	...	47
(ಬಿ) ವೃತ್ತಿಕಾಲೇಜುಗಳು	...	24
1 ಶಿಕ್ಷಣ	...	8
2 ಎಂಜನಿಯರಿಂಗ್	...	6
3 ನ್ಯಾಯಶಾಸ್ತ್ರ	...	5
4 ವೈದ್ಯಕ	...	3
5 ಇತರ	...	2

ಪಟ್ಟಿ 2

ಸಂಗ್ರಹವಾದ ಪುಸ್ತಕಗಳ ಗರಿಷ್ಠ ಮತ್ತು ಕನಿಷ್ಠ ಸಂಖ್ಯೆಗಳು, ವಿದ್ಯಾರ್ಥಿಗಳ ಸಂಖ್ಯೆ, ಕೆಲಸದ ದಿನಗಳು

	ಸಂಗ್ರಹವಾದ ಪುಸ್ತಕಗಳು		ವಿದ್ಯಾರ್ಥಿ ಸಂಖ್ಯೆ		ಕೆಲಸದ ದಿನಗಳು	
	ಗರಿಷ್ಠ	ಕನಿಷ್ಠ	ಗರಿಷ್ಠ	ಕನಿಷ್ಠ	ಗರಿಷ್ಠ	ಕನಿಷ್ಠ
ಆರ್ಟ್ಸ್, ವಿಜ್ಞಾನ ಮತ್ತು ವಾಣಿಜ್ಯ						
ಸರ್ಕಾರಿ (11)	34.000	4.024	3.200	844	296	190
ಸರ್ಕಾರೇತರ (7)	31,253	306	2,348	63	280	175
ವೃತ್ತಿ						
ಶಿಕ್ಷಣ (8)	11,476	2,425	175	109	280	180
ಎಂಜನಿಯರಿಂಗ್ (6)	14.360	6.446	986	415	385	210
ನ್ಯಾಯಶಾಸ್ತ್ರ (5)	5,875	914	282	12	200	150
ವೈದ್ಯಕ (3)	13.774	3.939	1.388	901	365	345
ಇತರ (2)	1,950	619	60	—	365	182

ಪಟ್ಟ 3

ವಿವಿಧ ವಿಭಾಗಗಳಲ್ಲಿ ಸಂಗ್ರಹವಾಗಿರುವ ಪುಸ್ತಕಗಳ ವ್ಯಾಪ್ತಿ

ಸಂಗ್ರಹವಾದ ಪುಸ್ತಕಗಳ ವ್ಯಾಪ್ತಿ	ಆರ್ಟ್ಸ್, ವಿಜ್ಞಾನ ಮತ್ತು ವಾಣಿಜ್ಯ			ವೃತ್ತಿ						ಮೊತ್ತ
	ಖಾಸಗಿ	ಸರ್ಕಾರಿ	ಒಟ್ಟು	ಶಿಕ್ಷಣ	ಎಂಜಿನಿಯರಿಂಗ್	ನ್ಯಾಯಶಾಸ್ತ್ರ	ವೈದ್ಯ	ಇತರ	ಒಟ್ಟು	
1–6,000	33	1	34	5	1	5	1	2	14	48
6,001–12,000	10	–	10	3	2	–	1	–	6	16
12,001–18,000	–	5	5	–	3	–	1	–	4	9
18,001–24,000	1	2	3	–	–	–	–	–	–	3
24,001–30,000	2	1	3	–	–	–	–	–	–	3
30,001–36,000	1	2	3	–	–	–	–	–	–	3
ಒಟ್ಟು	47	11	58	8	6	5	3	2	24	82

ಒಟ್ಟು 82 ಕಾಲೇಜುಗಳ ಪೈಕಿ 48ರಲ್ಲಿ (ಸುಮಾರು 60%) 6,000ಕ್ಕಿಂತ ಕಡಿಮೆ ಗ್ರಂಥಗಳೂ, 64ರಲ್ಲಿ (ಸುಮಾರು 80%) 12,000ಕ್ಕಿಂತ ಕಡಿಮೆ ಗ್ರಂಥಗಳೂ ಇವೆ. 82 ಕಾಲೇಜುಗಳ ಪೈಕಿ 3ರಲ್ಲಿ ಮಾತ್ರ (4%) 30,000–36,000 ಗ್ರಂಥಗಳೂ ಇವೆ.

ಹಿಂದೆ ಕೊಟ್ಟಿರುವ ಅಂಕಿ ಅಂಶಗಳಿಂದ ಸ್ಪಷ್ಟವಾಗುವ ವಿಚಾರವಿದು: ನಮ್ಮ ಗ್ರಂಥಾಲಯ ಸಂಪತ್ತು ಅಗತ್ಯಕ್ಕಿಂತ ಬಹಳ ಕಡಿಮೆ. ಸಂಖ್ಯೆಯ ದೃಷ್ಟಿಯಿಂದಲೇ ಇದು ವ್ಯಕ್ತವಾಗುತ್ತದೆ. ಸಂಗ್ರಹವಾದ ಪುಸ್ತಕಗಳ ಗುಣ ಅಥವಾ ಉಪಯುಕ್ತತೆಯನ್ನು ಪರಿಗಣಿಸಿದರಂತೂ ಅಂಥ ಪುಸ್ತಕಗಳ ಸಂಖ್ಯೆ ಇನ್ನೂ ಕಡಿಮೆ. ಸಂಗ್ರಹವಾದ ಪುಸ್ತಕಗಳ ಪೈಕಿ 30%–40% ಮಾತ್ರ ನಿತ್ಯೋಪಯೋಗಯುಕ್ತವಾದಂಥವು; ಉಳಿದವು ಹೆಚ್ಚು ಬಳಸದಿರುವ ಪುಸ್ತಕಗಳು—ಎಂಬುದನ್ನು ಕೆಲವು ಕಾಲೇಜು ಗ್ರಂಥಾಲಯಗಳ ವೀಕ್ಷಣದಿಂದ ನಾವು ಖಚಿತವಾಗಿ ಹೇಳಬಲ್ಲೆ. ಹಳೆಯ ಕಾಲೇಜುಗಳ ಗ್ರಂಥಾಲಯಗಳಲ್ಲಿ ಸೇ. 20–30ರಷ್ಟು ಗ್ರಂಥಗಳಾದರೂ ಹಳೆಯ ಮತ್ತು ಅನುಪಯುಕ್ತ ಸಂಗ್ರಹಗಳು. ಬೇಡದ ಗ್ರಂಥಗಳನ್ನು ಕಳೆದುಹಾಕುವ ಪದ್ಧತಿಯನ್ನು ಹಿಂದಿನಿಂದ ಅನುಸರಿಸಿಕೊಂಡು ಬಂದಿಲ್ಲ. ಉದ್ದೇಶಪೂರ್ವಕವಾಗಿಯೋ ಅನುದ್ದೇಶಪೂರ್ವಕವಾಗಿಯೋ ಕೆಲವು ಗ್ರಂಥಗಳ ಹಲವಾರು ಪ್ರತಿಗಳನ್ನು ಸೇರಿಸಿರುವುದನ್ನೂ ಇಲ್ಲಿ ಗಮನಿಸಬೇಕು. ಗ್ರಂಥಾಲಯದ ಗ್ರಂಥಸಂಗ್ರಹದ ಮೌಲ್ಯನಿಷ್ಕರ್ಷೆ ಮಾಡುವಾಗ ಈ ಮುಖ್ಯ ಅಂಶಗಳೂ ಉಪಯುಕ್ತವಾದರೂ ಇವನ್ನು ಇಲ್ಲಿ ಪರಿಗಣಿಸಿಲ್ಲ.

ಪ್ರತಿ ಓದುಗನಿಗೂ ಲಭ್ಯವಿರುವ ಪುಸ್ತಕಗಳ ಸಂಖ್ಯೆಯ ಅಂದಾಜನ್ನು ಕುರಿತ ಪಟ್ಟಿಯನ್ನು ಮುಂದೆ ಕೊಟ್ಟಿದೆ.

ಪಟ್ಟಿ 4

ಪ್ರತಿ ಓದುಗನಿಗೂ ವಿವಿಧ ವಿಭಾಗಗಳಲ್ಲಿ ಲಭ್ಯವಿರುವ ಪುಸ್ತಕಗಳ ಸಂಖ್ಯೆ

ಕಾಲೇಜಿನ ಪ್ರರೂಪ	ಓದುಗರು		ಸಂಗ್ರಹವಾದ	ಪ್ರತಿ ಓದುಗನಿಗೂ ಲಭ್ಯ
	ವಿದ್ಯಾರ್ಥಿಗಳು	ಸಿಬ್ಬಂದಿ	ಒಟ್ಟು ಪುಸ್ತಕಗಳು	ವಿರುವ ಪುಸ್ತಕಗಳ ಸಂಖ್ಯೆ
ಆರ್ಟ್ಸ್, ವಿಜ್ಞಾನ ಮತ್ತು ವಾಣಿಜ್ಯ	44,520	2,041	4,81,295	10
ಖಾಸಗಿ	29,239	1,296	2,69,884	9
ಸರ್ಕಾರಿ	15,281	745	2,11,411	10
ವೃತ್ತಿ	8,942	936	1,59,586	16
ಶಿಕ್ಷಣ	970	92	48,776	45
ಎಂಜಿನಿಯರಿಂಗ್	3,727	341	65,648	13
ನ್ಯಾಯಶಾಸ್ತ್ರ	675	51	13,278	18
ವೈದ್ಯ	3,510	428	29,315	8
ಇತರ	60	24	2,569	30
ಒಟ್ಟು	53,462	2,977	6,40,881	11

ಉಪಾಧ್ಯಾಯ ಶಿಕ್ಷಣ ಕಾಲೇಜುಗಳಲ್ಲಿ ಪ್ರತಿ ಓದುಗನಿಗೂ ಸುಮಾರು 45 ಗ್ರಂಥಗಳು ಲಭ್ಯವಿವೆಯೆಂಬುದು ಮೇಲಿನ ಪಟ್ಟಿಯಿಂದ ವೇದ್ಯವಾಗುತ್ತದೆ. ಆದರೂ ಈ ಸಂಖ್ಯೆಯಿಂದ ವಸ್ತುಸ್ಥಿತಿಯ ಅರಿವುಂಟಾಗುವುದಿಲ್ಲ. ಏಕೆಂದರೆ ಪ್ರೌಢಶಾಲೆಗಳಿಗೆ ಗೊತ್ತುಪಡಿಸಲಾದ ಅನೇಕ ಪಠ್ಯಪುಸ್ತಕಗಳನ್ನೂ ಗ್ರಂಥಾಲಯದ ಸಂಗ್ರಹದಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ. ಇವು ಉಪಾಧ್ಯಾಯ-ವಿದ್ಯಾರ್ಥಿಗಳಿಗೆ ಅವರ ಅಭ್ಯಾಸಬೋಧನೆಯಲ್ಲಿ ಬೇಕಾಗುವ ಪುಸ್ತಕಗಳು. ಇವನ್ನು ಕಳೆದ ಪಕ್ಷದಲ್ಲಿ ಪ್ರತಿ ಓದುಗನಿಗೂ ನಾನಾ ವಿಭಾಗಗಳಲ್ಲಿ ಲಭ್ಯವಿರುವ ಪುಸ್ತಕಗಳ ಸಂಖ್ಯೆ 45ಕ್ಕಿಂತ ಬಹಳ ಕಡಿಮೆಯಾಗಿದೆ.

ಗ್ರಂಥಾಲಯ ಸಾಧನಗಳ ಸಮಸ್ಯೆಗೆ ನೇರವಾಗಿ ಸಂಬಂಧಿಸಿದ ಸಮಸ್ಯೆಯೆಂದರೆ ಗ್ರಂಥಾಲಯಗಳಿಗೆ ಸಾಕಷ್ಟು ಧನಪೋಷಣೆಯ ಅಭಾವ. ಗ್ರಂಥಾಲಯವನ್ನು ಸಜ್ಜುಗೊಳಿಸಲು ಅಗತ್ಯವಾದ ಹಣ ಬರುವುದು ಆಡಳಿತದಿಂದ ಮತ್ತು ರಾಜ್ಯಸರ್ಕಾರದಿಂದ—ಅನುದಾನ ರೂಪದಲ್ಲಿ. ವಿಶ್ವವಿದ್ಯಾಲಯ ಅನುದಾನ ಆಯೋಗದ ಮೂಲಕ ಕೇಂದ್ರ ಸರ್ಕಾರ ಆಗಾಗ್ಗೆ ಮುಖ್ಯ ವಿಶ್ವವಿದ್ಯಾಲಯ ಗ್ರಂಥಾಲಯಗಳಿಗೆ ಮತ್ತು ಅಲ್ಪಪ್ರಮಾಣಗಳಲ್ಲಿ ಕಾಲೇಜು ಗ್ರಂಥಾಲಯಗಳಿಗೆ ಹಣ ಒದಗಿಸಿದೆ. 1953ರಲ್ಲಿ ವಿಶ್ವವಿದ್ಯಾಲಯ ಅನುದಾನ ಆಯೋಗ ಸ್ಥಾಪಿತವಾದಂದಿನಿಂದ 1968ರ ವರೆಗೆ ಅದು ವಿಶ್ವವಿದ್ಯಾಲಯ ಗ್ರಂಥಾಲಯ ಕಟ್ಟಡಗಳನ್ನು ನಿರ್ಮಿಸಲು 2,86,39,789 ರೂ.ಗಳನ್ನೂ, ಪುಸ್ತಕಗಳನ್ನು ಮತ್ತು ಪತ್ರಿಕೆಗಳನ್ನು ಕೊಳ್ಳಲು 4,11,53,583 ರೂ.ಗಳನ್ನೂ ನೀಡಿದೆ. ಇದೇ ಅವಧಿಯಲ್ಲಿ ಕಾಲೇಜ್ ಗ್ರಂಥಾಲಯ ಕಟ್ಟಡಗಳ ನಿರ್ಮಾಣಕ್ಕಾಗಿ ರೂ. 83,82,000ಗಳನ್ನೂ ಪುಸ್ತಕ ಮುಂತಾದವನ್ನು ಕೊಳ್ಳಲು 24,55.000 ರೂ.ಗಳನ್ನೂ ಕೊಟ್ಟಿದೆ[3]. ರಾಜ್ಯಸರ್ಕಾರದ ಭಾಗ ಕೂಡ ಕಾಲೇಜ್ ಗ್ರಂಥಾಲಯಗಳ ಆವಶ್ಯಕತೆಗೆ ತಕ್ಕಷ್ಟಿಲ್ಲ. ದಿನೇದಿನೇ ಅಧಿಕವಾಗುತ್ತಿರುವ ವಿದ್ಯಾರ್ಥಿಗಳ ಮತ್ತು ಅಧ್ಯಾಪಕರ ಸಂಖ್ಯೆಗಳ ದೃಷ್ಟಿಯಿಂದ ಇದು ಏನೇನೂ ಸಾಲದು.

ಈ ನಿಟ್ಟಿನಲ್ಲಿ ಇದುವರೆಗೂ ವ್ಯವಸ್ಥಿತ ಅಧ್ಯಯನವೇನೂ ನಡೆದಿಲ್ಲ; ಪುಸ್ತಕಗಳ ಮತ್ತು ನಿಯತಕಾಲಿಕೆಗಳ ಹೆಚ್ಚುತ್ತಿರುವ ಬೆಲೆಗಳ ದೃಷ್ಟಿಯಲ್ಲಿ ಪ್ರತಿಯೊಂದು ಕಾಲೇಜಿಗೂ ಅಗತ್ಯವಾದಷ್ಟು ಹಣ ಒದಗಿಸುವ ಬಗ್ಗೆ ಸರ್ಕಾರದ ಮೇಲೆ ಸಾಕಷ್ಟು ಒತ್ತಾಯ ಹಾಕಿಲ್ಲ. ಪರಿಸ್ಥಿತಿ ಹೀಗಿರುವಾಗ, ವಿದ್ಯಾಸಂಸ್ಥೆಗಳಿಗೆ ಸೇರಿದ ಗ್ರಂಥಾಲಯಗಳ ನಿರ್ವಹಣೆಗಾಗಿ ಆ ಸಂಸ್ಥೆಗಳ ಒಟ್ಟು ಬಜೆಟಿನ ಯಾವ ಪ್ರಮಾಣವನ್ನು ಎತ್ತಿಡಬೇಕೆಂಬ ಬಗ್ಗೆ ಕೆಲವು ಶಿಷ್ಟತೆಗಳನ್ನು ಸ್ಥಾಪಿಸಬೇಕೆಂದು ನಾವು ಒತ್ತಾಯ ಮಾಡಬೇಕು. ಗ್ರಂಥಾಲಯಗಳು ಅಭಿವೃದ್ಧಿಯ ಘಟ್ಟದಲ್ಲಿರುವಾಗ, ಪ್ರತಿಯೊಂದು ಸಂಸ್ಥೆಯ ಒಟ್ಟು ಬಜೆಟಿನ 5%–10%ನ್ನು—ಅವುಗಳ ಬೆಳವಣಿಗೆಯ ಸ್ಥಿತಿಗೆ ಅನುಗುಣವಾಗಿ—ಅವುಗಳ ಗ್ರಂಥಾಲಯಗಳಿಗಾಗಿ ಮೀಸಲಿಡಬೇಕಾದ್ದು ಆವಶ್ಯಕ. ಅಥವಾ, ಪ್ರತಿ ಕಾಲೇಜು ಗ್ರಂಥಾಲಯವೂ ಪ್ರತಿವರ್ಷವೂ ಪ್ರವೇಶಗಳಿಸುವ ಪ್ರತಿಯೊಬ್ಬ ವಿದ್ಯಾರ್ಥಿಗೂ ರೂ. 25ರಂತೆ ಮತ್ತು ಪ್ರತಿ ಅಧ್ಯಾಪಕನಿಗೂ ರೂ. 300ರಂತೆ ವೆಚ್ಚಮಾಡಬೇಕು.

ಮೇಲೆ ಹೇಳಿದ ಎರಡನೆಯ ಸೂತ್ರವನ್ನು ಒಪ್ಪಿದ್ದೇ ಆದರೆ, ಒಂದು ಕಾಲೇಜಿನ ವಿದ್ಯಾರ್ಥಿಗಳ ಸಂಖ್ಯೆ 1.000 ಇದ್ದರೆ, ಅದರ ಗ್ರಂಥಾಲಯಕ್ಕಾಗಿ ವರ್ಷಕ್ಕೆ ರೂ. 25.000 ವೆಚ್ಚಮಾಡುವುದು ಆದರ್ಶ. ಇದೇ ಆಧಾರದ ಮೇಲೆ ನಾವು ವಿಶ್ವವಿದ್ಯಾಲಯದ ಪ್ರದೇಶದಲ್ಲಿರುವ ಎಲ್ಲ ವಿದ್ಯಾರ್ಥಿಗಳನ್ನೂ ಅಧ್ಯಾಪಕರನ್ನೂ ಪರಿಗಣನೆಗೆ ತೆಗೆದುಕೊಂಡರೆ, ಎಲ್ಲ ಕಾಲೇಜುಗಳ ಒಟ್ಟು ವೆಚ್ಚ ಸು. ರೂ. 3.00.00,000 ಆಗುತ್ತದೆ. ಪುಸ್ತಕ ಮತ್ತು ನಿಯತಕಾಲಿಕೆಗಳಿಗಾಗಿ ಈ ಮಟ್ಟದ ವೆಚ್ಚಮಾಡಬೇಕೆಂಬುದನ್ನು ಒಪ್ಪಿಕೊಂಡರೆ ಒಟ್ಟಿನಲ್ಲಿ ಪುಸ್ತಕ ಪ್ರಕಾಶನೋದ್ಯಮದ ಮೇಲೆ ಇದರ ಸತ್ಪರಿಣಾಮ ಆಗುತ್ತದೆ. ಪುಸ್ತಕಗಳಿಗಾಗಿ ಈ ಗ್ರಂಥಾಲಯಗಳಿಂದ ಸಿದ್ಧ ಬೇಡಿಕೆ ಇರುವುದರಿಂದ ಪ್ರಕಾಶನಕ್ಕೆ ಪ್ರೋತ್ಸಾಹ ಲಭ್ಯವಾಗುತ್ತದೆ. ಪುಸ್ತಕಪ್ರಕಟನೋದ್ಯಮ ಪ್ರವರ್ಧಮಾನಕ್ಕೆ ಬಂದರೆ ಅದು ಸಮಾಜಕ್ಕೆ ಒಂದು ದೊಡ್ಡ ವರಪ್ರಸಾದ. ಜ್ಞಾನವಾಹಿನಿಯ ಸಾಧನವಾಗಿ ಪುಸ್ತಕದ ವಿಭವಶಕ್ತಿ ಎಷ್ಟೆಂಬುದನ್ನು ಅರಿತಿರುವ ಎಲ್ಲರೂ ಈ ಪ್ರವೃತ್ತಿಯನ್ನು ಪ್ರೋತ್ಸಾಹಿಸಬೇಕು. ಗ್ರಂಥಾಲಯಗಳಿಗಾಗಿ ಬಜೆಟುಗಳಲ್ಲಿ ತೆಗೆದಿಟ್ಟಿರುವ ಅಲ್ಪ ಮೊಬಲಗುಗಳನ್ನು ನೋಡಿದಾಗ ಅವುಗಳಿಂದ ಒಳ್ಳೆಯ ಗ್ರಂಥಾಲಯಸೇವೆ ನೀಡಲು ಅತ್ಯಗತ್ಯವಾದ ಪುಸ್ತಕಗಳು ಮತ್ತಿತರ ಸಾಮಗ್ರಿಗಳನ್ನು ಕೊಳ್ಳಲು ಅವು ಏತೇತಕ್ಕೂ ಸಾಲವು ಎಂಬುದು ವ್ಯಕ್ತವಾಗುತ್ತದೆ. ಸಾಕಷ್ಟು ಹಣ ಪಡೆಯಲು ಎಲ್ಲ ಮೂಲಗಳನ್ನೂ ನಾವು ಬಳಸಿಕೊಂಡಿಲ್ಲದಿರುವುದು ದುರದೃಷ್ಟಕರ. ಉದಾಹರಣೆಗೆ, ಕಟ್ಟಡಕ್ಕೆ ಮತ್ತು ಪುಸ್ತಕ ಕೊಳ್ಳಲು ಹೆಚ್ಚು ಹಣವನ್ನು ಉದಾರಿಗಳಿಂದ

3 UGC : *Development of Library Facilities in Universities and Colleges*, 1968

ದಾನವಾಗಿ ಪಡೆಯಬಹುದು. ರಾಜ್ಯ ನೀಡುವ ಅಲ್ಪ ಅನುದಾನಗಳನ್ನು ಬಿಟ್ಟರೆ ಕೇಂದ್ರ ಸರ್ಕಾರ ಶಾಲೆಕಾಲೇಜುಗಳಿಗೆ ದೊಡ್ಡ ಪರಿಮಾಣದಲ್ಲಿ ಅನುದಾನ ನೀಡಿಲ್ಲ. ಗ್ರಂಥಾಲಯಶುಲ್ಕವನ್ನು ಹೆಚ್ಚಿಸಲು ಅಥವಾ ವಿದ್ಯಾರ್ಥಿಗಳಿಂದ ಹೆಚ್ಚು ಹಣ ಪಡೆಯಲು ಯತ್ನ ನಡೆಸಿಲ್ಲ. ಕಾಲೇಜ್ ಗ್ರಂಥಾಲಯಗಳಿಗೆ ಹೆಚ್ಚು ಹಣ ದೊರಕಿಸುವ ಬಗ್ಗೆ ಸರ್ಕಾರವೂ ವಿಶ್ವವಿದ್ಯಾಲಯವೂ ತೀವ್ರವಾಗಿ ಆಲೋಚಿಸಬೇಕು. ಏನೇ ಆಗಲಿ. ಒಳ್ಳೆಯ ಗ್ರಂಥಾಲಯದ ಬೆಲೆಯೇನೆಂಬುದನ್ನು ಬಲ್ಲವರು ಇದಕ್ಕಾಗಿ ಹೆಚ್ಚು ಹಣ ಕೊಡಲು ಹಿಂದೆಗೆಯಲಾರರು.

ನಮ್ಮ ಗ್ರಂಥಾಲಯಗಳ ಹಣಕಾಸು ಮಿತವಾಗಿದ್ದರೂ ಒಳ್ಳೆಯ ಗ್ರಂಥಾಲಯ ಸೇವೆಗೆ ಅಗತ್ಯವಾದ ಸರಿಯಾದ ಬಗೆಯ ಸಾಧನಗಳನ್ನು ರೂಢಿಸಿ. ಆಗಲೇ ಪ್ರವರ್ತಿಸಲಾದ ಉದ್ದೇಶಗಳನ್ನು ಸಾಧಿಸಲು ಸುವ್ಯವಸ್ಥಿತ ಪ್ರಯತ್ನಗಳು ನಡೆದಿಲ್ಲ. ಶಿಕ್ಷಣ ಸಂಸ್ಥೆಗಳಲ್ಲಿರುವ ಅನೇಕ ಅಧ್ಯಾಪಕರೂ ಇತರರೂ ವ್ಯಾಸಂಗಕ್ರಮದ ಅವಶ್ಯಕತೆಯನ್ನು ಪೂರೈಸಲು ಗ್ರಂಥಾಲಯ ಸಾಮಗ್ರಿಗಳನ್ನು ಒದಗಿಸುವ ಬಗ್ಗೆ ಗ್ರಂಥಪಾಲರೊಂದಿಗೆ ಸಹಕರಿಸುವುದಿಲ್ಲ. ವ್ಯಾಸಂಗಕ್ರಮದಲ್ಲಿ ತರಲಾದ ಬದಲಾವಣೆಗಳನ್ನೂ ಜಾರಿಗೆ ತರಲಾದ ಹೊಸ ಯೋಜನೆಗಳನ್ನೂ ಗ್ರಂಥಪಾಲರು ಅರಿತಿರುವುದಿಲ್ಲ. ತತ್ಫಲವಾಗಿ ಅಧ್ಯಾಪಕ ಮತ್ತು ವಿದ್ಯಾರ್ಥಿಗಳ ವ್ಯಕ್ತಿಸ್ಥ ಬೇಡಿಕೆಗಳನ್ನು ಪೂರೈಸಲು ಗ್ರಂಥಪಾಲರು ಸಿದ್ಧರಿರುವುದಿಲ್ಲ. ಇದರಿಂದಾಗಿ ಪುಸ್ತಕಗಳನ್ನು ಒದಗಿಸುವ ವಿಚಾರದಲ್ಲಿ ಗ್ರಂಥಪಾಲರು ಅಪಕೀರ್ತಿಭಾಜನರಾಗಬೇಕಾಗುತ್ತದೆ. ಗ್ರಂಥಪಾಲರ ಬಗ್ಗೆ ನಂಬಿಕೆ ಇಲ್ಲದಿರುವುದು ದುರದೃಷ್ಟಕರ. ಎಲ್ಲ ಘಟ್ಟಗಳಲ್ಲೂ ಅಧ್ಯಾಪಕರು ಗ್ರಂಥಪಾಲರಲ್ಲಿ ಅಪನಂಬಿಕೆ ಇಟ್ಟಿರುತ್ತಾರೆ. ಗ್ರಂಥವಿವರಣ ಸಾಮರ್ಥ್ಯದಲ್ಲಿ ಗ್ರಂಥಪಾಲ ತಕ್ಕಮಟ್ಟಿನ ಪರಿಣತಿ ಗಳಿಸಿಲ್ಲವಾದ್ದರಿಂದ ಅವನನ್ನು ಅವಲಂಬಿಸುವುದು ಅಪಾಯಕರವೆಂಬುದು ಅಧ್ಯಾಪಕರ ಇದುವರೆಗಿನ ವಿಷಾದಕರ ಅನುಭವ. ಅನೇಕ ಗ್ರಂಥಪಾಲರು ಗ್ರಂಥಾಲಯನಿರ್ವಹಣೆಯ ವಿಚಾರದಲ್ಲಿ ಪರಿಣತರಾಗಿರುತ್ತಾರೆ. ಆದರೆ ಪುಸ್ತಕಗಳ ವಿಷಯ ಮತ್ತು ಅವುಗಳ ಒಳಹಿಡಿಯ ಬಗ್ಗೆ ಸಂಪೂರ್ಣ ಅಜ್ಞಾನಿಗಳಾಗಿರುತ್ತಾರೆ. ಈ ಗ್ರಂಥಪಾಲರಿಗೆ ತಮ್ಮ ಗ್ರಂಥವಿವರಣ ವ್ಯವಸ್ಥೆಯ ಬಗ್ಗೆ ತಮಗೇ ನಂಬಿಕೆ ಇರುವುದಿಲ್ಲ. ಅಧ್ಯಾಪಕರನ್ನೂ ವಿದ್ಯಾರ್ಥಿಗಳನ್ನೂ ಎದುರಿಸುವ. ಅವರಿಗೆ ಅನುಕೂಲವಾಗುವಂತೆ ಮಾರ್ಗದರ್ಶನ ನೀಡುವ ಸಾಮರ್ಥ್ಯ ಇವರಿಗೆ ಇರುವುದಿಲ್ಲ. ಈ ಬಗ್ಗೆ ಸ್ಯಾಮ್ಯುಯೆಲ್ ಮಥಾಯ್ಸ್ ಹೀಗೆ ಹೇಳುತ್ತಾರೆ: 'ಅದ್ದರಿಂದ ಒಳ್ಳೆಯ ಗ್ರಂಥಪಾಲ ತನ್ನ ವೃತ್ತಿಯ ಜಾಣ್ಮೆಯನ್ನು ಪಡೆದಿರಬೇಕಷ್ಟೇ ಅಲ್ಲ. ಅವನು ಸ್ವತಃ ಮಹಾಜ್ಞಾನಿಯಾಗಿರಬೇಕು.'

ಸೂಕ್ತವಾದ ಪುಸ್ತಕಗಳನ್ನು ಆರಿಸುವುದರಲ್ಲಿ ಗ್ರಂಥಪಾಲರು ಮತ್ತು ಅಧ್ಯಾಪಕರ ಕರ್ತವ್ಯಲೋಪದಿಂದಾಗಿ ಪ್ರಕೃತ ಪರಿಸ್ಥಿತಿ ಇನ್ನೂ ಹದಗೆಡುತ್ತದೆ. ಪುಸ್ತಕಗಳ ಆಯ್ಕೆಯಲ್ಲಿ ಅಧ್ಯಾಪಕರು ಮತ್ತು ಗ್ರಂಥಪಾಲರ ನಡುವೆ ಹೆಚ್ಚಿನ ಸಮನ್ವಯ ಮತ್ತು ಸಹಕಾರ ಅಗತ್ಯ. 'ಪುಸ್ತಕಗಳ ಸಂಗ್ರಹವಷ್ಟೇ. ಅವು ಒಳ್ಳೆಯ ಪುಸ್ತಕಗಳೇ ಆಗಿರಲಿ. ಗ್ರಂಥಾಲಯವೆನಿಸಿಕೊಳ್ಳುವುದಿಲ್ಲ. ಪುಸ್ತಕಗಳ ನೆರವಿನಿಂದ ಬೋಧಿಸಬಲ್ಲ ಉತ್ಸಾಹಶಾಲಿ ಅಧ್ಯಾಪಕರಿದ್ದರೆ. ಗ್ರಂಥಾಲಯವನ್ನು ಒಂದು ಬೌದ್ಧಿಕ ಕಾರ್ಯಾಗಾರವಾಗಿ ಪರಿವರ್ತಿಸುವಲ್ಲಿ ಅಧ್ಯಾಪಕರೊಂದಿಗೆ ಸಹಕರಿಸಬಲ್ಲ ಗ್ರಂಥಪಾಲರಿದ್ದರೆ. ಸೂಕ್ಷ್ಮವಾಗಿ ಆರಿಸಲಾದ ಕೆಲವೇ ಪುಸ್ತಕಗಳ ಸಣ್ಣ ಸಂಗ್ರಹದಿಂದ ಕೂಡ ವಿದ್ಯಾರ್ಥಿಗಳ ಜೀವನದಲ್ಲಿ ಪವಾಡವನ್ನು ಸಾಧಿಸಬಹುದು.' ಪುಸ್ತಕಗಳ ಆಯ್ಕೆಗೆ ಸೂಕ್ತವಾದ ತತ್ತ್ವವನ್ನು ಅನ್ವೇಷಣೆ ಮಾಡುವಾಗ ಹೇಳಬಹುದಾದ ಮಾತಿದು: ಹೆಚ್ಚು ಪುಸ್ತಕಗಳನ್ನು ಸಂಗ್ರಹಿಸಿದಷ್ಟೂ ಮಹತ್ತ್ವದ ಮತ್ತು ಮುಖ್ಯವಾದ ಕೃತಿಗಳನ್ನು ಬಿಡುವ ಸಂಭವ ಕಡಿಮೆಯಾಗುತ್ತದೆ. ಆದರೂ ಇದಕ್ಕೆ ಒಂದು ಗರಿಷ್ಠ ಮಿತಿ ಇರಬೇಕು. ಇಲ್ಲದಿದ್ದರೆ ವಿಶ್ವದ ಓದಬಹುದಾದ ಒಳ್ಳೆಯ ಪುಸ್ತಕಗಳ ಆಯ್ಕೆ ಎಂಬ ಗುಣವನ್ನು ಆ ಸಂಗ್ರಹ ಕಳೆದುಕೊಳ್ಳುತ್ತದೆ. ಪುಸ್ತಕಗಳ ಆಯ್ಕೆಯ ಈ ಮಹಾಕಲೆಗಾಗಿ ಗ್ರಂಥಪಾಲನೂ ಅಧ್ಯಾಪಕರೂ ಒಟ್ಟಿಗೆ ತಕ್ಕಮಟ್ಟಿನ ಶ್ರಮವನ್ನೂ ಕಾಲವನ್ನೂ ವಿನಿಯೋಗಿಸುವುದು ಅವಶ್ಯ. ಅವರಿಗೆ ಗ್ರಂಥಸೂಚಿಯ ಜ್ಞಾನದಿಂದ ಲಭ್ಯವಾದ ಅರ್ಹತೆಯೂ ಇರುವುದು ಅವಶ್ಯ. ಶ್ರಮಪೂರ್ವಕ ಅಧ್ಯಯನ ಮತ್ತು ವ್ಯಾಪಕವಾದ ಅನುಭವದಿಂದ ಇದನ್ನು ಪಡೆದುಕೊಳ್ಳಬಹುದು. ಪುಸ್ತಕಗಳ ಆಯ್ಕೆಗೆ ಸಂಬಂಧಿಸಿದವರೆಲ್ಲರೂ ಪ್ರತಿದಿನವೂ ಮಾರುಕಟ್ಟೆಗೆ ಬರುವ ಅಗಾಧಸಾಹಿತ್ಯದ ಪ್ರತ್ಯಕ್ಷ ದರ್ಶನ ಪಡೆದಿರಬೇಕು. ಇದೀ ಕಾಲೇಜು

ಶಿಕ್ಷಣಪ್ರಕ್ರಿಯೆ ಕೇವಲ ಉಪನ್ಯಾಸಾಧಾರಿತವಾಗಿಯಾಗಲಿ, ಪಠ್ಯಪುಸ್ತಕಾಧಾರಿತವಾಗಿಯಾಗಲಿ ಇಲ್ಲದೆ ಗ್ರಂಥಾಲಯ ಆಧಾರಿತವಾಗಿರಬೇಕೆಂಬ ಗುರಿಯನ್ನು ನಿಲುಕುವತ್ತ ಅಧ್ಯಾಪಕರೂ ಗ್ರಂಥಪಾಲರೂ ಸತತವಾಗಿ ಪ್ರಯತ್ನಿಸುತ್ತಿರಬೇಕು.

ಗ್ರಂಥಪಾಲರಲ್ಲಿ ನಾನು ಕಂಡಿರುವ ಇನ್ನೊಂದು ಗಮನಾರ್ಹ ಅಂಶವೆಂದರೆ, ಗ್ರಂಥಾಲಯ ಸೌಲಭ್ಯಗಳನ್ನು ಒದಗಿಸುವಲ್ಲಿ ಅವರವರಲ್ಲೇ ಇರುವ ಅಸಹಕಾರ. ಒಂದು ಪ್ರದೇಶ ಅಥವಾ ರಾಜ್ಯ ದಲ್ಲಿರುವ ವಿವಿಧ ಬಗೆಯ ಗ್ರಂಥಾಲಯಗಳಲ್ಲಿ ಕೆಲಸಮಾಡುತ್ತಿರುವ ಗ್ರಂಥಪಾಲರು ಅಂತರಗ್ರಂಥಾಲಯ ಕೊಡು–ಕೊಳ್ಳುವ ವ್ಯವಸ್ಥೆಯನ್ನಾಗಲಿ, ಇತರ ವಿನಿಮಯ ಕಾರ್ಯಕ್ರಮಗಳನ್ನಾಗಲಿ ಸುವ್ಯವಸ್ಥಿತ ವಾಗಿ ಯೋಜಿಸಲು ಒಟ್ಟಿಗೆ ಶ್ರಮಿಸುವುದು ವಿರಳ. ಅಂಚೆ ತೆರಪಿನ ವ್ಯಾಸಂಗಕ್ರಮಗಳಲ್ಲಿರುವ ವಿದ್ಯಾರ್ಥಿ ಗಳಿಗೆ ಅಗತ್ಯವಾದ ಸಾಮಗ್ರಿಗಳನ್ನು ಸುಲಭವಾಗಿ ಒದಗಿಸಲು ವಿಶ್ವವಿದ್ಯಾಲಯ ಮಟ್ಟದಲ್ಲಾಗಲಿ, ರಾಜ್ಯಮಟ್ಟದಲ್ಲಾಗಲಿ ಯಾವ ಯೋಜನೆಯೂ ಇಲ್ಲ. ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ ಪರಿಹರಿಸ ಬೇಕಾದ ಇನ್ನೊಂದು ಮುಖ್ಯ ಸಮಸ್ಯೆಯಿದು. ಒಂದು ಪ್ರದೇಶದಲ್ಲಿರುವ ಸಾರ್ವಜನಿಕರೂ ವಿಶೇಷ ಮತ್ತು ಶಿಕ್ಷಣ ಗ್ರಂಥಾಲಯಗಳೂ ತಮ್ಮ ಸಾಧನಗಳನ್ನು ಒಟ್ಟುಮಾಡಿ, ಇತರ ಬಗೆಯ ಸಂಗ್ರಹ ಗಳನ್ನು ಪಡೆದುಕೊಂಡು ಆ ಪ್ರದೇಶದ ಜನರಿಗೆ ಸೌಲಭ್ಯ ಒದಗಿಸುವ ಒಳ್ಳೆಯ ಗ್ರಂಥಾಲಯ ವ್ಯವಸ್ಥೆ ಯನ್ನು ಸ್ಥಾಪಿಸುವ ಅಗತ್ಯವಿದೆ.

ಗ್ರಂಥಾಲಯ ಸ್ಥಿತಿಯನ್ನು ಚಿತ್ರಿಸಿಕೊಳ್ಳಬಲ್ಲ ಪ್ರಬುದ್ಧತೆ ಮತ್ತು ಕಲ್ಪನಾಶಕ್ತಿಯನ್ನು ನಮ್ಮ ಗ್ರಂಥಾಲಯವೃತ್ತಿನಿರತರು ಪಡೆದಿರುವ ಸೂಚನೆಗಳು ಕಾಣಬರುತ್ತಿರುವುದು ಸುದೈವ. ಭಾವೀ ಗ್ರಂಥಪಾಲರ ಅಗತ್ಯಗಳಿಗೆ ತಕ್ಕಂತೆ ಪರಿಷ್ಕೃತ ಪಾಠ್ಯಕ್ರಮವನ್ನು ಸ್ವೀಕರಿಸಿ, ತರಬೇತು ಕಾರ್ಯಕ್ರಮ ವನ್ನು ಸುಧಾರಿಸಲು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಯತ್ನಗಳು ನಡೆದಿವೆ. ಪರಿಷ್ಕೃತ ಪಾಠ್ಯಕ್ರಮ ದಲ್ಲಿ ಯಾಂತ್ರಿಕವಾದ ನಿತ್ಯಚರ್ಯೆಯ ಕೆಲಸಗಳಿಗೂ ವರ್ಗೀಕರಣ ಗ್ರಂಥಗಳ ಪಟ್ಟಿ ಮುಂತಾದ ವಿಷಯಗಳಿಗೂ ಕಡಿಮೆ ಪ್ರಾಮುಖ್ಯ ನೀಡಲಾಗಿದೆ. ಓದುಗರಿಗೆ ಸಲಹೆ ನೀಡುವುದು, ಜ್ಞಾನಸಾಧನ ಗಳಾಗಿ ಪುಸ್ತಕಗಳ ಮತ್ತು ಇತರ ಸಾಧನಗಳ ಪ್ರಾಮುಖ್ಯ ಮುಂತಾದವುಗಳ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು ನೀಡುವುದಕ್ಕೆ ಹೆಚ್ಚಿನ ಗಮನ ನೀಡಲಾಗಿದೆ. ಇತರ ವೃತ್ತಿಗಳಂತೆ ವಿವಿಧ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಗ್ರಂಥಪಾಲರಿಗೂ ಸೇವಾಂತರ್ಗತ ತರಬೇತು ನೀಡುವುದು ಅತ್ಯಂತ ಆವಶ್ಯಕ. ಇಂಥ ಪುನರ್ಬೋಧನ ಕ್ರಮಗಳನ್ನು ವಿಶ್ವವಿದ್ಯಾಲಯಗಳು ತಮ್ಮ ಗ್ರಂಥಾಲಯ ವಿಜ್ಞಾನ ವಿಭಾಗದ ಮೂಲಕ ಏರ್ಪಡಿಸಬೇಕು. ಈ ಮೂಲಕ ಕಾಲೇಜು ಗ್ರಂಥಾಲಯಗಳಿಗೂ ವಿಶ್ವವಿದ್ಯಾಲಯ ಗ್ರಂಥಾ ಲಯಗಳಿಗೂ ಸಂಬಂಧ ಏರ್ಪಡಿಸಬೇಕು. ಗ್ರಂಥಪಾಲರು ತಮ್ಮ ವಿದ್ಯಾರ್ಹತೆಗಳನ್ನು ಹೆಚ್ಚಿಸಿಕೊಳ್ಳಲು ಆಗಿಂದಾಗ್ಗೆ ಅವರಿಗೆ ಸಾಕಷ್ಟು ಸೌಲಭ್ಯಗಳನ್ನು ಕಲ್ಪಿಸಬೇಕು. ರಾಷ್ಟ್ರದ ವಿವಿಧ ರಾಜ್ಯಗಳಲ್ಲಿಯ ಗ್ರಂಥಾ ಲಯಗಳನ್ನು ಸಂದರ್ಶಿಸಿ ಅಲ್ಲಿ ಗ್ರಂಥಾಲಯ ಸೇವೆಯ ಬೆಳವಣಿಗೆಯಲ್ಲಿಯ ಚೈತನ್ಯಪೂರ್ಣ ನಾಯಕತ್ವ ವನ್ನು ಪರಿಚಯಮಾಡಿಕೊಳ್ಳಬೇಕು.

ಸರ್ಕಾರಿ ಕಾಲೇಜುಗಳಲ್ಲಿಯ ಗ್ರಂಥಾಲಯ ಸಿಬ್ಬಂದಿಯ ರಚನೆಯನ್ನು ಕುರಿತು ಮೈಸೂರು ಸರ್ಕಾರ ಈಚೆಗೆ ಸರಿಯಾದ ಕ್ರಮ ಕೈಕೊಂಡಿದೆ. ಅದು ಈ ರೀತಿ ಇದೆ:

1.000ಕ್ಕಿಂತ ಹೆಚ್ಚಿನ ವಿದ್ಯಾರ್ಥಿಸಂಖ್ಯೆ ಇರುವ ಕಾಲೇಜುಗಳಿಗೆ:

(1) ಒಬ್ಬ ಗ್ರಂಥಪಾಲ
(2) ಒಬ್ಬ ಸಹಾಯಕ ಗ್ರಂಥಪಾಲ
(3) ಒಬ್ಬ ಎರಡನೆಯ ದರ್ಜೆಯ ಗುಮಾಸ್ತೆ
(4) ಒಬ್ಬ ಎರಡನೆಯ ದರ್ಜೆ ಬೆರಳಚ್ಚುಗಾರ
(5) ಮೂವರು ಸೇವಕರು

1,000 ವಿದ್ಯಾರ್ಥಿಗಳಿಗಿಂತ ಕಡಿಮೆಯ ವಿದ್ಯಾರ್ಥಿಸಂಖ್ಯೆ ಇರುವ ಕಾಲೇಜುಗಳಿಗೆ:

(1) ಒಬ್ಬ ಗ್ರಂಥಪಾಲ
(2) ಒಬ್ಬ ಸಹಾಯಕ ಗ್ರಂಥಪಾಲ
(3) ಒಬ್ಬ ಎರಡನೆಯ ದರ್ಜೆ ಗುಮಾಸ್ತೆ ಮತ್ತು ಬೆರಳಚ್ಚುಗಾರ
(4) ಇಬ್ಬರು ಸೇವಕರು

ಇತರ ಎಲ್ಲ ಕಾಲೇಜುಗಳಲ್ಲೂ ಇದೇ ಬಗೆಯ ರಚನೆಯನ್ನು ಅನುಸರಿಸಲಾಗುವುದೆಂಬುದರಲ್ಲಿ ಸಂದೇಹವಿಲ್ಲ. ಈ ಸಿಬ್ಬಂದಿಯ ರಚನೆಯಿದ್ದ ಪಕ್ಷದಲ್ಲಿ ಕಾಲೇಜುಗಳಲ್ಲಿ ಗ್ರಂಥಾಲಯ ಸೇವೆ ನೀಡಲು ಅಗತ್ಯವಾದ ಕನಿಷ್ಠ ಮಂದಿ ಸ್ಥೂಲವಾಗಿ ಲಭ್ಯವಾದಂತಾಗುತ್ತದೆ. ಈ ಸಿಬ್ಬಂದಿ ರಚನೆಯ ಅನುಕೂಲ ದೊರಕುವಂತೆ ಕಾಲೇಜಿಗೆ ಅಗತ್ಯವಾದ ಪುಸ್ತಕಗಳನ್ನೂ ನಿಯತಕಾಲಿಕೆಗಳನ್ನೂ ಕೊಳ್ಳಲು ಸರ್ಕಾರ ಸಾಕಷ್ಟು ಹಣಕಾಸನ್ನು ಒದಗಿಸುವ ವ್ಯವಸ್ಥೆ ಮಾಡಿಲ್ಲ. ಗ್ರಂಥಾಲಯದ ದೀರ್ಘಕಾಲಿಕ ಅಭಿವೃದ್ಧಿಗಾಗಿ ಸಮಗ್ರ ಯೋಜನೆಯೊಂದನ್ನು ಸರ್ಕಾರ ರಚಿಸುವುದೂ ಸಾಕಷ್ಟು ಹಣ ಒದಗಿಸುವುದೂ ಅಗತ್ಯ. ಇಂಥ ಯೋಜನೆಯನ್ನು ರಚಿಸುವಲ್ಲಿ ಪರಿಣತರಾದ ಗ್ರಂಥಪಾಲರ ಮತ್ತು ಅಧ್ಯಾಪಕರ ಸಹಾಯ ಪಡೆಯಬೇಕು. ಇದನ್ನು ರಚಿಸುವಾಗ ಭವಿಷ್ಯದಲ್ಲಿ ವಿದ್ಯಾರ್ಥಿಗಳ ಮತ್ತು ಅಧ್ಯಾಪಕರ ಸಂಖ್ಯೆಯಲ್ಲಿ ಆಗಬಹುದಾದ ಹೆಚ್ಚಳ, ವ್ಯಾಸಂಗಕ್ರಮದ ಅಗತ್ಯಗಳು ಮುಂತಾದವನ್ನೆಲ್ಲ ಗಮನಕ್ಕೆ ತೆಗೆದುಕೊಳ್ಳಬೇಕು. ಸರ್ಕಾರದಿಂದಾಗಲಿ, ವಿಶ್ವವಿದ್ಯಾಲಯದಿಂದಾಗಲಿ ಈ ಸಮಗ್ರ ಯೋಜನೆ ರೂಪಿತವಾದ ಮೇಲೆ—ವಿಶ್ವವಿದ್ಯಾಲಯ ಈ ಕಾರ್ಯ ಕೈಗೊಳ್ಳುವುದೇ ಹೆಚ್ಚು ಸೂಕ್ತವಾದ್ದು—ಅತ್ಯಂತ ಶ್ರದ್ಧಾಪೂರ್ವಕವಾಗಿ ಇದನ್ನು ಜಾರಿಗೆ ಕೊಡಲು ಎಲ್ಲ ಕ್ರಮವನ್ನೂ ಕೈಗೊಳ್ಳಬೇಕು. ಕಾಲೇಜುಗಳಿಗೆ ವಿಶ್ವವಿದ್ಯಾಲಯ ಮನ್ನಣೆ ನೀಡುವ ಮೊದಲು ಕಾಲೇಜಿನಲ್ಲಿ ಸಾಕಷ್ಟು ಗ್ರಂಥಾಲಯ ಸೌಲಭ್ಯಗಳು ಇವೆಯೆಂಬ ಬಗ್ಗೆ ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ಮನವರಿಕೆಯಾಗಬೇಕು. ಗ್ರಂಥಾಲಯ ಸೌಲಭ್ಯ ಸಾಕಷ್ಟು ಇದೆಯೋ ಇಲ್ಲವೋ ಎಂಬುದನ್ನು ನಿರ್ಧರಿಸುವುದಕ್ಕಾಗಿ ಅಗತ್ಯವಾದಾಗಲೆಲ್ಲ ಮನ್ನಣೆ ಸಮಿತಿಯೊಂದಿಗೆ ಗ್ರಂಥಾಲಯ ವಿಜ್ಞಾನದ ಪರಿಣತನೊಬ್ಬನ ಸಹಯೋಗ ಏರ್ಪಡಿಸಬೇಕು. "ಸಿಬ್ಬಂದಿ, ಪುಸ್ತಕಗಳು, ನಿಯತಕಾಲಿಕೆಗಳು, ಸ್ಥಳ ಮುಂತಾದವುಗಳ ದೃಷ್ಟಿಯಿಂದ ಗ್ರಂಥಾಲಯಾವಶ್ಯಕತೆಯೇನೆಂಬುದನ್ನು ಪರಿಗಣನೆಗೆ ತೆಗೆದುಕೊಳ್ಳದೆ ಒಂದು ವಿಶ್ವವಿದ್ಯಾಲಯ ಕಾಲೇಜನ್ನಾಗಲಿ, ವಿಭಾಗವನ್ನಾಗಲಿ ಸ್ಥಾಪಿಸಬಾರದು."[4]

ಕಾಲೇಜು ಗ್ರಂಥಾಲಯಗಳಿಗೆ ಸಾಕಷ್ಟು ಹಣ ಒದಗಿ, ಸಮತೋಲವುಳ್ಳದ್ದೂ ಆಧುನಿಕವೂ ಆದ ಸಂಗ್ರಹಗಳನ್ನೊಳಗೊಂಡು, ಯಥೋಚಿತ ಸಿಬ್ಬಂದಿಯಿಂದೊಡಗೂಡಿದ್ದು, ಇತರ ಗ್ರಂಥಾಲಯಗಳ ಸಾಧನಗಳ ಉಪಯೋಗ ಪಡೆಯುವ ಸೌಕರ್ಯವೂ ಇದ್ದು, ಅನುಕೂಲವಾದ ಮತ್ತು ವಿಶಾಲವಾದ ಕಟ್ಟಡಗಳಲ್ಲಿ ನೆಲೆಗೊಂಡಿದ್ದೇ ಆದರೆ ಅಂಥ ಕಾಲೇಜು ಗ್ರಂಥಾಲಯಗಳು ಶಿಕ್ಷಣ ಕ್ಷೇತ್ರದಲ್ಲಿ ತಮ್ಮ ಪಾತ್ರವನ್ನು ಸಂಪೂರ್ಣವಾಗಿ ನಿರ್ವಹಿಸಬಹುದೆಂದು ನಾವು ನಿರೀಕ್ಷಿಸಬಹುದಾಗಿದೆ. ಹೀಗೆ ದಕ್ಷವಾದ ಗ್ರಂಥಾಲಯ ಸೇವೆಯನ್ನೊದಗಿಸಿದಾಗ ಶೈಕ್ಷಣಿಕ ವಾತಾವರಣದಲ್ಲಿ ಪುಸ್ತಕಗಳ ವ್ಯಾಸಂಗಕ್ಕೆ ಹೆಚ್ಚಿನ ಪ್ರಾಮುಖ್ಯ ನೀಡುವ ಅಭೀಪ್ಸೆ ವಿದ್ಯಾರ್ಥಿಗಳಲ್ಲಿ ಉಂಟಾಗಿ, ಶಿಕ್ಷಣೇತರವಾದ ಚಟುವಟಿಕೆಗಳತ್ತ ಅವರು ಆಕರ್ಷಿತರಾಗುವುದು ತಪ್ಪುತ್ತದೆ. ಆದ್ದರಿಂದ ಕಾಲೇಜು ಗ್ರಂಥಾಲಯಗಳನ್ನು ನಿರ್ವಹಿಸಲು ಅಂತಿಮವಾಗಿ ಹೊರಬೇಕಾದ ಪ್ರಾಧಿಕಾರಿಗಳು ಸ್ನಾತಕಪೂರ್ವ ಹಂತದಲ್ಲಿ ವಿದ್ಯಾರ್ಥಿಸಮೂಹದಲ್ಲಿ ವ್ಯತ್ಯಾಸಗೊಳ್ಳುತ್ತಿರುವ ಆವಶ್ಯಕತೆಗಳನ್ನು ಎಚ್ಚರಿಕೆಯಿಂದ ಗಮನಿಸಬೇಕು. ಈ ಸನ್ನಿವೇಶದಲ್ಲಿ ತಾವು ನೀಡುತ್ತಿರುವ ಸೌಲಭ್ಯದ ಮೌಲ್ಯವೇನೆಂಬುದನ್ನು ಸತತವಾಗಿ ವಿಮರ್ಶಿಸಿಕೊಳ್ಳುತ್ತಿರಬೇಕು.

4 *Report of the Education Commission*, p. 287

ಡಾ. ಟಿ. ಆರ್. ರಾವ್

ಹಳ್ಳಿಯ ಜನರ ಮೌಲ್ಯಗಳು

ಪೀಠಿಕೆ

ಭಾರತ ದೇಶದಲ್ಲಿ ಹಳ್ಳಿಗಳ ಸಂಖ್ಯೆ ಹೆಚ್ಚು. ಹಳ್ಳಿಯ ಜೀವನಕ್ಕೆ ಸರಿಹೋಗುವಂತೆ ಆಡಳಿತವನ್ನು ನಡೆಸಿದರೆ ಜನರ ಜೀವನ ಸುಖಮಯವಾಗುವುದರಲ್ಲಿ ಯಾವ ಸಂದೇಹವೂ ಇರುವುದಿಲ್ಲ. ಆದರೆ ಇಂಥ ಆಡಳಿತವನ್ನು ನಡೆಸಬೇಕಾದರೆ ಹಳ್ಳಿಗಳಲ್ಲಿ ವಾಸಿಸುವ ಜನರನ್ನು ವೈಜ್ಞಾನಿಕ ರೀತಿಯಲ್ಲಿ ಮೊದಲು ಅರ್ಥಮಾಡಿಕೊಳ್ಳಬೇಕು. ಅವರ ಅಗತ್ಯಗಳನ್ನೂ ಅಭಿವ್ಯಕ್ತಿಗಳನ್ನೂ ಪ್ರತ್ಯಾಕ್ಷಾನುಭವಗಳನ್ನೂ ಮೌಲ್ಯಗಳನ್ನೂ ತಿಳಿದುಕೊಳ್ಳಬೇಕು. ಈ ಅಂಶಗಳಿಗೆ ಸಂಬಂಧಿಸಿದ ತಿಳಿವಳಿಕೆಯ ಹಿನ್ನೆಲೆಯಲ್ಲಿ ಆಡಳಿತ ನಡೆಸಿದರೆ ಆಗ ಇದರಿಂದ ಹಳ್ಳಿಯಲ್ಲಿ ವಾಸಿಸುವ ಜನರಿಗೆ ಹೆಚ್ಚು ಪ್ರಯೋಜನವಾಗಬಹುದು.

ಹಳ್ಳಿಯಲ್ಲಿ ವಾಸಿಸುವ ಜನರ ಜೀವನಕ್ಕೆ ಸಂಬಂಧಿಸಿದಂತೆ ಅನೇಕ ಸಂಶೋಧನೆಗಳು ನಡೆದಿವೆ. ಇದರ ಪರಿಣಾಮವಾಗಿ ಅನೇಕ ಪುಸ್ತಕಗಳೂ ಲೇಖನಗಳೂ ಹೊರಬಿದ್ದಿವೆ. ಆದರೆ ಈ ಕೆಲಸಗಳು ಸಾಕಷ್ಟು ನಡೆದಿಲ್ಲ. ವಿಶೇಷವಾಗಿ ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದಿರುವ ರಾಷ್ಟ್ರಗಳಲ್ಲಿ ಇಂಥ ಸಂಶೋಧನೆಗಳು ಅಸಂಖ್ಯಾತವಾಗಿ ನಡೆಯುವ ಆವಶ್ಯಕತೆ ಇದೆ. ವಿಭಿನ್ನ ಭಾಷೆಗಳಿಂದಲೂ ಉಪಸಂಸ್ಕೃತಿಗಳಿಂದಲೂ ಪ್ರಾದೇಶಿಕ ವ್ಯವಹಾರಗಳಿಂದಲೂ ಕೂಡಿರುವ ನಮ್ಮ ದೇಶದಲ್ಲಿ ಹಳ್ಳಿಯಲ್ಲಿ ವಾಸಿಸುವ ಜನರನ್ನು ಅರಿತುಕೊಳ್ಳುವ ಅಗತ್ಯ ಹೆಚ್ಚಾಗಿದೆ. ಆದ್ದರಿಂದ ಭಾರತ ಸರ್ಕಾರ ಹಳ್ಳಿಯ ಜನರ ಜೀವನದ ಮೇಲೆ ನಡೆಯುತ್ತಿರುವ ಎಲ್ಲ ಸಂಶೋಧನೆಗಳಿಗೂ ಬೆಂಬಲ ನೀಡುತ್ತಿದೆ. ವಿಶ್ವಸಂಸ್ಥೆ ಕೂಡ ಈ ಕಾರ್ಯದಲ್ಲಿ ನೆರವಾಗಿದೆ.

1971–72ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಮೈಸೂರು ನಗರಕ್ಕೆ ಸಮೀಪದಲ್ಲಿರುವ ಎರಡು ಗ್ರಾಮಗಳಲ್ಲಿ ಈ ಬಗ್ಗೆ ವೈಜ್ಞಾನಿಕ ರೀತಿಯಲ್ಲಿ ಸಂಶೋಧನೆಗಳನ್ನು ನಡೆಸುವ ಕೆಲಸವನ್ನು ಅಭಿವೃದ್ಧಿ ಅಧ್ಯಯನ ಸಂಸ್ಥೆಗೆ ಒಪ್ಪಿಸಿತು. ಮೈಸೂರಿಗೆ ಸುಮಾರು ಐದು ಮೈಲಿಗಳ ದೂರದಲ್ಲಿರುವ ಕೂರ್ಗಳ್ಳಿಯನ್ನೂ ಹತ್ತು ಮೈಲಿಗಳ ದೂರದಲ್ಲಿರುವ ಕಾಮನಕೊಪ್ಪಲನ್ನೂ ಸಂಶೋಧನೆಗಾಗಿ ಆರಿಸಲಾಯಿತು. ದತ್ತ ಸಾಮಗ್ರಿಗಳ ಸಂಗ್ರಹಕ್ಕೆ ಸುಮಾರು ಆರು ತಿಂಗಳ ಕಾಲ ಹಿಡಿಯಿತು. ಈ ಸಂಶೋಧನೆಯ ಕಾರ್ಯದಲ್ಲಿ ಭೂಗೋಳಶಾಸ್ತ್ರಜ್ಞರೂ ಅರ್ಥಶಾಸ್ತ್ರಜ್ಞರೂ ಸಮಾಜಶಾಸ್ತ್ರಜ್ಞರೂ ಮನೋವಿಜ್ಞಾನಿಗಳೂ ನೆರವಾಗಿದ್ದರು. ಮನೋವಿಜ್ಞಾನಕ್ಕೆ ಸಂಬಂಧಿಸಿದ ಅಂಶಗಳ ಸಂಗ್ರಹ, ವಿಶ್ಲೇಷಣೆ ಮತ್ತು ವಿಮರ್ಶೆ ಈ ಲೇಖಕನ ಪಾಲಿಗೆ ಬಂತು., ಈ ಸಂದರ್ಭದಲ್ಲಿ ಅನೇಕ ಮನೋವೈಜ್ಞಾನಿಕ ಅಂಶಗಳಿಗೆ ಸಂಬಂಧಿಸಿದಂತೆ ವಿಮರ್ಶೆ ನಡೆಸಿದ್ದರೂ ಈ ಲೇಖನದಲ್ಲಿ ಹಳ್ಳಿಗಳಲ್ಲಿ ವಾಸಿಸುವ ಜನರ ಮೌಲ್ಯದ ವಿಚಾರವಾಗಿ ತಿಳಿದು ಬಂದ ಅಂಶಗಳನ್ನು ಸಂಗ್ರಹಿಸಿ ಕೊಡಲಾಗಿದೆ.

ಮೌಲ್ಯವೆಂದರೇನು ?

ಒಬ್ಬ ವ್ಯಕ್ತಿ ತಾನಾಗಲಿ ಇನ್ನೊಬ್ಬರಾಗಲಿ ಯಾವ ರೀತಿಯಲ್ಲಿರಬೇಕು ಎನ್ನುವುದರ ಬಗ್ಗೆ ಕೊಡುವ

ಅಭಿಪ್ರಾಯ ಮೌಲ್ಯವೆನಿಸುತ್ತದೆ. ಇದು ಮೌಲ್ಯದ ಸ್ಥೂಲವಾದ ಅರ್ಥ. ಒಬ್ಬ ವ್ಯಕ್ತಿಯ ಅಭಿವ್ಯಕ್ತಿಗಳೂ ನಂಬಿಕೆಗಳೂ ಆಸಕ್ತಿಗಳೂ ಅಭಿಪ್ರಾಯಗಳೂ ಅವನ ಮೌಲ್ಯಗಳಿಗೆ ಸಂಬಂಧಿಸಿರುತ್ತವೆ. ಇದೇ ರೀತಿಯಾಗಿ ವ್ಯಕ್ತಿ ತನ್ನ ಸುತ್ತಲೂ ಇರುವ ಪ್ರಪಂಚದ ವಿಚಾರವಾಗಿ ಹೊಂದಿರುವ ಪ್ರತ್ಯಕ್ಷಜ್ಞಾನಾನುಭವ ಅವನು ತನಗೂ ಇತರರಿಗೂ ಸಂಬಂಧಿಸಿದಂತೆ ಇಟ್ಟುಕೊಂಡಿರುವ ಮೌಲ್ಯಗಳನ್ನು ಅನುಸರಿಸುತ್ತದೆ.

ತನಗಾಗಿ ಮೀಸಲಾದ ಮೌಲ್ಯಗಳು

ಪ್ರಶ್ನಾವಳಿಗಳನ್ನು ಬಳಸಿ ಸಂಗ್ರಹಿಸಿದ ಅಂಶಗಳಿಂದ, ವ್ಯಕ್ತಿ ತನಗಾಗಿ ಇಟ್ಟುಕೊಂಡಿದ್ದ ಮೌಲ್ಯಗಳು ತಿಳಿದುಬಂದವು. ಪ್ರತಿಯೊಬ್ಬ ವ್ಯಕ್ತಿಯೂ ಆದರ್ಶಪರನೂ ನಿಸ್ವಾರ್ಥಪರನೂ ಆಗಿರಬೇಕೆಂದೂ, ಇತರರ ಮೇಲೆ ನಿಯಂತ್ರಣವನ್ನಿಟ್ಟುಕೊಂಡಿರಬೇಕೆಂದೂ ಕಾಮನಕೊಪ್ಪಲಿನಲ್ಲಿ ಉತ್ತರಗಳು ದೊರೆತವು. ಇಲ್ಲಿ ಆದರ್ಶವ್ಯಕ್ತಿಗಳಂತೆ ಇರಬೇಕೆಂದು ಹೇಳಿದವರ ಸಂಖ್ಯೆ ಹೆಚ್ಚಾಗಿತ್ತು. ಆರ್ಥಿಕವಾಗಿ ಕೆಳಗಿನ ಮಟ್ಟಕ್ಕೆ ಸೇರಿದವರಲ್ಲಿ ಹೆಚ್ಚು ಜನ ತಾವು ಆದರ್ಶಪ್ರಾಯರಾಗಿರಬೇಕೆಂದು ಹೇಳಿದರು. ಇದಕ್ಕಿಂತ ಸ್ವಲ್ಪ ಕಡಮೆಯ ಸಂಖ್ಯೆಯ ವ್ಯಕ್ತಿಗಳು ಮನೆಗೆ ಯಜಮಾನನಾದವನು ಸ್ವಾರ್ಥವನ್ನು ತ್ಯಜಿಸಬೇಕೆಂದು ಹೇಳಿದರು. ಅಲ್ಪ ಪ್ರಮಾಣದ ಜನರು ಇತರರ ಮೇಲೆ ಹತೋಟಿಯನ್ನಿಟ್ಟುಕೊಂಡಿರಬೇಕೆಂಬ ಅಭಿಲಾಷೆಯನ್ನು ವ್ಯಕ್ತಪಡಿಸಿದರು. ಆರ್ಥಿಕವಾಗಿ ಮಧ್ಯಮ ವರ್ಗಕ್ಕೆ ಸೇರಿದವರಲ್ಲಿ ಸೇ. ಸುಮಾರು 29 ಜನರು ಯಜಮಾನನಾದವನು ಆದರ್ಶವ್ಯಕ್ತಿ ಅಥವಾ ಇತರರ ಮೇಲೆ ಹತೋಟಿಯನ್ನಿಟ್ಟುಕೊಳ್ಳುವ ವ್ಯಕ್ತಿಯಾಗಿರಬೇಕೆಂದು ಅಭಿಪ್ರಾಯ ನೀಡಿದರು. ಸೇ. ಸುಮಾರು 14 ಜನರು ಅಂಥ ವ್ಯಕ್ತಿ ಸ್ವಾರ್ಥವನ್ನು ಬಿಟ್ಟಿರಬೇಕೆಂದು ಹೇಳಿದರು. ಆರ್ಥಿಕವಾಗಿ ಮೇಲಣ ವರ್ಗಕ್ಕೆ ಸೇರಿದವರಲ್ಲಿ ಅರ್ಧಭಾಗದ ಜನ ಯಜಮಾನನಾದವನು ಆದರ್ಶ ವ್ಯಕ್ತಿಯಾಗಿರಬೇಕೆಂದೂ ಉಳಿದರ್ಧ ಭಾಗದ ಜನ ಇತರರ ಮೇಲೆ ಹತೋಟಿಯನ್ನಿಟ್ಟುಕೊಳ್ಳಬೇಕೆಂದೂ ಸೂಚಿಸಿದರು. 16 ರಿಂದ 25 ವರ್ಷಗಳ ವರೆಗಿನ ವಯಸ್ಸಿನವರಲ್ಲಿ ಮೂರನೆಯ ಒಂದು ಭಾಗದ ಜನ ಯಜಮಾನನಾದವನು ಆದರ್ಶನಾಗಿರಬೇಕೆಂದು ಹೇಳಿದರು. ಈ ವಿಧದ ಪ್ರತಿಕ್ರಿಯೆಯನ್ನು ಇದೇ ಪ್ರಮಾಣದಲ್ಲಿ ಇತರ ಅಂತಸ್ತುಗಳಲ್ಲಿಯೂ ನೋಡಬಹುದಾಗಿತ್ತು. 55 ವರ್ಷಗಳಿಗೆ ಮೇಲ್ಪಟ್ಟವರಲ್ಲಿ ಸೇ. 67 ಜನರು ಯಜಮಾನನಾದವನು ಸ್ವಾರ್ಥರಹಿತನಾಗಿರಬೇಕೆಂದು ಹೇಳಿದರು.

ಕೂರ್ಗಳ್ಳಿಯಲ್ಲಿ ಸೇ. 31 ಜನರು ಯಜಮಾನನಾದವನು ಇತರರನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕೆಂದೂ ಸೇ. 28 ಜನರು ಆದರ್ಶವ್ಯಕ್ತಿಯಂತೆ ನಡೆದುಕೊಳ್ಳಬೇಕೆಂದೂ ಸೇ. 27 ಜನರು ಸ್ವಾರ್ಥರಹಿತರಾಗಿ ಬಾಳಬೇಕೆಂದೂ ತಿಳಿಸಿದರು. ಆರ್ಥಿಕವಾಗಿ ಕೆಳಗಿನ ಹಾಗೂ ಮೇಲಿನ ಅಂತಸ್ತಿಗೆ ಸೇರಿದವರಲ್ಲಿ ಹೆಚ್ಚು ಜನರು ಯಜಮಾನನಾದವನು ಸ್ವಾರ್ಥರಹಿತನಾಗಿರಬೇಕೆಂದೂ, ಮಧ್ಯ ಅಂತಸ್ತಿಗೆ ಸೇರಿದವರಲ್ಲಿ ಹೆಚ್ಚು ಜನರು ಯಜಮಾನನಾದವನು ಆದರ್ಶವ್ಯಕ್ತಿಯಾಗಿರಬೇಕೆಂದೂ ತಿಳಿಸಿದರು. ಕೂರ್ಗಳ್ಳಿಯ ಜನರಲ್ಲಿ ಎಲ್ಲ ವಯಸ್ಸಿನವರಲ್ಲೂ ಯಜಮಾನನಾದವನು ಇತರರ ಮೇಲೆ ಹತೋಟಿಯನ್ನಿಟ್ಟುಕೊಳ್ಳಬೇಕೆಂಬ ಅಂಶವನ್ನು ವ್ಯಕ್ತಪಡಿಸಿದವರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. 26–35 ವಯಸ್ಸು ಮತ್ತು 55 ವರ್ಷಗಳಿಗೆ ಮೇಲ್ಪಟ್ಟ ವಯಸ್ಸಿನವರಲ್ಲಿ ಈ ಅಭಿಮತ ಹೆಚ್ಚಾಗಿತ್ತು. ಕೂರ್ಗಳ್ಳಿಯ ಹೆಂಗಸರನ್ನು ಪ್ರಶ್ನಿಸಿದಾಗ ಅವರಲ್ಲಿ ಅನೇಕರು ಯಜಮಾನ ಸ್ವಾರ್ಥರಹಿತನಾಗಿರಬೇಕೆಂದೂ, ಆದರ್ಶಪ್ರಾಯನಾಗಿರಬೇಕೆಂದೂ ಹೇಳಿದರು. ಇತರರ ಮೇಲೆ ನಿಯಂತ್ರಣವನ್ನಿಟ್ಟುಕೊಂಡಿರಬೇಕೆಂದು ಹೇಳಿದವರ ಸಂಖ್ಯೆ ಕೇವಲ ಸೇ. 2ರಷ್ಟಿತ್ತು.

ಕುಟುಂಬವರ್ಗದವರಲ್ಲಿ

ಕುಟುಂಬವರ್ಗದವರಿಗೆ ಇರಬೇಕಾದ ಮೌಲ್ಯಗಳ ವಿಚಾರವಾಗಿ ಪ್ರಶ್ನಿಸಲಾಯಿತು. ಅವರು ಸಹಕರಿಸಬೇಕೆಂದು ಸೇ. 38 ಜನರೂ, ಅವರು ವಿಧೇಯರಾಗಿರಬೇಕೆಂದು ಸೇ. 34 ಜನರೂ, ಕಷ್ಟಪಟ್ಟು ಕೆಲಸ ಮಾಡಬೇಕೆಂದು ಸೇ. 20 ಜನರೂ ಹೇಳಿದರು. ಈ ಉತ್ತರಗಳು ಕೂರ್ಗಳ್ಳಿಯ ನಿವಾಸಿ

ಗಳಿಂದ ಬಂದವು. ವಿವಿಧ ಆರ್ಥಿಕ ಅಂತಸ್ತುಗಳಿಗೆ ಸೇರಿದವರಲ್ಲಿ ಅಧಿಕ ಸಂಖ್ಯಾತರು ಕುಟುಂಬ ವರ್ಗದವರು ಸಹಕರಿಸಿ ನಡೆದುಕೊಳ್ಳಬೇಕೆಂದು ಹೇಳಿದರು. ಕಾಮನಕೊಪ್ಪಲಿನ ನಿವಾಸಿಗಳ ಪ್ರತಿಕ್ರಿಯೆ ಈ ರೀತಿ ಇದೆ: ಅವರು ವಿಧೇಯರಾಗಿರಬೇಕೆಂದು ಸೇ. 42 ಜನರೂ ಸಹಕರಿಸಿ ನಡೆಯಬೇಕೆಂದು ಸೇ. 29 ಜನರೂ ಪ್ರಾಮಾಣಿಕತೆಯಿಂದ ಇರಬೇಕೆಂದು ಸೇ. 21ರಷ್ಟು ಜನರೂ ಸೂಚಿಸಿದರು. ಇವರಲ್ಲಿ ಎಲ್ಲ ಆರ್ಥಿಕ ವರ್ಗಗಳಿಗೂ ಸೇರಿದಂತೆ, ವಿಧೇಯತೆಯಿಂದ ಬಾಳಬೇಕೆಂದು ಹೇಳುವ ವ್ಯಕ್ತಿಗಳ ಸಂಖ್ಯೆಯೇ ಹೆಚ್ಚಾಗಿತ್ತು. ಸಹಕರಿಸಿ ಬಾಳಬೇಕೆಂದು ಹೇಳುವ ವ್ಯಕ್ತಿಗಳಲ್ಲಿ ಕಾಮನಕೊಪ್ಪಲಿನಲ್ಲಿ 55ಕ್ಕಿಂತ ಹೆಚ್ಚಿನ ವಯೋಮಿತಿಯವರೇ ಅಧಿಕ ಸಂಖ್ಯೆಯವರು. ವಿಧೇಯತೆಯಿಂದ ಬಾಳಬೇಕೆಂದು ಹೇಳುವ ವ್ಯಕ್ತಿಗಳು ಹೆಚ್ಚಾಗಿ 36–45ರ ವಯೋಮಿತಿಯಲ್ಲಿದ್ದರು. ಕೂರ್ಗಳ್ಳಿಯ ಗಂಡಸರಲ್ಲಿ ಸಹಕಾರದಿಂದ ಬಾಳಬೇಕೆಂದು ಹೇಳುವವರೂ ಕಷ್ಟಪಟ್ಟು ಕೆಲಸವನ್ನು ಮಾಡಬೇಕೆನ್ನುವ ವ್ಯಕ್ತಿಗಳೂ 46–55ರ ವಯೋಮಿತಿಯಲ್ಲಿಯೂ. ವಿಧೇಯರಾಗಿರಬೇಕೆಂದು ಹೇಳುವ ವ್ಯಕ್ತಿಗಳು ಹೆಚ್ಚಾಗಿ 26–55ರ ವಯೋಮಿತಿಯಲ್ಲಿಯೂ ಇದ್ದರು. ಈ ಹಳ್ಳಿಯ ಹೆಂಗಸರ ಪೈಕಿ ಸಹಕರಿಸಿ ನಡೆಯಬೇಕೆಂದು ಹೇಳುತ್ತಿದ್ದವರಲ್ಲಿ ಬಹುಮಂದಿ 36–45ರ ವಯೋಮಿತಿಗೂ. ಕಷ್ಟಪಟ್ಟು ಕೆಲಸ ಮಾಡಬೇಕೆಂದು ಹೇಳುತ್ತಿದ್ದವರಲ್ಲಿ ಬಹುಮಂದಿ 26–35ರ ಮತ್ತು 46–55ರ ವಯೋಮಿತಿಗೂ, ವಿಧೇಯರಾಗಿರಬೇಕೆಂದು ಹೇಳುವವರಲ್ಲಿ ಬಹುಮಂದಿ 55ಕ್ಕಿಂತಲೂ ಹೆಚ್ಚಿನ ವಯಸ್ಸಿನವರ ಗುಂಪಿಗೂ ಸೇರಿದವರಾಗಿದ್ದರು. ಇದುವರೆಗೂ ಸಂಗ್ರಹಿಸಿದ ದತ್ತ ಸಾಮಗ್ರಿಯನ್ನು ವಿಶ್ಲೇಷಿಸಿದರೆ ಸಾಂಘಿಕ ಹಾಗೂ ಆರ್ಥಿಕ ಪರಿಸ್ಥಿತಿಗಳಲ್ಲಿ ಮುಂದುವರಿದ ಹಳ್ಳಿಗಳಲ್ಲಿ ವಾಸಿಸುವ ಜನರು ಹೆಚ್ಚಾಗಿ ದರ್ಪದ ವರ್ತನೆಯನ್ನು ತೋರಿಸುವುದಿಲ್ಲವೆಂಬ ಅಂಶವೂ ತಿಳಿದು ಬರುತ್ತದೆ. ಇದರ ಜೊತೆಗೆ. 26ರಿಂದ 45 ವರ್ಷಗಳ ಅಂತರದಲ್ಲಿರುವ ಹಳ್ಳಿಯ ಹೆಂಗಸರು ಸಾಮಾನ್ಯವಾಗಿ ತಮ್ಮ ಕುಟುಂಬವರ್ಗದವರಲ್ಲಿ ಸಹಕಾರದ ಮನೋಭಾವವಾಗಲಿ, ಕಷ್ಟಪಟ್ಟು ಕೆಲಸವನ್ನು ಮಾಡುವುದಾಗಲಿ ವಿಧೇಯತೆಯಾಗಲಿ ಇಲ್ಲವೆಂಬ ಭಾವನೆಯಿಂದ ಕೂಡಿರುತ್ತಾರೆಂಬ ಅಂಶವೂ ವ್ಯಕ್ತವಾಗುತ್ತದೆ. ಇತರ ವಯೋಮಿತಿಯ ವರ್ಗಗಳಿಗೆ ಸೇರಿದ ಹೆಂಗಸರಲ್ಲಿ ಇಂಥ ನಂಬಿಕೆಗಳಿರುವುದು ಕಂಡುಬರುವುದಿಲ್ಲ.

ನೆರೆಹೊರೆಯುವರಲ್ಲಿ

ಹಳ್ಳಿಯ ಜನರು ತಮ್ಮ ವ್ಯಕ್ತಿತ್ವದಿಂದ ಬಿಡಿದು ತಮ್ಮ ಕುಟುಂಬ ವರ್ಗದವರಿಗೂ ತಮ್ಮ ನೆರೆಹೊರೆಯವರಿಗೂ ಸಂಬಂಧಿಸಿದಂಥ ವಿಚಾರದವರೆಗೆ ಹೇಗೆ ವಿಭಿನ್ನ ಮೌಲ್ಯಗಳನ್ನು ಸೂಚಿಸುತ್ತಾರೆಂಬುದು ಒಂದು ಸ್ವಾರಸ್ಯಕರವಾದ ಅಂಶ. ಕೂರ್ಗಳ್ಳಿಯಲ್ಲಿ 'ಸಹಾಯಕರಾಗಿರುವುದು' ಮತ್ತು 'ಸ್ನೇಹದಿಂದಿರುವುದು' ನೆರೆಹೊರೆಯವರಿಗೆ ಇರಬೇಕಾದ ಮೌಲ್ಯವೆಂದು ಹೇಳಲಾಯಿತು. ಈ ಗುಣಗಳೇ ಪ್ರಧಾನವೆನ್ನುವವರ ಸಂಖ್ಯೆ ಅವರ ಆರ್ಥಿಕ ಪರಿಸ್ಥಿತಿ ಉತ್ತಮಗೊಂಡಂತೆಲ್ಲ ಕಡಿಮೆಯಾಗಿರುತ್ತದೆ. 'ನೆರೆಹೊರೆಯವರು ಒಂದೇ ಕುಟುಂಬಕ್ಕೆ ಸೇರಿದವರಂತೆ ಇರಬೇಕು' ಎಂಬ ಇನ್ನೊಂದು ಮೌಲ್ಯವನ್ನೂ ಕೂರ್ಗಳ್ಳಿಯ ನಿವಾಸಿಗಳು ಸೂಚಿಸಿದರು. ಆದರೆ ಈ ಸಲಹೆಯನ್ನು ಕೊಟ್ಟವರ ಸಂಖ್ಯೆ ಬಹು ಅಲ್ಪ. ಸಹಾಯಕರಾಗಿರಬೇಕೆಂದು ಹೇಳಿದವರ ಸಂಖ್ಯೆ ಅತ್ಯಧಿಕವಾಗಿತ್ತು. ಇದು ಸೇ. 55. ನೆರೆಹೊರೆಯವರಿಗೆ ಇತರ ಮೌಲ್ಯಗಳೂ ಇರಬೇಕೆಂದು ಕೂರ್ಗಳ್ಳಿಯ ನಿವಾಸಿಗಳು ಅಭಿಪ್ರಾಯಪಟ್ಟರು. ಆದರೆ ಅಂಥ ವ್ಯಕ್ತಿಗಳ ಸಂಖ್ಯೆ ಅಧಿಕವಲ್ಲ.

ನೆರೆಹೊರೆಯವರು ಸಹಕಾರದಿಂದಲೂ ಸ್ನೇಹದಿಂದಲೂ ಸಹಾಯಶೀಲರಾಗಿಯೂ ಒಂದೇ ಕುಟುಂಬಕ್ಕೆ ಸೇರಿದವರಂತೆಯೂ ಬಾಳಬೇಕೆಂಬವರ ಸಂಖ್ಯೆಯೂ ಈ ಮೌಲ್ಯಗಳ ಪ್ರಾಮುಖ್ಯಾನುಕ್ರಮವೂ ಕಾಮನಕೊಪ್ಪಲಿನಲ್ಲಿ ಭಿನ್ನವಾಗಿದ್ದುವು. ಸ್ನೇಹದಿಂದಿರಬೇಕೆಂದು ಹೇಳಿದವರು ಹೆಚ್ಚಾಗಿ ಆರ್ಥಿಕವಾಗಿ ಉನ್ನತಮಟ್ಟದವರು. ನೆರೆಹೊರೆಯವರು ಸಹಾಯಶೀಲರಾಗಿರಬೇಕೆಂದು ಹೇಳಿದವರು ಹೆಚ್ಚಾಗಿ ಮಧ್ಯ ಅಂತಸ್ತಿನವರು. ಒಂದು ಕುಟುಂಬಕ್ಕೆ ಸೇರಿದಂತೆ ಇರಬೇಕೆಂದು ಹೇಳಿದವರು ಹೆಚ್ಚಾಗಿ ಕಡಿಮೆಯ ಅಂತಸ್ತಿನವರು. ಸಹಕಾರದಿಂದ ವರ್ತಿಸಬೇಕೆಂದು ಹೇಳುವ ವ್ಯಕ್ತಿಗಳೂ ಹೆಚ್ಚಾಗಿ ಮಧ್ಯದ ಅಂತಸ್ತಿನವರು.

ಸ್ನೇಹಿತರಂತೆಯೂ ಒಂದು ಕುಟುಂಬಕ್ಕೆ ಸೇರಿದವರಂತೆಯೂ ಇರಬೇಕೆಂದು ಹೇಳುವ ವ್ಯಕ್ತಿಗಳು ಕೂರ್ಗಳ್ಳಿಯಲ್ಲಿ ಆರ್ಥಿಕವಾಗಿ ಕೆಳಗಿನ ಮಟ್ಟಕ್ಕೆ ಸೇರಿದವರೇ ಆಗಿದ್ದರು. ನೆರೆಹೊರೆಯವರು ಸಹಾಯಶೀಲರಾಗಿರಬೇಕೆಂದು ಹೇಳುವ ವ್ಯಕ್ತಿಗಳು ಹೆಚ್ಚಾಗಿ ಮಧ್ಯ ಅಂತಸ್ತಿಗೆ ಸೇರಿದ್ದರು. ನೆರೆಹೊರೆಯವರು ಸಹಾಯಶೀಲರಾಗಿರಬೇಕೆಂಬ ಅಂಶವನ್ನು ಕೂರ್ಗಳ್ಳಿಯ ನಿವಾಸಿಗಳು ಕಾಮನಕೊಪ್ಪಲಿನ ನಿವಾಸಿಗಳಿಗಿಂತ ಹೆಚ್ಚಾಗಿ ಒತ್ತಿಹೇಳುತ್ತಿದ್ದರು. ಸ್ನೇಹಿತರಂತೆ ಇರಬೇಕೆಂಬುದಾಗಿ ಸೂಚಿಸಿದ ವ್ಯಕ್ತಿಗಳು ಹೆಚ್ಚಾಗಿ 55 ವರ್ಷಗಳನ್ನು ಮೀರಿದವರು. ಸಹಾಯಶೀಲರಾಗಿರಬೇಕೆನ್ನುವವರು ಒಂದೇ ಕುಟುಂಬಕ್ಕೆ ಸೇರಿದವರಂತೆ ಇರಬೇಕೆಂದು ಹೇಳುವವರು. ಆರ್ಥಿಕವಾಗಿ 36–45 ವರ್ಷ ವಯಸ್ಸಿನವರು ಕೂರ್ಗಳ್ಳಿಯ ಹೆಂಗಸರನ್ನು ಪ್ರತ್ಯೇಕವಾಗಿ ಈ ಅಂಶದ ವಿಚಾರವಾಗಿ ಪ್ರಶ್ನಿಸಿದಾಗ. ನೆರೆಹೊರೆಯವರು ಸ್ನೇಹಿತರಂತೆ ಇರಬೇಕೆಂದು ಹೇಳಿದವರಲ್ಲಿ ಹಲವರು 46–55ರ ವಯಸ್ಸಿನವರು. ನೆರೆಹೊರೆಯವರು ಸಹಾಯಶೀಲರಾಗಿರಬೇಕೆಂದು ಹೇಳಿದ ಹೆಂಗಸರಲ್ಲಿ ಅಧಿಕ ಮಂದಿ 36–45ರ ವಯಸ್ಸಿನವರು. ಕುಟುಂಬಕ್ಕೆ ಸೇರಿದವರಂತೆ ಇರಬೇಕೆಂದು ಹೇಳುವ ಹೆಂಗಸರಲ್ಲಿ ಹೆಚ್ಚು ಮಂದಿ 16–25ರ ವಯಸ್ಸಿನವರು.

ಸ್ನೇಹಿತರಲ್ಲಿ

ಸ್ನೇಹಿತನಾದವನು ಸಹಾಯಕನಾಗಿಯೂ. ಸ್ನೇಹದಿಂದ ವರ್ತಿಸುವನೂ. ಪ್ರಾಮಾಣಿಕನೂ. ಒಂದು ಕುಟುಂಬಕ್ಕೆ ಸೇರಿದವನಂತೆ ಇರುವವನೂ ಆಗಿರಬೇಕೆನ್ನುವ ಕೆಳಗಿನ ಆರ್ಥಿಕ ಅಂತಸ್ತಿನ ವ್ಯಕ್ತಿಗಳು ಕೂರ್ಗಳ್ಳಿಯಲ್ಲಿ ಹೆಚ್ಚಾಗಿದ್ದರು. ಸ್ನೇಹಿತನಾದವನು ಸಹಕಾರದಿಂದ ವರ್ತಿಸಬೇಕೆಂದೂ. ಇತರರಿಗೆ ಸಹಾಯ ಮಾಡಬೇಕೆಂದೂ. ಇತರರೊಡನೆ ಮೈತ್ರಿಯಿಂದ ನಡೆದುಕೊಳ್ಳಬೇಕೆಂದೂ ಕಾಮನಕೊಪ್ಪಲಿನ ನಿವಾಸಿಗಳು ಹೇಳಿದರು. ಸ್ನೇಹಿತನಾದವನು ಇತರರಿಗೆ ಸಹಾಯ ಮಾಡಬೇಕೆಂದು ಕೂರ್ಗಳ್ಳಿಯ ನಿವಾಸಿಗಳಲ್ಲಿ ಹೆಚ್ಚು ಮಂದಿ ಸೂಚಿಸಿದರು. ಸ್ನೇಹಿತನಾದವನು ಸಹಕರಿಸಿ ನಡೆದುಕೊಳ್ಳಬೇಕೆಂದು ಕಾಮನಕೊಪ್ಪಲಿನವರಲ್ಲಿ ಅಧಿಕಮಂದಿ ಹೇಳಿದರು. 26–35ರ ವಯಸ್ಸಿನ ವ್ಯಕ್ತಿಗಳಲ್ಲಿ ಅನೇಕರು ಸ್ನೇಹಿತನಾದವನು ಪ್ರಾಮಾಣಿಕನಾಗಿರಬೇಕೆಂದು ಹೇಳಿದರೆ. 36–45ರ ವಯಸ್ಸಿನವರು ಸ್ನೇಹಿತನಾದವನು ಸಹಾಯ ಮಾಡಬೇಕೆಂದು ಹೇಳಿದರು. ಕಾಮನಕೊಪ್ಪಲಿನಲ್ಲಿ ಕೂಡ ಸ್ನೇಹಿತನಾದವನು ಸಹಕರಿಸಬೇಕೆಂದು ಹೇಳಿದವರು 26–35ರ ವಯಸ್ಸಿನವರ ಗುಂಪಿನಲ್ಲೂ ಸಹಾಯ ಮಾಡಬೇಕೆಂದು ಹೇಳಿದವರು 55ಕ್ಕಿಂತಲೂ ಹೆಚ್ಚಿನ ವಯಸ್ಸಿನವರ ಗುಂಪಿನಲ್ಲೂ ಹೆಚ್ಚಾಗಿ ಇದ್ದರು. ಆರ್ಥಿಕ ಪರಿಸ್ಥಿತಿ ಹಾಗೂ ವಯಸ್ಸಿಗನುಸಾರವಾಗಿ ಸ್ನೇಹಿತರನ್ನು ಕುರಿತ ಮೌಲ್ಯನಿರ್ಧಾರ ವ್ಯತ್ಯಾಸವಾಗುತ್ತದೆಂದು ತಿಳಿದುಬರುತ್ತದೆ.

ಸಮುದಾಯದಲ್ಲಿ

ಸಮುದಾಯಕ್ಕೆ ಇರಬೇಕೆನಿಸಿದ ಮೌಲ್ಯಗಳನ್ನು ಸೂಚಿಸಬೇಕೆಂದು ಕೇಳಿದಾಗ ಸರಿಯಾದ ಉತ್ತರ ಕೊಡುವುದು ಈ ಎರಡು ಹಳ್ಳಿಗಳ ಜನರಿಗೂ ಕಷ್ಟವಾಯಿತು. ಸೇ. 35ರಷ್ಟು ಜನರು ಈ ಪ್ರಶ್ನೆಗೆ ಉತ್ತರ ಕೊಡಲು ನಿರಾಕರಿಸಿದರು. ಕೂರ್ಗಳ್ಳಿಯಲ್ಲಿ ಹೆಚ್ಚು ಜನರು ಸಮುದಾಯ ಸಹಕಾರದಿಂದ ನಡೆದುಕೊಳ್ಳಬೇಕೆಂದೂ, ಸಮುದಾಯದಲ್ಲಿ ಒಬ್ಬರಿಗೆ ಇನ್ನೊಬ್ಬರು ಸಹಾಯ ಮಾಡಬೇಕೆಂದೂ ತಿಳಿಸಿದರು. ಕಾಮನಕೊಪ್ಪಲಿನ ನಿವಾಸಿಗಳೂ ಈ ಅಭಿಪ್ರಾಯವನ್ನೇ ಕೊಟ್ಟರು. ಸಹಕಾರವನ್ನು ಹೆಚ್ಚಾಗಿ ಅಪೇಕ್ಷಿಸುವ ವ್ಯಕ್ತಿಗಳು 36–45ರ ವಯಸ್ಸಿನ ಗುಂಪಿನಲ್ಲೂ ಸಹಾಯ ಮಾಡಬೇಕೆಂದು ಹೇಳಿದವರು 26–35ರ ವಯಸ್ಸಿನ ಗುಂಪಿನಲ್ಲೂ ಇದ್ದರು. ಕಾಮನಕೊಪ್ಪಲಿನಲ್ಲಿ ಈ ಎರಡು ಮೌಲ್ಯಗಳೂ ಮುಖ್ಯವಾದವುಗಳೆಂದು ಭಾವಿಸಿದ್ದ ವ್ಯಕ್ತಿಗಳು 26–35ರ ವಯೋಮಿತಿಯಲ್ಲಿದ್ದರು. ಕೂರ್ಗಳ್ಳಿಯ ಹೆಂಗಸರು ಕೊಟ್ಟ ಉತ್ತರಗಳನ್ನು ವಿಶ್ಲೇಷಿಸಿದರೆ 16–45ರ ವಯೋಮಿತಿಯಲ್ಲಿದ್ದವರು ಸಹಕಾರವನ್ನೂ, 26–35ರ ವಯೋಮಿತಿಯಲ್ಲಿದ್ದವರು ಸಹಾಯವನ್ನೂ ಸಮುದಾಯದ ಮುಖ್ಯವಾದ ಮೌಲ್ಯಗಳೆಂದು ಹೇಳಿದರು.

ಗ್ರಾಮಾಧಿಕಾರಿಗಳಲ್ಲಿ

ಗ್ರಾಮಾಧಿಕಾರಿಗಳಿಗೆ ಸಂಬಂಧಿಸಿದಂತೆ ಮೌಲ್ಯಗಳನ್ನು ಕುರಿತಂತೆ ಉತ್ತರಗಳನ್ನು ಕೊಟ್ಟವರ ಸಂಖ್ಯೆ ಇನ್ನೂ ಕಡಿಮೆ. ಗ್ರಾಮಾಧಿಕಾರಿಗಳು ತಮ್ಮ ಕರ್ತವ್ಯವನ್ನು ಮಾಡಬೇಕು, ಎಲ್ಲರನ್ನೂ ಒಂದೇ ಸಮನಾಗಿ ನೋಡಿಕೊಳ್ಳಬೇಕು ಎಂದು ಕೂರ್ಗಳ್ಳಿಯ ನಿವಾಸಿಗಳು ಉತ್ತರ ಕೊಟ್ಟರು. ಈ ಸಲಹೆಗಳ ಜೊತೆಗೆ, ಗ್ರಾಮಾಧಿಕಾರಿಗಳು ಸಹಾಯಶೀಲರಾಗಿರಬೇಕೆಂಬ ಅಂಶವನ್ನು ಕಾಮನಕೊಪ್ಪಲಿನ ನಿವಾಸಿಗಳು ವ್ಯಕ್ತಪಡಿಸಿದರು. ಗ್ರಾಮಾಧಿಕಾರಿಗಳಿಗೆ ಇರಬೇಕಾದ ಮೌಲ್ಯಗಳ ವಿಚಾರವಾಗಿ ಕೂರ್ಗಳ್ಳಿಯ ನಿವಾಸಿಗಳಿಗೆ ಸರಿಯಾದ ತಿಳಿವಳಿಕೆ ಇರಲಿಲ್ಲ. ಏಕೆಂದರೆ, ಇವರಲ್ಲಿ ಕೆಲವರು ಇನ್ನೂ ಕೆಲವು ಮೌಲ್ಯಗಳನ್ನು ಸೂಚಿಸಿದರು. ಆದರೆ ಕಾಮನಕೊಪ್ಪಲಿನ ನಿವಾಸಿಗಳಲ್ಲಿ ಇಂಥ ಮೌಲ್ಯಗಳ ವಿಚಾರವಾಗಿ ಒಂದು ನಿಶ್ಚಿತವಾದ ನಿರ್ಧಾರವಿದ್ದಿತು. ಕೂರ್ಗಳ್ಳಿಯಲ್ಲಿ 26–35ರ ವಯೋಮಿತಿಯಲ್ಲಿದ್ದವರು, ಗ್ರಾಮಾಧಿಕಾರಿಗಳು ಎಲ್ಲರನ್ನೂ ಒಂದೇ ಸಮನಾಗಿ ನೋಡಿಕೊಳ್ಳಬೇಕೆಂದೂ 36–45ರ ವಯೋಮಿತಿಯಲ್ಲಿದ್ದವರು ಅವರು ತಮ್ಮ ಕರ್ತವ್ಯವನ್ನು ಮಾಡಬೇಕೆಂದೂ ಸಾಮಾನ್ಯವಾಗಿ ತಿಳಿಸಿದರು. ಕಾಮನಕೊಪ್ಪಲಿನಲ್ಲಿ ಇದೇ ಬಗೆಯ ಉತ್ತರಗಳು ದೊರಕಿದುವು.

ಸರ್ಕಾರಿ ಅಧಿಕಾರಿಗಳಲ್ಲಿ

ಇವರಿಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರ ನೀಡಿದವರ ಸಂಖ್ಯೆ ಇನ್ನೂ ಕಡಿಮೆ. ಸೇ. ಸುಮಾರು 57 ಜನರು ಕೂರ್ಗಳ್ಳಿಯಲ್ಲಿ ಈ ಪ್ರಶ್ನೆಗೆ ಉತ್ತರ ಕೊಡಲಿಲ್ಲ. ಕಾಮನಕೊಪ್ಪಲಿನಲ್ಲಿ ಸೇಕಡ ಸುಮಾರು 42 ಜನರು ಈ ಪ್ರಶ್ನೆಗೆ ಉತ್ತರವನ್ನು ಕೊಡಲಿಲ್ಲ. ಸರ್ಕಾರಿ ಅಧಿಕಾರಿಗಳು ಸಹಾಯಕರಾಗಿರಬೇಕು ಮತ್ತು ಲಂಚವನ್ನು ತೆಗೆದುಕೊಳ್ಳಬಾರದೆಂಬುದಾಗಿ ಎರಡು ಹಳ್ಳಿಗಳ ಜನರೂ ಹೇಳಿದರು. ಮೊದಲನೆಯ ಮೌಲ್ಯಕ್ಕೆ ಕಾಮನಕೊಪ್ಪಲಿನವರಲ್ಲಿ ಹೆಚ್ಚು ಪ್ರಾಶಸ್ತ್ಯ. ಕೂರ್ಗಳ್ಳಿಯಲ್ಲಿ ಲಂಚವನ್ನು ತೆಗೆದುಕೊಳ್ಳಬಾರದೆಂದು ಹೇಳಿದವರಲ್ಲಿ ಹೆಚ್ಚು ಮಂದಿ 36–45ರ ವಯೋಮಿತಿಗೆ ಸೇರಿದ್ದರು. ಕಾಮನಕೊಪ್ಪಲಿನಲ್ಲಿ ಸಲಹೆಯನ್ನು ಕೊಟ್ಟವರು 26–35ರ ಮತ್ತು 55ಕ್ಕಿಂತಲೂ ಹೆಚ್ಚಿನ ವಯಸ್ಸಿನವರು. ಸರ್ಕಾರಿ ಅಧಿಕಾರಿಗಳು ಸಹಾಯಕರಾಗಿರಬೇಕೆಂದು ಹೇಳಿದವರಲ್ಲಿ ಹೆಚ್ಚು ಮಂದಿ 26–35ರ ವಯೋಮಿತಿಗೆ ಸೇರಿದ್ದರು. ಈ ವಿಚಾರವಾಗಿ ಎರಡು ಹಳ್ಳಿಗಳಿಗೂ ಯಾವ ವ್ಯತ್ಯಾಸವೂ ಇರಲಿಲ್ಲ. ಅಧಿಕಾರಿಗಳು ಪ್ರಾಮಾಣಿಕತೆಯಿಂದ ಇರಬೇಕೆಂದು ಹೇಳಿದವರು ಕಾಮನಕೊಪ್ಪಲಿನಲ್ಲಿ ಹೆಚ್ಚಾಗಿ 46–55ರ ವಯೋಮಿತಿಗೆ ಸೇರಿದ್ದರು.

ವೈದ್ಯರಲ್ಲಿ

ವೈದ್ಯರಲ್ಲಿ ಇರಬೇಕಾದ ಮೌಲ್ಯಗಳನ್ನು ವಿಶ್ಲೇಷಿಸುವಾಗ ಪ್ರಶ್ನೆಗಳಿಗೆ ಉತ್ತರಗಳನ್ನು ಕೊಟ್ಟ ವ್ಯಕ್ತಿಗಳ ಆರೋಗ್ಯವನ್ನು ಗಣನೆಗೆ ತೆಗೆದುಕೊಳ್ಳಲಾಯಿತು. ಕಾಮನಕೊಪ್ಪಲಿನಲ್ಲಿ ಹೆಚ್ಚು ಜನ ಈ ಪ್ರಶ್ನೆಗಳಿಗೆ ಉತ್ತರವನ್ನು ಕೊಡಲಿಲ್ಲ. ಈ ಹಳ್ಳಿ ಕೂರ್ಗಳ್ಳಿಗಿಂತ ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದಿರುವುದೇ ಇದಕ್ಕೆ ಕಾರಣವೆಂದು ಹೇಳಬಹುದು. ಉತ್ತರವನ್ನು ಕೊಟ್ಟ ವ್ಯಕ್ತಿಗಳು ಅಧಿಕ ಸಂಖ್ಯೆಯಲ್ಲಿ ಆರೋಗ್ಯವಂತರಾಗಿದ್ದರು. ಈ ಎರಡು ಹಳ್ಳಿಗಳಿಗೆ ಸೇರಿದವರೂ ವೈದ್ಯಕೀಯ ವೃತ್ತಿಯಲ್ಲಿರುವ ವ್ಯಕ್ತಿಗಳು ರೋಗಿಗಳ ಚಿಕಿತ್ಸೆಗಾಗಿ ಹೆಚ್ಚು ಹಣ ಖರ್ಚಾಗುವಂತೆ ಮಾಡಬಾರದೆಂದೂ ರೋಗಿಗಳ ಕಾಯಿಲೆಗಳನ್ನು ಗುಣಪಡಿಸುವಾಗ ಅವರಲ್ಲಿ ಮಾನವೀಯ ವರ್ತನೆ ಇರಬೇಕೆಂದೂ ಹೇಳಿದರು. ಆದರೆ ಮೌಲ್ಯಗಳಿಗೆ ಅವರು ಕೊಡುತ್ತಿದ್ದ ಪ್ರಾಮುಖ್ಯದಲ್ಲಿ ವ್ಯತ್ಯಾಸವಿದ್ದಿತು. ಕೂರ್ಗಳ್ಳಿಯ ನಿವಾಸಿಗಳು ಹೆಚ್ಚಾಗಿ ವೈದ್ಯರು ಎಲ್ಲರನ್ನೂ ಒಂದೇ ಸಮನಾಗಿ ನೋಡಿಕೊಳ್ಳಬೇಕೆಂದೂ, ಕಾಮನಕೊಪ್ಪಲಿನ ನಿವಾಸಿಗಳು ವೈದ್ಯರಾದವರು ಔಷಧಗಳನ್ನು ಮಾರಿಕೊಂಡು ಹಣವನ್ನು ಸಂಪಾದಿಸಬಾರದೆಂದೂ ಹೇಳಿದರು. ಕಾಮನಕೊಪ್ಪಲಿನ ನಿವಾಸಿಗಳು ಸರ್ಕಾರಿ ಆಸ್ಪತ್ರೆಗಳು ನಡೆಸುತ್ತಿರುವ ಕೆಲಸಗಳನ್ನು ಖಂಡಿಸಿದರು. ಸಾಮಾನ್ಯವಾಗಿ ಹಳ್ಳಿಯವರ ದೃಷ್ಟಿಯಲ್ಲಿ ವೈದ್ಯರಿಗೆ ಇರಬೇಕಾದ ಲಕ್ಷಣಗಳೆಂದರೆ

ಅವರು ಎಲ್ಲರನ್ನೂ ಒಂದೇ ಸಮನಾಗಿ ನೋಡಿಕೊಳ್ಳಬೇಕು: ಚಿಕಿತ್ಸೆಗೆ ಆಗುವ ಖರ್ಚನ್ನು ಆದಷ್ಟು ಕಡಿಮೆ ಮಾಡಬೇಕು: ಔಷಧಿಗಳನ್ನು ಮಾರಿಕೊಂಡು ದ್ರವ್ಯಾರ್ಜನೆ ಮಾಡಬಾರದು; ರೋಗಿಗಳ ಹಾಗೂ ಜನರ ವಿಚಾರವಾಗಿ ಮಾನವೀಯವಾಗಿ ವರ್ತಿಸಬೇಕು.

ಶಿಕ್ಷಕರಲ್ಲಿ

ಸಂಶೋಧಕರಿಗೆ ದೊರೆತ ದತ್ತ ಸಾಮಗ್ರಿಗಳನ್ನು ಆ ಉತ್ತರಗಳನ್ನು ಕೊಟ್ಟ ವ್ಯಕ್ತಿಗಳ ವಿದ್ಯಾರ್ಹತೆಯ ಆಧಾರದ ಮೇಲೆ ವಿಶ್ಲೇಷಿಸಲಾಯಿತು. ಇದರಿಂದ ಕೂರ್ಗಳ್ಳಿಯ ನಿವಾಸಿಗಳು ಕಾಮನಕೊಪ್ಪಲಿನ ನಿವಾಸಿಗಳಿಗಿಂತ ಹೆಚ್ಚಾಗಿ ಶಿಕ್ಷಣದಲ್ಲಿ ಆಸಕ್ತಿ ಹೊಂದಿದ್ದ ಅಂಶ ಕಂಡುಬಂತು. ಇದಕ್ಕೆ ಕೂರ್ಗಳ್ಳಿಯ ಜನರ ಸಾಮಾಜಿಕ ಹಾಗೂ ಆರ್ಥಿಕ ಪರಿಸ್ಥಿತಿಗಳು ಸ್ವಲ್ಪ ಉತ್ತಮವಾಗಿರುವುದೂ ಮೈಸೂರು ನಗರಕ್ಕೆ ಈ ಹಳ್ಳಿ ಸಮೀಪದಲ್ಲಿರುವುದೂ ಕಾರಣವಾಗಿದೆಯೆಂದು ನಂಬಲಾಯಿತು. ಕಾಮನಕೊಪ್ಪಲಿನಲ್ಲಿ ಇಂಥ ಅನುಕೂಲಗಳಿಲ್ಲದ್ದರಿಂದ ಶಿಕ್ಷಣದಲ್ಲಿ ಅಲ್ಲಿಯ ಜನ ಹೆಚ್ಚು ಶ್ರದ್ಧೆ ವಹಿಸುವುದಕ್ಕೆ ಅವಕಾಶ ವಿರಲಿಲ್ಲ. ಶಿಕ್ಷಕನಾದವನು ಎಲ್ಲರನ್ನೂ ಒಂದೇ ಸಮನಾಗಿ ಕಾಣಬೇಕೆಂಬುದಾಗಿ ಕಾಮನಕೊಪ್ಪಲಿನ ನಿವಾಸಿಗಳು ಹೆಚ್ಚಾಗಿ ಹೇಳಿದರು. ಶಿಕ್ಷಕನಾದವನು ಸರಿಯಾಗಿ ಪಾಠವನ್ನು ಹೇಳಿಕೊಡಬೇಕೆಂಬುದಾಗಿ ಕೂರ್ಗಳ್ಳಿಯ ನಿವಾಸಿಗಳು ಸೂಚಿಸಿದರು. ಇತರ ಸೂಚನೆಗಳನ್ನು ಕೆಲವರು ನೀಡಿದರು. ಜನರ ವಿದ್ಯಾಭ್ಯಾಸದ ಮಟ್ಟಕ್ಕೂ ಅವರು ನೀಡಿದ ಸೂಚನೆಗಳಿಗೂ ಗಮನಾರ್ಹವಾದ ಸಂಬಂಧವಿರಲಿಲ್ಲ.

ಸರ್ಕಾರ

ಕೂರ್ಗಳ್ಳಿ ಮತ್ತು ಕಾಮನಕೊಪ್ಪಲಿನ ನಿವಾಸಿಗಳ ಅಭಿಪ್ರಾಯದಂತೆ, ಆದರ್ಶ ಸರ್ಕಾರ ಎಲ್ಲರನ್ನೂ ಒಂದೇ ಸಮನಾಗಿ ನೋಡಿಕೊಳ್ಳಬೇಕು, ನ್ಯಾಯಕ್ಕೆ ಅವಕಾಶ ಕೊಡಬೇಕು ಮತ್ತು ಜನರಿಗೆ ಸಹಾಯ ಮಾಡಬೇಕು. ಕೂರ್ಗಳ್ಳಿಯಲ್ಲಿ ಶೇ. 62 ಜನರೂ ಕಾಮನಕೊಪ್ಪಲಿನಲ್ಲಿ ಶೇ. 55 ಜನರೂ ಈ ಅಂಶಕ್ಕೆ ಸಂಬಂಧಿಸಿದಂತೆ ಉತ್ತರ ಕೊಡಲಿಲ್ಲ. ತಮಗೆ ಇದರ ವಿಚಾರವಾಗಿ ತಿಳಿವಳಿಕೆ ಇಲ್ಲವೆಂದೇ ಇವರು ಹೇಳಿದರು. ಸರ್ಕಾರ ಎಲ್ಲರನ್ನೂ ಒಂದೇ ಸಮನಾಗಿ ನೋಡಿಕೊಳ್ಳಬೇಕೆಂಬ ಮೌಲ್ಯವನ್ನು ಕಾಮನಕೊಪ್ಪಲಿನ ನಿವಾಸಿಗಳಿಗಿಂತ ಕೂರ್ಗಳ್ಳಿಯ ನಿವಾಸಿಗಳು ಮುಖ್ಯವೆಂದು ಎಣಿಸಿದರು. ಇದರಂತೆಯೇ ಕಾಮನಕೊಪ್ಪಲಿನ ನಿವಾಸಿಗಳು ಕೂರ್ಗಳ್ಳಿಯವರಿಗಿಂತ ಹೆಚ್ಚಾಗಿ ಮಾದರಿಯ ಸರ್ಕಾರದಿಂದ ಸಹಾಯವಾಗಬೇಕೆಂದು ಅಪೇಕ್ಷಿಸಿದರು. ಹೆಂಗಸರು ಈ ವಿಚಾರವಾಗಿ ಅಭಿಪ್ರಾಯ ಕೊಡುವುದಕ್ಕೆ ಅಸಮರ್ಥರಾಗಿದ್ದರು. ಕೂರ್ಗಳ್ಳಿಯ ಶೇಕಡ ಸುಮಾರು 35 ಜನ ಹೆಂಗಸರು ಆದರ್ಶ ಸರ್ಕಾರದ ವಿಚಾರವಾಗಿ ತಮಗೆ ಏನೂ ತಿಳಿದಿಲ್ಲವೆಂದು ಒಪ್ಪಿಕೊಂಡರು. ಉಳಿದ ಹೆಂಗಸರಲ್ಲಿ ಕೆಲವರು ಆದರ್ಶ ಸರ್ಕಾರ ಎಲ್ಲರನ್ನೂ ಒಂದೇ ಸಮನಾಗಿ ನೋಡಿಕೊಳ್ಳಬೇಕೆಂದೂ ಇನ್ನು ಕೆಲವರು ಅದು ಎಲ್ಲ ವಿಧದ ಸಹಾಯವನ್ನೂ ಮಾಡಬೇಕೆಂದೂ ಹೇಳಿದರು. ಆದರ್ಶ ಸರ್ಕಾರ ಎಲ್ಲರನ್ನೂ ಒಂದೇ ಸಮನಾಗಿ ನೋಡಿಕೊಳ್ಳಬೇಕೆಂದು ಹೇಳುತ್ತಿದ್ದವರು ಸಾಮಾನ್ಯವಾಗಿ 36–45ರ ವಯೋಮಿತಿಯಲ್ಲಿದ್ದರು. ಕೂರ್ಗಳ್ಳಿಯ ಹೆಂಗಸರೂ ಕಾಮನಕೊಪ್ಪಲಿನ 26–35ರ ವಯೋಮಿತಿಯ ಗಂಡಸರೂ ಆದರ್ಶ ಸರ್ಕಾರ ಎಲ್ಲ ಸಹಾಯಗಳನ್ನೂ ಜನರಿಗೆ ಕೊಡಬೇಕೆಂದು ಇಚ್ಛಿಸಿದರು. ಇದರಿಂದ ತಿಳಿದುಬರುವುದೇನೆಂದರೆ ಮಧ್ಯವಯಸ್ಸಿನವರು ಸಾಮಾನ್ಯವಾಗಿ ಸರ್ಕಾರದಿಂದ ನ್ಯಾಯದ ವರ್ತನೆಯನ್ನು ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದವರು ಮತ್ತು ನಿಶ್ಶಕ್ತರು ಸರ್ಕಾರದಿಂದ ಎಲ್ಲ ಬಗೆಯ ಸಹಾಯಗಳನ್ನು ಅಪೇಕ್ಷಿಸುತ್ತಾರೆಂಬ ಅಂಶ ವ್ಯಕ್ತವಾಯಿತು.

ರಾಜಕೀಯ ಗುಂಪುಗಳಲ್ಲಿ

ಕೂರ್ಗಳ್ಳಿಯ ನಿವಾಸಿಗಳು ಒಂದಕ್ಕಿಂತ ಹೆಚ್ಚಾಗಿ ರಾಜಕೀಯ ಗುಂಪುಗಳು ಇರಬಾರದೆಂದೂ, ರಾಜಕೀಯ ಪಕ್ಷಗಳು ಪರಸ್ಪರ ಹೋರಾಡಬಾರದೆಂದೂ ಸೂಚಿಸಿದರು. ಕಾಮನಕೊಪ್ಪಲಿನ ನಿವಾಸಿಗಳು

ರಾಜಕೀಯ ಪಕ್ಷಗಳು ಜನರಿಗೆ ಸಹಾಯ ಮಾಡಬೇಕೆಂದೂ, ಸಹಕಾರದಿಂದ ವರ್ತಿಸಬೇಕೆಂದೂ, ಜನರಿಗೆ ಮಾದರಿಯಾಗಿ ನಡೆದುಕೊಳ್ಳಬೇಕೆಂದೂ ತಿಳಿಸಿದರು. ದೇಶ ಹಾಳಾಗುತ್ತಿದೆಯೆಂದು ಭಾವಿಸಿದ ಕೂರ್ಗಳ್ಳಿಯ ನಿವಾಸಿಗಳು ಒಂದಕ್ಕಿಂತ ಹೆಚ್ಚು ರಾಜಕೀಯ ಗುಂಪುಗಳಿರಬಾರದೆಂದು ಹಾಗೂ ಪರಸ್ಪರ ಜಗಳ ಮಾಡಬಾರದೆಂದು ಹೇಳಿದರು. ರಾಜಕೀಯ ಪಕ್ಷಗಳು ಜನರಿಗೆ ಸಹಾಯವನ್ನು ಮಾಡಬೇಕೆಂದು ಮತ್ತು ಅವು ಸಹಕರಿಸಿ ನಡೆದುಕೊಳ್ಳಬೇಕೆಂದು ಹೇಳುತ್ತಿದ್ದ ಕಾಮನಕೊಪ್ಪಲಿನವರಲ್ಲಿ ಅನೇಕ ಜನರು ದೇಶದ ಪರಿಸ್ಥಿತಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲವೆಂದು ಹೇಳುವವರಾಗಿದ್ದರು. ದೇಶದ ಪ್ರಗತಿಯಲ್ಲಿ ಯಾವ ಸುಧಾರಣೆಯೂ ಆಗಿಲ್ಲವೆಂದು ಮತ್ತು ಪ್ರಗತಿಗೆ ಬದಲಾಗಿ ಪರಿಸ್ಥಿತಿ ಇಳಿಮುಖವಾಗಿದೆಯೆಂದು, ರಾಜಕೀಯ ಪಕ್ಷಗಳು ಮಾದರಿಯಾಗಿರಬೇಕೆಂದು ಹೇಳುವ ವ್ಯಕ್ತಿಗಳು ಎರಡು ಗುಂಪುಗಳಲ್ಲಿ ಸಮಸಂಖ್ಯೆಯಲ್ಲಿದ್ದರು. ಉತ್ತರವನ್ನು ಕೊಡದ ವ್ಯಕ್ತಿಗಳ ಸಂಖ್ಯೆಯೂ ಕಡಿಮೆ.

ಬೇಸಾಯಗಾರರಲ್ಲಿ

ಸಾಮಾನ್ಯವಾಗಿ ಎಲ್ಲರಿಗೂ ಸಂಬಂಧಿಸಿದ ವಿಷಯಗಳನ್ನು ಬಿಟ್ಟರೆ, ಹಳ್ಳಿಯ ನಿವಾಸಿಗಳಿಗೆ ವಿಶೇಷವಾಗಿ ಸಂಬಂಧಿಸಿದ ವ್ಯವಸಾಯದ ವಿಚಾರವಾಗಿ ಪ್ರಶ್ನೆಗಳನ್ನು ಹಾಕಿದಾಗ ಉತ್ತರಗಳನ್ನು ಕೊಟ್ಟವರ ಸಂಖ್ಯೆ ಹೆಚ್ಚಾಗಿತ್ತು. ಆದರೂ ಕಾಮನಕೊಪ್ಪಲಿನಲ್ಲಿ ಉತ್ತರವನ್ನು ಕೊಡದವರ ಸಂಖ್ಯೆ ಕೂರ್ಗಳ್ಳಿಯಲ್ಲಿ ಕೊಡದವರಕ್ಕಿಂತ ಹೆಚ್ಚಾಗಿತ್ತು. ಈ ಹಳ್ಳಿಗಳ ನಿವಾಸಿಗಳಿಗಿದ್ದ ಜಮೀನಿನ ವಿಸ್ತಾರದ ಆಧಾರದ ಮೇಲೆ ಅವರು ಕೊಟ್ಟ ಉತ್ತರಗಳನ್ನು ವಿಶ್ಲೇಷಿಸಲಾಯಿತು. ಬೇಸಾಯಗಾರರು ಕಷ್ಟಪಟ್ಟು ಕೆಲಸಮಾಡಬೇಕೆಂಬುದಾಗಿ ಎರಡು ಹಳ್ಳಿಗಳ ನಿವಾಸಿಗಳೂ ಹೇಳಿದರು. ಇದರ ಜೊತೆಗೆ, ತಮಗಿರುವ ಜಮೀನನ್ನು ಸಂಪೂರ್ಣವಾಗಿ ಬೇಸಾಯಮಾಡಬೇಕೆಂಬುದಾಗಿಯೂ ಹೇಳಿದರು. ಹಳ್ಳಿಯ ಕೆಲವು ಪ್ರಮುಖ ವ್ಯಕ್ತಿಗಳನ್ನು ಸಂದರ್ಶಿಸಿದಾಗ, ರೈತನಾದವನು ಮುಂಜಾನೆಯೇ ಎದ್ದು ತನ್ನ ಹೊಲಗದ್ದೆಗಳಲ್ಲಿ ಕೆಲಸಮಾಡಬೇಕು, ಕಷ್ಟದ ಕೆಲಸಕ್ಕೆ ಅನುಕೂಲವಾದ ರಾಗಿಮುದ್ದೆಯನ್ನು ಅವನು ತಿನ್ನಬೇಕು, ಅವನು ಕಾಫಿ, ಟೀ ಮೊದಲಾದ ಪಾನೀಯಗಳನ್ನು ತ್ಯಜಿಸಬೇಕು, ಅವನು ಪಟ್ಟಣಗಳಲ್ಲಿ ನಾಟಕ, ಚಲನಚಿತ್ರ ಮುಂತಾದವುಗಳನ್ನು ನೋಡಬಾರದು ಎಂಬುದಾಗಿ ಹೇಳಿದರು. ರೈತ ಹೊಂದಿರುವ ಜಮೀನಿನ ವಿಸ್ತಾರ ಹೆಚ್ಚಿದಷ್ಟೂ ಅವನು ಕಷ್ಟದ ಕೆಲಸಕ್ಕೆ ನೀಡುತ್ತಿದ್ದ ಪ್ರಾಮುಖ್ಯ ಹೆಚ್ಚಾಗಿದ್ದ ಅಂಶ ಕಂಡುಬಂತು.

ಧಾನ್ಯ ವಿಕ್ರಯದಾರರಲ್ಲಿ

ಧಾನ್ಯ ವಿಕ್ರಯದಾರರಿಗೆ ಇರಬೇಕಾದ ಮೌಲ್ಯಗಳನ್ನು ತಿಳಿಸಬೇಕೆಂದು ಕೇಳಿದಾಗ, ಎರಡು ಹಳ್ಳಿಯವರೂ ಅವರು ಅಳತೆಯಲ್ಲಿ ಮೋಸಮಾಡಬಾರದೆಂದು ಹೇಳಿದರು. ಇದರ ಜೊತೆಗೆ, ವ್ಯಾಪಾರಗಾರರು ಪದಾರ್ಥಗಳಿಗೆ ಸರಿಯಾದ ಬೆಲೆ ಕೊಡಬೇಕು, ಅವರು ಹಣವನ್ನು ಗೊತ್ತಾದ ಕಾಲಕ್ಕೆ ಸರಿಯಾಗಿ ಕೊಡಬೇಕು. ಇಂಥ ವ್ಯವಹಾರದಲ್ಲಿ ಹೆಚ್ಚು ಲಾಭ ಸಂಪಾದಿಸುವುದಕ್ಕೆ ಪ್ರಯತ್ನಿಸಬಾರದು ಎಂದು ಹೇಳಿದರು. ಆದರೆ ಈ ಅಂಶಕ್ಕೆ ಸಂಬಂಧಿಸಿದ ಪ್ರಶ್ನೆಗೆ ಉತ್ತರವನ್ನು ಕೊಡದೆ ಇದ್ದ ವ್ಯಕ್ತಿಗಳ ಸಂಖ್ಯೆ ಶೇ. ಸು. 80ರಷ್ಟಿತ್ತು. ಹಳ್ಳಿಯವರಲ್ಲಿ ಅನೇಕರಿಗೆ ಸಾಕಾದಷ್ಟು ದವಸದ ಉತ್ಪಾದನೆಯ ಅಭಾವವಿರುವುದೂ, ಕೆಲವರಿಗೆ ಹೆಚ್ಚಾದ ಉತ್ಪಾದನೆ ದೊರೆತರೂ ಅವರು ದವಸವನ್ನು ಮಾರುವುದಕ್ಕಾಗಿ ಹೋಗದೆ ಇರುವುದೂ ವಿಕ್ರಯದಾರರ ವಿಚಾರವಾಗಿ ಅವರಿಗಿರುವ ಅಜ್ಞಾನಕ್ಕೆ ಅಥವಾ ಅವರು ಈ ಪ್ರಶ್ನೆಗೆ ಉತ್ತರವನ್ನು ಕೊಡುವುದಕ್ಕೆ ಇಷ್ಟಪಡದೆ ಇದ್ದುದಕ್ಕೆ ಕಾರಣವೆಂದು ಹೇಳಬಹುದು. ವಿಕ್ರಯದಾರರು ರೈತರನ್ನು ಮೋಸಗೊಳಿಸಬಾರದೆಂದು ಹೇಳುತ್ತಿದ್ದ ವ್ಯಕ್ತಿಗಳು ಹೆಚ್ಚಾಗಿ ಕೂರ್ಗಳ್ಳಿಯಲ್ಲಿ 3ರಿಂದ 4 ಎಕರೆ ಜಮೀನನ್ನು ಹೊಂದಿದವರಾಗಿದ್ದರು. ಕಾಮನಕೊಪ್ಪಲಿನಲ್ಲಿ ಈ ಉತ್ತರವನ್ನು ಕೊಟ್ಟ ವ್ಯಕ್ತಿಗಳು ಹೆಚ್ಚಾಗಿ ಒಂದು ಎಕರೆಗಿಂತ ಕಡಿಮೆಯ ಅಥವಾ 11ರಿಂದ ಹಿಡಿದು 14 ಎಕರೆಗಳ ಜಮೀನನ್ನು ಹೊಂದಿದ್ದವರಾಗಿದ್ದರು.

ಧಾನ್ಯಗಳ ಬಳಕೆದಾರರಲ್ಲಿ

ಧಾನ್ಯಗಳನ್ನು ಬಳಸುವ ವ್ಯಕ್ತಿಗಳಲ್ಲೂ ಮೇಲೆ ಹೇಳಿದ ಮೌಲ್ಯಗಳೇ ಇರಬೇಕೆಂಬುದಾಗಿ ಹಳ್ಳಿಗರ ಭಾವನೆಯಾಗಿತ್ತು. ಸೇ. ಸುಮಾರು 30 ಜನರಿಗೆ ಈ ಪ್ರಶ್ನೆಗೆ ಉತ್ತರ ಕೊಡುವುದು ಕಷ್ಟವೆನಿಸಿತು. ದವಸವನ್ನು ರೈತರಿಂದ ತೆಗೆದುಕೊಳ್ಳುವಾಗ ಜನರು ಮೋಸಮಾಡಬಾರದೆಂದು ಎರಡು ಹಳ್ಳಿಯವರೂ ಹೇಳಿದರು. ಕೂರ್ಗಳ್ಳಿಯಲ್ಲಿ ಈ ರೀತಿಯ ಸಲಹೆಯನ್ನು ಕೊಟ್ಟವರು ಹೆಚ್ಚಾಗಿ 3 ಅಥವಾ 4 ಎಕರೆಗಳ ಜಮೀನನ್ನು ಹೊಂದಿದ್ದವರು. ಕಾಮನಕೊಪ್ಪಲಿನಲ್ಲಿ ಇಂಥ ವ್ಯಕ್ತಿಗಳಿಗೆ ಒಂದು ಎಕರೆಗಿಂತ ಕಡಿಮೆಯ ವಿಸ್ತೀರ್ಣದ ಅಥವಾ 13–14 ಎಕರೆಗಳ ವಿಸ್ತೀರ್ಣದ ಜಮೀನಿತ್ತು. ಈ ಪ್ರಶ್ನೆಗೆ ಸಂಬಂಧಿಸಿದಂತೆ ಬಂದ ಉತ್ತರಗಳನ್ನು ವಿಶ್ಲೇಷಿಸಿದಾಗ ಅಲ್ಪ ಪ್ರಮಾಣದಲ್ಲಿ ಜಮೀನನ್ನು ಹೊಂದಿದ್ದವರಿಗೆ ಈ ಸಮಸ್ಯೆ ಇತ್ತೆಂಬ ಅಂಶ ವ್ಯಕ್ತವಾಯಿತು.

ಟಿ. ಕೆ. ವಾಸುದೇವ ಭಟ್

ಗ್ರಾಮೀಣ ಕೃಷಿ ಕೆಲಸಗಾರರ ಸಮಸ್ಯೆಗಳು

ಗ್ರಾಮೀಣ ಕೆಲಸಗಾರರದು ಒಂದು ಬೃಹತ್ ಸಮಸ್ಯೆ. ಇದರ ಪರಿಹಾರ ತುಂಬ ಕಷ್ಟಸಾಧ್ಯ. ಗ್ರಾಮೀಣ ಕೆಲಸಗಾರರ ಸಂಖ್ಯೆ ಇತರ ಔದ್ಯೋಗಿಕ ಗುಂಪುಗಳವಕ್ಕಿಂತಲೂ ಅಧಿಕವಾಗಿದೆ. ಇದಕ್ಕೆ ಕಾರಣವೇನು ಮತ್ತು ಇವನ್ನು ಹೇಗೆ ಪರಿಹರಿಸಬಹುದೆಂಬುದೇ ಈ ಪ್ರಬಂಧದ ವಿಷಯ. ಈ ಸಮಸ್ಯೆಯನ್ನು ವಿಶದಪಡಿಸಲು ಮತ್ತು ಇದರ ಗುಣಲಕ್ಷಣಗಳನ್ನು ಬೇರ್ಪಡಿಸಿ ತೋರಿಸಲು ಬೇಕಾದ ಅನುಭವವನ್ನು ನಾನು ಈ ಮುಂಚೆ ಸಾಮಾಜಿಕ ಅವಲೋಕನಕ್ಕೋಸ್ಕರ ಆರಿಸಿಕೊಂಡ ಮೈಸೂರು ರಾಜ್ಯದ ಎರಡು ಹಳ್ಳಿಗಳಿಂದ ತೆಗೆದುಕೊಂಡಿದ್ದೇನೆ. ಗ್ರಾಮೀಣ ಕೆಲಸಗಾರರೆಂದರೆ ಒಡೆತನದ ಅಥವಾ ಗೇಣಿಗೆ ಪಡೆದುಕೊಂಡ ಭೂಮಿ ಇಲ್ಲದೆ ಸಣ್ಣ ಮನೆಗಳಲ್ಲಿ ಬೇರೆಯವರ ಒಕ್ಕಲಾಗಿ ಇದ್ದು ದೈನಂದಿನ ವೇತನಕ್ಕೆ ಊರಿನ ವ್ಯವಸಾಯದ ಮತ್ತು ಇತರ ಕೆಲಸಗಳನ್ನು ಮಾಡಿಕೊಂಡು ಜೀವನ ಮಾಡುವವರು. ಇಂಥವರ ಸಂಖ್ಯೆ ಪ್ರತಿಗ್ರಾಮದಲ್ಲೂ ಅತ್ಯಧಿಕ ಪ್ರಮಾಣದಲ್ಲಿದೆ. ಇವರ ಒಟ್ಟು ಜನಸಂಖ್ಯೆ ಪ್ರತಿವರ್ಷ ದೊಡ್ಡ ಪ್ರಮಾಣದಲ್ಲಿ ಏರುತ್ತಿದೆ. ಆದ್ದರಿಂದಲೇ ಗ್ರಾಮೀಣ ಕೆಲಸಗಾರರ ಸಮಸ್ಯೆ ತುಂಬ ಜಟಿಲವಾದ್ದು. ಇವರು ಹೆಚ್ಚಾಗಿ ಅದೇ ಊರಿನಲ್ಲಿ ಹುಟ್ಟಿ ಬೆಳೆದವರು ಅಥವಾ ಆ ಊರಿನ ಬಂಧುಬಳಗಕ್ಕೆ ಸೇರಿದವರು; ಕೆಲವು ವೈಯಕ್ತಿಕ, ಸಾಮಾಜಿಕ ಮತ್ತು ಆರ್ಥಿಕ ಕಾರಣಗಳಿಂದಾಗಿ ಊರನ್ನು ಬಿಡಲು ಸಾಧ್ಯವಾಗದವರು. ಹಳ್ಳಿಯ ಸಣ್ಣ ವ್ಯವಸಾಯಗಾರರಿಗೂ ಇವರಿಗೂ ಕೆಲವು ಗಣನೀಯ ವ್ಯತ್ಯಾಸಗಳಿವೆ. ಸಣ್ಣ ಹಿಡುವಳಿದಾರರು ಒಕ್ಕಲುತನ ಮಾಡಿ ಧನಿಯ ಪಾಲನ್ನು ಕೊಟ್ಟು ಮರ್ಯಾದೆಯಿಂದ ಜೀವನ ಮಾಡಬೇಕಾದರೆ ತುಂಬ ಪರಿಶ್ರಮ ಮತ್ತು ಬುದ್ಧಿಸಾಮರ್ಥ್ಯ ಅತ್ಯಗತ್ಯ. ಸಣ್ಣ ಪ್ರಮಾಣದಲ್ಲಿ ಒಕ್ಕಲುತನ ಮಾಡುವವರಲ್ಲಿ ಕಷ್ಟನಷ್ಟಗಳನ್ನನುಭವಿಸುವವರೇ ಹೆಚ್ಚಾಗಿ ಇದ್ದಾರೆ. ಅವರಿಗೂ ಭೂಮಿ ಇಲ್ಲದ ಬೇಸಾಯ ಕೆಲಸಗಾರರಿಗೂ ಜೀವನಕ್ರಮದಲ್ಲಿಯೂ ತಿನ್ನುವ ಉಡುವ ಸಾಮಗ್ರಿಗಳಲ್ಲಿಯೂ ಹೆಚ್ಚು ವ್ಯತ್ಯಾಸವಿಲ್ಲ. ಆದರೆ ಸಮಾಜ ಕೊಡುವ ಸ್ಥಾನಮಾನದಲ್ಲಿ ಮಾತ್ರ ಸಣ್ಣ ಹಿಡುವಳಿಯಲ್ಲಿ ಗೇಣಿ ವ್ಯವಸಾಯದಲ್ಲಿ ಸ್ವೋತ ಭೂ ಒಡೆಯನಿಗೂ ಯಾವ ರೀತಿಯ ಭೂಮಿಯೂ ಇಲ್ಲದ ದಿನಗೂಲಿಗೂ ತುಂಬ ವ್ಯತ್ಯಾಸವಿದೆ. ಭೂಮಿಯ ಒಡೆತನವೊಂದೇ ಸಮಾಜದಲ್ಲಿ ಸಾಕಷ್ಟು ಸ್ಥಾನಮಾನವನ್ನು ಒದಗಿಸುವುದರಿಂದ ಸಣ್ಣ ಹಿಡುವಳಿದಾರರು ಉತ್ಪತ್ತಿಯನ್ನು ಅಷ್ಟಾಗಿ ಗಣನೆಗೆ ತರುವುದಿಲ್ಲ. ಪ್ರಾಯಶಃ ಹೀಗೆ ಆದ್ದರಿಂದಲೇ ವ್ಯವಸಾಯದಲ್ಲಿ ಸ್ಪರ್ಧೆ ಏರ್ಪಡಲಿಲ್ಲ ಮತ್ತು ಉತ್ಪತ್ತಿ ಹೆಚ್ಚಾಗಲು ಬೇಕಾದ ಸಾಮಾಜಿಕ ವಾತಾವರಣ ಸಿಗಲಿಲ್ಲ.

ಭೂಮಿ ಇಲ್ಲದ ಗ್ರಾಮೀಣ ಕೆಲಸಗಾರರ ಮುಖ್ಯ ಸಮಸ್ಯೆಗಳು ಯಾವುವೆಂದು ನೋಡುವಾಗ ಮುಖ್ಯವಾಗಿ ತೋರಿಬರುವುವು ಈ ರೀತಿ ಇವೆ: ಒಂದನೆಯದಾಗಿ ಕೆಲಸದ ಅನಿಶ್ಚಿತತೆ ಮತ್ತು ಕೆಲಸಕ್ಕಾಗಿ ಬೇರೆಬೇರೆ ಕಡೆಗೆ ಗೊತ್ತುಗುರಿ ಇಲ್ಲದೆ ಅಲೆಯುವುದು. ಕೆಲಸವನ್ನು ಮತ್ತು ಕೆಲಸಮಾಡುವ ಸಮಯವನ್ನು ಸರಿಯಾಗಿ ರೂಪಿಸಲಾಗದಿದ್ದಾಗ ಕೆಲಸಮಾಡುವವರಿಗೂ ಕೆಲಸ ಕೊಡುವವರಿಗೂ ಬರುವ ಬಿಕ್ಕಟ್ಟಿನ ಪ್ರಸಂಗಗಳು. ಅಂದರೆ ಗ್ರಾಮದ ಆರ್ಥಿಕ ವ್ಯವಸ್ಥೆಯಲ್ಲಿ ಭೂಮಿ ಇಲ್ಲದ ಗ್ರಾಮೀಣ ಕೆಲಸಗಾರನ ಸ್ಥಾನ ಭದ್ರವಾಗಿಲ್ಲ. ಇದರಿಂದಾಗಿ ಹುಟ್ಟಿಬಂದ ಅವ್ಯವಸ್ಥೆ ಗ್ರಾಮದ ವ್ಯವಸಾಯದ

ದುರವಸ್ಥೆಗೆ ಮುಖ್ಯಕಾರಣ. ಕೆಲವು ಗ್ರಾಮಗಳಲ್ಲಿ ಅಲ್ಲಿಯ ಭೂಮಿಯು ಸಾಗುವಳಿಗೆ ಬೇಕಾದ್ದಕ್ಕಿಂತ ತುಂಬ ಹೆಚ್ಚು ಮಂದಿ ದಿನಗೂಲಿಗಳು ಇರುವುದರಿಂದ ವೇತನ ಕಡಿಮೆ ಆಗಿ ಕೆಲಸಗಾರರಲ್ಲಿ ಅತೃಪ್ತಿ ಹುಟ್ಟಿದೆ. ಈ ಅತೃಪ್ತಿ ಅವರ ಕೆಲಸದಿಂದ ಸಿಗಬಹುದಾದ ಪ್ರತಿಫಲವನ್ನು ಕಡಿಮೆಮಾಡಿ ವ್ಯವಸಾಯದ ಉತ್ಪತ್ತಿಯನ್ನು ಕೆಳಗಿಳಿಸಿದೆ. ಇನ್ನು ಕೆಲವು ಪ್ರದೇಶಗಳಲ್ಲಿ ವ್ಯವಸಾಯದೊಂದಿಗೆ ಬೇರೆ ಉಪವೃತ್ತಿ ಇದ್ದರೆ ಅಥವಾ ನಗರ ಮತ್ತು ಕಾರ್ಖಾನೆಗಳಲ್ಲಿ ಕೆಲಸ ಸಿಗಬಹುದಾದರೆ ವ್ಯವಸಾಯದ ಕೆಲಸಕ್ಕೆ ಬೇಕಾದ ಕೆಲಸಗಾರರ ಸರಬರಾಯಿ ಆಗದೆ ಅಲ್ಲಿ ಉತ್ಪತ್ತಿ ಕಡಿಮೆಯಾಗಿದೆ.

ಗ್ರಾಮೀಣ ಕೆಲಸಗಾರರ ಆರ್ಥಿಕ ಸಮಸ್ಯೆಯನ್ನು ಭೂಮಿ ಇಲ್ಲದ ಸಮಸ್ಯೆ ಎಂದು ವಿವರಿಸುವುದು ಈಗ ರೂಢಿಯಲ್ಲಿದೆ. ಈಗ ಊರಲ್ಲಿರುವ ಕೆಲಸಗಾರರೆಲ್ಲರಿಗೂ ಭೂಮಿಯು ವಿತರಣೆ ಮಾಡಿ ಅವರ ಆರ್ಥಿಕ ಸಮಸ್ಯೆಗಳನ್ನು ಪರಿಹರಿಸಬಹುದೆಂಬುದು ಸುಳ್ಳು ಮಾತು. ಕಾರಣವೇನೆಂದರೆ ಒಂದನೆಯದಾಗಿ ಹಳ್ಳಿಯಲ್ಲಿರುವ ಎಲ್ಲ ಕೆಲಸಗಾರರಿಗೆ ಜೀವನಕ್ಕೆ ಸಾಕಷ್ಟು ಭೂಮಿಯನ್ನು ಒದಗಿಸಲು ಈಗ ಇರುವ ಭೂಮಿ ಸಾಕಾಗದು. ಎರಡನೆಯದಾಗಿ ಆ ರೀತಿ ಬರಿಯ ಭೂಮಿಯ ವಿತರಣೆಯಿಂದ ಎಕರೆ ಒಂದರ ಸರಾಸರಿ ಉತ್ಪತ್ತಿಯನ್ನಾಗಲಿ ವ್ಯಕ್ತಿಯ ಸರಾಸರಿ ಉತ್ಪತ್ತಿಯನ್ನಾಗಲಿ ಹೆಚ್ಚು ಮಾಡಲು ಸಾಧ್ಯವಿಲ್ಲ. ಇದಕ್ಕೆ ಮುಖ್ಯ ಕಾರಣ, ನಮ್ಮ ರೈತರಲ್ಲಾಗಲಿ ಗ್ರಾಮೀಣ ಕೆಲಸಗಾರರಲ್ಲಾಗಲಿ ಆಧುನಿಕ ವ್ಯವಸಾಯದ ಜ್ಞಾನ ಇಲ್ಲದಿರುವುದು. ಅದಕ್ಕೆ ಬೇಕಾದ ಬಂಡವಾಳ ಮತ್ತು ಅಪಳಿತ ಕೂಡ ಸಿಗುವುದು ತುಂಬ ಕಷ್ಟ. ಆದ್ದರಿಂದ ವ್ಯವಸಾಯಮಾಡಬಹುದಾದ ಶುಷ್ಕ ಭೂಮಿಗಳನ್ನು ವ್ಯವಸಾಯ ಮಾಡಬಲ್ಲ ಕೆಲಸಗಾರರಿಗೆ ವಿತರಣೆ ಮಾಡುವುದರೊಂದಿಗೆ ಗ್ರಾಮೀಣ ಕೆಲಸಗಾರರ ವ್ಯಾವಸಾಯಿಕ ಉತ್ಪತ್ತಿಶಕ್ತಿಯನ್ನು ಹೆಚ್ಚಿಸಲು ಬೇಕಾದ ಶೈಕ್ಷಣಿಕ ಕಾರ್ಯಗಳನ್ನು ಜಾರಿಗೆ ತರುವುದು ತೀರ ಅಗತ್ಯವಾಗಿದೆ. ನಮ್ಮ ಇಂದಿನ ಗ್ರಾಮೀಣ ಕೆಲಸಗಾರರಿಗೆ ಸಂಬಂಧಪಟ್ಟ ಅಂಕಿ ಅಂಶಗಳು ಅವರ ಸಮಸ್ಯೆಗಳನ್ನು ಪರಿಹರಿಸಲು ಬೇಕಾದ ಪ್ರಚೋದನೆಯನ್ನು ನೀಡುವುದಿಲ್ಲ. ಕಾರಣವೆಂದರೆ ಸರ್ಕಾರವಾಗಲಿ ವಿದ್ಯಾಸಂಸ್ಥೆಗಳಾಗಲಿ ಗ್ರಾಮೀಣ ಕಾರ್ಮಿಕರ ಸಮಸ್ಯೆಗಳನ್ನು ಆಳವಾಗಿ ಯೋಚಿಸುವ ಗೋಜಿಗೆ ಈ ತನಕ ಹೋಗಿಲ್ಲ. ವಿದ್ಯಾವಂತರ ಮತ್ತು ಕಾರ್ಖಾನೆಯ ಕಾರ್ಮಿಕರ ಸಮಸ್ಯೆಗಳು ರಾಜಕೀಯ ದೃಷ್ಟಿಯಲ್ಲಿ ಹೆಚ್ಚು ಮಹತ್ತ್ವದವಾದ್ದರಿಂದ ಸರ್ಕಾರದ ಗಮನ ಹಳ್ಳಿಯ ಕೆಲಸಗಾರರ ಕಡೆಗೆ ಹರಿದಿಲ್ಲ. ಆದರೆ ಔದ್ಯೋಗಿಕ ಕ್ರಾಂತಿ ದೇಶದಾದ್ಯಂತ ಹಬ್ಬಿದ್ದುದರಿಂದಲೂ ಹಳ್ಳಿಗಳ ಸಂಖ್ಯೆ ಅತ್ಯಧಿಕವಾಗಿರುವುದರಿಂದಲೂ ಹಳ್ಳಿಯ ಕಾರ್ಮಿಕರ ಆರ್ಥಿಕ ಸಮಸ್ಯೆಗಳ ಪರಿಹಾರವಾಗದೆ ದೇಶದ ಆರ್ಥಿಕ ಉನ್ನತಿ ಅಸಾಧ್ಯ.

ಗ್ರಾಮೀಣ ಕಾರ್ಮಿಕರ ಆರ್ಥಿಕ ಸಮಸ್ಯೆಗಳನ್ನು ಹೇಗೆ ಪರಿಹರಿಸಬಹುದೆಂಬುದಾಗಿ ಆಲೋಚಿಸುವಾಗ ಮೊದಲು ತೋರುವುದೇನೆಂದರೆ, ಈ ಸಮಸ್ಯೆಗೆ ಸಾಕಷ್ಟು ಪ್ರಾಧಾನ್ಯ ಕೊಡಬೇಕಾದ್ದು. ಪ್ರತಿ ಹಳ್ಳಿಯಲ್ಲೂ ಇರುವ ಗ್ರಾಮೀಣ ಕೆಲಸಗಾರರ ಆಯವ್ಯಯ, ಮಾಡುವ ಕೆಲಸದ ವಿವರ ಮತ್ತು ಮಾಡಬಹುದಾದ ಕೆಲಸಗಳ ವಿವರ ಅತಿ ಅಗತ್ಯವಾಗಿದೆ. ಬೇಸಾಯ ಕೆಲಸಗಾರರ ಸಂಘ ಮತ್ತು ಉದ್ಯೋಗ ವಿನಿಮಯ ಕೇಂದ್ರಗಳನ್ನು ಗ್ರಾಮ, ತಾಲ್ಲೂಕು, ಜಿಲ್ಲೆ ಮತ್ತು ರಾಜ್ಯಮಟ್ಟದಲ್ಲಿ ಏರ್ಪಡಿಸಬೇಕು. ಗ್ರಾಮೀಣ ಕಾರ್ಮಿಕರನ್ನು ಈ ಕಾರ್ಮಿಕ ಸಂಘಗಳ ಮೂಲಕ ಸಂಘಟಿಸಬೇಕು. ಈ ರೀತಿ ಸಂಘಟಿಸಿ ಮಾಡಬೇಕಾದ ಕೆಲಸವೇನೆಂದರೆ, ರಾಜ್ಯದ ಅಥವಾ ಹಳ್ಳಿಗಳ ಆರ್ಥಿಕ ವ್ಯವಸ್ಥೆಯಲ್ಲಿ ಅವರ ಸ್ಥಾನವನ್ನು ಸುಭದ್ರಗೊಳಿಸುವುದು. ಗ್ರಾಮೀಣ ಕಾರ್ಮಿಕರ ಸ್ಥಾನ ನಮ್ಮ ರಾಜ್ಯದ ಆರ್ಥಿಕ ವ್ಯವಸ್ಥೆಯಲ್ಲಿ ಸುಭದ್ರಗೊಳ್ಳಬೇಕಾದರೆ ಅವರ ದುಡಿಮೆ ಮೊದಲನೆಯದಾಗಿ ವ್ಯವಸಾಯದ ಅಭಿವೃದ್ಧಿಗೂ ಎರಡನೆಯದಾಗಿ ಇತರ ಗ್ರಾಮೀಣ ಉದ್ಯೋಗಗಳ ಅಭಿವೃದ್ಧಿಗೂ ಅತ್ಯಂತ ಆವಶ್ಯಕವಾದ ಘಟಕವೆಂಬುದರ ಪ್ರಜ್ಞೆ ಹಿಡುವಳಿದಾರರಲ್ಲಿ ಮತ್ತು ಇತರ ಜನರ ಮನಸ್ಸಿನಲ್ಲಿ ಮೂಡಬೇಕು. ಗ್ರಾಮೀಣ ಕಾರ್ಮಿಕರು ಕೂಡ ಭೂಮಿಯಲ್ಲಿ ಉತ್ಪತ್ತಿಯಾಗುವುದು ತಮ್ಮ ಗೈಮೆಯಿಂದ ಮಾತ್ರವಲ್ಲ, ಅದಕ್ಕೆ ಅಷ್ಟೇ ಅಗತ್ಯವಾದ ಇತರ ಘಟಕಗಳು ಕೂಡ ತಕ್ಕ ಪ್ರಮಾಣದಲ್ಲಿ ಸೇರುತ್ತವೆ ಎಂಬುದರ ತಿಳಿವಳಿಕೆಯನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಆದ್ದರಿಂದ ಆರ್ಥಿಕರಂಗದಲ್ಲಿರುವ ಬೇರೆಬೇರೆ ವರ್ಗಗಳೊಂದಿಗೆ ಕೊಟ್ಟು ತೆಗೆದುಕೊಳ್ಳುವ ತತ್ತ್ವವನ್ನವಲಂಬಿಸಿಕೊಂಡೇ ಕಾರ್ಮಿಕರು ತಮ್ಮ ಸಂಬಂಧವನ್ನು ಇತರ ಗುಂಪುಗಳೊಡನೆ ಬೆಳೆಸಬೇಕಾಗುತ್ತದೆ. ಗ್ರಾಮೀಣ ಕಾರ್ಮಿಕರ ಸಂಘಟನೆ ದೇಶದ

ಸಂಘಟನೆಯಲ್ಲಿ ಒಂದು ದೊಡ್ಡ ಹೆಜ್ಜೆ. ಗ್ರಾಮಸಮಾಜದಲ್ಲಿರುವ ಎಲ್ಲ ಕಾರ್ಮಿಕ ಮತ್ತು ಔದ್ಯೋಗಿಕ ಗುಂಪುಗಳ ಸಮರಸವಾದ ಬೆಳೆವಣಿಗೆ ಮತ್ತು ಸಂಘಟನೆಯಿಂದ ಮಾತ್ರ ಗ್ರಾಮಗಳ ಪುನರುಜ್ಜೀವನ ನಡೆಸಲು ಸಾಧ್ಯವಿದೆ. ಭೂಮಿ ಇಲ್ಲದ ಕಾರ್ಮಿಕರ ಸಂಘಟನೆಯ ಮುಖ್ಯ ಉದ್ದೇಶವೇನೆಂದು ಆಲೋಚಿಸುವುದು ಅತ್ಯಂತ ಅಗತ್ಯ. ಭೂಮಿ ಇಲ್ಲದ ಕಾರ್ಮಿಕರು ಈಗ ಹೆಚ್ಚಾಗಿ ದೈಹಿಕ ಶ್ರಮದಿಂದ ಮಾಡುವ ಕೆಲಸದಲ್ಲಿ ನಿರತರಾಗಿದ್ದಾರೆ. ಅವರಲ್ಲಿ ಹೆಚ್ಚಿನವರು ನಿರಕ್ಷರರು ಮತ್ತು ಯಾವ ಒಂದು ಉದ್ಯೋಗಕ್ಕೂ ಬೇಕಾದ ಮಾಹಿತಿ ಮತ್ತು ಅಭ್ಯಾಸ ಇಲ್ಲದವರು. ಇವರು ಹೆಚ್ಚಾಗಿ ಹಳ್ಳಿಯ ವ್ಯವಸಾಯದ ಕೆಲಸವನ್ನು ಮಾಡುತ್ತಾರೆ. ಹಳ್ಳಿಯ ವ್ಯವಸಾಯದಲ್ಲಿ ಇವರು ವಹಿಸುವ ಪಾತ್ರ ಪ್ರಮುಖವಾದುದು. ಇವರಿಲ್ಲದೆ ವ್ಯವಸಾಯ ನಡೆಯಲಿಕ್ಕಿಲ್ಲವೆಂದು ಹೇಳಿದರೂ ತಪ್ಪಾಗದು. ಆದ್ದರಿಂದ ಇವರ ಸ್ಥಿತಿಗತಿಯಲ್ಲಿ ಅಭಿವೃದ್ಧಿಯಾಗುವುದು ಹಳ್ಳಿಯ ವ್ಯವಸಾಯದ ಅಭಿವೃದ್ಧಿಗೆ ಅತಿ ಅಗತ್ಯ ಮತ್ತು ಇವರಿಗೆ ಆಧುನಿಕ ವ್ಯವಸಾಯದ ಗಾಳಿ ಸೋಂಕದೆ ಹಳ್ಳಿಯ ವ್ಯವಸಾಯ ಉತ್ತಮವಾಗುವುದು ಸಾಧ್ಯವಿಲ್ಲ. ಕಾರ್ಮಿಕರ ಸಂಘಟನೆ ಮಾಡುವಾಗ ಮನಸ್ಸಿನಲ್ಲಿಟ್ಟುಕೊಳ್ಳಬೇಕಾದ ವಿಷಯಗಳಾವುವೆಂದರೆ: 1 ಅವರಿಗೆ ವ್ಯವಸಾಯ ಮತ್ತು ಹಳ್ಳಿಯ ಇತರ ಉಪಜೀವಿಕೆಗಳಲ್ಲಿ ಆಧುನಿಕ ಜ್ಞಾನ ಮತ್ತು ತರಬೇತು ಸಿಗುವಂತೆ ಮಾಡುವುದು. 2 ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕ ಹಳ್ಳಿಯಲ್ಲಿ ಅವರಿಗೆ ಉದ್ಯೋಗ ಸಿಗುವಂತೆ ಮಾಡುವುದು ಮತ್ತು ಅವರ ವೇತನ ಮತ್ತು ನೌಕರಿಯ ಲೆಕ್ಕಗಳನ್ನು ಸರಿಯಾಗಿ ನಮೂದಿಸುವುದು. ನೌಕರಿಗೆ ಇಟ್ಟುಕೊಳ್ಳುವ ಮಾಲೀಕರನ್ನು ಕೂಡ ಸಂಘಟಿಸಿ ಅವರ ಹಕ್ಕುಬಾಧ್ಯತೆಗಳನ್ನು ಸರಿಯಾಗಿ ನಮೂದಿಸುವುದು. ಕಾರ್ಮಿಕರ ಮತ್ತು ರೈತರ ಸಂಘಟನೆಯ ಮೂಲಕ ವ್ಯವಸಾಯವನ್ನು ಒಂದು ಉದ್ಯಮವನ್ನಾಗಿ ಮಾಡಿ ಅದನ್ನು ಆಧುನಿಕ ರೀತಿಯಲ್ಲಿ ನಡೆಸಬಹುದು. ಗ್ರಾಮೀಣ ಕೆಲಸಗಾರರಿಗೆ ಕೆಲಸ ಒದಗಿಸಿ ಅವರ ಸರ್ವತೋಮುಖವಾದ ಅಭಿವೃದ್ಧಿಯನ್ನು ಸಾಧಿಸಬಹುದು.

ಅರ್ಥಶಾಸ್ತ್ರಜ್ಞರು ವಸ್ತುಗಳನ್ನು ಕಾರ್ಖಾನೆಯಲ್ಲಿ ಅಥವಾ ಇನ್ನಿತರ ರೀತಿಯಲ್ಲಿ ತಯಾರಿಸಲು ನಾಲ್ಕು ಬಗೆಯ ಘಟಕಗಳು ಬೇಕೆಂದು ಹೇಳುವುದು ರೂಢಿಯಲ್ಲಿದೆ: ಭೂಮಿ, ಬಂಡವಾಳ, ಕೆಲಸಗಾರರು ಮತ್ತು ಈ ಮೂರು ಘಟಕಗಳನ್ನು ಸಂಘಟಿಸುವವರು—ಈ ನಾಲ್ಕು ಘಟಕಗಳು. ಭೂಮಿ ಮತ್ತು ಬಂಡವಾಳಕ್ಕೆ ಮಾಲೀಕರಿದ್ದಾರೆ. ಇವುಗಳ ವ್ಯವಹಾರದಲ್ಲಿ ದೇಶದ ಆರ್ಥಿಕ ಪರಿಸ್ಥಿತಿಗಳಿಗೆ ಅನುಗುಣವಾಗಿ ಏರುಪೇರುಗಳಾಗುತ್ತವೆ. ಭೂಮಿ ಬಂಡವಾಳದಷ್ಟೇ ರೀತಿಯಲ್ಲಿ ಬೇಕುಬೇಕಾದ ಉಪಯೋಗಕ್ಕೆ ಬೀಳುವುದಿಲ್ಲ. ದೇಶದಲ್ಲಿರುವ ಬಂಡವಾಳದ ಮಾರುಕಟ್ಟೆಯಲ್ಲಿ ಒಂದು ರೀತಿಯ ಆಡಳಿತ ಇದೆ. ಆದರೆ ಈ ಆಡಳಿತದ ಬಹುಭಾಗ ಬ್ಯಾಂಕುಗಳಿಂದಾಗಿ ಏರ್ಪಟ್ಟಿದೆ. ಆದ್ದರಿಂದ ಬ್ಯಾಂಕುಗಳ ಆಡಳಿತ ಸರಿಯಾಗಿ ನಡೆದರೆ ಬಂಡವಾಳದ ಪೂರೈಕೆಯನ್ನು ಹತೋಟಿಯಲ್ಲಿಟ್ಟುಕೊಳ್ಳಬಹುದು. ಆದರೆ ದೇಶದ ಎಲ್ಲ ಭೂಮಿಯೂ ಯಾವುದೇ ಒಂದು ಸಂಸ್ಥೆಯ ಆಡಳಿತಕ್ಕಾಗಲಿ ಒಳಪಟ್ಟು ಬೇರೆ ಬೇರೆ ಉಪಯೋಗಕ್ಕೆ ಹೋಗುತ್ತಿಲ್ಲ. ಇದು ವ್ಯವಸಾಯದಲ್ಲಿ ಅತಿ ದೊಡ್ಡ ಪಾತ್ರವಹಿಸುವುದರಿಂದಲೂ ವ್ಯವಸಾಯ ದೇಶದ ಆರ್ಥಿಕವ್ಯವಸ್ಥೆಯಲ್ಲಿ ಪ್ರತ್ಯೇಕವಾಗಿ ಉಳಿದುದರಿಂದಲೂ ಭೂಮಿಯಿಂದ ನಾವೆಷ್ಟು ಪ್ರಯೋಜನ ಪಡೆಯಬೇಕಿತ್ತೋ ಅಷ್ಟು ಪ್ರಯೋಜನ ಇನ್ನೂ ನಮಗೆ ಸಿಗದಂತಾಗಿದೆ. ಈ ಎರಡು ಘಟಕಗಳಿಗಿಂತಲೂ ಹೆಚ್ಚಾಗಿರುವುದು ಕೆಲಸಗಾರರ ಸರಬರಾಜು. ನಮ್ಮ ದೇಶದಲ್ಲಿ ಬಂಡವಾಳದ ಕೊರತೆ ಇದೆ. ಉತ್ಪಾದನೆಯನ್ನು ಸಂಘಟಿಸಿ ನಡೆಸಬಲ್ಲವರ ಕೊರತೆ ಇದೆ. ಆದರೆ ಕೆಲಸಗಾರರ ಕೊರತೆ ಈ ತನಕ ಬರಲಿಲ್ಲ. ಕೆಲಸಗಾರರ ಸಂಖ್ಯೆ ಸಾಕಷ್ಟು ಇದ್ದರೂ ಅವರಲ್ಲಿ ಕೆಲಸದ ನೈಪುಣ್ಯ ಮತ್ತು ಅನುಭವ ಸಾಕಷ್ಟು ಇಲ್ಲ. ಅವರನ್ನು ಒಂದುಗೂಡಿಸುವ ಮತ್ತು ಅವರ ಕ್ರಿಯಾಶಕ್ತಿಯನ್ನು ಹೆಚ್ಚಿಸುವ ಯಾವ ಸಂಸ್ಥೆಯೂ ಇಲ್ಲ. ಆದ್ದರಿಂದಲೇ ದೇಶದ ಆರ್ಥಿಕ ಸ್ಥಿತಿ ಶೋಚನೀಯವಾಗಿದೆ. ಆದ್ದರಿಂದ ಗ್ರಾಮೀಣ ಕೆಲಸಗಾರರನ್ನು ಸಂಘಟಿಸಲು, ದೇಶವನ್ನು ಕಟ್ಟುವ ಕೆಲಸದಲ್ಲಿ ಅವರನ್ನು ಸುಸಜ್ಜಿತರನ್ನಾಗಿಸಲು, ಅವರಿಗೆ ಸಾರ್ಥಕ ಬಾಳಿನ ಸಂತೋಷವನ್ನೀಯಲು ಒಂದು ಹೊಸ ಸಂಸ್ಥೆಯನ್ನೂ ಹೊಸ ಧೋರಣೆಯನ್ನೂ ರೂಪಿಸುವುದು ಅತ್ಯಗತ್ಯ.

ಜಪಾನಿನ ವ್ಯವಸಾಯದಲ್ಲಿ ಭೂಮಿಯ ಒಡೆಯ ಮತ್ತು ಅವನ ಕುಟುಂಬದವರು ಸಣ್ಣ

ಪುಟ್ಟ ಯಂತ್ರಸಾಮಗ್ರಿಗಳನ್ನು ಬಳಸಿ ಸಾಕಷ್ಟು ಬೆಳೆಯನ್ನು ಬೆಳೆಸುತ್ತಾರೆ. ಅಂತೆಯೇ ಕಾರ್ಖಾನೆಯಲ್ಲಿ ಉತ್ಪಾದಿಸುವ ಸಾಮಗ್ರಿಗಳನ್ನು ಕೂಡ ಕೆಲಸಗಾರರು ಮನೆಗಳಲ್ಲೇ ಇದ್ದುಕೊಂಡು ಮಾಡುವ ವ್ಯವಸ್ಥೆ ಇದೆ. ಈ ವ್ಯವಸ್ಥೆ ಜಪಾನಿನ ಆರ್ಥಿಕ ಪ್ರಗತಿಗೆ ತುಂಬ ಸಹಾಯಕವಾಗಿದೆ. ಅಂಥ ವ್ಯವಸ್ಥೆ ನಮ್ಮ ದೇಶಕ್ಕೆ ಅನ್ವಯಿಸುತ್ತದೆಂದು ಹೇಳಲಾಗದು. ಏಕೆಂದರೆ ನಮ್ಮ ಆರ್ಥಿಕ ವ್ಯವಸ್ಥೆ ಈ ಕೆಲವು ವರ್ಷಗಳಲ್ಲಿ ನಡೆದುಬಂದ ಕ್ರಮ ಇದಕ್ಕೆ ಪ್ರತಿಕೂಲವಾಗಿದೆ. ಆದ್ದರಿಂದ ನಮ್ಮ ದೇಶದ ವ್ಯವಸಾಯದಲ್ಲಿ ಗ್ರಾಮೀಣ ಕೆಲಸಗಾರರ ಮತ್ತು ಹಿಡುವಳಿದಾರರ ಸಂಘಟನೆ ಸಮಂಜಸವಾದುದು.

ದೈಹಿಕ ಶ್ರಮ ನಮ್ಮ ಇಂದಿನ ವ್ಯವಸಾಯ ಕ್ರಮದಲ್ಲಿ ಅತಿ ಮುಖ್ಯವಾದ ಅಂಶ. ಇನ್ನುಮುಂದೆ ಕೂಡ ದೈಹಿಕ ಶ್ರಮ ಮಾಡುವವರನ್ನು ವ್ಯವಸಾಯ ಕ್ಷೇತ್ರದಲ್ಲಿ ಇರಿಸಿಕೊಂಡೇ ನಮ್ಮ ವ್ಯವಸಾಯ ಬೆಳೆಯಬೇಕಾಗಿದೆ. ಕೈಗಾರಿಕೆಗಳಲ್ಲಿ ಶ್ರಮಿಸುವವರ ಸಂಘಟನೆಯಂತೆಯೇ ವ್ಯವಸಾಯ ಕ್ಷೇತ್ರದ ಕೆಲಸಗಾರರ ಸಂಘಟನೆಯಾಗದಿದ್ದರೆ ದೇಶದ ಅಭಿವೃದ್ಧಿಗೆ ಮತ್ತು ರಾಜಕೀಯ ಸ್ಥಿರತೆಗೆ ತೊಂದರೆ ಬರಬಹುದು. ಆದರೆ ಇನ್ನು ಮುಂದೆ ವ್ಯವಸಾಯದ ಕೆಲಸಗಾರರನ್ನು ಸಂಘಟಿಸುವಾಗ ಅವರಿಗೆ ನವೀನ ಮಾದರಿಯ ಕೃಷಿ ಸಲಕರಣೆ, ರಾಸಾಯನಿಕ ಗೊಬ್ಬರಗಳ ಉಪಯೋಗದ ಬಗ್ಗೆ ಸಾಕಷ್ಟು ತರಬೇತು ದೊರಕಿಸಿಕೊಡುವುದು ಅವಶ್ಯ. ಜಪಾನಿನಂತೆ ಹಿಡುವಳಿದಾರನೇ ತನ್ನ ಕುಟುಂಬದ ವ್ಯಕ್ತಿಗಳೊಂದಿಗೆ ವ್ಯವಸಾಯದ ಸಂಪೂರ್ಣ ಕೆಲಸವನ್ನು ಮಾಡುವುದಾದರೆ ಗ್ರಾಮೀಣ ಕೆಲಸಗಾರರನ್ನು ವ್ಯವಸಾಯದಲ್ಲಿ ಹೊಂದಿಸುವ ಸಮಸ್ಯೆ ಬರಲಾರದು. ಆದರೆ ನಮ್ಮ ದೇಶದಲ್ಲಿ ಈಗ ಇರುವ ಪರಿಸ್ಥಿತಿಯಲ್ಲಿ ಸ್ವಲ್ಪ ಸುಧಾರಣೆ ಆದರೂ ಮುಂದೆ ಕೂಡ ಗ್ರಾಮೀಣ ಕೆಲಸಗಾರರನ್ನು ವ್ಯವಸಾಯ ಕಸುಬಿನೊಂದಿಗೆ ಮತ್ತು ಹಿಡುವಳಿದಾರರೊಂದಿಗೆ ಸಮರಸವಾಗಿ ಸೇರಿಸಿದರೆ ಮಾತ್ರ ವ್ಯವಸಾಯದಲ್ಲಿ ಅಭಿವೃದ್ಧಿ ಶೀಘ್ರದಲ್ಲಿ ಆಗಿ ಗ್ರಾಮೀಣ ಕೆಲಸಗಾರರಿಂದ ಬರಬಹುದಾದ ರಾಜಕೀಯ ಸಮಸ್ಯೆಗಳ ಪರಿಹಾರವಾದೀತು. ನಮ್ಮ ಇಂದಿನ ಹಿಡುವಳಿದಾರರು ಅಪೇಕ್ಷಿಸುವುದರಲ್ಲಿ ಮುಖ್ಯ ಅಂಶಗಳೇನೆಂದರೆ ಭೂಮಿಯ ಒಡೆತನ ಸಂಪೂರ್ಣ ಸ್ವಾಧೀನದಲ್ಲಿ ಇಟ್ಟುಕೊಳ್ಳುವುದು ಮತ್ತು ಇದರಿಂದ ಬರುವ ಉತ್ಪತ್ತಿಯನ್ನು ಹೆಚ್ಚಿಸುವುದು. ವರ್ಷದ ಎಲ್ಲ ತಿಂಗಳುಗಳಲ್ಲೂ ಕೆಲಸ ಸಿಗಬೇಕೆಂದೂ ಕೆಲಸಕ್ಕನುಗುಣವಾಗಿ ಸಂಬಳ ಸಿಗಬೇಕೆಂದೂ ಕೆಲಸಗಾರರು ಹಾರೈಸುತ್ತಾರೆ. ಕೈಗಾರಿಕೆಯ ಕೆಲಸಗಾರರಂತೆ ಗ್ರಾಮೀಣ ವ್ಯವಸಾಯದ ಕೆಲಸಗಾರರಿಗೆ ಕೂಡ ಅಪೇಕ್ಷೆಪಟ್ಟಾಗ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ವಲಸೆ ಹೋಗಿ ಅಲ್ಲಿ ವ್ಯವಸಾಯಕಾರ್ಯ ಮಾಡುವ ಸಂದರ್ಭವನ್ನು ಕಾರ್ಮಿಕರ ಕಾರ್ಪೊರೇಷನ್ ಒದಗಿಸಿಕೊಡಬೇಕಾಗಿದೆ. ಹಿಡುವಳಿದಾರರು ತಮಗೆ ಕೆಲಸಗಾರರ ಅಗತ್ಯ ಬಿದ್ದಾಗ ಇಂಥ ಕಾರ್ಮಿಕರ ಸಂಘಗಳನ್ನು ಕೇಳಿಕೊಂಡು ಬೇಕಾದ ಕೆಲಸಗಾರರನ್ನು ಪಡೆಯುವ ಆಸ್ಪದವನ್ನೂ ಕಲ್ಪಿಸಬೇಕು. ಈ ಕೆಲಸಗಾರರಿಗೆ ಆಧುನಿಕ ಯಂತ್ರಸಲಕರಣೆಗಳನ್ನುಪಯೋಗಿಸಿ ಆಧುನಿಕ ಬೇಸಾಯ ಮಾಡಬಲ್ಲ ತರಬೇತು ಇರುವುದು ಆವಶ್ಯಕ.

ನಮ್ಮ ಸರ್ಕಾರಕ್ಕೆ ಬೇಸಾಯ ಮಾಡಲು ಬೇಕಾದ ಸಿಬ್ಬಂದಿಯವರು ಸಿಗುತ್ತಾರೆ. ವಿಜ್ಞಾನಿಗಳು ಸಿಗುತ್ತಾರೆ; ಬಂಡವಾಳವಿದೆ; ಅದು ವ್ಯಾಪಕವಾಗಿ ವ್ಯವಸಾಯ ಕಾರ್ಯವನ್ನೂ ಕೈಕೊಳ್ಳಬಹುದಾಗಿದೆ. ಉಳುವವನೇ ಹೊಲದೊಡೆಯನಾಗಬೇಕೆಂಬ ತತ್ತ್ವ ಸಮಾಜವಾದದ ದೃಷ್ಟಿಯಲ್ಲಿ ಶ್ರೇಷ್ಠವಾಗಿರಬಹುದು. ಆದರೆ ಉಳುವವನಿಗೆ ಹೊಲದೊಡೆತನ ಕೊಡುವುದರಿಂದ ಮಾತ್ರ ಸಾಗುವಳಿಯ ಸಮಸ್ಯೆಗಳು ತಮ್ಮಷ್ಟಕ್ಕೆ ಪರಿಹಾರವಾಗುತ್ತವೆಂದು ತಿಳಿದರೆ ಅದು ವಾಸ್ತವಿಕತೆಗೆ ದೂರವಾದ ವಿಚಾರವಾಗುತ್ತದೆ. ನೈಜವಾದ ಅಭಿವೃದ್ಧಿಯಾಗಬೇಕಾದರೆ ಹೊಲದ ಒಡೆತನದಲ್ಲಿ ಬದಲಾವಣೆಯಾದ ಅನಂತರವೂ ವ್ಯವಸಾಯ ಕ್ರಮದಲ್ಲಿ, ಉಪಯೋಗಿಸುವ ಸಲಕರಣೆಗಳಲ್ಲಿ ಮತ್ತು ಮಾರಾಟದಲ್ಲಿ ಸುಧಾರಣೆಯಾಗಬೇಕು.

ಡಾ. ಪಿ. ಗುರುರಾಜ ಭಟ್

ಆಳುಪರ ಕೆಲವು ನಾಣ್ಯಗಳು

ದಕ್ಷಿಣ ಕನ್ನಡ ಜಿಲ್ಲೆಯ (ತುಳುನಾಡಿನ) ಆಳುಪರು ಮಂಗಳೂರು ಮತ್ತು ಬಾರಕೂರಿನ ಟಂಕಶಾಲೆಗಳಲ್ಲಿ ಸುವರ್ಣ ನಾಣ್ಯಗಳನ್ನು ಮುದ್ರಿಸುತ್ತಿದ್ದರು. ಈ ಕಾರ್ಯ ಕ್ರಿ.ಶ. ಸುಮಾರು 11ನೆಯ ಶತಮಾನದಲ್ಲಿ ಜರಗುತಿತ್ತು. ಆ ನಾಣ್ಯಗಳು ಪಾಂಡ್ಯಗದ್ಯಾಣಗಳೆನಿಸಿಕೊಂಡಿದ್ದುವು. ಸಾಮಾನ್ಯವಾಗಿ ನಾಣ್ಯದ ಕೆಳಗಿನ ಬದಿಯಲ್ಲಿ ಪಾಂಡ್ಯ ಧನಂಜಯ ಎಂಬ ಬರಹವೂ ಮೇಲ್ಭಾಗದಲ್ಲಿ ಮೀನು, ಅದರ ಪಾರ್ಶ್ವದಲ್ಲಿ ಚಾಮರ. ನೀರಿನ ಪಾತ್ರೆ ಅಥವಾ ದೀಪ ಪೀಠ ಮತ್ತು ಶಂಖದ ಚಿಹ್ನೆಗಳಿವೆ. ನಾಣ್ಯದ ಕೆಳಭಾಗದಲ್ಲಿಯ ಲಿಪಿ ಕನ್ನಡ ಇಲ್ಲವೇ ದೇವನಾಗರಿ ಭಾಷೆಯಲ್ಲಿರುತ್ತದೆ. ಈ ಗದ್ಯಾಣಗಳು 52–56 ಗ್ರೇನ್ ತೂಕವಿರುತ್ತಿದ್ದುವು. ಪ್ರಾಚೀನ ನಾಣ್ಯಗಳನ್ನು 22 ಕ್ಯಾರಟ್ ಚಿನ್ನದಿಂದಲೂ ಅನಂತರದ ನಾಣ್ಯಗಳನ್ನು 14 ಕ್ಯಾರಟ್ ಚಿನ್ನದಿಂದಲೂ ಮಾಡಲಾಗುತ್ತಿತ್ತು. ಇಂದಿನ ತನಕ ಕೇವಲ ಕೆಲವೇ ನಾಣ್ಯಗಳು ಬೆಳಕಿಗೆ ಬಂದಿವೆ.

ಆಳುಪರ ಕೆಲವು ನಾಣ್ಯಗಳನ್ನು ನಾನು ಆವಿಷ್ಕರಿಸಿದ್ದೇನೆ. ಆ ನಾಣ್ಯಗಳ ವಿವರಗಳು ಹೀಗಿವೆ:

1 ಪಾಂಡುವ ಗದ್ಯಾಣ: ಈ ನಾಣ್ಯ 56 ಗ್ರೇನ್ ತೂಕವಿದೆ; ಮತ್ತು 22 ಕ್ಯಾರಟ್ ಚಿನ್ನದಿಂದ ಕೂಡಿದೆ. ಈ ನಾಣ್ಯದ ಮುಂಬದಿಯಲ್ಲಿ ಎರಡು ಮೀನುಗಳ ಪಕ್ಕದಲ್ಲಿ ದೀಪದ ಪೀಠದ ಮತ್ತು ಜಲಪಾತ್ರೆಯ ಚಿಹ್ನೆಗಳಿವೆ. ಹಿಂಬದಿಯಲ್ಲಿ ಕ್ರಿ.ಶ. 11–12ನೆಯ ಶತಮಾನಗಳ ಕನ್ನಡ ಲಿಪಿಗಳನ್ನು ಕಾಣಬಹುದು. ಪಾಣ್ಡುವ ಧನಂಜಯವೆಂಬುದಾಗಿ ಇದರಲ್ಲಿ ಮೂರು ಪಂಕ್ತಿಗಳಲ್ಲಿ ಬರೆದಿದೆ. ಕನ್ನಡ ಲಿಪಿಯನ್ನೊಳಗೊಂಡ ಅತ್ಯಂತ ಪ್ರಾಚೀನ ನಾಣ್ಯವಿದು ಎಂದು ಪರಿಗಣಿತವಾಗಿದೆ.

2 5 ತೂಕ ಭಾರದ ಎರಡು ಪಾಂಡ್ಯಗದ್ಯಾಣ ನಾಣ್ಯಗಳು: ಒಂದು ನಾಣ್ಯದ ಮುಂಬದಿಯಲ್ಲಿ ಎರಡು ಮೀನುಗಳ ಪಕ್ಕದಲ್ಲಿ ಜಲಪಾತ್ರೆಯ ಮತ್ತು ಶಂಖದ ಚಿಹ್ನೆಗಳಿವೆ. ಹಿಂಬದಿಯಲ್ಲಿ 'ಶ್ರೀ' ಎಂಬ ಅಕ್ಷರವನ್ನು ಕೆತ್ತಲಾಗಿದೆ. ಅದೇ ತೂಕದ ಇನ್ನೊಂದು ನಾಣ್ಯದಲ್ಲೂ ಅದೇ ರೀತಿಯ ಅಕ್ಷರವಿದೆ. ಆದರೆ ಮೇಲ್ಭಾಗದ ಎರಡು ಬದಿಗಳಲ್ಲೂ ಎರಡು ಮೀನುಗಳ ಪಕ್ಕಗಳಲ್ಲಿ ಶಂಖದ ಚಿಹ್ನೆಯಿದೆ.

3 14ನೆಯ ಶತಮಾನದ ಪಾಂಡ್ಯಗದ್ಯಾಣಗಳು: ಈ ನಾಣ್ಯದ ಕೆಳಭಾಗದಲ್ಲಿ ಪಾಣ್ಡ್ಯ ಗದ್ಯಾಣ ದೇವನಾಗರಿ ಲಿಪಿಯನ್ನೂ ಮೇಲ್ಭಾಗದಲ್ಲಿ ಸೊಗಸಾದ ಎರಡು ಮೀನುಗಳ ಚಿತ್ರವನ್ನೂ ಕಾಣಬಹುದು. ಇದು 53 ತೂಕ ಭಾರವಿದೆ ಮತ್ತು 22 ಕ್ಯಾರಟ್ ಚಿನ್ನವನ್ನೊಳಗೊಂಡಿದೆ.


ಪಾಂಡುವ ಗದ್ಯಾಣ (ನಂ. 1) ಬಾರಕೂರಿನಲ್ಲಿ ದೊರೆತದ್ದು. ಇದು ಬಾರಕೂರಿನ ಪಾ. ನಾರಾಯಣ ಶೆಟ್ಟರ ಸ್ವಾಧೀನದಲ್ಲಿದೆ.

5 ತೂಕ ಭಾರವಿರುವ ಗದ್ಯಾಣ ನಾಣ್ಯಗಳಲ್ಲಿ ಒಂದನೆಯದು ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ತಾಲೂಕಿನ ಕಾಪು ಎಂಬಲ್ಲಿಯ ಶ್ರೀ ರಾಜಾಚಾರ್ಯರ ತೋಟದಲ್ಲಿ ದೊರೆತದ್ದು. ಅದೀಗ ಅವರ ಮಗನ ವಶದಲ್ಲಿದೆ. ಎರಡನೆಯ ನಾಣ್ಯ ಪರ್ಕಳ ದೇವಾಲಯದ ಮಹಾಲಿಂಗೇಶ್ವರ ಲಿಂಗದ ಪೀಠದ ಕೆಳಭಾಗದಲ್ಲಿ ದೊರೆತುದಾಗಿದೆ. ಇದು ದೇವಾಲಯವನ್ನು ಜೀರ್ಣೋದ್ಧಾರ ಮಾಡುವಾಗ ದೊರೆತುದಾಗಿದೆ. ಈ ನಾಣ್ಯ ಈಗ ಪರ್ಕಳದ ಗುರುರಾಜ ಆಚಾರ್ಯರ ವಶದಲ್ಲಿದೆ.

3

14ನೆಯ ಶತಮಾನದ ಪಾಂಡ್ಯಗದ್ಯಾಣ (ಸಂ. 3) ಇದನ್ನು ಪೂರ್ಣಪ್ರಜ್ಞ ಕಾಲೇಜಿನ ಪ್ರಾಧ್ಯಾಪಕರಾದ ಶ್ರೀ ನಾರಾಯಣ ಮಯ್ಯ ಅವರು ಪರಿಶೀಲಿಸುವುದಕ್ಕಾಗಿ ಬಂಟ್ವಾಳ ತಾಲೂಕಿನ ಪೊಳಲಿಯ ತಮ್ಮ ಮಿತ್ರರೊಬ್ಬರಿಂದ ದೊರಕಿಸಿಕೊಂಡಿದ್ದಾರೆ.

ಪಾಂಡ್ಯ ಗದ್ಯಾಣಗಳು ಆಳುಪರ ಕಾಲದ ನಾಣ್ಯಗಳೇ ಆಗಿವೆ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ.



ಆಳುಪರ ಕೆಲವು ನಾಣ್ಯಗಳು

ಡಾ. ಅಬ್ದುಲ್ ಅಜೀಸ್

ಘೇರಾವೊ: ಕಾರ್ಮಿಕರ ನೂತನ ಅಸ್ತ್ರದ ಒಂದು ವಿವೇಚನೆ

ಸಂಘಟಿತ ಕಾರ್ಮಿಕರು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳುವ ದೃಷ್ಟಿಯಿಂದ ಮಾಲೀಕರ ಮೇಲೆ ಅನೇಕ ಅಸ್ತ್ರಗಳನ್ನು ಪ್ರಯೋಗಿಸುತ್ತ ಬಂದಿದ್ದಾರೆ. ಇವುಗಳಲ್ಲಿ ಸಾಮಾನ್ಯವಾಗಿ ಬಳಕೆಯಲ್ಲಿರುವ ಅಸ್ತ್ರವೆಂದರೆ ಮುಷ್ಕರ. ಇದಲ್ಲದೆ ಕಾರ್ಮಿಕರು ವೌನಸ್ವರೂಪದ ಅನೇಕ ಅಸ್ತ್ರಗಳನ್ನೂ ಪ್ರಯೋಗಿಸುವುದುಂಟು. ಅವುಗಳಲ್ಲಿ ಮುಖ್ಯವಾದವು ಸಾಧನಸಂನ್ಯಾಸ, ಒಳಕೂರುವಿಕೆ, ಉಪವಾಸ ಮುಷ್ಕರ, ಕಪ್ಪು ಬಟ್ಟೆಯ ಲಾಂಛನ ಧರಿಸಿ ಕೆಲಸಕ್ಕೆ ಬರುವುದು ಇತ್ಯಾದಿ. ಈ ಅಸ್ತ್ರಗಳೆಲ್ಲವೂ ಶಾಂತಿಯುತವಾದವು. ಇವನ್ನು ಪ್ರಯೋಗಿಸುವುದರ ಮೂಲಕ ಕಾರ್ಮಿಕರು ಸ್ವಯಂ ತ್ಯಾಗ ಹಾಗೂ ಸಂಕಟಗಳೆಲ್ಲವನ್ನೂ ತಮ್ಮ ಮೇಲೆ ಹೊತ್ತುಕೊಳ್ಳುವರು. ಇದರಿಂದ ಕಾರ್ಮಿಕರು ಸರ್ಕಾರದ ಹಾಗೂ ಸಾರ್ವಜನಿಕರ ಬೆಂಬಲ ಪಡೆದು ಮಾಲೀಕರ ಮೇಲೆ ನೈತಿಕ ಒತ್ತಾಯ ಬೀಳುವಂತೆ ಮಾಡುವರು. ಅಂಥ ಸಂದರ್ಭದಲ್ಲಿ ಮಾಲೀಕರು ಸ್ವಾಭಾವಿಕವಾಗಿಯೇ ಕಾರ್ಮಿಕರ ಬೇಡಿಕೆಗಳನ್ನು ಪರ್ಯಾಲೋಚಿಸುವ ಹಾಗೂ ಈಡೇರಿಸುವ ಮನೋಭಾವ ತಾಳುವರು. ಆದರೆ ಇತ್ತೀಚೆಗೆ ಈ ಅಸ್ತ್ರಗಳಿಗಿಂತ ಭಿನ್ನವಾದ ಹಾಗೂ ಕ್ರಾಂತಿಕಾರಕವಾದ ಅಸ್ತ್ರವೊಂದು ನಮ್ಮ ದೇಶದಲ್ಲಿ ಬಳಕೆಗೆ ಬಂದಿದೆ. ಈ ಅಸ್ತ್ರವೇ ಘೇರಾವೊ.

ಘೇರಾವೊವಿನ ವಾಚ್ಯಾರ್ಥ ಸುತ್ತುವರಿಯುವಿಕೆ. ಉದ್ಯಮದ ಕಾರ್ಯನಿರ್ವಾಹಕ ತಂಡವನ್ನು ಕಾರ್ಮಿಕರು ಸುತ್ತುವರಿದು ಅವರಿಂದ ತಮ್ಮ ಬೇಡಿಕೆಗಳನ್ನು ಈಡೇರಿಸುವ ಭರವಸೆಯನ್ನು ಬಲಾತ್ಕಾರವಾಗಿ ಪಡೆಯುವ ಕಾರಣ ಈ ಅಸ್ತ್ರವನ್ನು ಘೇರಾವೊ ಎಂದೇ ಕರೆಯಲಾಗುತ್ತದೆ. ಈ ಅಸ್ತ್ರವನ್ನು ಮೊಟ್ಟಮೊದಲಿಗೆ ಪಶ್ಚಿಮ ಬಂಗಾಳದಲ್ಲಿ ಮಾರ್ಕ್ಸ್‌ವಾದಿ ಪಕ್ಷದ ಸರ್ಕಾರ ಏರ್ಪಟ್ಟಾಗ 1967ರ ಮಾರ್ಚ್‌ನಲ್ಲಿ ಪ್ರಯೋಗಿಸಲಾಯಿತು. ಅಲ್ಲಿಂದ ಇದು ದೇಶದ ಇತರ ಪ್ರದೇಶಗಳಿಗೂ ಹರಡಿಕೊಂಡಿತು.

ಘೇರಾವೊವಿನ ವೈಶಿಷ್ಟ್ಯವೇನೆಂದರೆ ಅದು ಗಂಟೆಗಟ್ಟಲೆ ಮುಂದುವರಿಯುವುದು. ಈ ಅವಧಿಯಲ್ಲಿ ಅಧಿಕಾರಿಗಳು ಊಟ ತಿಂಡಿ ಮಾಡುವುದಿರಲಿ. ದೇಹಬಾಧೆ ತೀರಿಸಿಕೊಳ್ಳುವ ಅನುಕೂಲವೂ ಇಲ್ಲವಾಗುತ್ತದೆ. ಒಂದೊಂದು ವೇಳೆ ಅಧಿಕಾರಿಗಳು ಚಿತ್ರಹಿಂಸೆಗೂ ಗುರಿಯಾಗಿದ್ದುಂಟು. ಉದಾಹರಣೆಗೆ ಒಂದು ಬಾರಿ ಅಧಿಕಾರಿಯೊಬ್ಬನನ್ನು ಆತ ಪ್ರಜ್ಞೆ ತಪ್ಪಿ ಬೀಳುವ ತನಕ ಕುಲುಮೆಯ ಮುಂದೆ ನಿಲ್ಲಿಸಲಾಗಿತ್ತು. ಮತ್ತೊಬ್ಬ ಅಧಿಕಾರಿಯ ಮುಖದ ಮೇಲೆ 1,000 ಕ್ಯಾಂಡಲಿನ ನಾಲ್ಕು ವಿದ್ಯುತ್ ದೀಪಗಳನ್ನು ಹೊತ್ತಿಸಲಾಗಿತ್ತು. ಅಧಿಕಾರಿಗಳನ್ನು ಸುತ್ತುವರಿದು ಅವರನ್ನು ಹೊಡೆದು ಬಡಿದು ಹಣ್ಣುಮಾಡಿದ್ದೂ ಉಂಟು. ಎಂದಮೇಲೆ ಘೇರಾವೊ ಶಾಂತಿಯುತವಾದ ಅಸ್ತ್ರವಲ್ಲ; ಅದು ಹಿಂಸಾತ್ಮಕವಾದದ್ದು ಎಂಬುದು ಸ್ಪಷ್ಟ.

ಹಿಂಸಾತ್ಮಕವಾದ ಈ ಅಸ್ತ್ರ ಕಲ್ಕತ್ತೆಯ ಹೈಕೋರ್ಟಿನ ಕಾನೂನುಬಾಹಿರವೆಂದು ತೀರ್ಪಿತ್ತಿತು. ಇದಲ್ಲದೆ ತುರ್ತಿನ ಈ ಸಮಸ್ಯೆಯನ್ನು 1967ರ ಮೇ ತಿಂಗಳಲ್ಲಿ ಸ್ಥಾಯೀ ಕಾರ್ಮಿಕ ಸಮಿತಿಯಲ್ಲಿ ಚರ್ಚೆಗೆ ಒಳಪಡಿಸಲಾಯಿತು. ಇಲ್ಲಿ ಮಾಲೀಕರ ಪ್ರತಿನಿಧಿಗಳು ಹಾಗೂ ಕಾರ್ಮಿಕ ಸಂಘಗಳ ಕೇಂದ್ರೀಯ

ಸಂಘಟನೆಗಳಲ್ಲೊಂದಾದ ಬಿ.ಎಸ್.ಟಿ.ಯು.ಸಿ. ಈ ಅಸ್ತ್ರವನ್ನು ಸ್ಪಷ್ಟವಾಗಿ ಖಂಡಿಸಿತು. ಆದರೆ ಕಾರ್ಮಿಕ ಸಂಘಗಳ ಇತರ ಕೇಂದ್ರೀಯ ಸಂಘಟನೆಗಳಾದ ಎ.ಐ.ಟಿ.ಯು.ಸಿ. ಮತ್ತು ಯು.ಟಿ.ಯು.ಸಿ. ಇಂತಹ ಅಸ್ತ್ರದ ಆವಶ್ಯಕತೆಯನ್ನು ಸಮರ್ಥಿಸಿಕೊಂಡುವು. ಘೇರಾವೊವನ್ನು ಸಮರ್ಥಿಸಿಕೊಳ್ಳುವ ಪಕ್ಷಗಳು ಅದು ಕಾರ್ಮಿಕ ಸಂಘಗಳ ಒಂದು ಕ್ರಮಬದ್ಧ ಕಾರ್ಯಕ್ರಮವೆಂದು ಘೋಷಿಸಲೂ ಹಿಂಜರಿಯಲಿಲ್ಲ. ಅದರ ಸಮರ್ಥನೆಗೆ ಕೆಳಗೆ ಕಾಣಿಸಲಾಗಿರುವ ಎರಡು ವಾದಗಳು ಆಧಾರ:

1 ವೇತನ ಮಂಡಳಿಗಳ ಶಿಫಾರಸುಗಳನ್ನು ಮಾಲೀಕರು ನೆರವೇರಿಸದೆ ತಮಗೆ ನ್ಯಾಯವಾಗಿ ಸಿಗಬೇಕಾದ ಅನುಕೂಲಗಳನ್ನು ತಡೆಹಿಡಿದಿರುವ ಕಾರಣ ಕಾರ್ಮಿಕರಿಗೆ ಅಶಾಭಂಗವಾಗಿದೆ. ಮಾಲೀಕರ ಇಂಥ ಪ್ರತಿಬಂಧಕ ಧೋರಣೆಗಳ ವಿರುದ್ಧ ಹೋರಾಡಬೇಕಾದರೆ ಯಾವು ದಾದರೂ ಒಂದು ಬಲಾತ್ಕಾರ ಸ್ವರೂಪದ ಅಸ್ತ್ರವನ್ನೇ ಪ್ರಯೋಗಿಸಬೇಕಾಗುತ್ತದೆ. ಘೇರಾವೊ ಈ ಪರಿಸ್ಥಿತಿಗೆ ಹೊಂದಿಕೆಯಾಗುವ ಒಂದು ಸೂಕ್ತವಾದ ಅಸ್ತ್ರ.

2 ಭಾರತದಲ್ಲಿ ಕಾರ್ಮಿಕರ ಸಂಘಟನೆ ತೀರ ದುರ್ಬಲವಾದ್ದು. ಈ ಕಾರಣದಿಂದ ಸಾಮೂಹಿಕ ಚೌಕಾಸಿಯ ಸಾಮರ್ಥ್ಯದ ವಿಷಯದಲ್ಲಿ ಮಾಲೀಕ ಮತ್ತು ಕಾರ್ಮಿಕರಲ್ಲಿ ಅಸಮಾನತೆ ತೋರಿಬಂದಿದೆ. ಮಾಲೀಕರು ಈ ಅಸಮಾನತೆಯ ದುರುಪಯೋಗ ಪಡೆಯುವುದಕ್ಕೆ ಅನುವಾಗಿದೆ. ಕಾರ್ಮಿಕರನ್ನು ಮಾಲೀಕರ ಇಂಥ ದೌರ್ಜನ್ಯದಿಂದ ಬಿಡುಗಡೆ ಮಾಡ ಬೇಕಾದರೆ ಸಾಮೂಹಿಕ ಚೌಕಾಸಿಯ ಸಾಮರ್ಥ್ಯದಲ್ಲಿ ಸಮಾನತೆಯನ್ನು ಸ್ಥಾಪಿಸಬೇಕು. ಘೇರಾವೊ ಮಾಲೀಕರ ಮತ್ತು ಕಾರ್ಮಿಕರ ಚೌಕಾಸಿ ಸಾಮರ್ಥ್ಯವನ್ನು ಸಮಾನಗೊಳಿಸಲು ಸರಿಯಾದ ಬಲಾತ್ಕಾರ ರೂಪದ ಸಾಧನ.

ಈ ವಾದಗಳನ್ನು ತೌಲನಿಕವಾಗಿ ವಿವೇಚಿಸುವುದು ಅಗತ್ಯ.

ಮೊದಲನೆಯ ವಾದವನ್ನು ಒಪ್ಪುವುದಕ್ಕೆ ಮೊದಲು ವೇತನ ಮಂಡಳಿಗಳ ಶಿಫಾರಸುಗಳ ಸ್ವಭಾವವನ್ನು ತಿಳಿಯುವುದು ಸೂಕ್ತ. ವೇತನ ಮಂಡಳಿಗಳು ಪ್ರತಿ ಕೈಗಾರಿಕೆಯ ವಿಷಯದಲ್ಲೂ ವೇತನವನ್ನು ನಿರ್ಧರಿಸುವ ಒಂದು ಕಾರ್ಯಕರ್ತೃ. ಈ ಮಂಡಳಿಗಳು ಸರ್ಕಾರದ, ಉದ್ಯಮ ಮಾಲೀಕರ ಮತ್ತು ಕಾರ್ಮಿಕರ ಪ್ರತಿನಿಧಿಗಳನ್ನೊಳಗೊಂಡಿರುತ್ತದೆ. ಮಂಡಳಿ ವೇತನವನ್ನು ನಿರ್ಣಯಿಸುವ ಮೊದಲು ದೇಶವ್ಯಾಪ್ತ ಆಯಾ ಕೈಗಾರಿಕೆಯ ಆರ್ಥಿಕ ಪರಿಸ್ಥಿತಿಯ ಅಧ್ಯಯನ ಮಾಡಿ ಕೈಗಾರಿಕೆಯ ಸಾಮಾನ್ಯ ಉದ್ಯಮಸಂಸ್ಥೆ ಕೊಡಲು ಸಮರ್ಥವಿರುವ ವೇತನಮಟ್ಟವನ್ನು ನಿರ್ಣಯಿಸುವುದು. ಸಾಮಾನ್ಯ ಉದ್ಯಮಸಂಸ್ಥೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ವೇತನವನ್ನು ನಿರ್ಣಯಿಸುವ ಕಾರಣ ಕೆಲವು ಉದ್ಯಮಸಂಸ್ಥೆಗಳು ಆ ಮಟ್ಟದ ವೇತನವನ್ನು ಕೊಡಲು ಅಸಮರ್ಥವಾಗುವುದು ಸ್ವಾಭಾವಿಕ. ಆದರೆ ಅಂಥ ಉದ್ಯಮಸಂಸ್ಥೆಗಳು ಎಂದಿಗೂ ಈ ಒಂದು ಆಧಾರದ ಮೇಲೆಯೆ ರಾಷ್ಟ್ರೀಯ ಮಟ್ಟ ದಲ್ಲಿ ನಿರ್ಧರಿಸಲಾದ ವೇತನವನ್ನು ಕೊಡಲು ಅಸಮರ್ಥವೆಂದು ಸುಮ್ಮನೆ ಕೂರುವುದು ಸರಿಯಲ್ಲ. ಅವುಗಳ ಸಾಮರ್ಥ್ಯ ಕಡಿಮೆ ಇರುವುದಕ್ಕೆ ಕಾರಣವೆಂದರೆ ಕಡಿಮೆ ಉತ್ಪಾದನಸಾಮರ್ಥ್ಯ. ಅನುಕೂಲ ವಾದ ಧೋರಣೆಗಳನ್ನು ಅನುಸರಿಸಿ ಉತ್ಪಾದನ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಕಾಲ ಹಿಡಿ ಯುತ್ತದೆ. ಆದ್ದರಿಂದ ಈ ಅವಧಿಯಲ್ಲಿ ಅಂಥ ಸಂಸ್ಥೆಗೆ ತನ್ನ ಸಾಮರ್ಥ್ಯವಿರುವ ಮಟ್ಟದ ವೇತನವನ್ನು ಕೊಡುವಂತೆ ಅನುಕೂಲ ಮಾಡಿಕೊಡುವುದು ಸೂಕ್ತ. ಹೀಗೆ ಎಷ್ಟೋ ಸಾರಿ ವೇತನ ಮಂಡಳಿಗಳ ಶಿಫಾರಸುಗಳ ಚೌಕಟ್ಟಿನಲ್ಲಿಯೇ ಕೆಲವು ಉದ್ಯಮಸಂಸ್ಥೆಗಳ ಮಾಲೀಕರೂ ಕಾರ್ಮಿಕರೂ ಸಂಧಾನದ ಮೂಲಕ ಒಡಂಬಡಿಕೆಗೆ ಬಂದಿರುವುದೂ ಉಂಟು. ಹೀಗೆ ಕೆಲವು ಮಾಲೀಕರು ವೇತನ ಮಂಡಳಿಯ ಶಿಫಾರಸುಗಳನ್ನು ನೆರವೇರಿಸದೆ ಇದ್ದರೆ ಅದಕ್ಕೆ ಪ್ರಬಲವಾದ ಆರ್ಥಿಕ ಕಾರಣಗಳಿರಬಹುದು. ಅಂಥ ಸಂದರ್ಭದಲ್ಲಿ ಕಾರ್ಮಿಕರೂ ಉದ್ಯಮದ ಸಮಸ್ಯೆಗಳ ಬಗ್ಗೆ ಸಹಾನುಭೂತಿ ತೋರಿಸಿ ಮಾಲೀಕ ರೊಂದಿಗೆ ಸಂಧಾನ ಮಾಡಿಕೊಂಡು ಒಂದು ಒಡಂಬಡಿಕೆಗೆ ಬರುವುದು ಸರಿಯೇ ಹೊರತು, ಬಲಾತ್ಕಾರದ

ಕ್ರಮಗಳನ್ನು ಅನುಸರಿಸುವುದರ ಮೂಲಕ ಉದ್ಯಮ ಸಂಸ್ಥೆಯ ಸಾಮರ್ಥ್ಯಕ್ಕೆ ಮೀರಿದ ವೇತನವನ್ನು ಕಸಿದುಕೊಳ್ಳುವ ಪ್ರಯತ್ನ ಸಾಧುವಲ್ಲ.

ಈಗ ಘೇರಾವೊ ಚೌಕಾಸಿ ಸಾಮರ್ಥ್ಯಗಳನ್ನು ಸಮಾನಗೊಳಿಸುವ ಸಾಧನವೆ ಎಂಬುದನ್ನು ವಿವೇಚಿಸಬೇಕು. ಎರಡೂ ಪಕ್ಷಗಳಲ್ಲಿ ಸಮಾನ ಚೌಕಾಸಿ ಸಾಮರ್ಥ್ಯವಿರುವ ಸನ್ನಿವೇಶವನ್ನು ಗಮನದಲ್ಲಿಟ್ಟುಕೊಂಡು ಈ ಅಂಶವನ್ನು ವಿವೇಚಿಸಬಹುದು. ಚೌಕಾಸಿ ಮಾಡುವ ಸನ್ನಿವೇಶದಲ್ಲಿ ಎರಡು ಪಕ್ಷದವರೂ ಸಂಧಾನ ಕುಸಿದರೆ ಅದರಿಂದ ತಮಗೆ ನಷ್ಟವುಂಟಾಗುತ್ತದೆ ಎಂಬ ತಿಳಿವಳಿಕೆ ಪಡೆದಿದ್ದು ಸಂಧಾನವನ್ನು ಕೈಗೊಳ್ಳುವರು. ಆದ್ದರಿಂದ ಚೌಕಾಸಿಯ ಕಾರ್ಯಗತಿಯಲ್ಲಿ ಎರಡು ಪಕ್ಷದವರಿಗೂ ಹಣಕಾಸಿನ ನಷ್ಟಸಂಭವ ಇರುತ್ತದೆ. ಹೀಗಾಗಿ, ಸಂಧಾನ ಕುಸಿದರೆ ಮುಷ್ಕರವಾಗಿ, ಮಾಲೀಕರು ಉತ್ಪಾದನೆಯನ್ನೂ ತಮ್ಮ ವಸ್ತುವಿನ ಮಾರುಕಟ್ಟೆಯನ್ನೂ ಲಾಭಗಳನ್ನೂ ಕಳೆದುಕೊಳ್ಳಬೇಕಾಗುತ್ತದೆ. ಮುಷ್ಕರದಿಂದ ಕಾರ್ಮಿಕರು ತಮ್ಮ ವೇತನ ಹಾಗೂ ಉದ್ಯೋಗಾವಕಾಶವನ್ನು ಕಳೆದುಕೊಳ್ಳಬೇಕಾಗುತ್ತದೆ. ಆದರೆ ಮುಷ್ಕರ ಹೂಡುವುದಕ್ಕೆ ಮೊದಲು ಪ್ರತಿಪಕ್ಷವೂ ಕೆಲವು ಅಂಶಗಳನ್ನು ತೂಗಿ, ಯಾವುದೇ ನಿರ್ಣಯಕ್ಕೆ ಬರುತ್ತದೆ. ಉದಾಹರಣೆಗೆ, ಉದ್ಯಮ ಕಾರ್ಮಿಕರ ಬೇಡಿಕೆಯನ್ನು ಪೂರೈಸಲು ಒಪ್ಪಿಕೊಳ್ಳುವುದರಿಂದ ಸಂಭವಿಸುವ ನಷ್ಟವನ್ನು ಅದನ್ನು ಒಪ್ಪಿಕೊಳ್ಳದೆ ಮುಷ್ಕರಕ್ಕೆ ಅವಕಾಶ ಮಾಡಿಕೊಟ್ಟ ಕಾರಣ ಆಗುವ ನಷ್ಟಕ್ಕೆ ಹೋಲಿಸಿನೋಡುತ್ತಾನೆ. ಹಾಗೆಯೇ ಕಾರ್ಮಿಕರೂ ಮುಷ್ಕರದಿಂದಾಗುವ ನಷ್ಟವನ್ನು ಮುಷ್ಕರ ಮಾಡದೆ ಮಾಲೀಕರ ಕಟ್ಟುಪಾಡುಗಳನ್ನು ಒಪ್ಪಿಕೊಳ್ಳುವುದರಿಂದ ಕಳೆದುಕೊಳ್ಳುವ ಅನುಕೂಲಗಳ ಜೊತೆಗೆ ಹೋಲಿಸಿ ನೋಡುತ್ತಾರೆ. ಈ ಅಂಶಗಳ ವಿವೇಚನೆಯ ಆಧಾರದ ಮೇಲೆ ಎರಡು ಪಕ್ಷಗಳ ನಡುವೆ ಆಗುವ ತೀರ್ಮಾನ ಪ್ರಸ್ತುತ ಪರಿಸ್ಥಿತಿಯಲ್ಲಿ ಇಬ್ಬರ ದೃಷ್ಟಿಯಿಂದಲೂ ಕ್ಷೇಮಕರವಾಗಿರುತ್ತದೆ.

ಆದರೆ ಘೇರಾವೊದಲ್ಲಿಯ ಸ್ಥಿತಿಯೆ ಬೇರೆ. ಇಲ್ಲಿ ಕಾರ್ಮಿಕರು ಮಾಲೀಕನನ್ನು ಅನಿರೀಕ್ಷಿತವಾಗಿ ಸುತ್ತುವರಿಯುವುದರಿಂದ ಆತನಿಗೆ ಬೇಡಿಕೆಗಳ ನ್ಯಾಯಬದ್ಧತೆಯ ಬಗೆಗೆ ವಿಚಾರ ಮಾಡಲು ಅವಕಾಶವಿರುವುದಿಲ್ಲ. ಎರಡನೆಯದಾಗಿ, ಇಲ್ಲಿ ನಷ್ಟಸಂಭವ ಎದುರಿಸಬೇಕಾದವನು ಮಾಲೀಕನೊಬ್ಬನೇ ಹೊರತು ಕಾರ್ಮಿಕರಲ್ಲ. ಏಕೆಂದರೆ ಘೇರಾವೊ ಮುಷ್ಕರವಲ್ಲವಾದ್ದರಿಂದ ಕಾರ್ಮಿಕರು ವೇತನವನ್ನು ಕಳೆದುಕೊಳ್ಳುವ ಪ್ರಮೇಯವಿಲ್ಲ. ಅಲ್ಲದೆ, ಮಾಲೀಕ ಎದುರಿಸಬೇಕಾದ ನಷ್ಟಸಂಭವ ಹಣಕಾಸಿನದೊಂದೆ ಅಲ್ಲ. ಅದು ವೈಯಕ್ತಿಕ ಸೌಕರ್ಯ. ಒಂದೊಂದು ವೇಳೆ ಜೀವನದ ಪಣವೂ ಹೌದು. ಘೇರಾವೊವನ್ನು ಹೀಗೆ ನೋಡಿದರೆ ಅದು ಮಾಲೀಕರಲ್ಲೂ ಕಾರ್ಮಿಕರಲ್ಲೂ ಚೌಕಾಸಿ ಸಾಮರ್ಥ್ಯವನ್ನು ಸಮಗೊಳಿಸುವಂಥ ಸರಿಯಾದ ಸಾಧನವಲ್ಲವೆಂಬುದು ಕಂಡುಬರುತ್ತದೆ.

ಒಟ್ಟಿನಲ್ಲಿ ಹೇಳುವುದಾದರೆ ಹಠಾತ್ತಾಗಿ ಉದ್ಭವಿಸಿದ ಈ ಅಸ್ತ್ರ ಔದ್ಯಮಿಕ ಸಂಬಂಧಗಳಲ್ಲಿ ಒಂದು ಕ್ರಾಂತಿಕಾರಕ ಅಂಶವನ್ನು ಪ್ರವೇಶಗೊಳಿಸಿತು. ಈ ಅಸ್ತ್ರವೇನೋ ಕಾರ್ಮಿಕರ ಚೌಕಾಸಿ ಸಾಮರ್ಥ್ಯವನ್ನು ತಾತ್ಕಾಲಿಕವಾಗಿ ಬಲಪಡಿಸುತ್ತದೆ. ಆದರೆ ಘೇರಾವೊ ಹಿಂಸಾತ್ಮಕವಾದ ಅಸ್ತ್ರವಾದ ಕಾರಣ ನೈತಿಕ ಹಾಗೂ ಕಾನೂನಿನ ದೃಷ್ಟಿಯಿಂದ ಅದು ಅನುಚಿತವಾದ್ದು. ಈ ಅಸ್ತ್ರದ ಸಹಾಯದಿಂದ ತಾತ್ಕಾಲಿಕ ಹಿತವನ್ನು ಸಾಧಿಸಿಕೊಳ್ಳಲು ಸಾಧ್ಯವಿರುವ ಕಾರಣ ಕೆಲವು ಕಾರ್ಮಿಕ ಸಂಘಗಳು ಅದನ್ನು ಸಮರ್ಥಿಸಿಕೊಳ್ಳುತ್ತಿರುವುದು ಸ್ವಾಭಾವಿಕವೆ. ಆದರೆ ಈ ಸಮರ್ಥನೆಗೆ ಆಧಾರವಾಗಿರುವ ವಾದಗಳಲ್ಲಿ ತಿರುಳಿಲ್ಲವೆಂಬುದು ಸ್ವಯಂವೇದ್ಯವಾಗಿದೆ.

ಅಸಹಕಾರವೂ ಪ್ರತಿಕಾರವೂ ಒಂದೇ ವಸ್ತುವಿನ ಎರಡು ಅವಸ್ಥೆಗಳು. ಮೊದಲನೆಯದಕ್ಕಿಂತ ಎರಡನೆಯದು ಹೆಚ್ಚು ಉಗ್ರ. ಅಸಹಕಾರದಿಂದಲೇ ಕೆಲಸವಾಗುತ್ತಿದ್ದರೆ ಪ್ರತಿಕಾರವನ್ನು ಮಾಡುವುದು ಬೇಕಿಲ್ಲ. ಅಸಹಕಾರದಲ್ಲಿ, ನಾವು ನಮ್ಮ ಸಹಕಾರ್ಯದ ಕೈಯನ್ನು ಹಿಂದೆಗೆದುಕೊಂಡು ಪ್ರತಿಪಕ್ಷಕ್ಕೆ ಸ್ಥಿತಿಯನ್ನು ಸುಧಾರಿಸಲು ಸಂಧಿಯನ್ನು ಕೊಡುತ್ತೇವೆ. ಅಷ್ಟರಿಂದ ಕೆಲಸ ಆಗದಂತಾದರೆ, ರಾಜ್ಯದ ಕಾಯದೆಯನ್ನು ಮೀರಬೇಕು. ಅದರಲ್ಲಿ (1) ವಿನಯಪೂರ್ವಕವಾಗಿ, ಎಂದರೆ ವಿಶಿಷ್ಟ ಮರ್ಯಾದೆಯನ್ನು ಕಾಯ್ದುಕೊಂಡು, (2) ವ್ಯವಸ್ಥಿತವಾಗಿ, ಎಂದರೆ ಎಲ್ಲಿಯೂ ಶಿಸ್ತಿನ ಭಂಗ ಆಗದಂತೆ, (3) ಬಹಿರಂಗವಾಗಿ, ಎಂದರೆ ಏನನ್ನೂ ಗುಪ್ತವಾಗಿ ಇಡದೆ. ಅಥವಾ ವಕ್ರತೆಯನ್ನು ಎಲ್ಲಿಯೂ ಅವಲಂಬಿಸದೆ, (4) ನಿಶ್ಚಯದಿಂದ, ಎಂದರೆ ವಾದಗ್ರಸ್ತ ಪ್ರಶ್ನೆಯಲ್ಲಿ ಅದಷ್ಟು ಕಡಿಮೆ ಬೇಡಿ. ಅದು ಸಿದ್ಧಿಸುವ ವರೆಗೆ ಹಿಂದೆಗೆಯದೆ, ಶಾಸನಭಂಗ ಮಾಡಬೇಕು. ಹಾಗೆ ಮಾಡುವುದರಿಂದ ಬರುವ ಶಿಕ್ಷೆಯನ್ನು ಆನಂದದಿಂದ, ದ್ವೇಷಭಾವವನ್ನು ಹುಟ್ಟಿಗೊಡದೆ ಸ್ವೀಕರಿಸಬೇಕು: ಅದಕ್ಕೋಸುಗ ಶಿಕ್ಷಣದಲ್ಲಿಯೂ ರಾಷ್ಟ್ರೀಯ ನೀತಿಶಾಸ್ತ್ರದಲ್ಲಿಯೂ ಅದಕ್ಕೆ ನಿತ್ಯಸ್ಥಾನ ದೊರೆಯಬೇಕು.

ಅಸಹಕಾರವೂ ಪ್ರತಿಕಾರವೂ ಸುರಾಜ್ಯವ್ಯವಸ್ಥೆಯಲ್ಲಿ ಪ್ರಾಸಂಗಿಕವೂ ನೈಮಿತ್ತಿಕವೂ ಆಗಿದ್ದರೂ ಅವಕ್ಕೆ ಸಮಾಜಜೀವನದಲ್ಲಿ ನಿತ್ಯಸ್ಥಾನವಿದೆ. ಏಕೆಂದರೆ, ಅವುಗಳ ಆವಶ್ಯಕತೆ ರಾಜಕಾರಣದಲ್ಲಷ್ಟೆ ಇರದೆ ಸಮಾಜಕಾರಣದಲ್ಲಿ, ಕುಟುಂಬಕಾರಣದಲ್ಲಿ, ವ್ಯಕ್ತಿ ವ್ಯಕ್ತಿಗಳ ವ್ಯವಹಾರಗಳಲ್ಲಿ, ಅವುಗಳ ಪ್ರಯೋಗದ ಆವಶ್ಯಕತೆ ಯಾವಾಗಲೂ ಕೆಲಮಟ್ಟಿಗೆ ಇರುತ್ತದೆ. ಪ್ರತಿಕಾರವನ್ನು ಮಾಡದೆ ನಿಷ್ಕ್ರಿಯರಾಗಿ ಅನ್ಯಾಯವನ್ನು ಸಹಿಸುವುದಾಗಲಿ, ತದ್ವಿರುದ್ಧವಾಗಿ ಸಕ್ರಿಯದ ಆವೇಶದಲ್ಲಿ, ಎಚ್ಚರಗೇಡಿಗಳಾಗಿಯೋ, ಎಚ್ಚರುಳ್ಳವರಾಗಿಯೋ ಹಿಂಸಾತ್ಮಕ ಪ್ರತೀಕಾರವನ್ನು ಮಾಡುವುದಾಗಲಿ, ಈ ಎರಡನ್ನೂ ತೊರೆದು ಸವಿನಯ ಅಸಹಕಾರದ ಮತ್ತು ಪ್ರತಿಕಾರದ ರಾಜಮಾರ್ಗವನ್ನು ಸ್ವೀಕರಿಸುವುದು ಶ್ರೇಯಸ್ಕರ. ಅವಶ್ಯವಿದ್ದಾಗ ಈ ಮಾರ್ಗವನ್ನು ಅವಲಂಬಿಸುವ ವೃತ್ತಿ ಮತ್ತು ಶಕ್ತಿ, ರಾಜ್ಯ ವ್ಯವಸ್ಥೆ ಎಂತಹದೇ ಇರಲಿ, ಸಮಾಜದ ನೀತಿಶಾಸ್ತ್ರದಲ್ಲಿ ಜಾಗ್ರತವಿರಬೇಕು.

ಅದಕ್ಕೋಸುಗ ಸ್ಥೂಲನಿಯಮಗಳ ಅಪವಾದಗಳನ್ನೂ ಚಿಕ್ಕಂದಿನಿಂದ ಮಕ್ಕಳಿಗೆ ಕಲಿಸಬೇಕು. ತಾಯಿತಂದೆಯರ ಆಜ್ಞೆಯನ್ನು ಮಕ್ಕಳು ನಮ್ರತಾಪೂರ್ವಕವಾಗಿ ಪಾಲಿಸಬೇಕೆಂಬ ಶಿಕ್ಷಣದೊಡನೆ ಆ ಆಜ್ಞೆ ವಿವೇಕ-ಬುದ್ಧಿಗೆ ಸಮ್ಮತವಾಗದಿದ್ದಲ್ಲಿ ಅದನ್ನು ಮುರಿಯಬೇಕೆಂಬ ಶಿಕ್ಷಣವನ್ನೂ ತಾಯಿತಂದೆಯರೇ ಮಕ್ಕಳಿಗೆ ಕೊಡಬೇಕು[1].

---

1 'ಸ್ವರಾಜ್ಯಶಾಸ್ತ್ರ'ಅನುವಾದ; ಸಾಲಿ ರಾಮಚಂದ್ರರಾಯರು; ಪ್ರಭಾತ ಸಾಹಿತ್ಯ ಮಲ್ಲೇಶ್ವರಂ, ಬೆಂಗಳೂರು (1964); ಪು. 32–33.

ಟಿ. ವಿ. ವೆಂಕಟಾಚಲ ಶಾಸ್ತ್ರೀ

ಹಲ್ಮಿಡಿ ಶಾಸನದ ಅರ್ಥ

ಇಂದಿಗೂ ಹಲ್ಮಿಡಿ ಶಾಸನ (ಸು. 450) ಕನ್ನಡ ಭಾಷೆಯ ಅತ್ಯಂತ ಪ್ರಾಚೀನ ಶಾಸನವೆಂದು ಗಣ್ಯವಾಗಿದೆ. ಮೈಸೂರು ಶಾಸನ ಇಲಾಖೆಯ 1936ನೆಯ ಇಸವಿಯ ವಾರ್ಷಿಕ ವರದಿಯಲ್ಲಿ ಈ ಶಾಸನದ ಅಧಿಕೃತ ಪಾಠ, ಆ ಸಂಬಂಧವಾದ ವಿವರ ವಿಮರ್ಶೆಯೊಡನೆ ಮೊದಲ ಬಾರಿಗೆ ಪ್ರಕಟವಾಯಿತು. ಮತ್ತೆ ಶಾಸನ ಪಾಠ ಮತ್ತು ಸಂಕ್ಷಿಪ್ತ ವಿಮರ್ಶೆ ಪ್ರಬುದ್ಧ ಕರ್ಣಾಟಕದ ಸಂ. 30–ಸಂ.3 (1936)ರಲ್ಲಿ ಡಾ. ಎಂ. ಎಚ್. ಕೃಷ್ಣರ ಹೆಸರಿನಲ್ಲಿ ಪ್ರಕಟವಾದವು. ಈಯೆರಡೂ ಮೂಲಗಳ ಶಾಸನಪಾಠ ಮತ್ತು ವಿಷಯ ವಿಮರ್ಶೆ ಅಲ್ಪ ವ್ಯತ್ಯಾಸಗಳ ಹೊರತು ಒಂದೇ ಆಗಿದೆ. ಈ ಶಾಸನದ ಅಭ್ಯಾಸಕ್ಕೆ ಹಾಗೂ ವಿಮರ್ಶೆಗೆ ಆಯೆರಡು ಮೂಲಗಳಲ್ಲಿ ಒಂದನ್ನು ಸಾಮಾನ್ಯವಾಗಿ ಎಲ್ಲರೂ ಅನುಸರಿಸುತ್ತಾರೆ. ಹೆಚ್ಚು ಸಮರ್ಪಕವಾಗಿ ಶಾಸನ ಪಾಠವನ್ನು ಅರ್ಥೈಸುವುದಕ್ಕೆ ಕೆಲವು ಶಬ್ದಾರ್ಥಕ್ಲೇಶಗಳು ಹಾಗೆಯೇ ಉಳಿದಿರುವುದೂ ಹೆಚ್ಚು ವಿಶದವಾಗಿ ಶಾಸನವಸ್ತುವನ್ನು ವಿಮರ್ಶಿಸುವುದಕ್ಕೆ ಅಗತ್ಯವಾದ ಉಪಪತ್ತಿಗಳ ಅಭಾವವಿರುವುದೂ ಪ್ರಾಯಃ ಕಾರಣವಾಗಿ, ಈ 30 ವರ್ಷಗಳ ಮೇಲೆಯೂ ಡಾ. ಕೃಷ್ಣರ ಶಾಸನ ಪಾಠ ವಿಷಯ ವಿಮರ್ಶೆಗಳು ಚಾಲ್ತಿಯಲ್ಲಿವೆ. 'ಬಾಳ್ಗಚ್ಚು', 'ಸಟ್ಟಿಂಗದರ್' ಎಂಬೆರಡು ಪದಗಳ ಬಗೆಗೆ ಹೊಸ ಅರ್ಥದ ಸೂಚನೆಗಳೂ ವಿವರಣೆಗಳೂ ಕೆಲಮಟ್ಟಿಗೆ ಹೊರಬಿದ್ದಿವೆ; ಇಷ್ಟರ ಹೊರತು ಶಾಸನದ ವಿಶದವಾದ ಅರ್ಥವಿವೇಚನೆಗೆ ಹೆಚ್ಚಿನ ವಿಚಾರಗಳೇನೂ ನಡೆದಿಲ್ಲ.

ಡಾ. ಕೃಷ್ಣರ ಇಂಗ್ಲಿಷ್ ಕನ್ನಡ ಅನುವಾದಗಳು ಒಟ್ಟಿನಲ್ಲಿ ಶಾಬ್ದಿಕ ಅನುವಾದ. ಈ ಅನುವಾದಗಳನ್ನು ಶಾಸನಪಾಠದೊಡನೆ ಇಟ್ಟು, ಸೂಕ್ಷ್ಮವಾಗಿ ಪರಿಶೀಲಿಸಿದಾಗ, ಕೆಲವು ಕಾರಣಗಳಿಂದಾಗಿ ಅವು ನಮಗೆ ಪೂರ್ತಿಯಾಗಿ ತೃಪ್ತಿಯನ್ನು ಕೊಡುವುದಿಲ್ಲ. ಶಾಸನಪಾಠದ ಅರ್ಥಾನ್ವಯಗಳು ಅಷ್ಟು ಸುಲಭವಾಗಿಲ್ಲದಿರುವುದರಿಂದ ಅದು ಸಹಜವೇ ಆಗಿದೆ. ಹೀಗಾಗಿ ಇಲ್ಲಿ ವಿಚಾರಕ್ಕೂ ಅಭಿಪ್ರಾಯ ಭೇದಗಳಿಗೂ ಅವಕಾಶವಿದ್ದೇ ಇದೆ. ಆದರೆ ಅವನ್ನು ಲಿಖಿತವಾಗಿ ವ್ಯಕ್ತಮಾಡುವ ಪ್ರಯತ್ನ ಈವರೆಗೆ ನಡೆದ ಹಾಗೆ ತೋರುವುದಿಲ್ಲ. ಪ್ರಸ್ತುತಲೇಖನ ಅಂಥ ಒಂದು ಪ್ರಯತ್ನ. 1

ಡಾ. ಕೃಷ್ಣರ ಶಾಸನ ಪಾಠದ ಅನುವಾದಗಳನ್ನು ಇಲ್ಲಿ ಉದ್ಧರಿಸುವುದು ಅನಾವಶ್ಯಕ. ಆಯಾ ಮೂಲಗಳನ್ನೇ ನೋಡಿ ಅವನ್ನು ತಿಳಿಯಬಹುದು. ವಿಚಾರಣೀಯವಾಗಿ ನನಗೆ ತೋರಿದ ಕೆಲವು ಭಾಗಗಳನ್ನಷ್ಟೇ ಎತ್ತಿಕೊಂಡು ವಿಮರ್ಶಿಸಿ, ನನಗೆ ಬೇರೆಯಾಗಿ ತೋರಿದ ಶಾಸನದ ಪೂರ್ತಿಯಾದ ಅನ್ವಯವನ್ನೂ ಅರ್ಥವನ್ನೂ ಕೊನೆಗೆ ಕೊಡುತ್ತೇನೆ.

ಶಾಸನಾದಿಯ ಶ್ಲೋಕದ ಬಗೆಗೆ ಮೊದಲು ನೋಡೋಣ. ಇದು ಸಲಕ್ಷಣವಾದ ಅನುಷ್ಟುಪ್ ಶ್ಲೋಕ. ಇದರ ಮೈ. ಆ. ರಿ ಯ (Mysore Archæological Report) ಪಾಠಕ್ಕೂ ಪ್ರ. ಕ. ದ

---

1 ಡಾ. ಕೃಷ್ಣರು ಕೊಡುವ ಮುದ್ರಿತ ಶಾಸನ ಪಾಠವನ್ನಿಟ್ಟುಕೊಂಡು, ಅವರ ತಿದ್ದುಪಡಿಗಳನ್ನು ಒಪ್ಪಿಕೊಂಡು, ಇಲ್ಲಿ ಶಾಸನ ಪಾಠದ ವಿಮರ್ಶೆಯನ್ನು ಮಾಡಿದೆ; ಅದ್ದರಿಂದ ಈ ವಿಮರ್ಶೆಗೆ ಕೆಲವು ಇತಿಮಿತಿಗಳುಂಟು.

(ಪ್ರಬುದ್ಧ ಕರ್ಣಾಟಕ) ಪಾಠಕ್ಕೂ ಅಲ್ಪ ವ್ಯತ್ಯಾಸವಿದೆ. ಶ್ಲೋಕದ ಪೂರ್ವಾರ್ಧದಲ್ಲಿ ಕಂಸದೊಳಗಿನ 'ವ್ಯಾನತಿ'ಗೆ ಡಾ. ಕೃಷ್ಣರು 'ವ್ಯಾನತಿ'ಯೆಂದು ಸಲಹೆ ಮಾಡಿದ್ದಾರೆ. ಅರ್ಥದ ದೃಷ್ಟಿಯಿಂದ ಇದು ಸರಿ. ಇನ್ನು 'ವ್ಯಾನತಿ'ಗೆ (ವಿ+ಆ+ನತಿಃ=ಚೆನ್ನಾಗಿ ಬಗ್ಗಿಸಿ ಹಿಡಿದಿರುವಾತನು) ವಿಷಯವಾದ್ದನ್ನು ತಿಳಿಸುವಲ್ಲಿ ಹಿಂದೆ 'ಶಾರ್ಙ್ಗ'ವೆಂದು ಶಾಸನ ಪಾಠವಿದೆ. ಆದರೆ 'ಶಾರ್ಙ್ಗ ಧನುಸ್ಸನ್ನು' ಎಂದು ಇಲ್ಲಿ ಅಭಿಪ್ರಾಯವಾಗಬೇಕಾದ್ದರಿಂದ 'ಶಾರ್ಙ್ಗ' ಎಂದಿರಬೇಕು. 'ಶಾರ್ಙ್ಗಿನ' ಅಲ್ಲ. ಅಲ್ಲದೆ ವಿಸರ್ಗದ ಮುಂದೆ ಶಕಾರ ಬಂದಾಗ ಸಂಧಿನಿಯಮದಂತೆ 'ಶ್ಶ' ಆಗುವುದೆನ್ನುವುದರಿಂದ 'ಶ್ರೀಪರಿಷ್ವಜ್ಗಶ್ಶಾರ್ಙ್ಗ' ಎಂಬ ತಿದ್ದುಪಾಟೂ ಆಗಬೇಕು. ಉತ್ತರಾರ್ಧದಲ್ಲಿಯ ಅಲ್ಪ ವ್ಯತ್ಯಾಸ ದಾನವಾಕ್ಷ್ಣ (ಮೈ. ಆ. ೧)-ದಾನವಾಕ್ಷ್ಣೋಃ (ಪ್ರ. ಕ.) ಎಂಬ ಭಾಗದಲ್ಲಿದೆ. 'ಕ್ಷ್ಣ' 'ಕ್ಷ್ಣೋಃ' ಆದರೆ ಮೈ. ಆ.ರಿಯ ಪಾಠ ವ್ಯಾಕರಣ ದೃಷ್ಟಿಯಿಂದ ಸರಿಯಾಗುತ್ತದೆ. ಈ ಭಾಗದಲ್ಲಿ ಅರ್ಥಕ್ಲೇಶವಿಲ್ಲ. ಪರಿಷ್ಕೃತ ಪದ್ಯರೂಪ ಹೀಗೆ:

ಜಯತಿ ಶ್ರೀಪರಿಷ್ವಜ್ಗಶ್ಶಾರ್ಙ್ಗ[ವ್ಯಾನತಿ]ರಚ್ಯುತಃ
ದಾನವಾಕ್ಷ್ಣೋರ್ಯುಗಾನ್ತಾಗ್ನಿಃ[ಶಿಷ್ಟಾನಾನ್ತು]ಸುದರ್ಶನಃ

ಪದಶಃ ಅರ್ಥ ಹೀಗೆ: ಶ್ರೀ ಪರಿಷ್ವಙ್ಗಃ=ಲಕ್ಷ್ಮಿಯಿಂದ ಆಲಿಂಗಿತನಾಗಿರುವವನೂ ಶಾರ್ಙ್ಗವ್ಯಾನತಿಃ= ಚೆನ್ನಾಗಿ ಬಗ್ಗಿಸಿ ಹಿಡಿದಿರುವ ಶಾರ್ಙ್ಗವೆಂಬ ಧನುಸ್ಸುಳ್ಳವನೂ ಅಚ್ಯುತಃ= ಅಚ್ಯುತನೂ ದಾನವಾಕ್ಷ್ಣೋಃ=ಅಸುರರ ಕಣ್ಣುಗಳಿಗೆ. ಯುಗಾನ್ತಾಗ್ನಿಃ= ಪ್ರಳಯಕಾಲದ ಬೆಂಕಿಯಾಗಿರುವವನೂ ಶಿಷ್ಟಾನಾಂ ತು=ಸತ್ಪುರುಷರಿಗಾದರೋ, ಸುದರ್ಶನಃ=ಒಳ್ಳೆಯ ನೋಟ (ಸುದರ್ಶನ ಚಕ್ರ)ವಾಗಿರುವನೂ (ಆದವನು) ಜಯತಿ=ಗೆಲ್ಲುತ್ತಾನೆ2.

ಇನ್ನು ಶಾಸನಗದ್ಯದ ವಿವೇಚನೆ. ಸಂಸ್ಕೃತ ಸ್ತುತಿವಾಚಕವಾಗಿ 'ನಮಃ' ಆದ ಮೇಲೆ 'ಶ್ರೀಮತ್ಕದಂಬಪನ್' ಎಂದು ಮುಂದಾಗಿ ಕನ್ನಡ ವಾಕ್ಯ ಸರಣಿ ಬರುತ್ತದೆ. 'ಕಕುಸ್ಥಭಟ್ಟೋರನಾಳೆ' ಎನ್ನುವವರೆಗೆ ಅರ್ಥದ ತೊಡಕೇನಿಲ್ಲ. 'ಕದಂಬಪನ್' ಎನ್ನುವುದಕ್ಕೆ ಡಾ. ಕೃಷ್ಣರು ತಮ್ಮ ಅನುವಾದಗಳಲ್ಲಿ ಕದಂಬರ ರಾಜ ಎಂದಿದ್ದಾರೆ. ಪಾಲನೆ. ರಕ್ಷಣೆ ಈ ಅರ್ಥಗಳ 'ಪ' ಕಾರಯುಕ್ತ ಗೋಪ. ನೃಪ. ಕ್ಷಿತಿಪ ಎಂಬ ಪದಗಳ ಹಾಗೆ. 'ಕದಂಬಪನ್' ಪದಕ್ಕೆ 'ಕದಂಬ ವಂಶದ ದೊರೆ' ಎನ್ನುವುದಕ್ಕಿಂತ 'ಕದಂಬ'ರ ರಾಜ್ಯ (ಸೀಮೆ)ವನ್ನು ಪಾಲಿಸುವವನು' ಎಂದಿಟ್ಟುಕೊಳ್ಳಬಹುದೆಂದು ತೋರುತ್ತದೆ.

'ನರಿದಾವಿ[ಳೆ]ನಾಡುಳ್ ಮೃಗೇಶನಾಗೇನ್ದ್ರಾಭೀಳಭ್ಭಟ್ಟಹರಪ್ಪೋರ್ ಶ್ರೀ ಮೃಗೇಶನಾಗಾಹ್ವಯರಿರ್ವ್ವರ್'–ಮುಂದಿನ ಭಾಗ. ಇದು ಮೈ.ಆ.ರಿ.ಯ ಮುದ್ರಣದಲ್ಲಿ: ಪ್ರ.ಕ.ದಲ್ಲಿ 'ರಪ್ಪೊರ್'ಗೆ 'ರಪ್ಪೋರ್' ಎಂದಿದೆ. ಮೂಲವನ್ನು ಈಯೆರಡು ರೀತಿಯಲ್ಲಿಯೂ ಓದುವ ಸಾಧ್ಯತೆಯಿದೆ. ಮೃಗೇಶ ಮತ್ತು ನಾಗ ಎಂಬವರಿಗೆ ವಿಶೇಷಣವಾಗಿ ಹೇಳಿರುವ 'ಮೃಗೇಶನಾಗೇನ್ದ್ರಾಭೀಳರ್' ಎಂಬುದಕ್ಕೆ ಡಾ. ಕೃಷ್ಣರು ಇಂಗ್ಲಿಷ್ ಅನುವಾದದಲ್ಲಿ who were terrible as the lord of beasts (the lion or Siva) and the lord of elephants (or serpents—Airavata or Ananta) ಎಂದೂ ಕನ್ನಡ ಅನುವಾದದಲ್ಲಿ 'ಮೃಗೇಶ ನಾಗೇಂದ್ರರಂತೆ (ಸಿಂಹ ಅಥವಾ ಶಿವ. ಆನೆ ಅಥವಾ ಸರ್ಪ) ಭಯಂಕರರಾದ' ಎಂದೂ ಅರ್ಥಮಾಡಿದ್ದಾರೆ. ಈ ಶ್ಲೇಷೆಯು ಇಲ್ಲಿ ಸಾಧ್ಯವಿದ್ದರೂ ಅನಾವಶ್ಯಕವೆಂದು ಅಥವಾ ಅನುದ್ದೇಶಿತವೆಂದು ತೋರುತ್ತದೆ. ಮೃಗೇಶನಾಗರ ಶೌರ್ಯಸಾಮರ್ಥ್ಯಗಳನ್ನು ಧ್ವನಿಸುವುದಕ್ಕೆ ಬಂದಿರುವ ಆ ಮಾತು ಬರಿಯ ಮೃಗರಾಜನಾದ ಸಿಂಹವನ್ನೂ ನಾಗರಾಜನಾದ ವಾಸುಕಿ (ಅಥವಾ ಮಹೋಗ್ರ ಸರ್ಪ)ಯನ್ನೂ ಹೇಳು

---

2. 'ವ್ಯಾನತಿ' ಮತ್ತು 'ಸುದರ್ಶನ' ಎಂಬ ಮಾತುಗಳಿಗೆ ಶ್ಲೇಷಾರ್ಥವಿರುವಂತೆ ತೋರುತ್ತದೆಂದು ಮೈ. ಆ. ರಿ.ಯ ಇಂಗ್ಲಿಷ್ ವಿವರಣೆಯಲ್ಲಿ ಭಾವಿಸಲಾಗಿದೆ; 'ಸುದರ್ಶನ' ಎಂಬ ಒಂದು ಮಾತಿನ ಮಟ್ಟಿಗೆ ಇದನ್ನು ಒಪ್ಪಬಹುದು.

ಪ್ರಸ್ತುತ ಪದ್ಯಾರ್ಥದ ವಿಶದತೆಗೆ ನನಗೆ ಶ್ರೀಯುತ ವಿದ್ವಾನ್ ಎನ್. ಎಸ್. ವೆಂಕಟನಾಥಾಚಾರ್ಯರು ನೆರವಾಗಿದ್ದಾರೆ. ಅವರಿಗೆ ನನ್ನ ಕೃತಜ್ಞತೆಗಳು.

ತ್ರಿಪದೆಯೆಂದಿಟ್ಟುಕೊಂಡರೆ ಸಾಕು. ತತ್ಕಾಲೀನ ಸಾಂಸ್ಕೃತಿಕ ಇತಿಹಾಸದಲ್ಲಿಯು ಮೃಗೇಶವರ್ಮ ಸಿಂಹವರ್ಮ ಇಂಥ ಹೆಸರುಗಳೂ ನಾಗಪೂಜೆ ನಾಗವಂಶ ಇಂಥವುಗಳ ಉಲ್ಲೇಖಗಳೂ ಇಲ್ಲಿ ನೆನೆಯತಕ್ಕವಾಗಿವೆ. 'ಭಟಹರಪ್ಪೋ(ೕ)ರ್' ಎನ್ನುವುದಕ್ಕೆ ಅರ್ಥ ಮಾಡುವಾಗ, 'ಭಟಹ' ಶಬ್ದಕ್ಕೆ 'governors (?)' ಎಂದೂ 'which perhaps means a prince or general with a status between that of the emperor and a subordinate king who is a commander-in-chief' ಎಂದೂ (ಮೈ. ಆ. ರಿ. 1938. ಪುಟ 74, 80) 'ಅಧಿಕಾರಿಗಳು' ಎಂದೂ (ಪ್ರ. ಕ. 20-3. ಪುಟ 39) ಅರ್ಥವನ್ನು ಸೂಚಿಸಿದೆ. ಶಾಸನದ ಮೃಗೇಶನೂ ಕದಂಬವಂಶದ ಮೃಗೇಶವರ್ಮನೂ ಅಭಿನ್ನರೆಂದು ಭಾವಿಸಿದ್ದು, 'ಭಟಹ'ಶಬ್ದದ ಅರ್ಥನಿರ್ಣಯದಲ್ಲಿ ಪ್ರಭಾವಬೀರಿರುವುದು ಸ್ಪಷ್ಟವಾಗಿಯೇ ಇದೆ. ಈ ಶಬ್ದ ಯೋಧಾರ್ಥಕವಾದ 'ಭಟಃ' ಶಬ್ದದಿಂದಲೋ ಸ್ವಾಮ್ಯರ್ಥಕವಾದ 'ಭಟ್ಟಃ'ಶಬ್ದದಿಂದಲೋ ಹುಟ್ಟಿರಬಹುದು. ಭಟ್ಟಃ>ಭಟಹ ಆಗಿದ್ದ ಪಕ್ಷದಲ್ಲಿ, ಮೃಗೇಶ ನಾಗರು ನರಿದಾವಿಳೆ ನಾಡಿನ ಒಡೆಯರು ಎಂದಿಟ್ಟುಕೊಳ್ಳಬಹುದು. ಅಯಿಬ್ಬರೂ ಬರಿಯ ಯೋಧರಾಗಿರಲಾರರು: ತೀರ ಮೇಲಿನ ಪದವಿಯವರೂ ಆಗಿರಲಾರರು. 'ಭಟಹರಪ್ಪೋರ್' ಎಂಬುದನ್ನು ಅರ್ಥೈಸಿರುವುದು ಕೂಡ ವಿಚಾರಣೀಯವಾಗಿದೆ. 'the governors (?) in the Naridavile province were' ಎನ್ನುವ, ಅಧಿಕಾರಿಗಳಾಗಿದ್ದರು ಎನ್ನುವ ರೀತಿಯಲ್ಲಿ ಭೂತಕಾಲಿಕವಾಗಿ ವಾಕ್ಯವನ್ನು ಪೂರ್ಣಗೊಳಿಸಿದೆ. ಆದರೆ ದಿಟವಾಗಿ ಇಲ್ಲಿ 'ಮೃಗೇಶ ಮತ್ತು ನಾಗೇಂದ್ರರಂತೆ ಭಯಂಕರರಾಗಿರುವ, ಭಟಹರಾಗಿರುವವರಾದ, ಶ್ರೀ ಮೃಗೇಶ ಮತ್ತು ನಾಗ ಎಂಬ ಹೆಸರಿನ ಇಬ್ಬರು-' ಎಂಬುದಾಗಿ ಅಪೂರ್ಣವಾಕ್ಯವಿದ್ದು 3 ಆಕಾಂಕ್ಷೆಗೆ ಮುಂದೆ ಉತ್ತರ ದೊರೆಯುತ್ತದೆ.

ಶಾಸನದ ಐದನೆಯ ಸಾಲಿನಿಂದ ಪಶುಪತಿಯ ಸಂಬಂಧವಾದ ವಿಶೇಷಣಗಳು ಬಂದಿವೆ. 'ಬಟರಿಕುಲಾಮಲವ್ಯೋಮ'-ಎಂದು ಮೊದಲಾಗಿ ಒಂಬತ್ತನೆಯ ಸಾಲಿನಲ್ಲಿ 'ಪಶುಪತಿನಾಮಧೇಯನಾ' ಎನ್ನುವಲ್ಲಿಗೆ ಆ ವಾಕ್ಯಭಾಗದ ವ್ಯಾಪ್ತಿಯಿದೆ. 'ಬಟರಿಕುಲಾಮಲವ್ಯೋಮ ತಾರಾಧಿನಾಥನ್ನಳಪಗಣ ಪಶುಪತಿ' ಎಂಬುದರಲ್ಲಿ ಎರಡು ವಿಶೇಷಣಗಳಿವೆ. ಮೈ. ಆ. ರಿ. ಯಲ್ಲಿ 'ಪಶುಪತಿ ಮಾ' ಎಂದಿರುವುದು ಪ್ರ. ಕ. ದಲ್ಲಿ 'ಪಶುಪತಿಯಾ' ಎಂದಾಗಿದೆ. ಮುಂದೆ ಬಂದಿರುವ ಷಷ್ಠೀ ವಿಭಕ್ತ್ಯಂತ ವಿಶೇಷಣಗಳಿಗೆ ಅನುಗುಣವಾಗಿ ಈ ವ್ಯತ್ಯಾಸವನ್ನು ಮಾಡಿಕೊಂಡಿರುವಂತೆ ತೋರುವುದು. ಇಲ್ಲವೆ ಪಶುಪತಿ + ಆ ಎಂದೂ ಹೇಳಿಕೊಳ್ಳಬಹುದು. ಆದರೆ ವಿಚಾರಣೀಯವಾಗಿರುವುದು, 'ತಾರಾಧಿನಾಥನ್ನಳಪಗಣ' ಎಂಬ ಭಾಗ. ಇದು ನ್ಯಾಯವಾಗಿ ತಾರಾಧಿನಾಥನ್ + ನಳಪ ಗಣ ಎಂದು ಒಡೆಯಬೇಕು. ಪಶುಪತಿಯ ಐತಿಹಾಸಿಕತೆಯನ್ನು ಹಿಡಿದು ತಾರಾಧಿನಾಥನ್ + ಅಳಪಗಣ ಎಂದು ವಿಭಜಿಸಿರುವುದು ಕಾಣುತ್ತದೆ. 'ನ್ನ'ಕಾರ ಶಾಸನದಲ್ಲಿ ತಪ್ಪಾಗಿ ಲಿಖಿತವಾಗಿರಬೇಕು. 'ನ'ಕಾರಕ್ಕೆ 4. ನಳನೆಂಬ ರಾಜಮನೆತನದವರಿಗೂ ಪ್ರಸ್ತುತ ಶಾಸನಕ್ಕೂ ಸಂಬಂಧವಿರಲಾರದಷ್ಟೆ! '(ಅ) ದಕ್ಷಿಣಾಪಥಬಹುಶತಹವನಾಹವದು[ೞ್] ಪಶುಪ್ರದಾನಶೌರ್ಯೋದ್ಯಮ ಭರಿತೋನ್' ಎಂಬ ವಿಶೇಷಣವು ಮುಂದೆ ವಿಚಾರಣೀಯವಾದ್ದು. 'who is full of heroism and action in giving away (slaying) cows (sacrificial beasts) in many hundreds of sacrifices which are battles in the great Dakshinapatha (Southern India)'—ಎಂದೂ

---

3 ಈಗಳ್ ಮಹಾತಪೋಧನರ್ ಗುಣವಂತರಪ್ಪರ್ ನಿಮ್ಮ ಮನೆಗೆ ವಂದೊಡೆ, ಉಜ್ಜಯಂತಮಂ ವಿಹಾರಿಸುತ್ತಂ ಬರ್ಪೊರಾ ಕೌಂಡಿನೀ ನಗರಕ್ಕೆ ವಂದು, ಆರಾನುಂ ಬಟ್ಟೆವೋಪರ್ ಬೀಡಂ ಬಿಟ್ಟಿರ್ದರ್ ನಿಜೀಸುವರಪ್ಪುದಱಿಂದೆ. ಈತನೆಮ್ಮಂ ಸುಟ್ಟಪ್ಪೊನಲ್ಲಂ- ಎಂಬ ಇಂಥ ವಾಕ್ಯಗಳನ್ನು (ವಡ್ಡಾರಾಧನೆ. 1949ರ ಮುದ್ರಣ. ಪು. 8, 68, 84, 146) ಹೋಲಿಸಿ.

4 ಶಾಸನದ 13ನೆಯ ಸಾಲಿನಲ್ಲಿಯ 'ಬಟಾರಿ ಕುಲದೊಳಕಪಮ್ಮನ್' ಎಂಬ ಭಾಗವನ್ನು ಪ್ರಸ್ತುತ ಭಾಗದೊಡನೆ ಹೋಲಿಸಿ.

‘ಆ ದಕ್ಷಿಣಾಪಥದಲ್ಲಿ ಅನೇಕ ಯಜ್ಞಗಳೆಂಬ ಯುದ್ಧಗಳಲ್ಲಿ ಪಶುಪ್ರದಾನ (ದಾನಮಾಡುವುದು, ಕೊಲ್ಲುವುದು) ಶೌರ್ಯೋದ್ಯಮದಿಂದ ಕೂಡಿದ’ ಎಂದೂ ಅನುವಾದಮಾಡಿದೆ. ಐತಿಹಾಸಿಕ ವ್ಯಕ್ತಿಯಾದ ಪಶುಪತಿಯು ದಕ್ಷಿಣಾಪಥದ ಯುದ್ಧಸಾಧನೆಗಳನ್ನು ಕೀರ್ತಿಸುವುದರ ಮೂಲಕ ಆತನು ಮಹಾಶೂರನೆಂದು ಹೊಗಳುವುದು ಈ ವಿಶೇಷಣದ ಉದ್ದೇಶ. ಇದರ ಹೊರತು ಆತನು ಯಾಗಗಳನ್ನಾಗಲಿ ದಾನಗಳನ್ನಾಗಲಿ ಮಾಡುತ್ತಿದ್ದನೆಂಬುದಾಗಿ ಹೇಳುವುದಿಲ್ಲ. ‘Pasupathi and Kakustha are mentioned as taking great interest in the performances of yagas and in bestowing gifts respectively’ ಎಂಬುದಕ್ಕೆ (ಮೈ. ಆ. ರಿ., ಪು. 81) ಶಾಸನದಲ್ಲಿ ಆಧಾರವಿಲ್ಲ. ಕಕುಸ್ಥ–ಪಶುಪತಿಯರ ವಿಶೇಷಣಗಳ ಅರ್ಥವನ್ನು ಮಿತಿಗಿಂತ ಹಿಗ್ಗಿಸಿರುವಂತೆ ತೋರುತ್ತದೆ. ‘ಬಹು ಶತಪವನಾಹವದು[ಳ್]’ ಎಂಬ ಮಾತಿಗೆ ‘ನೂರಾರು ಯಜ್ಞಗಳೆಂಬ ಯುದ್ಧಗಳಲ್ಲಿ’ ಎಂಬ ಪದಶಃ ಅರ್ಥ ಸರಿ; ಆದರೆ ಇಲ್ಲಿ ರೂಪಕೋಕ್ತಿಕ್ರಮ ವಿಚಿತ್ರವಾಗಿರುವಂತೆ ತೋರುತ್ತದೆ. ‘ನೂರಾರು ಯುದ್ಧಗಳೆಂಬ ಯಜ್ಞಗಳಲ್ಲಿ’ ಎನ್ನುವರ್ಥದ ‘ಬಹುಶತಾಹವಪವನದು[ಳ್]’ ಎಂಬುದು ನಿಜವಾಗಿ ಸಹಜ ರೂಪಕೋಕ್ತಿಕ್ರಮ. Transferred epithet ಎಂಬ ಇಂಗ್ಲಿಷ್ ಅಲಂಕಾರ ವೈಚಿತ್ರ್ಯದ ನೆನಪು ಇಲ್ಲಿ ನಮಗಾಗುತ್ತದೆ. ‘ಪಶುಪ್ರದಾನ’ಕ್ಕೆ (ಪ್ರತಿಪಕ್ಷದವರನ್ನು) ಬಲಿಗೊಡುವುದು’ ಎಂಬುದಾಗಿಯೂ ‘ಶೌರ್ಯೋದ್ಯಮ’ಕ್ಕೆ ‘ಶೌರ್ಯಯುಕ್ತವಾದ ಉದ್ಯಮ’ ಎಂಬುದಾಗಿಯೂ ಅರ್ಥವನ್ನಿಟ್ಟುಕೊಳ್ಳುವುದೇ ಸರಿ. ‘ಆ ದಕ್ಷಿಣಾಪಥದ ನೂರಾರು ಯುದ್ಧಗಳೆಂಬ ಯಜ್ಞಗಳಲ್ಲಿ (ಪ್ರತಿಪಕ್ಷದವರನ್ನು) ಬಲಿಗೊಡುವಲ್ಲಿ ಶೌರ್ಯಯುಕ್ತವಾದ ಉದ್ಯಮದಿಂದ ತುಂಬಿರುವವನು’ ಎಂಬುದಾಗಿ ಬಿಟ್ಟು ವಿಶೇಷಣದ ಅರ್ಥ. ಮುಂದುವರಿದು, ‘ಪೊಟ್ಟಣ’ಕ್ಕೆ ಬೇರೆ ಅರ್ಥವಿದೆಯೆಂದು ಇಂಗ್ಲಿಷ್ ವಿವರಣೆಯಲ್ಲಿ (ಮೈ. ಆ. ರಿ. ಪು. 81) ಭಾವಿಸಿ, ‘ಪೊಗಟೆಪ್ಪೊಟ್ಟಣ’ ಕರ್ಮಣ್ಯರ್ಥಕ ಪದವೆಂದು ಕನ್ನಡ ಅನುವಾದದಲ್ಲಿ ಗ್ರಹಿಸಿರುವುದನ್ನು ಗಮನಿಸಿದಾಗ, ಎರಡನೆಯ ಗ್ರಹಿಕೆ ಸಮಾಧಾನವನ್ನು ಕೊಡುತ್ತದೆ. ಈ ಭಾಗದಲ್ಲಿ, ಇನ್ನೂ ಒಂದು ಅಂಶದಲ್ಲಿ ವಿಶದತೆ ಬೇಕಾಗಿದೆ. ಪಶುಪತಿಗೆ ಹೇಳಿರುವ ವಿಶೇಷಣಗಳನ್ನು ಪ್ರಥಮಾ ವಿಭಕ್ತ್ಯರ್ಥದಲ್ಲಿ ಅನ್ವಯಿಸುವುದಕ್ಕೂ ಎರಡನೆಯ ವಿಶೇಷಣಗಳ ಕೊನೆಗೆ ಷಷ್ಠೀ ವಿಭಕ್ತ್ಯರ್ಥದಲ್ಲಿ ಅನ್ವಯಿಸುವುದಕ್ಕೂ ಅವಕಾಶವಿದೆ. ಹೀಗೇ ಅನ್ವಯಿಸಬೇಕೆಂಬುದಾಗಿ ನಿರ್ಬಂಧಿಸಲಾಗದು. ಡಾ. ಕೃಷ್ಣರು ತಮ್ಮ ಕನ್ನಡ ಅನುವಾದದಲ್ಲಿ ಎಲ್ಲ ವಿಶೇಷಣಗಳನ್ನೂ ಷಷ್ಠ್ಯರ್ಥಕವಾಗಿ ಮಾಡಿದ್ದಾರೆ. ಆದರೆ ಎಲ್ಲ ವಿಶೇಷಣಗಳನ್ನೂ ಪ್ರಥಮಾರ್ಥಕವಾಗಿ ಮಾಡಿಕೊಂಡು, ‘—ಎಂದು ಪೊಗಟೆಪ್ಪೊಟ್ಟಣ’(= ಎಂದು ಹೊಗಳಲ್ಪಟ್ಟವನು) ಎಂದು ಹೇಳಿಕೊಳ್ಳುವುದು ನನಗೆ ಒಪ್ಪಿಗೆಯಾದ್ದು. ಅದು ಹೀಗೆ: ‘ಬಟುಲಿವಂಶವೆಂಬ ನಿರ್ಮಲವಾದ ಆಕಾಶಕ್ಕೆ ಚಂದ್ರ, ಅಳಪರಗಣಕ್ಕೆ ಶಿವನು (= ಅಳಪರ ಸಮೂಹಕ್ಕೆ ಸ್ವಾಮಿ). ಆ ದಕ್ಷಿಣಾಪಥದ ನೂರಾರು ಯುದ್ಧಗಳಲ್ಲಿ (ಪ್ರತಿಪಕ್ಷದವರನ್ನು) ಬಲಿಗೊಡುವಲ್ಲಿ ಶೌರ್ಯಯುಕ್ತ ಉದ್ಯಮದಿಂದ ಕೂಡಿದವನು. ದಾನಪಶುಪತಿ–ಎಂದು ಹೊಗಳಲ್ಪಟ್ಟವನು’[5].

8–9ನೆಯ ಸಾಲಿನ ‘ಪಶುಪತಿ ನಾಮಧೇಯನಾಸರಕ್ಕೆ’ (ಮೈ. ಆ.ರಿ.)/ ‘ಪಶುಪತಿ ನಾಮಧೇಯನಾ ಸರಕ್ಕೆ’ (ಪ್ರ.ಕ) ಎಂಬ ವಾಕ್ಯಭಾಗವೂ ಅರ್ಥದ ದೃಷ್ಟಿಯಿಂದ ವಿಚಾರಣೀಯ. ಈ ವಾಕ್ಯಭಾಗದಲ್ಲಿ ಮೊದಲು ಕೂಡಿಸಿರುವ ಪದಭಾಗವನ್ನು ಬಳಿಕ ಸಾಂದರ್ಭಿಕ ಅರ್ಥಕ್ಕಾಗಿ ಬಿಡಿಸಿಕೊಂಡಿದೆಯೆಂದಿಟ್ಟುಕೊಳ್ಳುವುದಾದರೆ, ಕೂಡಿಸಿರುವ ಭಾಗವನ್ನು ಪಶುಪತಿನಾಮಧೇಯನ + ಆ + ಸರಕ್ಕೆ, ಪಶುಪತಿ ನಾಮಧೇಯನಾ + ಸರಕ್ಕೆ, ಪಶುಪತಿ ನಾಮಧೇಯನ + ಆಸರಕ್ಕೆ – ಎಂದು ಮೂರು ವಿಧದಲ್ಲಿ ಬಿಡಿಸುವ ಸಾಧ್ಯತೆಯಿರುತ್ತದೆ. ಮೊದಲನೆರಡಕ್ಕೂ ಅರ್ಥದಲ್ಲಿ ಅಂಥ ವ್ಯತ್ಯಾಸವಾಗದು. ‘ಸರ’ಕ್ಕೆ ಇರುವ ಅನೇಕ ಅರ್ಥಗಳಲ್ಲಿ, ಪ್ರಸ್ತುತ ಸಂದರ್ಭಕ್ಕೆ ಹೊಂದುವುದಾದರೆ ಧ್ವನ್ಯರ್ಥ (ಸ್ವರ > ಸರ)ವೊಂದೇ. ಡಾ. ಕೃಷ್ಣರ ಅನುವಾದವೂ ಅದನ್ನೇ ಲಕ್ಷಣಾವೃತ್ತಿಯಿಂದ ಒಪ್ಪಿಕೊಂಡಂತಿದೆ. ಅವರು ‘at the word’

5 ಇನ್ನೂ ಒಂದು ಸಾಧ್ಯತೆ ಹೀಗೆ: ‘ಶೌರ್ಯೋದ್ಯಮಭರಿತೋನ್’ ಎನ್ನುವವರೆಗೆ ಪ್ರಥಮಾರ್ಥಕವಾಗಿ ಗ್ರಹಿಸಿ, ‘ಆಗಿರುವ’ ಎಂದು ಕೂಡಿಸಿಕೊಂಡು, ಮುಂದಿನ ವಿಶೇಷಣವನ್ನು ಷಷ್ಠಿಯ ಅರ್ಥದಲ್ಲಿ ಹೇಳಿಕೊಳ್ಳಬಹುದು.

ಎಂದೂ 'ಆಹ್ವಾನಕ್ಕೆ' ಎಂದೂ ಅರ್ಥಮಾಡಿರುವುದು ಹೀಗೆ. ಧ್ವನ್ಯರ್ಥಮೂಲವಾದ 'ಸರ' ಶಬ್ದಕ್ಕೆ ಕರೆ, ಅಪ್ಪಣೆ, ಆಹ್ವಾನ ಮುಂತಾಗಿ ಅರ್ಥವಿಸ್ತಾರವನ್ನು ಕಲ್ಪಿಸಬಹುದು. ಆದರೆ ಈ ಅರ್ಥ, ಬೇರೆ ದಾರಿಯಿಲ್ಲದೆ ಸಾಂದರ್ಭಿಕವಾಗಿ ಊಹಿಸಿದ ಅರ್ಥವಾಗಿ ತೋರುವುದರಿಂದ, ಮನಸ್ಸಿಗೆ ಅಷ್ಟು ಸಮಾಧಾನ ದೊರೆಯುವುದಿಲ್ಲ. ಈ ಸ್ಥಿತಿಯಲ್ಲಿ ಈಗ ಇಲ್ಲೊಂದು ಊಹೆಯನ್ನು ಮಂಡಿಸಬಹುದು: ಪಶುಪತಿ ನಾಮಧೇಯನ+ಆಸರಕ್ಕೆ ಎಂಬ ಮೂರನೆಯ ವಿಭಜನೆಯನ್ನು ಎತ್ತಿಕೊಳ್ಳೋಣ. ಚತುರ್ಥೀ ಪ್ರತ್ಯಯವನ್ನು ತೆಗೆದ 'ಆಸರ' ಪದಕ್ಕೆ ಅರ್ಥವಿದೆಯೇ? ಪರಿಶೀಲಿಸಬೇಕು. ನಿಘಂಟುಗಳು 'ಆಸರ' ಎಂಬ ಸಂಸ್ಕೃತಪದವನ್ನಾಗಲಿ ಹಳಗನ್ನಡಪದವನ್ನಾಗಲಿ ಕೊಡುವುದಿಲ್ಲ. ಆದರೆ 'ಆಸಾರಃ' ಎಂಬ ಒಂದು ಸಂಸ್ಕೃತಪದವಿದೆ. ಇದಕ್ಕೆ ಧಾರಾವೃಷ್ಟಿಯೆಂಬರ್ಥದ ಜತೆಗೆ ಶತ್ರುವನ್ನು ಸುತ್ತುಗಟ್ಟುವುದು, ಮಿತ್ರಪಕ್ಷಕ್ಕೆ ಸೇರಿದ ರಾಜನ ಅಥವಾ ರಾಜ್ಯದ ಸೈನ್ಯ, ದಾಳಿ, ಮುತ್ತಿಗೆ ಎಂಬರ್ಥಗಳನ್ನೂ ಸಂಸ್ಕೃತ ನಿಘಂಟುಗಳಲ್ಲಿ ಕೊಟ್ಟಿದೆ; ಅರ್ಥಶಾಸ್ತ್ರ, ಪಂಚತಂತ್ರ ಮುಂತಾದವುಗಳ ವಾಕ್ಯಗಳನ್ನು ಉದ್ಧರಿಸಿದೆ. 'ಆಸಾರಃ'ದ ಅಪಭ್ರಂಶವೋ ಲಿಪಿಕಾರ ಸ್ಖಾಲಿತ್ಯವೋ ಆಗಿ 'ಆಸರ' ಶಬ್ದವು ಪ್ರಸ್ತುತ ಸಂದರ್ಭದಲ್ಲಿ ಏಕೆ ಬಂದಿರಬಾರದು? 'ಪಶುಪತಿಯು ಕೈಕೊಂಡ ಶತ್ರುಪಕ್ಷದ ಮೇಲಿನ ದಾಳಿಗಾಗಿ' (ದಾಳಿಗೆ ಒದಗಿದ್ದಕ್ಕಾಗಿ) ಎಂದು 'ಪಶುಪತಿ ನಾಮಧೇಯನಾಸರಕ್ಕೆ' ಮಾತಿಗೆ ಅರ್ಥ ಮಾಡಬಹುದು. ಅಥವಾ 'ಪಶುಪತಿಯ ಸುಹೃದ್ಬಲಕ್ಕೆ ಸೇರಿದವನಿಗೆ' ಎಂದೂ ಅರ್ಥಮಾಡಲು ಸ್ವಲ್ಪ ಅವಕಾಶವುಂಟು; ಆದರೆ ಇದು ಅಷ್ಟು ತೃಪ್ತಿಕೊಡುವುದಿಲ್ಲ. ಮೊದಲ ಅರ್ಥ ಸಮ್ಮತವಾದರೆ, ಮುಂದಿನ ವಾಕ್ಯಭಾಗದ ಕ್ರಮಾಗತವಾದ ಅನ್ವಯವನ್ನು ಹೀಗೆ ಮಾಡಬಹುದು: 'ಎಲ್ಲ ಭಟರಿಯಾ ಪ್ರೇಮಾಲಯ ಸುತನ್ಗೆ ಕೇಕಯ ಪಲ್ಲವರಂ ಕಾದೆಱಿದು ಪೆತ್ತಜಯನಾವಿಜಅರಸನ್ಗೆ ಸೇನ್ದ್ರಕಬಣೋಭಯದೇಶದಾ ವೀರಾಪುರುಷಸಮಕ್ಷದೆ ಪಲ್ಮಡಿಉಂ ಮೂಱುವಳ್ಳಿಉಂ ಬಾಳ್ಗಚ್ಚು ಕೊಟ್ಟಾರ್'. ಎಂದರೆ '(ಪಶುಪತಿಯೆಂಬ ಹೆಸರಿನವನ ದಾಳಿಗಾಗಿ, ಅಥವಾ ದಾಳಿಗೆ ಒದಗಿದ್ದಕ್ಕಾಗಿ) ಎಲ್ಲ ಭಟಾರಿಯ ಪ್ರೀತಿಪಾತ್ರನಾದ ಮಗನಿಗೆ, ಕೇಕಯರನ್ನೂ ಪಲ್ಲವರನ್ನೂ ಕಾದಾಡಿ ಹೊಯ್ದು ಜಯಶಾಲಿಯಾದ ಆ ವಿಜಅರಸನಿಗೆ ಸೇನ್ದ್ರಕ ಮತ್ತು ಬಾಣ ಈಯೆರಡು ದೇಶಗಳ ವೀರಪುರುಷರ ಎದುರಿನಲ್ಲಿ ಪಲ್ಮಡಿಯನ್ನೂ ಮೂಱುವಳ್ಳಿಯನ್ನೂ 'ಬಾಳ್ಗಚ್ಚು'ವಾಗಿ ಕೊಟ್ಟರು.' ಡಾ. ಕೃಷ್ಣರು ಸ್ವಲ್ಪ ಬೇರೆಯಾಗಿ ಅನ್ವಯ ಮಾಡಿದ್ದಾರೆ, ಅರ್ಥ ಬರೆದಿದ್ದಾರೆ. ' who in the presence of the heroic men of the two countries, Sendraka and Bana, fought the Kekayas and Pallavas, pierced them and attained victory' ಎಂದೂ 'ಸೇನ್ದ್ರಕ ಮತ್ತು ಬಾಣ ಎಂಬ ದೇಶಗಳ ವೀರಪುರುಷರ ಎದುರಿಗೆ ಪಲ್ಲವರನ್ನೂ ಕೇಕಯರನ್ನೂ ಯುದ್ಧದಲ್ಲಿ ಕೊಂದು ಜಯವನ್ನು ಪಡೆದ' ಎಂದೂ ಅನುವಾದಿಸಿರುವುದರಲ್ಲಿ ಆ ಅನ್ವಯದ ವ್ಯತ್ಯಾಸವಿದೆ. ಅವರ ಅನ್ವಯ ನೇರವಾಗಿದ್ದರೂ ಸಹಜವಾಗಿಲ್ಲ. ನಾವು ಸೂಚಿಸಿರುವ ಅನ್ವಯ ಬಳಸಾಗಿದ್ದರೂ ಅರ್ಥದ ದೃಷ್ಟಿಯಿಂದ ಸಹಜವಾದ್ದು, ಭಾಷಾದೃಷ್ಟಿಯಿಂದಲೂ ಅಸಹಜವೇನಲ್ಲ. 'ಕೇಕಯ ಪಲ್ಲವರಂ ಕಾದೆಱಿದು ಪೆತ್ತಜಯನ್' ಎಂಬುವನ್ನು ಪೂರ್ತಿಯಾಗಿ 'ವಿಜ ಅರಸನ್ಗೆ' ಎನ್ನುವುದರ ವಿಶೇಷಣವನ್ನಾಗಿ ಗ್ರಹಿಸಬೇಕು. 'ವೀರಾಪುರುಷ ಸಮಕ್ಷದೆ' ಎಂಬ ಮಾತು ಗ್ರಾಮಗಳನ್ನು 'ಬಾಳ್ಗಚ್ಚು'ವಾಗಿ ಕೊಟ್ಟ ಸಂದರ್ಭಕ್ಕೆ ಹೇಳಿದ ಮಾತಿನಂತೆ ತೋರುವುದಲ್ಲದೆ ಯುದ್ಧ ಸಂದರ್ಭಕ್ಕೆ ಹೇಳಿದ್ದಾಗಿ ತೋರುವುದಿಲ್ಲ. ಮಿತ್ರಪಕ್ಷದ ಸೇನ್ದ್ರಕ ಮತ್ತು ಬಾಣ ಎರಡೂ ದೇಶಗಳ ವೀರಪುರುಷರ ಸಮಕ್ಷದಲ್ಲಿ ವೀರನೊಬ್ಬನನ್ನು ಸನ್ಮಾನಿಸಿದ್ದು ಸಹಜವಾಗಿಯೇ ಇದೆ.

ಶಾಸನದಲ್ಲಿ 13ರಿಂದ 16ನೆಯ ಸಾಲಿನವರೆಗಿನ ಲಿಖಿತದಲ್ಲಿ 'ಅಳುಕದಂಬನ್'/'ಅಳಕದಮ್ಬನ್', 'ಸಟ್ಟಿಜ್ಗದರ್', 'ಕುಱುಮ್ಬಿಡಿ' ,'ಒಡ್ಡಲಿ' ಈ ಪದಗಳ ರೂಪವೂ ಅರ್ಥವೂ ಸ್ಪಷ್ಟವಾಗಿಲ್ಲವೆ ವಿದ್ವಾಂಸರ ಜಿಜ್ಞಾಸೆಗೆ ಕಾರಣವಾಗಿದೆ. ಮೈ. ಆ. ರಿ.ಯಲ್ಲಿ 'ಅಳುಕದಮ್ಬನ್' ಎಂದು ಓದಿದ ಪಾಠವನ್ನು ಪ್ರ.ಕ. ದಲ್ಲಿ 'ಅಳಕದಮ್ಬನ್' ಎಂದು ತಿದ್ದಿದೆ. ಇದು ಶಾಸನ ಪಾಠದ ಪುನಃ ಪರಿಶೀಲನೆಯ ಫಲವಿರಬಹುದು ; 5ನೆಯ ಸಾಲಿನ ಕೊನೆಗೆ 'ಅಳಪ' ಎಂದಿರುವುದಕ್ಕೆ ಇದು ಹೊಂದುತ್ತದೆ: ಆದ್ದರಿಂದ ಬಹುಶಃ ಗ್ರಾಹ್ಯ. 'ಸಟ್ಟಿಜ್ಗದರ್' ಬಗೆಗೆ ಈಗಾಗಲೇ ಸಾಕಷ್ಟು ಚರ್ಚೆ ನಡೆದಿದೆ. ಏಕೈಕ ಪ್ರಯೋಗದ ಅಪರಿಚಿತಪದವಾದ್ದರಿಂದ ಇದರ ಅರ್ಥನಿರ್ಣಯ ಸದ್ಯದಲ್ಲಿ ಸಾಧ್ಯವಿಲ್ಲ. 'ಇರ್ವ್ವರುಂ ಸಟ್ಟಿಜ್ಗದರ್ ವಿಜಾರಸರುಂ'-

ಎಂಬುದು ಆ ಪದ ಪ್ರಯೋಗವಾಗಿರುವ ಭಾಗ. ಪ್ರೊ. ಆ. ರಿ.ಯು ಇಂಗ್ಲಿಷ್ ಅನುವಾದದಲ್ಲಿ 'The two and Vija Arasa of Salbanga' ಎಂದೂ ಕನ್ನಡ ಅನುವಾದದಲ್ಲಿ 'ಇಬ್ಬರು ಸಬ್ಬಿಜ್ಞದವರೂ ವಿಜ–ಅರಸನೂ' ಎಂದೂ ಬರೆದಿರುವುದು ಆ ಪದದ ಅರ್ಥ ಸ್ಪಷ್ಟವಿಲ್ಲ ಎನ್ನುವುದನ್ನು ಎತ್ತಿ ತೋರಿಸುತ್ತದೆ. ಮೊದಲು ಇಂಗ್ಲಿಷ್ ನಿರೂಪಣೆಯಲ್ಲಿ 'ಸಬ್ಬಿಜ್ಞ'ವನ್ನು ಸ್ಥಳವಾಚಿಯಾಗಿ ಒಪ್ಪಿಕೊಂಡು, ಕನ್ನಡದಲ್ಲಿ ಅನುವಾದ ಭಾಗದಲ್ಲಿಯೂ ವಿವರಣೆಯ ಭಾಗದಲ್ಲಿಯೂ ಅದನ್ನು ಕೈಬಿಟ್ಟಿರುವುದು ನೋಡಿದರೆ ಡಾ. ಕೃಷ್ಣರು ತಮ್ಮ ಗ್ರಹಿಕೆಯನ್ನು ಬದಲಾಯಿಸಿಕೊಂಡಿದ್ದಾರೆಂದು ಹೇಳಬೇಕು. ಆ ಪದದ ಅರ್ಥ ಸ್ಪಷ್ಟವಾದ ಹೊರತು. ಅದನ್ನು ಯಾರಿಗೆ ಅನ್ವಯಿಸಬೇಕೆನ್ನುವುದು ನಿಶ್ಚಯವಾಗುವುದಿಲ್ಲ; ಅರ್ಥ ಸ್ಪಷ್ಟವಾಗಿಯೂ ಅನ್ವಯದ ತೊಡಕು ಉಳಿಯಬಹುದು. ಮೃಗೇಶನಾಗರಿಬ್ಬರೂ 'ಭಟಹರ್' ಎಂದು ಹೇಳಲ್ಪಟ್ಟಿರುವುದರಿಂದ ಇಲ್ಲಿಯ 'ಸಬ್ಬಿಜ್ಞದರ್' ಅವರಿಗೆ ಹೇಳಿದ ಯಾವುದಾದರೊಂದು ಮಾತಾಗಿರದೆ. ವಿಜಾರಸನಿಗೆ ಹೇಳಿದ್ದಾಗಿರಬಹುದು. ಸಮುಚ್ಚಯ ಪ್ರತ್ಯಯದ ಬಳಕೆಯಿಂದಾಗಿ. 'ಇರ್ವ್ವರುಂ' ಮತ್ತು 'ವಿಜಾರಸರುಂ' ಎಂದು ಉಕ್ತರಾದವರು ಅನುಕ್ರಮವಾಗಿ ಪೂರ್ವೋಕ್ತರಾದ ಮೃಗೇಶನಾಗರು ಹಾಗೂ ಎಲ್ಲ ಭಟಾರಿಯ ಮಗ ವಿಜ–ಅರಸ ಎನ್ನುವುದರಲ್ಲಿ ಸಂದೇಹವಿಲ್ಲ. ಪ್ರಸ್ತುತ. 'ಇಬ್ಬರೂ. ಸಬ್ಬಿಂಗ(ವೆಂಬ ಸ್ಥಳ)ದವರಾದ ವಿಜಾರಸರೂ' ಎಂದು ನನಗೆ ಈ ಭಾಗವನ್ನು ಓದುವ ಮನಸ್ಸಾಗುತ್ತದೆ. ಇನ್ನು ಕೊನೆಯದಾಗಿ. 'ಕುಜುಪ್ಪಿಡಿ' ಮತ್ತು 'ಒಕ್ಕಲಿ' ಇವುಗಳ ಅರ್ಥವೂ ಸಾಂದರ್ಭಿಕವಾಗಿ ಊಹಿಸಿದ್ದು. ನಿಜವಾಗಿ ಅವುಗಳ ಅರ್ಥ–ನಿಷ್ಪತ್ತಿಗಳೂ ನಮಗೆ ಸರಿಯಾಗಿ ತಿಳಿಯದು ಎನ್ನುವುದನ್ನು ನಾವು ಒಪ್ಪಬೇಕು.

ಶಾಸನದ ಅನ್ವಯ:

ನಮಃ ಶ್ರೀಮತ್ಕದಂಬವನ್ ತ್ಯಾಗಸಂಪನ್ನನ್ ಕಲಭೋರ[ನಾ] ಅರಿ ಕಕುಸ್ಥಭಟ್ಟೋರನ್ ಆಳೆ ನರಿದಾವಿ[ಳೆ]ನಾಡುಳ್ ಭಟಹರರ್ಪ್ಪೋರ್ ಮೃಗೇಶನಾಗೇನ್ದ್ರಾಭೀಳರ್ ಶ್ರೀ ಮೃಗೇಶನಾಗಾಹ್ವಯರ್ ಇರ್ವರ್ ಆ ಬಟರಿಕುಲಾಮಲವ್ಯೋಮತಾರಾಧಿನಾಥನ್ ಅಳಪಗಣಪಶುಪತಿ ಆ ದಕ್ಷಿಣಾಪಥಬಹುಶತಹವನಾಹವದು[ಳ್] ಪಶುಪ್ರದಾನ ಶೌರ್ಯೋದ್ಯಮ ಭರಿತೋ[ನ್ ದಾನ] ಪಶುಪತಿ ಎನ್ದು ಪೊಗೞೆಪ್ಪೊಟ್ಟನ ಪಶುಪತಿನಾಮಧೇಯನ ಆಸರಕ್ಕೆ ಎಲ್ಲಭಟರಿಯಾ ಪ್ರೇಮಾಲಯಸುತನ್ಗೆ ಕೇಕಯ ಪಲ್ಲವರಂ ಕಾದೆಱಿದು ವಿತ್ತಜಯನ್ ಆ ವಿಜ ಅರಸರ್ಗೆ ಸೇನ್ದ್ರಕ ಬಣೋಭಯ ದೇಶದಾ ವೀರಾಪುರುಷ ಸಮಕ್ಷದೆ ಪಲ್ಮಡಿಉಂ ಮೂಱುವಳ್ಳಿಉಂ ಬಾಳ್ಗಳ್ಚು ಕೊಟ್ಟಾರ್ ಬಟಾರಿ ಕುಲದೊನ್ ಅಳಕದಮ್ಬನ್ ಕೆಯ್ದೋನ್ ಮಹಾಪಾತಕನ್ ಇರ್ವ್ವರುಂ ಸಬ್ಬಜ್ಞದರ್ ವಿಜಾರಸರುಂ ಪಲ್ಮಡಿಗೆ ಕುಜು-ಪ್ಪಿಡಿವಿಟ್ಟಾರ್ ಅದಾನ್ ಅೞಿವೊನ್ಗೆ ಮಹಾಪಾತಕಮ್ ಸ್ವಸ್ತಿ ಈಗಟ್ಟಿ ಒಕ್ಕಲಿ ಭಟ್ಟರ್ಗ್ಗೆ ಅಕರ ಆ ಪತ್ತೊನ್ದಿವಿಟ್ಟಾರ್.

ಶಾಸನದ ಅರ್ಥ:

ನಮಸ್ಕಾರ. ಶ್ರೀಮತ್ ಕದಂಬರಾಜ್ಯಪಾಲಕ. ತ್ಯಾಗಸಂಪನ್ನ. ಕಲಭೋರನ ಶತ್ರು (ಆಗಿರುವ) ಕಕುಸ್ಥ ಭಟ್ಟಾರನು ಆಳಲು (ಆಳುತ್ತಿರಲು). ನರಿದಾವಿಳೆ ನಾಡಿನಲ್ಲಿ ಭಟಹರಾಗಿರುವವರಾದ (ಒಡೆಯರಾಗಿರುವವರಾದ) ಮೃಗರಾಜ (ಸಿಂಹ) ಸರ್ಪರಾಜ (ವಾಸುಕಿ ಅಥವಾ ಮಹೋಗ್ರ ಸರ್ಪ)ರಂತೆ ಭಯಂಕರರಾಗಿರುವವರಾದ ಶ್ರೀ ಮೃಗೇಶ ಮತ್ತು ನಾಗ ಎಂಬ ಹೆಸರಿನ ಇಬ್ಬರು. ಪ್ರಸಿದ್ಧವಾದ ಬಟರಿವಂಶವೆಂಬ ನಿರ್ಮಲವಾದ ಆಕಾಶಕ್ಕೆ ಚಂದ್ರನು. ಅಳಪರೆಂಬ ಗಣಕ್ಕೆ ಶಿವನು (= ಅಳಪರ ಸಮೂಹಕ್ಕೆ ಸ್ವಾಮಿ). ಪ್ರಸಿದ್ಧನಾದ ದಕ್ಷಿಣಾಪಥದ ನೂರಾರು ಯುದ್ಧಗಳೆಂಬ ಯಜ್ಞಗಳಲ್ಲಿ (ಪ್ರತಿಪಕ್ಷದವರನ್ನು) ಬಲಿಗೊಡುವಲ್ಲಿ ಶೌರ್ಯಯುಕ್ತವಾದ ಉದ್ಯಮದಿಂದ ತುಂಬಿರುವವನು. ದಾನಪಶುಪತಿ–ಎಂದು ಹೊಗಳಲ್ಪಟ್ಟವನ ಪಶುಪತಿಯೆಂಬ ಹೆಸರಿನವನ ದಾಳಿಗಾಗಿ (ದಾಳಿಗೆ ಒದಗಿದ್ದಕ್ಕಾಗಿ) ಎಲ್ಲ ಭಟಾರಿಯ ಪ್ರೀತಿಪಾತ್ರನಾದ ಮಗನಿಗೆ. ಕೇಕಯರನ್ನೂ ಪಲ್ಲವರನ್ನೂ ಹೋರಾಡಿ ಹೊಯ್ದು ಜಯಶಾಲಿಯಾದ ಆ ವಿಜ ಅರಸನಿಗೆ ಸೇನ್ದ್ರಕ ಮತ್ತು ಬಾಣ (ಈ) ಎರಡು ದೇಶಗಳ ವೀರಪುರುಷರ ಎದುರಿನಲ್ಲಿ ಪಲ್ಮಡಿಯನ್ನೂ ಮೂಱುವಳ್ಳಿಯನ್ನೂ 'ಬಾಳ್ಗಳ್ಚು'ವಾಗಿ ಕೊಟ್ಟರು. ಬಟಾರಿ ಕುಲದವನಾಗಿರುವ ಅಳಕದಂಬನು. (ಇದನ್ನು) ಅಪಹರಿಸಿದವನು ಮಹಾಪಾತಕನು. (ಈ) ಇಬ್ಬರೂ ಸಬ್ಬಿಜ್ಞ

ದವಲಾಗಿರುವ ವಿಜಾರಸರೂ ಪಲ್ಮಡಿಗೆ ಕುಮುಮ್ಮಿಡಿಯನ್ನು ಬಿಟ್ಟರು. ಅದನ್ನು ಕೆಡಿಸುವವನಿಗೆ ಮಹಾ ಪಾತಕ (ಬರುತ್ತದೆ). ಒಳಿತಾಗಲಿ.

ಈ ಗದ್ದೆಯ ಬಡಿಸಲ್ಲಿ (ಬಿಟ್ಟಿನಲ್ಲಿ, ಉತ್ಪನ್ನದಲ್ಲಿ?) ಬ್ರಾಹ್ಮಣರಿಗೆ ತೆರಿಗೆಯಿಲ್ಲದೆ ಆ ಪತ್ತನೆಯ ಒಂದು ಭಾಗವನ್ನು ಬಿಟ್ಟರು

ಹಲ್ಮಿಡಿ ಶಾಸನದ ಅಭ್ಯಾಸಕ್ಕೆ ಕೆಲವು ಆಕರಗಳು :

I

1 *Gai, G. S.* : Identification of Palmadi, Quarterly Journal of the Mythic Society, Vol. 39, No. 1 (1948), pp. 93–4.

2 *Gopinatha Rao, T. A.* : A note on the word Balgalchchu, Indian Antiquary, Vol. 40 (March, 1911), p. 89.

3 *Krishna, M. H.* : Lithic record found at Halmidi, Annual Report of the Mysore Archæological Department for the year 1936, pp. 72–81.

4 *Sreekantaiya, T. N.* : The Languages of Karnataka, 'Karnataka Through the Ages', p. 78.

5 *Srikantha Sastri, S.* : Halmidi Inscription of Kakusthavarman, Sources of Karnataka History, Vol. I, p. 20.

II

1 ಕೃಷ್ಣ, ಎಂ. ಎಚ್.: ಅತ್ಯಂತ ಪ್ರಾಚೀನ ಕನ್ನಡ ಶಾಸನ, ಪ್ರಬುದ್ಧ ಕರ್ಣಾಟಕ, ಸಂ. 20–ಸಂ. 3 (1939), ಪು.31–40.

2 ಗೋವಿಂದ ಪೈ, ಎಂ.: ಕನ್ನಡ ಸಾಹಿತ್ಯದ ಪ್ರಾಚೀನತೆ, 'ಮೂರು ಉಪನ್ಯಾಸಗಳು', ಪು. 133–34.

3 ಚಿದಾನಂದಮೂರ್ತಿ, ಎಂ.: 'ಸಟ್ಟಿಂಗ' ಎಂದರೇನು?, ಪ್ರಬುದ್ಧ ಕರ್ಣಾಟಕ, ಸಂ. 47– ಸಂ. 4 (1966), ಪು.124–7; ಸಂಶೋಧನ ತರಂಗ, ಭಾಗ–2 ಪು. 34–37. ಮತ್ತು 'ಬಾಳ್ಗಬ್ಬಿ': 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.ಪು. 293.

4 ನರಸಿಂಹಾಚಾರ್, ಡಿ. ಎಲ್.: ಮುನ್ನುಡಿ, 'ಸಂಶೋಧನ ತರಂಗ-ಭಾಗ 2, ಪು. I ×

5 ನಾಗರಾಜು, ಎಸ್.: ಹಲ್ಮಿಡಿ ಶಾಸನದ'ಸಟ್ಟಿಜ್ಗದರ್', ಪ್ರಬುದ್ಧ ಕರ್ಣಾಟಕ. ಸಂ. 51–ಸಂ. 1 (1969), ಪು. 89–92.

6 ಮರಿಯಪ್ಪ ಭಟ್ಟ, ಎಂ.: ಕನ್ನಡ ಸಂಸ್ಕೃತಿ, 'ಕನ್ನಡ ಸಂಸ್ಕೃತಿ', ಪು. 26–8

7 ಮುಗಳಿ, ರಂ. ಶ್ರೀ.: ಕನ್ನಡ ಸಾಹಿತ್ಯ ಚರಿತ್ರೆ, 1971, ಪು. 9-10

8 [illegible]: [illegible] ಪ್ರಬುದ್ಧ ಕರ್ನಾಟಕ, ಸಂ. 51-3 (1969), ಪು.

9 [illegible]: 23-7, [illegible] ಪ್ರಬುದ್ಧ ಕರ್ನಾಟಕ, ಸಂ. 50-ಸಂ. 4 (1969), ಪು. 124-6

10 [illegible]: [illegible] ಪ್ರಬುದ್ಧ ಕರ್ನಾಟಕ, ಸಂ. 52-ಸಂ. 3 (1970), ಪು. 139-44

11 ?: ಕನ್ನಡದ [illegible] ಕನ್ನಡ ನುಡಿ (ವಾರ ಪತ್ರಿಕೆ), ಸೆಪ್ಟೆಂಬರ್ 1942, ಪು. 358-9.

ಕೆ. ಜಿ. ವಸಂತಮಾಧವ

ಗೆರಸೊಪ್ಪೆಯ ಅರಸರು ಮತ್ತು ಕೆಳದಿ ನಾಯಕರು

[illegible]

[illegible] 1. [illegible] 50 [illegible]

[illegible]

[illegible]

[illegible] 1610[illegible] South Indian Inscriptions Vol. VII No. 297. [illegible] Descriptive Lists of Stone and Copper Plate Inscriptions, Examined by K. R. I. 1941-42, No. 67. [illegible] 1573. [illegible] 1598[illegible] (Annual Report of Kannada Research, 1939-40, No. 85. Archaeologic Report No. 116 of 1928) [illegible] 1567[illegible] Caesar Fredrick —Travels by Purchase, page 99. [illegible] 1585[illegible] [illegible] (Aravidu Dynasty), page 307

ಲಂಬಿಗಳಾದ ಸಾಳ್ವ ಅರಸು ಹದಿನಾರನೆಯ ಶತಮಾನದ ಉತ್ತರಾರ್ಧದಲ್ಲಿ ಕೆಳದಿ ನಾಯಕರ ಸಾಮ್ರಾಜ್ಯ ಪ್ರಸಾರವನ್ನು ಎದುರಿಸಬೇಕಾಗಿ ಬಂತು. ಕೆಳದಿ ಸದಾಶಿವ ನಾಯಕ ತನ್ನ ಪರಾಕ್ರಮದಿಂದ ವಿಜಯನಗರ ಅರಸರನ್ನು ಮೆಚ್ಚಿಸಿ ಅವರಿಂದ .ಆರಗ. ಗುತ್ತಿ. ಬಾರ್ಕೂರು ಮತ್ತು ಮಂಗಳೂರುಗಳನ್ನು ಅಮರ ಮಾಗಣಿಯಾಗಿ ಪಡೆದ[2]. ಈ ಘಟನೆಯ ಪೂರ್ವದಲ್ಲಿಯೇ ಕೆಳದಿ ನಾಯಕರು ಗೇರಸೊಪ್ಪೆ ಸಾಳ್ವರೊಡನೆ ಸಂಪರ್ಕ ಹೊಂದಿದ್ದರೆಂದು ಉಳವಿಯಲ್ಲಿ ಸಿಕ್ಕಿದ ಶಾಸನ ತಿಳಿಸಿದೆ. ಈ ಶಾಸನದ ಕಾಲ 1550. ಇದು ಗೇರಸೊಪ್ಪೆ ಸಾಳ್ವ ಮತ್ತು ಕೆಳದಿ ಅರಸರ ನಡುವೆ ಇರುವ ಸಂಪರ್ಕವನ್ನು ತಿಳಿಸುವ ಮೊದಲನೆಯ ಶಾಸನ. ಈ ಶಾಸನದಂತೆ ಗೇರಸೊಪ್ಪೆಯ ಅರಸನಾದ ಮಹಾ ಮಂಡಲೇಶ್ವರ ಸಾಳ್ವ ಕೃಷ್ಣ ದೇವರಸ ಒಡೆಯ ಕೆಳದಿ ಸದಾಶಿವ ನಾಯಕನಿಂದ ಗೋಕರ್ಣ ಮಹಾಬಲೇಶ್ವರ ದೇವರ ಪೂಜೆ ನಡೆಸಲು ಬೇಕಾಗುವ ಹಣವನ್ನು ಉಳುವರೆ ಗ್ರಾಮದಿಂದ ತೆಗೆದುಕೊಂಡು ಆ ಗ್ರಾಮವನ್ನು ಅವನಿಗೆ ಕೊಟ್ಟ[3]. ಕೆಳದಿ ಸದಾಶಿವ ನಾಯಕ ಕೇವಲ ಕರಾವಳಿಯಲ್ಲಿ ಗೇರಸೊಪ್ಪೆಯ ರಾಜನಾದ ಸಾಳ್ವ ಕೃಷ್ಣದೇವರಸ ಒಡೆಯನಷ್ಟು ಪ್ರಬಲನಾಗಿರಲಿಲ್ಲವೆಂದು ಈ ಶಾಸನದಿಂದ ತಿಳಿಯಬಹುದು.

ಮೆಕೆನ್‌ಜಿಯವರ ವಾದ: 'ಮೆಕೆಂಜಿಯವರ ಸಂಗ್ರಹದಂತೆ "ಗೇರಸೊಪ್ಪೆಯನ್ನು ಆಳಿದ ರಾಣಿ ಕೆಳದಿ ಸದಾಶಿವ ನಾಯಕನ ಸಮಕಾಲೀನಳಾಗಿದ್ದಳು. ತಾನು ತನ್ನ ರಾಜ್ಯವನ್ನು ಉತ್ತಮವಾಗಿ ಮತ್ತು ದಕ್ಷತೆಯಿಂದ ಆಳಲು ಅಸಮರ್ಥಳೆಂದು ಭಾವಿಸಿ ತನ್ನ ರಾಜ್ಯವನ್ನು ಕೆಳದಿ ಸದಾಶಿವ ನಾಯಕನಿಗೆ ಅರ್ಪಿಸಿ. ಅವನನ್ನು ತನ್ನ ರಾಜ್ಯದ ಸಾರ್ವಭೌಮನೆಂದು ಮನ್ನಿಸಿ, ತಾನು ಅವನ ಸಾಮಂತಳಾದಳು.' [4] ಈ ವಾದವನ್ನು ಸಮರ್ಥಿಸುವ ಯಾವ ಪುರಾವೆಗಳೂ ನಮಗೆ ಸಿಗಲಿಲ್ಲ. ಕೆಳದಿ ಸದಾಶಿವ ನಾಯಕನ ಆಳ್ವಿಕೆಯ ಕೊನೆಯ ವರ್ಷ 1565. ಈ ಕಾಲದಲ್ಲಿ ಗೇರಸೊಪ್ಪೆ ಹಾಡುವಳ್ಳಿಗಳನ್ನು ಒಳಗೊಂಡ ರಾಜ್ಯವನ್ನು ಆಳುತ್ತಿರುವ ರಾಣಿ ಮಹಾಮಂಡಲೇಶ್ವರ ಚೆನ್ನಭೈರಾದೇವಿ. ಮೆಕೆನ್‌ಜಿಯವರು ತಿಳಿಸಿದ ರಾಣಿ ಇವಳೇ. ಇವಳ ವಿಚಾರವಾಗಿ ತಿಳಿಸುವ ಮೊತ್ತಮೊದಲನೆಯ ಶಾಸನದ ಕಾಲ 1562. ಇದೂ ಇತರ ಶಾಸನಗಳೂ ಇವಳನ್ನು ಮಹಾಮಂಡಲೇಶ್ವರ ಚೆನ್ನಭೈರಾದೇವಿ, ಇವಳು ಹೈವ ಕೊಂಕಣ ಪ್ರದೇಶಗಳನ್ನು ಆಳುತ್ತಿದ್ದಳು ಎಂದು ತಿಳಿಸಿವೆ[5].

ಮೆಕೆನ್‌ಜಿಯವರ ಅಭಿಪ್ರಾಯದಂತೆ ಗೇರಸೊಪ್ಪೆ ರಾಣಿ ಕೆಳದಿ ಸದಾಶಿವ ನಾಯಕನ ಸಾಮಂತಳಾಗಿದ್ದರೆ ಕ್ರಿ.ಶ. 1562 ಮತ್ತು 1565ರ ಕಾಲದಲ್ಲಿಯೇ ಆಗಿರಬೇಕು. ಆದರೆ ಈ ಕಾಲದ ಯಾವ ಶಾಸನಗಳಾಗಲಿ ಇವರ ಅಭಿಪ್ರಾಯವನ್ನು ಸಮರ್ಥಿಸುವುದಿಲ್ಲ. ಈ ಕಾಲದಲ್ಲಿ ಕೆಳದಿ ಅರಸರು ಮತ್ತು ಗೇರಸೊಪ್ಪೆ ರಾಣಿಯರು ವಿಜಯನಗರ ಅರಸರ ಸಾಮ್ರಾಜ್ಯದಿಂದ ಹೊರಗೆ ಬರಲಿಲ್ಲ[6]. ಇವಳು ಕೆಳದಿ ಸದಾಶಿವ ನಾಯಕನ ಸಾಮಂತಳಾಗಿದ್ದರೆ ಆ ಕಾಲದ ಇವಳ ಶಾಸನಗಳಲ್ಲಾಗಲಿ ಕೆಳದಿ ಸದಾಶಿವ

---

2 South Indian Inscriptions, Part II No. 655. ಈ ಶಾಸನ ಬಸ್ರೂರಿನ ಸಂತೆಕಟ್ಟೆ ಕೆರೆಯಲ್ಲಿ ಸಿಕ್ಕಿದೆ. ಶಾಸನದ ಕಾಲ 1554. S. Krishna Swami Aiangar: *Sources of Vijayanagar History*, Kallola 5, Stanza 20

3 *Annual Report of Indian Epigraphy*, 1957-58, Ins. No. 339. *Summaries of inscriptions* by K.R.I., No. 11 of 1946–47

4 *Mackenzie Collections*, 9–1–14; quoted by K. D. Swami Nathan in his book, *Nayakas of Ikkeri*

5 A.R I.E., 1950–51, No. 24. *Epigraphia Carnatika*, VIII, Sagar 57

6 ಒಂದನೆಯ ಅಡಿಟಿಪ್ಪಣಿ ನೋಡಿ.

ನಾಯಕನ ಶಾಸನಗಳಲ್ಲಾಗಲಿ ಉಲ್ಲೇಖವಿರುತ್ತಿತ್ತು. ಆದರೆ ಇವರಿಬ್ಬರ ದಾಖಲೆಗಳಲ್ಲೂ ಮೆಕೆನ್‌ಜಿ ವಾದಕ್ಕೆ ಬೆಂಬಲವಿಲ್ಲ. ಈ ರಾಣಿ ಕೆಳದಿ ಸದಾಶಿವ ನಾಯಕನ ಅನಂತರ ಆಳಿದ ದೊಡ್ಡ ಸಂಕಣ್ಣ ನಾಯಕ, ಚಿಕ್ಕ ಸಂಕಣ್ಣ ನಾಯಕ ಮತ್ತು ಹಿರಿಯ ವೆಂಕಟಪ್ಪ ನಾಯಕರೊಡನೆ ಹೋರಾಡಿದ್ದಳೆಂದು ಶಿವತತ್ವರತ್ನಾಕರ, ಕೆಳದಿನೃಪವಿಜಯ ಕಾವ್ಯಗಳೂ ಪೋರ್ಚುಗೀಸರ ದಾಖಲೆಗಳೂ ತಿಳಿಸುತ್ತವೆ.7 ಈ ರಾಣಿ ಪೋರ್ಚುಗೀಸರ ಆಕ್ರಮಣವನ್ನು ಕ್ರಿ.ಶ. 1569–70ರಲ್ಲಿ ಧೈರ್ಯವಾಗಿ ಎದುರಿಸಿ ಪೋರ್ಚುಗೀಸರೊಡನೆ ಕಾದಾಡಿ ಪೋರ್ಚುಗೀಸರು ಹಣ್ಣಾಗುವಂತೆ ಮಾಡಿದ್ದಳೆಂದು ಪೋರ್ಚುಗೀಸ್ ಇತಿಹಾಸಕಾರರಾವ ಫೆರಿಯಾ ಸೋಜ ಮತ್ತು ಅಂತೋಣಿ ಪಿಂಟೋರವರು ತಮ್ಮ ಪುಸ್ತಕಗಳಲ್ಲಿ ತಿಳಿಸಿದ್ದಾರೆ8. ಇಂಥ ಪರಾಕ್ರಮಶಾಲಿಯಾದ ಈ ರಾಣಿ ಕೆಳದಿ ಸದಾಶಿವ ನಾಯಕನ ಸಾಮಂತಳಾದ ಳೆಂಬುದನ್ನು ನಂಬುವುದು ತೀರಾ ಕಷ್ಟ. ಆದ್ದರಿಂದ ಮೆಕೆನ್‌ಜಿಯವರ ಸಂಗ್ರಹ ಆಧಾರರಹಿತ ಎನ್ನ ಬಹುದು.

ದೊಡ್ಡಸಂಕಣ್ಣನಾಯಕ, ಚಿಕ್ಕಸಂಕಣ್ಣನಾಯಕ ಮತ್ತು ಭೈರಾದೇವಿ

ಕೆಳದಿ ದೊಡ್ಡಸಂಕಣ್ಣನಾಯಕ "ಘನ ಸಂಗ್ರಾಮದೆ ಭೈರಾದೇವಿಯ ಸೀಮೆಯನುರೆ ಧೂಳಿಪಟಮಂ ವಿರಚಿಸಿದಂ."9 ಈ ವಿಚಾರ ಕೇವಲ ಅತಿಶಯೋಕ್ತಿ ಎಂದರೆ ತಪ್ಪಾಗಲಿಕ್ಕಿಲ್ಲ. ಏಕೆಂದರೆ ದೊಡ್ಡ ಸಂಕಣ್ಣನಾಯಕ ಭೈರಾದೇವಿಯ ಸೀಮೆಯನ್ನು ಧೂಳಿಪಟಮಾಡಿದ್ದರೆ ಅವನ ಅನಂತರ ಕೆಳದಿಯ ರಾಜ್ಯವನ್ನು ಆಳಿದ ಚಿಕ್ಕ ಸಂಕಣ್ಣನಾಯಕ ಮತ್ತು ಕೆಳದಿ ವೆಂಕಟಪ್ಪ ನಾಯಕರಿಗೆ ಭೈರಾದೇವಿಯೊಡನೆ ಪುನಃ ಘೋರ ಯುದ್ಧ ಮಾಡುವ ಪ್ರಸಂಗ ಬರುತ್ತಿದ್ದಿಲ್ಲ. ಆದರೆ ಈ ಅರಸುಗಳು ಭೈರಾದೇವಿಯೊಡನೆ ಯುದ್ಧ ಮಾಡಿದ ವಿಷಯವನ್ನು ಹಲವಾರು ದಾಖಲೆಗಳು ತಿಳಿಸುತ್ತವೆ. ಈ ಸಂದರ್ಭದಲ್ಲಿ ಇ. ಎಂ. ಆಳ್ವಾರಿಸರು ವ್ಯಕ್ತಪಡಿಸಿದ ಅಭಿಪ್ರಾಯ ಹೀಗಿದೆ: ಇಲ್ಲಿ ಉಲ್ಲೇಖಿಸಿದ ಘನಘೋರಸಂಗ್ರಾಮ ಕೆಳದಿ ಅರಸರು ಮತ್ತು ಭೈರಾದೇವಿಯರೊಡನೆ ನಡೆದ ಸಣ್ಣ ಘರ್ಷಣೆ ಆಗಿರಬೇಕು. ಹಾಗೂ ಇದು ದೊಡ್ಡ ಸಂಕಣ್ಣನಾಯಕ ವಿಜಯನಗರದಿಂದ ತಿರುಗಿ ಬಂದನಂತರ ನಡೆದಿರಬೇಕು10. ದೊಡ್ಡ ಸಂಕಣ್ಣನಾಯಕನ ಅನಂತರ ಪಟ್ಟಕ್ಕೆ ಬಂದ ಕೆಳದಿ ಚಿಕ್ಕಸಂಕಣ್ಣನಾಯಕ ಭೈರಾದೇವಿಯ ಗರುವಿಕೆ

---

7 ಶಿವತತ್ವರತ್ನಾಕರ ಎಂಬ ಸಂಸ್ಕೃತ ಕಾವ್ಯವನ್ನು ಕೆಳದಿ ಬಸವರಾಜ ಬರೆದ. ಇವನ ಕಾಲ 1697 ರಿಂದ 1714. ಇದು ಕೆಳದಿ ಅರಸರ ಚರಿತ್ರೆ ತಿಳಿಯಲು ಬಹಳ ಸಹಾಯಕವಾಗಿದೆ. ಆದರೆ ಇದು ಬಸವರಾಜನ ಅನಂತರದ ಕೆಳದಿ ಅರಸರ ಚರಿತ್ರೆ ತಿಳಿಸುವುದಿಲ್ಲ. ಕೆಳದಿನೃಪವಿಜಯ ಎಂಬ ಕಾವ್ಯ ಲಿಂಗಣ್ಣಕವಿ 18ನೆಯ ಶತಮಾನದ ಕೊನೆಯಲ್ಲಿ ಬರೆದ. ಈ ಚಂಪೂಕಾವ್ಯ ಸಮಗ್ರ ಕೆಳದಿ ಇತಿಹಾಸವನ್ನು ತಿಳಿಸಿದೆ.

8 ಫೆರಿಯಾ ಸೋಜ—*Asia Da Portuguese*, II, page 472. ಫಾದರ್ ಹೆರಾಸರ ಅರವೀಡು ವಂಶದಿಂದ ಉಲ್ಲೇಖಿಸಿದ್ದು ; page 293. Fariyar Antionio Pinto : *History da India no tempo Emqui a Governou, Visor* ; Roy Dom Louis *Atadia* page 51. ಈ ಗ್ರಂಥ 1666ರಲ್ಲಿ ಬರೆಯಲ್ಪಟ್ಟಿತು. ಈ ವಿಚಾರ ವನ್ನು ಡಾ ಬಿ.ಎಸ್. ಶಾಸ್ತ್ರಿಯವರು ತಮ್ಮ ಅಪ್ರಕಟಿತ ಪ್ರಬಂಧವಾದ 'ಪೋರ್ಚುಗೀಸರು ಕೆನರಾದಲ್ಲಿ' (*The Portuguese in Kanara*, 1498–1763) ಉಲ್ಲೇಖಿಸಿದ್ದಾರೆ. ಈ ಪ್ರಬಂಧ 1969ರಲ್ಲಿ ಬೊಂಬಾಯಿ ವಿಶ್ವವಿದ್ಯಾಲಯಕ್ಕೆ ಪಿಎಚ್‌ಡಿ. ಡಿಗ್ರಿಗಾಗಿ ಅರ್ಪಿಸಿದ್ದು.

9 ಲಿಂಗಣ್ಣಕವಿ: ಕೆಳದಿನೃಪವಿಜಯ, 3ನೆಯ ಸಂಧಿ, ಪದ್ಯ 83. ಈ ಕಾವ್ಯ ಚೆನ್ನಭೈರಾದೇವಿಯನ್ನು ಭೈರಾದೇವಿ ಎಂದು ಉಲ್ಲೇಖಿಸಿದೆ.

10 ಇ. ಎಂ. ಆಳ್ವಾರಿಸ್: ಇಕ್ಕೇರಿ ನಾಯಕರು, page 46, ಅಪ್ರಕಟಿತ ಪ್ರಬಂಧ. 1932ರಲ್ಲಿ ಬೊಂಬಾಯಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದು.

ಯನ್ನು ಮುರಿದನೆಂದು ಲಿಂಗಣ್ಣಕವಿ ತಿಳಿಸುತ್ತಾನೆ. ಈ ವಿಚಾರವನ್ನು ಕೆಳದಿ ಬಸವರಾಜ ಬರೆದ 'ಶಿವತತ್ವರತ್ನಾಕರ' ಎಂಬ ಕಾವ್ಯ ಸಮರ್ಥಿಸುತ್ತದೆ11.

ವೆಂಕಟಪ್ಪನಾಯಕ ಮತ್ತು ಭೈರಾದೇವಿ

ಕೆಳದಿ ಮತ್ತು ಗೇರಸೊಪ್ಪೆ ಅರಸರ ಘರ್ಷಣೆ ಕೆಳದಿ ವೆಂಕಟಪ್ಪ ನಾಯಕನ ಕಾಲದಲ್ಲಿ ತುತ್ತತುದಿಯನ್ನು ಮುಟ್ಟಿತು. ಇವರಿಬ್ಬರ ಘರ್ಷಣೆಯ ಕುರಿತಾಗಿ ಪೋರ್ಚುಗೀಸರ ಒಂದು ದಾಖಲೆ ಹೀಗೆ ತಿಳಿಸುತ್ತದೆ: "ನೀವು ಹೇಳಿದಂತೆ ಬಿಜಾಪುರ ಆದಿಲ್‌ಷಹಾನು ಗೇರಸೊಪ್ಪೆ ಭಟ್ಕಳ ರಾಣಿಯ ಕೇಳಿಕೆಯಂತೆ ಕೆನರಾ ರಾಜನ ವಿರುದ್ಧ (ಕೆಳದಿ ಅರಸ) ಕೆಲವು ದಂಡನಾಯಕರನ್ನು ಕಳುಹಿಸಿದ. ಆದರೆ ಆದಿಲ್‌ಷಾನ ಸೋದರನು ಸುಲ್ತಾನನ ವಿರುದ್ಧ ದಂಗೆ ಏಳದಿದ್ದರೆ ಆ ದಂಡನಾಯಕ ಕೆಳದಿ ಅರಸರ ಘಟ್ಟದ ಮೇಲಿನ ಕೋಟೆಗಳನ್ನು ವಶಪಡಿಸಿಕೊಳ್ಳುತ್ತಿದ್ದ 12. ಈ ವಿಷಯದ ಕುರಿತಾಗಿ ಪೋರ್ಚುಗೀಸ್ ದೊರೆಯ ಇನ್ನೊಂದು ಪತ್ರ ಹೀಗೆ ಹೇಳುತ್ತದೆ: "ಬಿಜಾಪುರ್ ಐಡಲಿಕಾ (ಬಿಜಾಪುರ ಸುಲ್ತಾನ್) ಕೆನರಾ ರಾಜನ ವಿರುದ್ಧ ತನ್ನ ಕೆಲವು ಸೈನಿಕರನ್ನು ಭಟ್ಕಳ ರಾಣಿಯ ಕೋರಿಕೆಯಂತೆ ಕಳುಹಿಸಿದ ವಿಚಾರ ನನಗೆ ಮಥಾಯಿಸ್ ಅಲ್ಬುಕರ್ಕನ ಪತ್ರದಿಂದಾಗಿ ತಿಳಿದುಬಂದಿದೆ. ಆ ಸೈನಿಕ ದಳವಾಯಿಗಳು ಘಟ್ಟದ ಮೇಲಿನ ಕೆಳದಿ ಅರಸರ ಎರಡು ಕೋಟೆಗಳನ್ನು ವಶಪಡಿಸಿಕೊಂಡರು. ಆದರೆ ಬಿಜಾಪುರ ಸುಲ್ತಾನ ದಂಗೆ ಎದ್ದ ಕಾರಣ ಸುಲ್ತಾನ ನಿರ್ವಾಹ ಇಲ್ಲದೆ ತನ್ನ ಸೇನಾನಾಯಕರನ್ನು ಹಿಂದೆ ಕರೆಸಿಕೊಳ್ಳಬೇಕಾಗಿ ಬಂತು"13. ಕೆಳದಿ ಅರಸರ ಆಕ್ರಮಣವನ್ನು ಗೇರಸೊಪ್ಪೆಯ ಭೈರಾದೇವಿ 1595ರ ಅಂತ್ಯದಲ್ಲಿ ಎದುರಿಸಬೇಕಾಗಿ ಬಂತೆಂದೂ ಇದರಿಂದ ಪಾರಾಗಲು ಭೈರಾದೇವಿ ಬಿಜಾಪುರದ ಸುಲ್ತಾನರ ಆಶ್ರಯ ಕೋರಿದಳೆಂದೂ ಬಿಜಾಪುರ ಸುಲ್ತಾನನ ವಿರುದ್ಧ ದಂಗೆಯಿಂದಾಗಿ ಬಿಜಾಪುರ ಸುಲ್ತಾನನಿಗೆ ಇವಳನ್ನು ರಕ್ಷಿಸಲು ಅಸಾಧ್ಯವಾಯಿತೆಂದೂ ಈ ದಾಖಲೆಗಳಿಂದ ತಿಳಿದುಬರುತ್ತದೆ. ಇವರಿಬ್ಬರ ಹೋರಾಟವನ್ನು ಪೋರ್ಚುಗೀಸ್ ದೊರೆಯ ಪತ್ರ ಈ ರೀತಿ ವರ್ಣಿಸಿದೆ: "ನಾಯಕನ ಉಪಟಳದಿಂದಾಗಿ ಭಟ್ಕಳ (ಗೇರಸೊಪ್ಪೆ) ರಾಣಿ ನಮಗೆ ಕೊಡಬೇಕಾಗಿದ್ದ ಕಪ್ಪವನ್ನು ಕೊಡಲಿಲ್ಲವೆಂದು ನೀವು ಪತ್ರ ಮುಖಾಂತರ ನನಗೆ ತಿಳಿಸಿದ್ದೀರಿ. ವಿಜಯನಗರ ಅರಸನ ಸಾಮಂತನಾಗಿದ್ದ ಈ ನಾಯಕ ಈಗ ಬಂಡೆದ್ದು ಅಕ್ಕಪಕ್ಕದ ರಾಜರುಗಳನ್ನು ಸೋಲಿಸಿ, ರಾಣಿಯನ್ನು (ಗೇರಸೊಪ್ಪೆ) ಕಷ್ಟದಲ್ಲಿ ನೂಕಿರುವನು. ಇದರಿಂದಾಗಿ ನಮ್ಮ ಹೊನ್ನಾವರ ಕೋಟೆಗೆ ಗಂಡಾಂತರವಿದೆ. ಆದ್ದರಿಂದ ನೀನು ಅಲ್ಲಿನ ಆಗುಹೋಗುಗಳನ್ನು ನನಗೆ ತಿಳಿಸುತ್ತಾ ನಾಯಕನ ಉದ್ದೇಶ ವಿಫಲವಾಗುವಂತೆ ವರ್ತಿಸುತ್ತಿರು."14

---

11 ಲಿಂಗಣ್ಣಕವಿ: ಕೆಳದಿನೃಪವಿಜಯ, ಸಂಧಿ 4, ಪದ್ಯ 9. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್: *Sources of Vijaya Nagar History*, p. 339

12 ಪೋರ್ಚುಗೀಸ್ ದೊರೆ ಗೋವದ ವೈಸರಾಯನಿಗೆ ಬರೆದ ಪತ್ರ. ಈ ಪತ್ರ 28-1-1596ರಲ್ಲಿ ಬರೆಯಲ್ಪಟ್ಟಿತು. Cunha Da Rivara: *Archivo Portuguese Oriental*, Vol. III, Page 591. ಇದನ್ನು ಡಾ. ಶಾಸ್ತ್ರಿಯವರು ತಮ್ಮ ಅಪ್ರಕಟಿತ ಪ್ರಬಂಧದಲ್ಲಿ (ಕೆನರಾದಲ್ಲಿ ಪೋರ್ಚುಗೀಸರು) ಪು. 127ರಲ್ಲಿ ತಿಳಿಸಿದ್ದಾರೆ.

13 ಪೋರ್ಚುಗೀಸ್ ದೊರೆಯ ಇನ್ನೊಂದು ಪತ್ರ. ಈ ಕಾಗದವನ್ನು ಬರೆದದ್ದು 28-2-1596ರಲ್ಲಿ. ಈ ಪತ್ರ ಇ. ಎಂ. ಆಳ್ವಾರಿಸ್: ಇಕ್ಕೇರಿ ನಾಯಕರು ಎಂಬ ತಮ್ಮ ಅಪ್ರಕಟಿತ ಪ್ರಬಂಧದಲ್ಲಿ ತಿಳಿಸಿದ್ದಾರೆ. ಮಥಾಯಿಸ್ ಅಲ್ಬುಕರ್ಕ್ ಈ ಕಾಲದಲ್ಲಿ ಗೋವೆಯ ವೈಸ್‌ರಾಯ್.

14 ಪೋರ್ಚುಗೀಸ್ ದೊರೆಯ ಇನ್ನೊಂದು ಪತ್ರ. ಈ ಪತ್ರ ಗೋವಾದ ವೈಸ್ ರಾಯನಿಗೆ ಬರೆದದ್ದು. ಈ ಪತ್ರ 1598ರ ನವೆಂಬರ್ 21ರಂದು ಬರೆದದ್ದು. ಈ ಪತ್ರ

ಕೆಳದಿ ವೆಂಕಟಪ್ಪನಾಯಕ ಲಕ್ಷದೇಶದ ದೊರೆಯೆನಿಸಿದ ಭೈರಾದೇವಿಯ ಗರುವಿಯನ್ನು ಮುರಿದು ಕೈಸೆರೆ ಮಾಡಿದ. ದಳವಾಯಿ ಲಿಂಗಣ್ಣ ನಾಯಕನನೇತೃತ್ವದಲ್ಲಿ ಬಲವಾದ ಸೈನಿಕ ದಂಡನ್ನು ಕಳುಹಿಸಿ ರಾಣಿಯನ್ನು ಕೈಸೆರೆ ಹಿಡಿದು ದಾವಿನಹಳ್ಳಿ, ಕರವೂರು, ಮೊರಬಡಿ, ಸಾಳನಾಡು, ಭಟ್ಕಳ. ಗೆರಸೊಪ್ಪೆ, ಚಂದಾವರ, ಗೋವರ್ಧನಗಿರಿ, ವಿಷ್ಣು ಮೇದಿನಿ ಮುಂತಾದ ಆಕೆ ಆಳುವ ರಾಜ ಪರಿಸ್ತರಣವನ್ನು ವಶಪಡಿಸಿಕೊಂಡು ಅಲ್ಲಿರುವ "ವಿಚಿತ್ರತರ ವಸ್ತುವಾಹನಾಂಬರಾರ್ಥಾದಿ ಸರ್ವಸ್ವಮಂ ಸ್ವಾಧೀನಗೈದ 15. ವೆಂಕಟಪ್ಪನಾಯಕ ಭೈರಾದೇವಿಯನ್ನು ಸೋಲಿಸಿ ಅವಳ ಸ್ಥಾನದಲ್ಲಿ ಲಕ್ಷ್ಮೀ ದೇವಿಯನ್ನು ಗೆರಸೊಪ್ಪೆ ರಾಣಿಯನ್ನಾಗಿ ಮಾಡಿದನೆಂದು ಡಾ. ಶಾಮಶಾಸ್ತ್ರಿಗಳು ತಮ್ಮ ಲೇಖನ ದಲ್ಲಿ ತಿಳಿಸಿದ್ದಾರೆ16. ಆದರೆ ಬಸವರಾಜನ ಶಿವತತ್ವರತ್ನಾಕರ ಎಂಬ ಕಾವ್ಯದಲ್ಲಿ ವೆಂಕಟಪ್ಪನಾಯಕ ಗೆರಸೊಪ್ಪೆಯ ರಾಣಿಯನ್ನು ಸೋಲಿಸಿ ಅವಳನ್ನು ಕೈಸೆರೆ ಮಾಡಿ, ಅವಳ ರಾಜ್ಯವನ್ನು ಸಂಪೂರ್ಣ ವಾಗಿ ತನ್ನ ವಶಕ್ಕೆ ಸೇರಿಸಿಕೊಂಡನೆಂದು ಉಲ್ಲೇಖಿಸಿದೆ17. ಆದ್ದರಿಂದ ಶಾಮಶಾಸ್ತ್ರಿಗಳ ಹೇಳಿಕೆ ಸಮರ್ಪಕವಾಗಿಲ್ಲ.

ಡೆಲ್ಲಾ ವೆಲ್ಲಿಯ ನಿರೂಪಣೆ

1623ರಲ್ಲಿ ಬಂದ ಇಟಲಿಯ ಪ್ರವಾಸಿ ಪಿಯಿಟ್ರೊ ಡೆಲ್ಲಾವೆಲ್ಲಿ ಈ ರಾಣಿಯ ಅಂತ್ಯದ ಕುರಿತಾಗಿ ತನ್ನ ವರದಿಯಲ್ಲಿ ಈ ರೀತಿ ತಿಳಿಸಿದ್ದಾನೆ: "ಗೆರಸೊಪ್ಪೆಯ ಕೊನೆಯ ರಾಣಿ ನೀಚಕುಲ ಸಂಜಾತನಾದ (low birth) ವಿದೇಶೀಯನನ್ನು ಮದುವೆ ಆದಳು. ಈ ರಾಣಿಯ ಕೃತಘ್ನನಾದ ಗಂಡ ಸಮಗ್ರ ರಾಜ್ಯವನ್ನು ತಾನು ವಶಪಡಿಸಿಕೊಳ್ಳಲು ದುರಾಲೋಚಿಸಿದ. ಇವನ ಒಳಸಂಚಿನಿಂದ ಪಾರಾಗಲು ರಾಣಿ ಪೋರ್ಚುಗೀಸರ ಸಹಾಯ ಕೇಳಿದಳು. ಇದಕ್ಕೆ ಪ್ರತಿಯಾಗಿ ಆ ರಾಜದ್ರೋಹಿ ವೆಂಕಟಪ್ಪ ನಾಯಕನನ್ನು ಆಹ್ವಾನಿಸಿದ. ಈ ಸಂದರ್ಭವನ್ನು ಉಪಯೋಗಿಸಿಕೊಂಡು ವೆಂಕಟಪ್ಪನಾಯಕ ಗೆರ ಸೊಪ್ಪೆ ರಾಜ್ಯದ ಮೇಲೆ ಮಿಂಚಿನಂತೆ ದಾಳಿ ನಡೆಸಿ ಅತಿ ಶೀಘ್ರದಲ್ಲಿ ಸಮಗ್ರ ಗೆರಸೊಪ್ಪೆ ರಾಜ್ಯ ವನ್ನು ತನ್ನ ವಶಪಡಿಸಿಕೊಂಡು ರಾಣಿಯನ್ನು ಕೈಸೆರೆ ಹಿಡಿದು ಅವಳ ಸಹಾಯಕರಾದ ಪೋರ್ಚು ಗೀಸರನ್ನು ಅವಳ ರಾಜ್ಯದಿಂದ ಹೊರ ಅಟ್ಟಿದ. ಆದರೆ ರಾಜದ್ರೋಹಿಯಾದ ಆ ರಾಣಿಯ ಗಂಡನನ್ನು ವೆಂಕಟಪ್ಪನಾಯಕ ಸುಮ್ಮನೆ ಬಿಡಲಿಲ್ಲ. ಅವನನ್ನು ಕೊಲ್ಲಿಸಿ ಗೆರಸೊಪ್ಪೆ ರಾಜ್ಯ ಇನ್ನು ಪ್ರಬಲ ವಾಗಿ ತಿರುಗಿ ಇವನ ವಿರುದ್ಧ ದಂಗೆ ಏಳದಂತೆ ಗೆರಸೊಪ್ಪೆಯ ಮೇಲೆ ಪ್ರಬಲವಾದ ದಾಳಿ ಮಾಡಿದ. ಇದರಿಂದ ವೈಭವದಿಂದ ಮೆರೆಯುತ್ತಿದ್ದ ಗೆರಸೊಪ್ಪೆ ಕಾಡಾಯಿತು.18

ಫಾದರ್ ಹೆರಾಸರ 'ಅರವೀಡು ವಂಶ'ದಲ್ಲೂ (p. 423) ಡಾ. ಶಾಸ್ತ್ರಿಗಳ 'ಕೆನರಾದಲ್ಲಿ ಪೋರ್ಚುಗೀಸರು' ಪ್ರಬಂಧದಲ್ಲೂ ಉಲ್ಲೇಖಿತವಾಗಿದೆ (p. 127). ಇಲ್ಲಿ ಉಲ್ಲೇಖಿಸಿದ ನಾಯಕ ಚಿಕ್ಕಸಂಕಣ್ಣನಾಯಕನೆಂದು ಫಾದರ್ ಹೆರಾಸರು ತಪ್ಪಾಗಿ ತಿಳಿಸಿದ್ದಾರೆ (ಹೆರಾಸರ ಅರವೀಡು ವಂಶ, p. 423). ಆದರೆ ಈ ನಾಯಕ ಕೆಳದಿ ವೆಂಕಟಪ್ಪನಾಯಕ. ಇವನ ವಿಷಯವನ್ನು 1592ನೆಯ ಶಾಸನ ತಿಳಿಸುತ್ತದೆ. *Mysore Archaeological Report*, 1922–23, p 106–107. ಗೋವಾದ ವೈಸ್‌ರಾಯ್ ಕಾನ್‌ಡಿ ವಿಡಿಗ್ವಿರ (Conde Vidigeuira) ಆಗಿದ್ದನೆಂದು ಫಾದರ್ ಹೆರಾಸ್ ತಮ್ಮ ಪುಸ್ತಕವಾದ 'ಅರವೀಡು ವಂಶ'ದಲ್ಲಿ ತಿಳಿಸಿದ್ದಾರೆ (p. 423).

15 ಕೆಳದಿನೃಪವಿಜಯಂ, ಸಂಧಿ 5, ಪದ್ಯ 41–42

16 ಡಾ. ಶಾಮಶಾಸ್ತ್ರಿಯವರ 'ಗೆರಸೊಪ್ಪೆ ಅರಸರು' ಎಂಬ ಲೇಖನ *Quarterly Journal of Mythic Society*, XII ನಲ್ಲಿ ಪ್ರಕಟವಾಗಿದೆ (P. 52).

17 S. Krishna Swamy Aiyangar: *Sources of Vijayanagar History*, P. 344

18 *The Travels of Pietro Della Valle* II, P. 195–218–220

ಕೆಳದಿ ಅರಸರು ಗೆರಸೊಪ್ಪೆಯನ್ನು ಸ್ವಾಧೀನಪಡಿಸಿಕೊಳ್ಳುವ ಕಾಲದಲ್ಲಿ ರಾಣಿ ಎಪ್ಪತ್ತು ವರ್ಷದ ಮುದುಕಿಯಾಗಿದ್ದಳೆಂಬ ಡೆಲ್ಲಾವೆಲ್ಲಿಯ ಹೇಳಿಕೆ ನಮಗೆ ಆಶ್ಚರ್ಯವನ್ನುಂಟುಮಾಡುತ್ತದೆ ಎಂಬ ಡಾ. ಸೂರ್ಯನಾಥ ಕಾಮತರ ವಾದ ಸಮರ್ಥನೀಯವಾಗಿದೆ19. ಆದ್ದರಿಂದ ಡೆಲ್ಲಾವೆಲ್ಲಿ ತಿಳಿಸಿದ ವಿಚಾರ ಪೂರಾ ಸತ್ಯ ಸಂಗತಿಯಿಂದ ಕೂಡಿಲ್ಲವೆಂದು ನಾವು ಅಭಿಪ್ರಾಯಪಡಬಹುದು.

ಗೆರಸೊಪ್ಪೆಯ ಪತನ

1636ರಲ್ಲಿ ಹಾಡುವಳ್ಳಿಯಲ್ಲಿ ಮುರಿದು ಬಿದ್ದ ಕೋಟೆಗಳನ್ನೂ ಹಾಳಾದ ಅರಮನೆಯನ್ನೂ ಭಗ್ನವಾದ ಕಲ್ಲಿನ ಗೋಡೆಗಳನ್ನೂ ಪಾಳುಬಿದ್ದ ದೇವಾಲಯ ಮತ್ತು ಬಸದಿಗಳನ್ನೂ ನೋಡಿದೆನೆಂದು ಇಂಗ್ಲಿಷ್ ಪ್ರವಾಸಿ ಪೀಟರ್ ಮುಂಡಿ ತನ್ನ ವರದಿಯಲ್ಲಿ ತಿಳಿಸಿದ್ದ. ಅವನು ಈ ರಾಜ್ಯವನ್ನು ವೀರಭದ್ರ ನಾಯಕನ ಅಜ್ಜ ವಶಪಡಿಸಿಕೊಂಡನೆಂದೂ ಉಲ್ಲೇಖಿಸಿದ್ದಾನೆ.20 ಹಳಿಪೈಕರು ಗೆರಸೊಪ್ಪೆ ರಾಣಿಯ ವಿರುದ್ಧ ದಂಗೆ ಎದ್ದುದರಿಂದಾಗಿ ವೆಂಕಟಪ್ಪನಾಯಕನಿಗೆ ಗೆರಸೊಪ್ಪೆಯನ್ನು ವಶಪಡಿಸಿಕೊಳ್ಳಲು ಸುಲಭವಾಯಿತೆಂದು ಬುಕಾನನ್ ತನ್ನ ವರದಿಯಲ್ಲಿ ತಿಳಿಸಿದ್ದಾನೆ.21

ಗೆರಸೊಪ್ಪೆ ರಾಜ್ಯ ಕಿ.ಶ. 1607ರಲ್ಲಿ ಸಂಪೂರ್ಣವಾಗಿ ಕೆಳದಿ ವೆಂಕಟಪ್ಪ ನಾಯಕನ ವಶವಾಯಿತೆಂದು ಪೋರ್ಚುಗೀಸ್ ದೊರೆಯ ಪತ್ರದಿಂದ ನಮಗೆ ತಿಳಿದುಬರುತ್ತದೆ.22 ಆದುದರಿಂದ ಕೆಳದಿ ವೆಂಕಟಪ್ಪನಾಯಕ ಮತ್ತು ಗೆರಸೊಪ್ಪೆ ಭೈರಾದೇವಿಯರೊಳಗೆ ನಿರ್ಣಯಾತ್ಮಕ (Decisive) ಕದನ ಕ್ರಿ.ಶ. 1607ರಲ್ಲಿ ನಡೆಯಿತೆಂದು ತಿಳಿಯಬಹುದು.

ಕೆಳದಿ ವೆಂಕಟಪ್ಪನಾಯಕ ಅಂಕೋಲೆ ರಾಣಿಯಿಂದ ಮುನ್ನೂರು ಸಾವಿರ ಪಗೋಡ ಬೆಲೆ ಬಾಳುವ ಪ್ರದೇಶವನ್ನು ಮತ್ತು ಗೆರಸೊಪ್ಪೆ ರಾಣಿಯಿಂದ 50 ಸಾವಿರ ಪಗೋಡ ಉತ್ಪತ್ತಿಯ ರಾಜ್ಯವನ್ನು ವಶಪಡಿಸಿಕೊಂಡನೆಂದು ಕ್ರಿ.ಶ. 1629ರ ಪೋರ್ಚುಗೀಸ್ ಬರಹ ತಿಳಿಸುತ್ತದೆ.23

---

19 ಡಾ. ಸೂರ್ಯನಾಥ ಕಾಮತರ ಅಪ್ರಕಟಿತ ಪ್ರಬಂಧ: 'ವಿಜಯನಗರ ಕಾಲದಲ್ಲಿ ತುಳುವರು' (*Tuluvas under Vijayanagar Times*, P. 99) ಈ ಪ್ರಬಂಧ 1963ರಲ್ಲಿ ಬೊಂಬಾಯಿ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ.ಗಾಗಿ ಅರ್ಪಿಸಿದ್ದು.

20 Peter Mundy: *Travels in Europe and Asia*, Vol. III, Part I, P. 76

21 Buchanan: *A Journey through Malabar and Canara*, II, P. 316

22 ಪೋರ್ಚುಗೀಸ್ ದೊರೆ ವೈಸ್‌ರಾಯನಿಗೆ ಬರೆದ ಪತ್ರ. ಇದನ್ನು ಬರೆದದ್ದು ಜನವರಿ 16, 1607ರಲ್ಲಿ. *Documentos Remittidos da India on Livros das Moneoes*: documents published by Royal Academy of Science. ಈ ದಾಖಲೆಯನ್ನು ಅಲ್ವಾರಿಸ್ 'ಇಕ್ಕೇರಿ ನಾಯಕರು', P. 74, 79 ಪ್ರಬಂಧದಲ್ಲೂ ಡಾ. ಬಿ. ಎಸ್. ಶಾಸ್ತ್ರಿಗಳು 'ಕೆನರಾದಲ್ಲಿ ಪೋರ್ಚುಗೀಸರು' ಎಂಬ ತಮ್ಮ ಅಪ್ರಕಟಿತ ಪ್ರಬಂಧದಲ್ಲೂ ಉಲ್ಲೇಖಿಸಿದ್ದಾರೆ (P. 129).

23 Moncoes do Reino, No. 12. Anode 1629. Folios 448–49. ಈ ದಾಖಲೆಯನ್ನು ಫಾದರ್ ಹೆರಾಸ್ ತಮ್ಮ ಲೇಖನವಾದ 'ಇಕ್ಕೇರಿ ವೆಂಕಟಪ್ಪನಾಯಕನ ಯುದ್ಧವಿಸ್ತಾರ' (*The Expansion of War of Venkatappa Nayaka of Ikkeri*) ದಲ್ಲಿ ಉಲ್ಲೇಖಿಸಿದ್ದಾನೆ. ಈ ಲೇಖನ *Indian Historical Records Commission*, XI, 1928ರಲ್ಲಿ ಪ್ರಕಟವಾಗಿದೆ (P. 108–112). ಇಲ್ಲಿ ತಿಳಿಸಿದ ಅಂಕೋಲೆ

ಪರಿಣಾಮ

ಗೆರಸೊಪ್ಪೆಯ ಪತನ ಕೆನರಾ ಕರಾವಳಿಯ ಚರಿತ್ರೆಯಲ್ಲಿ ಪ್ರಮುಖವಾದ ಘಟನೆಯಾಗಿದೆ. ಒಂದನೆಯದಾಗಿ ಈ ಕರಾವಳಿಯ ಮುಖಜ ಭೂಮಿಯಲ್ಲಿ ಕೋಟೆ ರಚಿಸಿ ವ್ಯಾಪಾರಗೈಯುತ್ತಿದ್ದ ಪೋರ್ಚುಗೀಸರು ಇಲ್ಲಿ ಪ್ರಬಲವಾದ ಆಂತರಿಕ ಸಾಮ್ರಾಜ್ಯ ಬೆಳೆಯುತ್ತಿದೆ ಎಂಬುದನ್ನು ಮನಗಂಡರು. ಆದ್ದರಿಂದ ಈ ಪ್ರದೇಶದಲ್ಲಿ ಅವರ ಸಾಮ್ರಾಜ್ಯ ಕಟ್ಟಿ ಆಳುವ ದುರಾಕಾಂಕ್ಷೆ ಮಣ್ಣುಪಾಲಾಯಿತು. ಕ್ರಮೇಣ ಇವರ ವರ್ಚಸ್ಸು ಮತ್ತು ವ್ಯಾಪಾರದ ಹಿಡಿತಗಳು ಸಡಿಲಗೊಂಡವು. ಪೋರ್ಚುಗೀಸರು ಎಣಿಸದ ರೀತಿಯಲ್ಲಿ ಕೆಳದಿ ನಾಯಕರು ಪ್ರಬಲರಾಗಿ ಇವರ ಭದ್ರ ಸ್ಥಾನವನ್ನು ಕರಾವಳಿಯಲ್ಲಿ ಅಲುಗಾಡಿಸಲು ಆರಂಭಿಸಿದರು. ಇವರ ಕೋಟೆಗಳಿರುವ ಹೊನ್ನಾವರ, ಭಟ್ಕಳ, ಬಸ್ರೂರು ಮತ್ತು ಮಂಗಳೂರು ವರೆಗಿನ ಪ್ರದೇಶಗಳು ಕೆಳದಿನಾಯಕರ ವಶವಾದುವು. ಗೋವೆಯಲ್ಲಿರುವ ಪೋರ್ಚುಗೀಸ್ ಸರ್ಕಾರ ಕೆಳದಿ ಅರಸರ ಅನುಗ್ರಹ ಸಂಪಾದಿಸಲು ಪ್ರಯತ್ನಿಸುತ್ತಿತ್ತೆಂದು ಪೋರ್ಚುಗೀಸ್ ದಾಖಲೆಗಳು ತಿಳಿಸುತ್ತವೆ.24

ಎರಡನೆಯದಾಗಿ ಈ ಘಟನೆ ಕೆಳದಿ ಅರಸರ ಮೇಲೆ ಹೆಚ್ಚಿನ ಪರಿಣಾಮವನ್ನುಂಟುಮಾಡಿತು. ಕೆಳದಿ ಸಾಮ್ರಾಜ್ಯದಲ್ಲಿ ಗೆರಸೊಪ್ಪೆ ವಿಲೀನಗೊಂಡದ್ದರಿಂದ ಕೆಳದಿಯ ವರ್ಚಸ್ಸು ಹೆಚ್ಚಾದುದಲ್ಲದೆ ಕಾಳುಮೆಣಸಿನ ವ್ಯಾಪಾರದ ಹಿಡಿತ ಇವರ ವಶಕ್ಕೆ ಬಂತು. ಸಮಗ್ರ ಕರ್ನಾಟಕದ ಕಣಜವೆನಿಸಿದ ಪಶ್ಚಿಮ ಕರಾವಳಿ ಈ ವಿಜಯದಿಂದಾಗಿ ಇವರ ವಶಕ್ಕೆ ಬಂದು, ಪಾಳೆಯಗಾರರಾಗಿದ್ದ ಕೆಳದಿ ನಾಯಕರು ಕರ್ನಾಟಕದಲ್ಲಿ ಮುಖ್ಯ ರಾಜರಲ್ಲೊಬ್ಬರಾದರು. ಅದರಲ್ಲೂ ಕೆನರಾ ಕರಾವಳಿಯಲ್ಲಿ ಪ್ರಬಲ ಶಕ್ತಿಗಳಾದರು. ಈ ಕರಾವಳಿಯಲ್ಲಿ ಅವರ ಶಕ್ತಿಯನ್ನು ತಡೆಗಟ್ಟಲು ಹೊರಗಿನ ಪೋರ್ಚುಗೀಸರಿಗೂ ಇಲ್ಲಿ ಆಳಿಕೊಂಡಿದ್ದ ಚಿಕ್ಕಪುಟ್ಟ ಪಾಳೆಯಗಾರರಿಗೂ ಅಸಾಧ್ಯವಾಯಿತು. ಇವರು ಎಷ್ಟು ಪ್ರಬಲರಾಗಿದ್ದರೆಂದರೆ, ಪಾಶ್ಚಾತ್ಯ ರಾಷ್ಟ್ರ ವ್ಯಾಪಾರ ಕಂಪೆನಿಗಳು ಇವರ ವಸೀಲಿ ಪಡೆಯಲು ಬಯಸುತ್ತಿದ್ದುವು.25

ಮುನ್ನೂರು ವರ್ಷಗಳ ತನಕ ವೈಭವದಿಂದ ಆಳಿ ಮೆರೆದ ಗೆರಸೊಪ್ಪೆ ಸಾಳ್ವವಂಶ ವೆಂಕಟಪ್ಪ ನಾಯಕನಿಂದ ನಿರ್ಮೂಲವಾಯಿತು. ಗೆರಸೊಪ್ಪೆ ಕಾಡುಕೊಂಪೆಯಾಯಿತು. ಕೆಳದಿ ಅರಸರ ಆಕ್ರಮಣವನ್ನು ಸುಮಾರು ಅರ್ಧ ಶತಮಾನಕಾಲ ತಡೆಗಟ್ಟುತಿದ್ದ ಚೆನ್ನಭೈರಾದೇವಿ ರಾಜ್ಯವನ್ನು ಕಳೆದುಕೊಂಡಳು. ಇದರಿಂದಾಗಿ ವೆಂಕಟಪ್ಪನಾಯಕನಿಗೆ ಈ ಕರಾವಳಿಯ ಇನ್ನಿತರ ರಾಜರುಗಳನ್ನು ಸೋಲಿಸಿ ಅವರನ್ನು ತನ್ನ ಅಂಕಿತದಲ್ಲಿ ಇರಿಸಿಕೊಳ್ಳಲು ಈ ಘಟನೆ ಬಹಳ ಸಹಕಾರಿಯಾಯಿತು.

ಮುನ್ನೂರು ವರ್ಷಗಳ ಕಾಲ ಜೈನಮತವನ್ನು ಪ್ರೋತ್ಸಾಹಿಸುತ್ತಿದ್ದ ಈ ರಾಜವಂಶದ ನಿರ್ನಾಮದಿಂದಾಗಿ ಉತ್ತರ ಕನ್ನಡ ಕರಾವಳಿಯಲ್ಲಿ ಜೈನಧರ್ಮದ ಇಳಿಮುಖ ಆರಂಭವಾಯಿತು.

ಮತ್ತು ಗೆರಸೊಪ್ಪೆ ರಾಣಿ ಒಬ್ಬಳೇ ಎಂದು ಫಾದರ್ ಹೆರಾಸ್ ಅಭಿಪ್ರಾಯಪಡುತ್ತಾರೆ. ಈ ವಾದವನ್ನು ಸಮಕಾಲೀನ ಪ್ರವಾಸಿ ಸೀಜರ್ ಫೆಡರಿಕ್‌ನ ವರದಿ ಸಮರ್ಥಿಸುತ್ತದೆ. *Accounts of Caeser Fredrik*–Haklyuts Publication ; Posthumus, P. 101. ನಾಗೇಗೌಡ: ಪ್ರವಾಸಿ ಕಂಡ ಇಂಡಿಯ, II, ಪು. 464-466.

24 ಕ್ರಿ.ಶ. 1607ರಲ್ಲಿ ಪೋರ್ಚುಗೀಸ್ ಅರಸ ಗೋವೆಯ ವೈಸ್‌ರಾಯನಿಗೆ ಬರೆದ ಪತ್ರ Bulhao–Docunientos, P 74–ಈ ದಾಖಲೆಯನ್ನು ಫಾದರ್ ಹೆರಾಸರು ಬರೆದ ಲೇಖನ 'ಇಕ್ಕೇರಿ ವೆಂಕಟಪ್ಪನಾಯಕನ ಯುದ್ಧವಿಸ್ತಾರ' (*The Expansion of War of Venkatappa Nayaka of Ikkeri*) published in Indian Historical Reeord Commission, 11, 1928. P. 110-114ದಲ್ಲಿ ತಿಳಿಸಿದ್ದಾರೆ.

25 ಇಕ್ಕೇರಿ ನಾಯಕರು, ಪು. 79 : ಇ. ಎಂ. ಅಲ್ವಾರಿಸರ ಅಪ್ರಕಟಿತ ಪ್ರಬಂಧ.

ವಿಜಯನಗರ ಸಾಮ್ರಾಜ್ಯ ಮತ್ತು ಬಹಮನಿ ರಾಜ್ಯಗಳು 14 ರಿಂದ 17ನೆಯ ಶತಮಾನಗಳ ವರೆಗೆ ಏಳ್ಗೆ ಪಡೆದ . . . . ಕಾಲದಲ್ಲಿ ಕೆಲವು ಪಾಳೆಯಗಾರರು ಕಟ್ಟಿದ ಸಣ್ಣಪುಟ್ಟ ರಾಜ್ಯಗಳೂ ಕರ್ಣಾಟಕದಲ್ಲಿ ಅಸ್ತಿತ್ವದಲ್ಲಿದ್ದು ಪ್ರಧಾನ ಆಳಿಕೆಯನ್ನು ನಡೆಸಿದುವು. ಅವುಗಳಲ್ಲಿ ಕೆಲವು ಬಹುಮಟ್ಟಿಗೆ ಸಾರ್ವಭೌಮತ್ವವನ್ನು ಹೊಂದಿದ್ದುವು ಅಥವಾ ಹೆಸರು ಮಾತ್ರಕ್ಕೆ ವಿಜಯನಗರದ ಅಥವಾ ಇತರರ ಅಧೀನತೆಯನ್ನು ಹೊಂದಿದ್ದುವು. ನಮ್ಮ ದೇಶದಲ್ಲಿ ಆ ರೀತಿಯ ವಿಕೇಂದ್ರೀಕೃತ ಅಧಿಕಾರ ಪ್ರಾಚೀನ ಮತ್ತು ಮಧ್ಯಕಾಲೀನ ಗುಣವಿಶೇಷವೇ ಆಗಿತ್ತು. ಈ ಸಣ್ಣಪುಟ್ಟ ರಾಜ್ಯಗಳು ಹಲವು ಕಾಲದ ವರೆಗೆ ಮೆರೆದಿದ್ದು ಮಹತ್ವದ ಪಾತ್ರವನ್ನು ವಹಿಸಿದ್ದುವು. ಅವು ದೇಶದಲ್ಲಿ ರಾಜಕೀಯ ಜೀವನದ ಸ್ಥಿರತೆಯನ್ನುಳಿಸಿಕೊಂಡು ತಮ್ಮ ಪ್ರದೇಶದಲ್ಲಿ ವಿದ್ಯೆ-ಕಲೆಗಳನ್ನು ಬೆಳೆಸಿದುವು. ಅಲ್ಲದೆ ದೇಶದ ಸಾಂಸ್ಕೃತಿಕ ಅಭಿವೃದ್ಧಿಗೂ ಕಾಣಿಕೆಯನ್ನು ಸಲ್ಲಿಸಿದುವು.[1]

—ಎನ್. ರಾಜಗೋಪಾಲರಾವ್

---

[1] ಕರ್ಣಾಟಕದ ಪರಂಪರೆ ; ಮೈಸೂರು ರಾಜ್ಯ ಸರಕಾರ (1970) ; ಪು. 183

ಡಾ. ಎಂ. ಮಾದಯ್ಯ -

ಫೀಜಿ ದೇಶದ ಆರ್ಥಿಕತೆ

ಫೀಜಿ ದೇಶ ಇಂಗ್ಲಿಷರ ಆಡಳಿತದಿಂದ 1970ರ ಅಕ್ಟೋಬರ್ 10ರಂದು ಸ್ವಾತಂತ್ರ್ಯಗಳಿಸಿಕೊಂಡಿತು. ಈ ದೇಶ 1874ರಿಂದ ಬ್ರಿಟಿಷರ ವಸಾಹತಾಗಿತ್ತು. ಭಾರತಕ್ಕೂ ಫೀಜಿಗೂ ಬಹಳ ವರ್ಷಗಳಿಂದಲೂ ನಿಕಟಸಂಬಂಧವಿದೆ. ಇಲ್ಲಿರುವ ಜನಸಂಖ್ಯೆಯಲ್ಲಿ ಅರ್ಧಕ್ಕಿಂತ ಹೆಚ್ಚು ಮಂದಿ ಭಾರತದಿಂದ ವಲಸೆ ಬಂದವರು. ಈ ಲೇಖನದಲ್ಲಿ ಫೀಜಿ ದೇಶದ ಆರ್ಥಿಕ ಜೀವನ ಮತ್ತು ಆರ್ಥಿಕ ಅಭಿವೃದ್ಧಿಯನ್ನು ಕುರಿತು ವಿವೇಚಿಸಲಾಗಿದೆ.

ಫೀಜಿ ದೇಶ ಸುಮಾರು 845 ದ್ವೀಪಗಳಿಂದ ಕೂಡಿದ್ದು. ಈ ದೇಶದ ಒಟ್ಟು ವಿಸ್ತೀರ್ಣ ಸುಮಾರು 7,100 ಚ.ಮೈ. ಈ ದ್ವೀಪಗಳ ಪೈಕಿ 100 ದ್ವೀಪಗಳಲ್ಲಿ ಮಾತ್ರ ಜನರು ಖಾಯಂ ಆಗಿ ನೆಲೆಸಿದ್ದಾರೆ. ಉಳಿದ 745 ದ್ವೀಪಗಳನ್ನು ಕೆಲವು ಸಾರಿ ತಾತ್ಕಾಲಿಕವಾಗಿ ಆಹಾರಧಾನ್ಯಗಳನ್ನು ಬೆಳೆಯಲೂ ಮೀನು ಗಳನ್ನು ಹಿಡಿಯಲು ಬಿಡಾರಗಳನ್ನಾಗಿಯೂ ಈ ದೇಶದ ಜನರು ಉಪಯೋಗಿಸುತ್ತಿದ್ದಾರೆ. ಫೀಜಿ ದೇಶದ ರಾಜಧಾನಿ ಸುವ ಪಟ್ಟಣ. ಇದು ಒಳ್ಳೆಯ ವ್ಯಾಪಾರ ಕೇಂದ್ರ ಮತ್ತು ಮುಖ್ಯ ಬಂದರು. ಈ ದೇಶದ ಇನ್ನೊಂದು ಪ್ರಮುಖ ಪಟ್ಟಣವೆಂದರೆ ನ್ಯಾಂಡಿ. ನ್ಯಾಂಡಿಯಲ್ಲಿ ಆಧುನಿಕ ಸೌಕರ್ಯಗಳಿಂದ ಕೂಡಿದ ಮತ್ತು ಪ್ರಸಿದ್ಧವಾದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವಿದೆ. ಫೀಜಿ ದೇಶ ಆಸ್ಟ್ರೇಲಿಯ ಮತ್ತು ನ್ಯೂ ಜೀಲೆಂಡ್‌ಗಳಿಗೆ ಬಹಳ ಸಮೀಪದಲ್ಲಿದೆ. ಫೀಜಿ ಪ್ರಕೃತಿಸೌಂದರ್ಯ ದಿಂದ ತುಂಬಿ ತುಳುಕಾಡುವ ದೇಶ. ದೇಶದ ಸುತ್ತಲೂ ಪೆಸಿಫಿಕ್ ಸಾಗರ. ಆದ್ದರಿಂದ ಪ್ರಪಂಚದ ಎಲ್ಲ ಕಡೆಯಿಂದಲೂ ಇದು ಪ್ರವಾಸಿಗರನ್ನು ಪ್ರತಿವರ್ಷವೂ ಹೆಚ್ಚುಹೆಚ್ಚಾಗಿ ಆಕರ್ಷಿಸುತ್ತಿದೆ. 1967 ರಲ್ಲಿ ಪ್ರವಾಸಿಗರಿಂದ 1.12.00.000 ಫೀಜಿ ಡಾಲರುಗಳಷ್ಟು ಆದಾಯ ಬಂದಿತ್ತು. 1969ರಲ್ಲಿ ಇದರ ಆದಾಯ 2,60.00,000 ಫೀಜಿ ಡಾಲರುಗಳಿಗೇರಿತ್ತು.

1966ರ ಜನಗಣತಿಯ ಪ್ರಕಾರ. ಫೀಜಿಯ ಒಟ್ಟು ಜನಸಂಖ್ಯೆ 4,76,727. 1969ರ ಮಧ್ಯ ದಲ್ಲಿ ಮಾಡಿದ ಅಂದಾಜಿನ ಪ್ರಕಾರ ಅಲ್ಲಿಯ ಜನಸಂಖ್ಯೆ ಸುಮಾರು 5.19,000. ಇದರಲ್ಲಿ ಸುಮಾರು 2,15,000 ಜನರು ಫೀಜಿಯನ್ ಬುಡಕಟ್ಟಿನವರು. ಸುಮಾರು 2.56,000 ಜನರು ಭಾರತೀಯ ಸಂಜಾತರು. ಉಳಿದವರು ಆಗ್ನೇಯ ಅಥವಾ ಚೀನಿ ಬುಡಕಟ್ಟಿಗೆ ಸೇರಿದವರು[1]. 1870ರಿಂದ 1917ರ ವರೆಗೆ ಕಬ್ಬಿನ ಬೇಸಾಯ ಮಾಡಲು ಭಾರತ ದೇಶದಿಂದ ಅನುಬದ್ಧ ಕೂಲಿಗಾರರು (ಇಂಡೆಂಚರ್ಡ್ ಲೇಬರರ್ಸ್) ಬಹಳ ಜನ ಬಂದು ಫೀಜಿ ದೇಶದಲ್ಲಿ ನೆಲೆಸಿದರು. ಇನ್ನು ಕೆಲವರು ವ್ಯಾಪಾರೋದ್ದೇಶದಿಂದ ಬಂದು ನೆಲೆಸಿದರು. ಕ್ರೈಸ್ತಮತ, ಹಿಂದೂಮತ ಮತ್ತು ಇಸ್ಲಾಂ ಇಲ್ಲಿಯ ಮುಖ್ಯಮತಗಳು. ಫೀಜಿಯನ್, ಹಿಂದೂಸ್ತಾನಿ ಮತ್ತು ಇಂಗ್ಲಿಷ್ ಭಾಷೆಗಳನ್ನು ಈ ದೇಶದಲ್ಲಿ ಆಡುತ್ತಾರೆ. ಇಂಗ್ಲಿಷ್ ಭಾಷೆಯನ್ನು ಆಡಳಿತ ಭಾಷೆಯನ್ನಾಗಿಯೂ ಪ್ರೌಢಶಾಲೆಗಳಲ್ಲಿ ಶಿಕ್ಷಣ ಮಾಧ್ಯಮವನ್ನಾಗಿಯೂ ಉಪಯೋಗಿಸುತ್ತಿದ್ದಾರೆ.

---

1. *Fiji* (London : British Information Service RF.P. 5879/70, August 1970), p. 3

ಫೀಜಿ ದೇಶ ಆರ್ಥಿಕ ಕ್ಷೇತ್ರದಲ್ಲಿ ಬಹಳ ಅಭಿವೃದ್ಧಿ ಹೊಂದುತ್ತಿರುವ ದೇಶ. ಆರ್ಥಿಕ ಪ್ರಗತಿಯಲ್ಲಿ ಮುಂದುವರಿದಿರುವ ದೇಶಗಳ ಜೀವನಮಟ್ಟಗಳಿಗೆ ಹೋಲಿಸಿದರೆ ಫೀಜಿಯ ಜೀವನಮಟ್ಟ ಸಮನಾಗಿಲ್ಲದಿದ್ದರೂ, ಆರ್ಥಿಕ ಕ್ಷೇತ್ರದಲ್ಲಿ ಇತ್ತೀಚೆಗೆ ಇದು ಬಹಳ ಮುಂದುವರಿಯುತ್ತಿದೆ. ಈ ದೇಶದ ರಾಷ್ಟ್ರೀಯ ವರಮಾನ 1957–1968ರ ಅವಧಿಯಲ್ಲಿ 6.11 ಕೋಟಿ ಫೀಜಿ ಡಾಲರುಗಳಿಂದ 14 ಕೋಟಿ ಫೀಜಿ ಡಾಲರುಗಳಿಗೇರಿತು. ಇದೇ ಅವಧಿಯಲ್ಲಿ ತಲಾ ವರಮಾನ 175 ಫೀಜಿ ಡಾಲರುಗಳಿಂದ 280 ಫೀಜಿ ಡಾಲರುಗಳಿಗೇರಿತು. ಪರಂಪರಾಗತ ರಫ್ತುವಸ್ತುಗಳಾದ ಸಕ್ಕರೆ, ಚಿನ್ನ, ತೆಂಗಿನ ಪದಾರ್ಥಗಳೂ ಬೇಸಾಯವೂ ಈ ದೇಶದ ಆರ್ಥಿಕ ಪ್ರಗತಿಯ ಮೂಲಾಧಾರಗಳಾಗಿದ್ದರೂ, ಇತ್ತೀಚೆಗೆ ಹೊರದೇಶದಿಂದ ಬರುವ ಪ್ರವಾಸಿಗಳಿಂದಲೂ ಅರಣ್ಯೋತ್ಪನ್ನಗಳಿಂದಲೂ ಆದಾಯ ದಿನೇ ದಿನೇ ಹೆಚ್ಚುತ್ತಿದೆ.

ಕೃಷಿಕ್ಷೇತ್ರ

ಫೀಜಿಯಲ್ಲಿ ಸೇಕಡ 80ರಷ್ಟು ಜಮೀನನ್ನು ಜನರು ಸಾಮುದಾಯಿಕ ಒಡೆತನದಲ್ಲಿ ಹೊಂದಿದ್ದಾರೆ. ಈ ಸಾಮುದಾಯಿಕ ಜಮೀನಿನ ಉಸ್ತುವಾರಿಯನ್ನು ನೇಟಿವ್ ಲ್ಯಾಂಡ್ ಟ್ರಸ್ಟ್ ಬೋರ್ಡ್‌ನವರು ನೋಡಿಕೊಳ್ಳುತ್ತಾರೆ. ಈ ಸಂಸ್ಥೆ 1940ರಲ್ಲಿ ಸ್ಥಾಪಿತವಾಯಿತು ಮತ್ತು ಇದರ ಬಹುಪಾಲು ಸದಸ್ಯರು ಫೀಜಿಯನ್ ಜನಾಂಗದಿಂದ ಆರಿಸಲ್ಪಡುತ್ತಾರೆ. ಸ್ಥಳೀಯ ಫೀಜಿಯನ್ನರಿಗೆ ಒಟ್ಟು ಜಮೀನಿನ ಸ್ವಲ್ಪ ಭಾಗವನ್ನು ಮೀಸಲಾಗಿಡುವ ಅಧಿಕಾರ ಮೇಲ್ಕಂಡ ಸಂಘಕ್ಕೆ ಇರುತ್ತದೆ. ಸಾಮಾನ್ಯವಾಗಿ ರೈತರು ತಮ್ಮ ತಮ್ಮ ಜಮೀನಿನಲ್ಲಿ ವಾಸವಾಗಿರುತ್ತಾರೆ. ದೇಶದ ಒಟ್ಟು 45 ಲಕ್ಷ ಎಕರೆ ಭೂ ಒಡುವಳಿಯ ಪೈಕಿ ಸುಮಾರು 6 ಲಕ್ಷ ಎಕರೆ ಜಮೀನನ್ನು ಮಾತ್ರ ಬೇಸಾಯಕ್ಕಾಗಿ ಉಪಯೋಗಿಸುತ್ತಿದ್ದಾರೆ. ದೇಶದಲ್ಲಿ ಜನಸಂಖ್ಯೆ ದಿನೇದಿನೇ ಹೆಚ್ಚಾಗುತ್ತಿರುವುದರಿಂದ, ಹೆಚ್ಚಿಗೆ ಜಮೀನನ್ನು ವ್ಯವಸಾಯಕ್ಕೆ ಉಪಯೋಗಿಸಿಕೊಳ್ಳುವ ಆವಶ್ಯಕತೆ ಉಂಟಾಗಿದೆ ಮತ್ತು ಬೇಸಾಯದಲ್ಲಿ ವಿವಿಧ ಪ್ರಯೋಗಗಳನ್ನು ಮಾಡಿ ಹೆಚ್ಚಿನ ಬೆಳೆಗಳನ್ನು ಬೆಳೆದು ಬೇಸಾಯದ ಉತ್ಪಾದನೆಯನ್ನು ಹೆಚ್ಚಿಸುವ ಆವಶ್ಯಕತೆಯೂ ಬಂದಿದೆ. ಜಮೀನು ಅಭಿವೃದ್ಧಿಗೊಳಿಸುವುದಕ್ಕೂ ಜನರು ಹೊಸ ವಸಾಹತುಗಳಲ್ಲಿ ನೆಲಸಲು ಉತ್ತೇಜನ ಕೊಡಲೂ ಸರ್ಕಾರದವರು 1962ರಲ್ಲಿ ಜಮೀನು ಅಭಿವೃದ್ಧಿ ಪ್ರಾಧಿಕಾರವನ್ನು ಲ್ಯಾಂಡ್ ಡೆವಲಪ್‌ಮೆಂಟ್ ಅಥಾರಿಟಿ ಪ್ರಾರಂಭಿಸಿದರು. ಇದರ ಫಲವಾಗಿ ಸುಮಾರು ಒಂದು ಲಕ್ಷ ಎಕರೆ ಜಮೀನು ಸಾಗುವಳಿಗೆ ಬಂದಿತು ಮತ್ತು 5.000ಕ್ಕಿಂತ ಹೆಚ್ಚಾಗಿ ಹೊಸ ಸ್ವಂತಾರಂಭದ ಹೊಲಗಳು ಜನ್ಮತಾಳಿದುವು.

ಫೀಜಿ ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಬೇಸಾಯವೇ ಮುಖ್ಯ ಆಧಾರ. ಸಕ್ಕರೆ, ತೆಂಗಿನ ಕಾಯಿ, ಕೊಬ್ಬರಿ ಈ ದೇಶದ ಮುಖ್ಯ ರಫ್ತುಗಳು. ಬತ್ತ, ಬಾಳೆಹಣ್ಣು, ಹಸಿರುಶುಂಠಿ, ಕೋಕೋ, ಹಣ್ಣುಗಳು ಮತ್ತು ತರಕಾರಿಗಳು ದೇಶದ ಕೃಷಿಕ್ಷೇತ್ರ ಉತ್ಪಾದಿಸುವ ಪದಾರ್ಥಗಳು. ಇತ್ತೀಚೆಗೆ ಜಾನುವಾರು ಸಾಕಣಿಕೆ ಜಾಸ್ತಿಯಾಗಿ ಜನಗಳಿಗೆ ಬೇಕಾಗುವ ಮಾಂಸವನ್ನೂ ಹಾಲು ಮತ್ತು ಹಾಲಿನಿಂದ ತಯಾರಾಗುವ ಪದಾರ್ಥಗಳನ್ನೂ ಒದಗಿಸುತ್ತಿದೆ.

ಸಕ್ಕರೆ ಕೈಗಾರಿಕೆ ದೇಶದ ಒಟ್ಟು ರಫ್ತುಮೌಲ್ಯದಲ್ಲಿ ಮೂರನೆಯ ಎರಡರಷ್ಟು ಪಾಲನ್ನು ಪಡೆಯುತ್ತಿದೆ. ದೇಶದ ನಾಲ್ಕನೆಯ ಒಂದು ಭಾಗದಷ್ಟು ಜನ ಸಕ್ಕರೆ ಕೈಗಾರಿಕೆಯಿಂದ ತಮ್ಮ ಜೀವನ ಸಾಗಿಸುತ್ತಿದ್ದಾರೆ. ಸರ್ಕಾರದವರು ವಿವಿಧ ರೀತಿಯ ಬೆಳೆಗಳನ್ನು ಬೆಳೆಯಲೂ ನಾನಾ ರೀತಿಯ ಪದಾರ್ಥಗಳನ್ನು ತಯಾರಿಸಲೂ ಉತ್ತೇಜನ ಕೊಡುತ್ತಿದ್ದರೂ, ಸಕ್ಕರೆ ಕೈಗಾರಿಕೆಗೆ ಸದ್ಯದಲ್ಲಿ ಪೈಪೋಟಿ ಇರುವ ಸಂಭವವಿಲ್ಲ. ಕಬ್ಬನ್ನು ಸುಮಾರು 15 ಸಾವಿರ ಸ್ವತಂತ್ರ ರೈತರು ಬೆಳೆಯುತ್ತಾರೆ. ಇವರಲ್ಲಿ ಬಹುಪಾಲು ರೈತರು ಭಾರತೀಯ ಬುಡಕಟ್ಟಿಗೆ ಸೇರಿದವರು ಮತ್ತು ಇವರ ಸರಾಸರಿ ಒಡುವಳಿ ಹತ್ತು ಎಕರೆ. 1968ರಲ್ಲಿ ಸಕ್ಕರೆ ಉತ್ಪಾದನೆ 3.94.000 ಟನ್‌ಗಳಷ್ಟಿತ್ತು. 1958ರಲ್ಲಿ ಸಕ್ಕರೆ ಉತ್ಪಾದನೆ ಕೇವಲ 2.02.000 ಟನ್‌ನಷ್ಟಿತ್ತು. ದೇಶದ 95ರಷ್ಟು ಸಕ್ಕರೆ ಉತ್ಪಾದನೆಯನ್ನು ಹೊರದೇಶಗಳಿಗೆ ರಫ್ತುಮಾಡಲಾಗುತ್ತದೆ. ಈ ಪದಾರ್ಥಕ್ಕೆ ಮುಖ್ಯ ಮಾರುಕಟ್ಟೆ

ಗಳೆಂದರೆ ಬ್ರಿಟನ್, ಕೆನಡ, ಅಮೆರಿಕ ಸಂಯುಕ್ತಸಂಸ್ಥಾನ, ನ್ಯೂಜೀಲೆಂಡ್, ಜಪಾನ್ ಮತ್ತು ಮಲೇಶಿಯ. ಸಕ್ಕರೆಯ ಹೆಚ್ಚಿನ ರಫ್ತಿನಿಂದಾಗಿ ದೇಶಕ್ಕೆ ಅಮೂಲ್ಯವಾದ ವಿದೇಶಿ ವಿನಿಮಯ ದೊರಕುತ್ತದೆ.

ಫೀಜಿ ದೇಶದಲ್ಲಿ ಬಾಳೆಹಣ್ಣಿನ ಉತ್ಪಾದನೆ ಇತ್ತೀಚೆಗೆ ಹೆಚ್ಚಾಗುತ್ತಿದೆ ಮತ್ತು ವರ್ಷ ವರ್ಷವೂ ಹೆಚ್ಚುಹೆಚ್ಚಾಗಿ ಬಾಳೆಹಣ್ಣನ್ನು ಹೊರದೇಶಗಳಿಗೆ ಕಳುಹಿಸಲಾಗುತ್ತಿದೆ. 1967ರಲ್ಲಿ ಬಾಳೆಹಣ್ಣಿನ ಒಟ್ಟು ರಫ್ತುಮೌಲ್ಯವು ಸುಮಾರು 1,35,000 ಫೀಜಿ ಡಾಲರುಗಳಷ್ಟಿತ್ತು. 1968ರಲ್ಲಿ ಬಾಳೆಹಣ್ಣಿನ ರಫ್ತಿನ ಒಟ್ಟು ಮೌಲ್ಯ 3.54.000 ಫೀಜಿ ಡಾಲರುಗಳಿಗೇರಿತು.

ಮೀನು ಕೈಗಾರಿಕೆಗೂ ಫೀಜಿ ದೇಶದಲ್ಲಿ ಬಹಳ ಪ್ರೋತ್ಸಾಹ ನೀಡುತ್ತಿದೆ. ಹಳ್ಳಿಯ ಕಡೆ ಮೀನು ಗಾರಿಕೆಯಲ್ಲಿ ನಿರತರಾಗಿರುವವರಿಗೆ ಸರ್ಕಾರದವರು ದೋಣಿಗಳನ್ನೂ ಮೀನು ಹಿಡಿಯಲು ಬೇಕಾಗುವ ಇತರ ಸಾಮಾನುಗಳನ್ನೂ ಒದಗಿಸುತ್ತಿದ್ದಾರೆ. ಇದಲ್ಲದೆ ಸರ್ಕಾರದವರು ಪಟ್ಟಣಗಳಲ್ಲಿ ಮೀನಿನ ಮಾರಾಟಕ್ಕೆ ತಕ್ಕ ಏರ್ಪಾಡು ಮಾಡಿದ್ದಾರೆ. ಜಪಾನ್ ದೇಶದವರು ಫೀಜಿಯ ಲೆವೂಕ ಪಟ್ಟಣದಲ್ಲಿ ಒಂದು ಸಣ್ಣ ಟೂನ ಮೀನಿನ ಕೈಗಾರಿಕೆಯನ್ನು ಸ್ಥಾಪಿಸಿರುತ್ತಾರೆ ಮತ್ತು ಕಳೆದ ಮೂರು ನಾಲ್ಕು ವರ್ಷಗಳಿಂದ ಮೀನುಗಳನ್ನು ಡಬ್ಬಗಳಲ್ಲಿ ತುಂಬಿ ವಿದೇಶಗಳಿಗೆ ರಫ್ತು ಮಾಡುತ್ತಿದ್ದಾರೆ.

ಫೀಜಿಯಲ್ಲಿ ಖನಿಜಸಂಪತ್ತು ಅತ್ಯಧಿಕವಾಗಿದೆ. ಚಿನ್ನದ ಉತ್ಪಾದನೆ ಬಹಳ ಜಾಸ್ತಿ. ಇದು ಹೊರದೇಶಗಳಿಗೆ ಹೋಗುವ ಪದಾರ್ಥಗಳಲ್ಲಿ ಮೂರನೆಯ ಸ್ಥಾನ ಪಡೆದಿದೆ. 1968ರಲ್ಲಿ ಚಿನ್ನದ ಉತ್ಪಾದನೆ 1,07.000 ಔನ್ಸ್‌ಗಳಷ್ಟಿತ್ತು. ಕಬ್ಬಿಣದ ಅದಿರು, ತಾಮ್ರ, ಬೆಳ್ಳಿ ಮತ್ತು ಮ್ಯಾಂಗನೀಸ್ ಸಹ ಹೇರಳವಾಗಿ ಸಿಕ್ಕುತ್ತವೆ.

ಫೀಜಿ ದೇಶದ ಪ್ರಮುಖ ಕೈಗಾರಿಕೆಗಳೆಂದರೆ ಸಕ್ಕರೆ ತಯಾರಿಕೆ, ತೆಂಗಿನ ಪದಾರ್ಥಗಳನ್ನು ಮತ್ತು ಮರದ ಸಾಮಾನುಗಳನ್ನು ತಯಾರಿಸುವ ಕೈಗಾರಿಕೆಗಳು. ಇವುಗಳ ಜೊತೆಗೆ ಇತ್ತೀಚೆಗೆ ಬಟ್ಟೆ, ಸಿಮೆಂಟ್. ಸಿಗರೇಟ್, ಆಹಾರ ಪದಾರ್ಥಗಳು, ಕಾಗದ, ವ್ಯವಸಾಯ ಸಾಮಗ್ರಿಗಳು, ಮನೆಗಳನ್ನು ಕಟ್ಟಲು ಬೇಕಾಗುವ ಸಾಮಗ್ರಿಗಳು. ಪಾನೀಯಗಳು. ಬಣ್ಣ, ಪೀಠೋಪಕರಣಗಳು—ಇವುಗಳನ್ನು ತಯಾರಿಸುವ ಕೈಗಾರಿಕೆಗಳೂ ಪ್ರಾರಂಭವಾಗಿವೆ. ಚಾಪೆಗಳನ್ನು ಮತ್ತು ಬುಟ್ಟಿಗಳನ್ನು ಮಾಡುವುದು ಸಣ್ಣ ಕೈಗಾರಿಕೆಗಳಲ್ಲಿ ಮುಖ್ಯವಾದವು.

ವಿದ್ಯಾಭ್ಯಾಸ ಕ್ಷೇತ್ರದಲ್ಲಿಯೂ ಫೀಜಿ ಬಹಳ ಮುಂದುವರಿಯುತ್ತಿದೆ. 1969ರಲ್ಲಿ 6 ವರ್ಷದಿಂದ 13 ವರ್ಷ ವಯಸ್ಸಿನವರ ಗುಂಪಿಗೆ ಸೇರಿದವರಲ್ಲಿ, ನೂರಕ್ಕೆ 86ರಷ್ಟು ಶಾಲೆಗಳಿಗೆ ಹೋಗು ತ್ತಿದ್ದರು ಮತ್ತು ಒಟ್ಟು ಪ್ರಜಾಸಂಖ್ಯೆಯಲ್ಲಿ 100ಕ್ಕೆ 25ರಷ್ಟು ಪ್ರೌಢಶಾಲೆಗಳಿಗೂ. ತಾಂತ್ರಿಕ ಶಿಕ್ಷಣ ಕೇಂದ್ರಗಳಿಗೂ ಕಾಲೇಜುಗಳಿಗೂ ಹೋಗುತ್ತಿದ್ದರು. ಈಗ್ಗೆ ನಾಲ್ಕು ವರ್ಷಗಳ ಹಿಂದೆ ಪ್ರೌಢ ಶಿಕ್ಷಣಕ್ಕೆ ಅನುಕೂಲಮಾಡಲು ಫೀಜಿಯಲ್ಲಿ ದಕ್ಷಿಣ ಪೆಸಿಫಿಕ್ ವಿಶ್ವವಿದ್ಯಾಲಯವನ್ನು ಸ್ಥಾಪಿಸ ಲಾಯಿತು. ಸರ್ಕಾರದವರು ಪ್ರತಿವರ್ಷವೂ ವಿದ್ಯಾಭ್ಯಾಸಕ್ಕಾಗಿ ಲಕ್ಷಾಂತರ ಡಾಲರುಗಳನ್ನು ವೆಚ್ಚ ಮಾಡುತ್ತಿದ್ದಾರೆ.

ಫೀಜಿ ದೇಶದ ಮೊದಲನೆಯ ಪಂಚವಾರ್ಷಿಕ ಯೋಜನೆ (1971–1975)

ಸ್ವಾತಂತ್ರ್ಯ ಬಂದ ಮೇಲೆ ಫೀಜಿ ದೇಶದಲ್ಲಿಯೂ ಸಹ ತ್ವರಿತ ಆರ್ಥಿಕ ಅಭಿವೃದ್ಧಿಗಾಗಿ ಪಂಚ ವಾರ್ಷಿಕ ಯೋಜನೆಯನ್ನು ಪ್ರಾರಂಭಿಸಲಾಯಿತು. ಮೊದಲನೆ ಪಂಚವಾರ್ಷಿಕ ಯೋಜನೆ 1971ರಲ್ಲಿ ಪ್ರಾರಂಭವಾಯಿತು. ಈ ಯೋಜನೆಯ ಅಭಿವೃದ್ಧಿ ಕಾರ್ಯಗಳಿಗೆ ಸುಮಾರು 36.4 ಕೋಟಿ ಫೀಜಿ ಡಾಲರುಗಳಷ್ಟನ್ನು ವೆಚ್ಚಮಾಡಲಾಗುವುದೆಂದು ಅಂದಾಜು ಮಾಡಲಾಗಿದೆ. ಮೊದಲನೆ ಪಂಚವಾರ್ಷಿಕ ಯೋಜನೆಯಲ್ಲಿ ಬೇಸಾಯ. ಅರಣ್ಯಸಂಪತ್ತು, ಮೀನುಗಾರಿಕೆ ಮತ್ತು ಗ್ರಾಮಾಂತರ ಅಭಿವೃದ್ಧಿ ಯೋಜನೆಗಳಿಗೆ ಬಹಳ ಪ್ರಾಮುಖ್ಯ ಕೊಡಲಾಗಿದೆ.

ಫೀಜಿ ದೇಶದ ಪ್ರಧಾನಿ ರಾತು ಸರ್ ಕಮಿಸೆಸೆ ಮಾರ ಭಾರತಕ್ಕೆ 1971ರ ಜನವರಿ ಮತ್ತು

ಫೆಬ್ರವರಿ ತಿಂಗಳುಗಳಲ್ಲಿ ಭೇಟಿ ಇತ್ತಿದ್ದರು. ಭಾರತ ಸರ್ಕಾರದವರು ಫೀಜಿಯ ಅಭಿವೃದ್ಧಿ ಯೋಜನೆಗಳಿಗೆ ಎಲ್ಲ ತರಹದ ಸಹಾಯ ಮಾಡುವುದಾಗಿ ಭರವಸೆ ನೀಡಿರುತ್ತಾರೆ. ಸಾಮುದಾಯಿಕ ಅಭಿವೃದ್ಧಿ, ಬೇಸಾಯ ಕೈಗಾರಿಕೆಗಳು ಸಣ್ಣ ಮತ್ತು ಕುಶಲ ಕೈಗಾರಿಕೆಗಳು ಮತ್ತು ವಿದ್ಯುಚ್ಛಕ್ತಿ ಉತ್ಪಾದನೆ—ಈ ಎಲ್ಲ ಅಭಿವೃದ್ಧಿ ಕಾರ್ಯಗಳಿಗೆ ಭಾರತ ಹೆಚ್ಚಿನ ಸಹಾಯ ಮಾಡುವುದಾಗಿ ಒಪ್ಪಿಕೊಂಡಿದೆ. 1970ರಲ್ಲಿ ಫೀಜಿ ದೇಶ ಏಷ್ಯನ್ ಅಭಿವೃದ್ಧಿ ಬ್ಯಾಂಕಿನ ಸದಸ್ಯತ್ವವನ್ನೇ ಪಡೆದು ಅಲ್ಲಿಂದೀಚೆಗೆ ಅನೇಕ ರೀತಿಯಲ್ಲಿ ಅಭಿವೃದ್ಧಿ ಯೋಜನೆಗಳಿಗೆ ಸಹಾಯ ಪಡೆಯುತ್ತಿದೆ.

ಡಿ. ಶ್ರೀನಿವಾಸ

ಮೈಸೂರು ರಾಜ್ಯದ ಸಕ್ಕರೆ ಕೈಗಾರಿಕೆ

ಭಾರತದಲ್ಲಿ ಸಕ್ಕರೆ ಕೈಗಾರಿಕೆ ಎರಡನೆಯ ಅತ್ಯಂತ ದೊಡ್ಡ ಕೈಗಾರಿಕೆ. ಈ ಕೈಗಾರಿಕೆ ನಮ್ಮ ದೇಶದ ಆರ್ಥಿಕ ರಚನೆಯಲ್ಲಿ ಅತಿಮುಖ್ಯವಾದುದು. ಕಬ್ಬಿನ ಬೆಳೆಯಲ್ಲಿ ಮತ್ತು ಇದಕ್ಕೆ ಸಂಬಂಧಿಸಿದ ಕಾರ್ಯಗಳಲ್ಲಿ ಒಂದು ಕೋಟಿಗೂ ಹೆಚ್ಚು ಜನರು ನಿರತರಾಗಿದ್ದಾರೆ. ಈ ಕೈಗಾರಿಕೆ ಮೂರು ಲಕ್ಷಕ್ಕೂ ಹೆಚ್ಚು ಅನುಭವವುಳ್ಳ ಮತ್ತು ನುರಿತ ಕುಶಲ ಕೆಲಸಗಾರರಿಗೂ ಸುಮಾರು 75,000ಕ್ಕೂ ಹೆಚ್ಚು ತಂತ್ರಜ್ಞರಿಗೂ ಉದ್ಯೋಗವನ್ನೊದಗಿಸುತ್ತಿದೆ. ಇದಲ್ಲದೆ ಸಕ್ಕರೆಯ ವಿಕ್ರಯ ಮತ್ತು ಸಾಗಾಣಿಕೆಯಲ್ಲಿ ಸಹಸ್ರಾರು ಜನರು ನಿರತರಾಗಿದ್ದಾರೆ. 20,40,000 ಹೆಕ್ಟೇರು ಭೂಮಿಯಲ್ಲಿ ಕಬ್ಬಿನ ಬೆಳೆ ತೆಗೆಯಲಾಗುತ್ತಿದೆ. ಒಟ್ಟು ಉತ್ಪಾದನೆ ಸುಮಾರು 115 ದಶಲಕ್ಷ ಮೆಟ್ರಿಕ್ ಟನ್ನುಗಳು. ಸಕ್ಕರೆ ಕೈಗಾರಿಕೆಯ ಕೆಲವು ಉಪ್ಪೋತ್ಪನ್ನಗಳು ಕಾಗದ, ರಬ್ಬರ್, ಪ್ಲಾಸ್ಟಿಕ್, ಆಲ್ಕೊಹಾಲ್ ಮುಂತಾದ ಕೈಗಾರಿಕೆಗಳ ಕಚ್ಚಾ ಸಾಮಗ್ರಿಗಳಾಗಿವೆ.

ಸಕ್ಕರೆ ಕೈಗಾರಿಕೆಯ ಅಭಿವೃದ್ಧಿಗೆ ಮೈಸೂರು ತುಂಬ ಯೋಗ್ಯವಾದ ರಾಜ್ಯವೆಂದು ಪರಿಗಣಿಸಲಾಗಿದೆ. ಇಲ್ಲಿ 30,000 ಹೆಕ್ಟೇರುಗಳಿಗೂ ಹೆಚ್ಚಿನ ಭೂಮಿಯಲ್ಲಿ ಕಬ್ಬಿನ ಫಸಲನ್ನು ತೆಗೆಯಲಾಗುತ್ತಿದೆ. ಮೈಸೂರು ರಾಜ್ಯದಲ್ಲಿ ಒಟ್ಟು ಹತ್ತು ಸಕ್ಕರೆ ಕಾರ್ಖಾನೆಗಳಿವೆ. ಈ ಪೈಕಿ ಐದು ಸಹಕಾರಿ ಕ್ಷೇತ್ರದ ಕಾರ್ಖಾನೆಗಳು. ಮೈಸೂರು ರಾಜ್ಯದ ಮೂರು ವಲಯಗಳಲ್ಲಿ ಕಬ್ಬಿನ ಕೃಷಿ ಕೇಂದ್ರೀಕೃತವಾಗಿದೆ: ಮಂಡ್ಯ, ಬೆಳಗಾವಿ ಮತ್ತು ರಾಯಚೂರು, ಬಳ್ಳಾರಿ. ಮೈಸೂರು ರಾಜ್ಯದ ಹತ್ತು ಸಕ್ಕರೆ ಕಾರ್ಖಾನೆಗಳು (1) ಮೈಸೂರು ಸಕ್ಕರೆ ಕಾರ್ಖಾನೆ, ಮಂಡ್ಯ, (2) ಸಾಲಾರ್‌ಜಂಗ್ ಸಕ್ಕರೆ ಕಾರ್ಖಾನೆ, ಮುನಿರಾಬಾದ್, ರಾಯಚೂರು ಜಿಲ್ಲೆ. (3) ತುಂಗಭದ್ರಾ ಸಕ್ಕರೆ ಕಾರ್ಖಾನೆ, ಶಿವಮೊಗ್ಗ, (4) ಪಾಂಡವಪುರ ಸಕ್ಕರೆ ಕಾರ್ಖಾನೆ, ಪಾಂಡವಪುರ, (5) ಬಳ್ಳಾರಿ ಸಕ್ಕರೆ ಕಾರ್ಖಾನೆ, ಕಂಪ್ಲಿ, ಬಳ್ಳಾರಿ ಜಿಲ್ಲೆ. (6) ಇಂಡಿಯ ಸಕ್ಕರೆ ಕಾರ್ಖಾನೆ, ಹೊಸಪೇಟೆ, ಬಳ್ಳಾರಿ ಜಿಲ್ಲೆ, (7) ಉಗಾರ್ ಸಕ್ಕರೆ ಕಾರ್ಖಾನೆ, ಉಗಾರಖುರ್ದ್. ಬೆಳಗಾವಿ ಜಿಲ್ಲೆ. (8) ಹಿರಣ್ಯಕೇಶಿ ಸಕ್ಕರೆ ಕಾರ್ಖಾನೆ, ಸಂಕೇಶ್ವರ, ಬೆಳಗಾವಿ ಜಿಲ್ಲೆ, (9) ಕೃಷ್ಣ ಸಕ್ಕರೆ ಕಾರ್ಖಾನೆ, ಕೃಷ್ಣ ಕಿತ್ತೂರು. ಬೆಳಗಾವಿ ಜಿಲ್ಲೆ, (10) ಗೌರಿಬಿದನೂರು ಸಕ್ಕರೆ ಕಾರ್ಖಾನೆ, ಗೌರಿಬಿದನೂರು.

ಭಾರತ ಸರ್ಕಾರ ಮೈಸೂರು ರಾಜ್ಯದಲ್ಲಿ ಆರು ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸಲು ಅನುಮತಿ ಕೊಟ್ಟಿದೆ. ಈ ಪ್ರದೇಶಗಳಲ್ಲಿ ಕಾರ್ಖಾನೆಗಳು ಸ್ಥಾಪಿತವಾಗಲಿವೆ: (1) ಹಿರಿಯೂರು, ಚಿತ್ರದುರ್ಗ ಜಿಲ್ಲೆ, (2) ಕೊಳ್ಳೇಗಾಲ, ಮೈಸೂರು ಜಿಲ್ಲೆ, (3) ಬೀದರ್, (4) ಮುಗುಟಖಾನ್-ಹುಬ್ಬಳ್ಳಿ, ಬೆಳಗಾವಿ ಜಿಲ್ಲೆ, (5) ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ, (6) ರಾಯಬಾಗ ತಾಲ್ಲೂಕು, ಬೆಳಗಾವಿ ಜಿಲ್ಲೆ.

ಮೈಸೂರು ಸರ್ಕಾರ ಮೂರು ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸಲು ಅನುಮತಿ ಪಡೆಯುವುದಕ್ಕಾಗಿ ಭಾರತ ಸರ್ಕಾರಕ್ಕೆ ಶಿಫಾರಸು ಮಾಡಿದೆ. ಈ ಕಾರ್ಖಾನೆಗಳು ಮದ್ದೂರು. ತಾಳಮುದ್ದನದಿಂದಿ (ಮಂಡ್ಯ ಜಿಲ್ಲೆ), ಮುಧೋಳ (ಬಿಜಾಪುರ ಜಿಲ್ಲೆ) ಮತ್ತು ಸಿರಗುಪ್ಪ (ಬಳ್ಳಾರಿ ಜಿಲ್ಲೆ) ಈ ಸ್ಥಳ

ಗಳಲ್ಲಿ ಸ್ಥಾಪಿತವಾಗಲಿವೆ. ಇವಲ್ಲದೆ ಗಂಗಾವತಿ (ರಾಯಚೂರು ಜಿಲ್ಲೆ), ಕುಡಿಚಿ (ಬೆಳಗಾವಿ ಜಿಲ್ಲೆ) ಮತ್ತು ದಾವಣಗೆರೆಯಲ್ಲಿ (ಚಿತ್ರದುರ್ಗ ಜಿಲ್ಲೆ) ಸಕ್ಕರೆ ಕಾರ್ಖಾನೆಗಳು ಸ್ಥಾಪಿತವಾಗುವ ಸಂಭವವಿದೆ.

ಮೈಸೂರು ರಾಜ್ಯದ ಕಬ್ಬಿನ ಒಟ್ಟು ಸಾಗುವಳಿ ಪ್ರದೇಶ, ಕಬ್ಬಿನ ಉತ್ಪಾದನೆ ಮತ್ತು ಸಕ್ಕರೆಯ ಉತ್ಪಾದನೆಯನ್ನು ಮುಂದೆ ನಮೂದಿಸಿದೆ:

ವರ್ಷ	ಕಬ್ಬಿನ ಸಾಗುವಳಿ ಪ್ರದೇಶ (ಹೆಕ್ಟೇರುಗಳಲ್ಲಿ)	ಕಬ್ಬಿನ ಉತ್ಪಾದನೆ (ಮೆಟ್ರಿಕ್ ಟನ್ನುಗಳಲ್ಲಿ)	ಸಕ್ಕರೆಯ ಉತ್ಪಾದನೆ (ಮೆಟ್ರಿಕ್ ಟನ್ನುಗಳಲ್ಲಿ)
1959–60	1,45,000	4,27,000	87,144
1960–61	1,54,000	4,50,000	1,20,226
1961–62	1,63,000	4.79,000	1,37,753
1962–63	1,77,000	5,71,000	1,26,408
1963–64	1,91,000	6,63.000	1,14,840
1964–65	1,95.000	5,99,000	1,80,305
1965–66	1,90,000	5,31,000	1,53,677
1966–67	1.90,000	6.93,000	88,100
1967–68	1,96.000	7,59,000	1,08,334
1968–69	2,35.000	9.15,000	2,06,451

ಮಂಡ್ಯದಲ್ಲಿರುವ ಮೈಸೂರು ಸಕ್ಕರೆ ಕಾರ್ಖಾನೆ ಮೈಸೂರು ರಾಜ್ಯದಲ್ಲಿ ಹಳೆಯದು ಮತ್ತು ಅತ್ಯಂತ ದೊಡ್ಡದು. ಇದು 1933ರಲ್ಲಿ ಸ್ಥಾಪಿತವಾಯಿತು. ಈ ಸಂಸ್ಥೆಯ ಷೇರು ಬಂಡವಾಳ ರೂ. 20.00.000. ಇದು ಸ್ಥಾಪಿತವಾದಂದಿನಿಂದಲೂ ಮಂಡ್ಯದ ಸುತ್ತಮುತ್ತಲ ವ್ಯವಸಾಯ ಅಭಿವೃದ್ಧಿ ಹೊಂದುತ್ತಿದೆ.

ಭಾರತದ ವಾರ್ಷಿಕ ಸಕ್ಕರೆ ಉತ್ಪಾದನೆ 34.00.000 ಟನ್ನುಗಳು. ಇದರಲ್ಲಿ ರಾಜ್ಯದ ಕೊಡುಗೆ 3.60.000 ಟನ್ನುಗಳು. ಮಂಡ್ಯದ ಸಕ್ಕರೆ ಕಾರ್ಖಾನೆ 35.000 ಟನ್ನುಗಳನ್ನು ಉತ್ಪಾದಿಸುತ್ತದೆ.

ಮಂಡ್ಯ ಸಕ್ಕರೆ ಕಾರ್ಖಾನೆಗೆ ಪ್ರಾರಂಭದಲ್ಲಿ ದಿನಕ್ಕೆ 400 ಟನ್ ಕಬ್ಬನ್ನು ಸಕ್ಕರೆಯ ಉತ್ಪಾದನೆಗೆ ಉಪಯೋಗಿಸುವ ಸಾಮರ್ಥ್ಯವಿತ್ತು. ಈಗ ಸಕ್ಕರೆ ಉತ್ಪಾದನೆಯಲ್ಲಿ ಕಬ್ಬಿನ ಉಪಯೋಗ ದಿನಕ್ಕೆ 2.500 ಟನ್ನುಗಳು. ಈ ಕಾರ್ಖಾನೆಯು ಬಡಾವಣೆ ಯೋಜನೆಯನ್ನು 3 ಕೋಟಿ ರೂಪಾಯಿಗಳ ವೆಚ್ಚದಿಂದ ಕೈಗೊಂಡಿದೆ. ಅನಂತರ ದಿನಕ್ಕೆ 3.000 ಟನ್ ಕಬ್ಬನ್ನು ಸಕ್ಕರೆಯ ಉತ್ಪಾದನೆಗೆ ಉಪಯೋಗಿಸಬಹುದೆಂದು ನಿರೀಕ್ಷಿಸಲಾಗಿದೆ.

ಮಂಡ್ಯ ಜಿಲ್ಲೆಯ ಮದ್ದೂರಿನಲ್ಲೊಂದು (ಕಾಳಮುದ್ದನದೊಡ್ಡಿ) ಸಕ್ಕರೆ ಕಾರ್ಖಾನೆಯನ್ನು ನಿರ್ಮಿಸಲು ಏರ್ಪಾಟುಗಳು ನಡೆಯುತ್ತಿವೆ. ಇದಾದ ಅನಂತರ ಮಂಡ್ಯ ಜಿಲ್ಲೆಯಲ್ಲಿ ಒಟ್ಟು 3 ಸಕ್ಕರೆ ಕಾರ್ಖಾನೆಗಳಾಗುತ್ತವೆ. ಮಂಡ್ಯ ಮತ್ತು ಪಾಂಡವಪುರ ಸಕ್ಕರೆ ಕಾರ್ಖಾನೆಗಳಲ್ಲಿ ಒಂದು ದಿನಕ್ಕೆ ಕಬ್ಬಿನ ಪಿಪ್ಪೆಯ ಉತ್ಪಾದನೆ 700 ಟನ್ನುಗಳು. ಕಬ್ಬಿನ ಪಿಪ್ಪೆ ಉರಿಸುವ ಸಾಮಗ್ರಿಯಾಗಿ ಉಪಯೋಗವಾಗುತ್ತಿದೆ. ಮಂಡ್ಯ ಸಕ್ಕರೆ ಕಾರ್ಖಾನೆ ಮೂರನೆಯ ಒಂದು ಭಾಗ ಪಿಪ್ಪೆಯನ್ನು ಬೆಳಗೊಳದ ಕಾಗದ ಕಾರ್ಖಾನೆಗೆ ಸರಬರಾಯಿ ಮಾಡಲು ಒಪ್ಪಿಕೊಂಡಿದೆ. ಕಾಗದ ಕಾರ್ಖಾನೆ ತನ್ನ ಉತ್ಪಾದನೆಯನ್ನು ಹೆಚ್ಚಿಸಿದಂತೆಲ್ಲ, ಅಧಿಕವಾಗಿ ಬೇಕಾಗುವ ಕಬ್ಬಿನ ಪಿಪ್ಪೆಯನ್ನು ಮಂಡ್ಯ ಸಕ್ಕರೆ ಕಾರ್ಖಾನೆ ಒದಗಿಸುತ್ತದೆ.

ಮೈಸೂರು ರಾಜ್ಯದಲ್ಲಿ ಸ್ಥಳೀಯ ಕಬ್ಬನ್ನು (ಎಚ್.ಎಂ. 320) ಬೆಳೆಯುತ್ತಿದ್ದರು. ಕ್ರಮೇಣ, ಎಂದರೆ ಏಳೆಂಟು ವರ್ಷಗಳ ಅನಂತರ, ಇದರ ಇಳುವರಿ ಕಡಿಮೆಯಾದ ಕಾರಣ ಸಿ.ಓ. 419

ಬೆಳೆಯುತ್ತಿದ್ದಾರೆ. ಈಗ ಕಾರ್ಖಾನೆಗಳಿಗೆ ಸರಬರಾಯಾಗುತ್ತಿರುವುದು ಸಿ.ಓ. 419. ಒಂದು ಎಕರೆಗೆ ಎಚ್.ಎಂ. 320 ಮೊದಲು 20 ರಿಂದ 22 ಟನ್ನುಗಳಷ್ಟು ಬೆಳೆಯುತ್ತಿದ್ದರು. ಕ್ರಮೇಣ 25 ಟನ್ನುಗಳ ವರೆಗೆ ಹೆಚ್ಚಿತು. ಈಗ ಬೆಳೆಯುತ್ತಿರುವುದು ಸಿ.ಓ. 419. ಒಂದು ಎಕರೆಗೆ ಸರಾಸರಿ 45 ರಿಂದ 55 ಟನ್‌ಗಳ ವರೆಗೆ ಇಳುವರಿ ಬರುತ್ತಿದೆ.

ಸಮಸ್ಯೆ ಮತ್ತು ನಿರೀಕ್ಷೆ

ಮೈಸೂರು ರಾಜ್ಯದಲ್ಲಿರುವ ಹಲವು ಸಕ್ಕರೆ ಕಾರ್ಖಾನೆಗಳು 20 ವರ್ಷಗಳ ಹಿಂದೆ ನಿರ್ಮಾಣವಾದವು. ಉತ್ಪಾದನೆಯನ್ನು ಹೆಚ್ಚಿಸಲು ಎಲ್ಲ ಸಕ್ಕರೆ ಕಾರ್ಖಾನೆಗಳಲ್ಲೂ ಆಧುನಿಕ ಯಂತ್ರೋಪಕರಣಗಳ ಸ್ಥಾಪನೆ ಅವಶ್ಯ.

ಸಕ್ಕರೆ ಕೈಗಾರಿಕೆ ಬಹಳಮಟ್ಟಿಗೆ ಹಿಂಗಾರು ಮುಂಗಾರು ಮಳೆಯ ಮೇಲೆ ನಿಂತಿದೆ. ಸರಿಯಾದ ವೇಳೆಯಲ್ಲಿ ಮಳೆ ಬಾರದಿದ್ದರೆ ಕಬ್ಬಿನ ಬೆಳೆ ಕುಂಠಿತವಾಗುತ್ತದೆ. ಬೆಳೆಯನ್ನು ನಾಶಗೊಳಿಸುವ ಕೀಟಗಳು, ಬೆಳೆಗೆ ತಗಲುವ ಅನೇಕ ರೋಗಗಳು, ಅಂದರೆ ಬೂಷ್ಟು ಅಥವಾ ಶಿಲೀಂಧ್ರ, ಕಾಡಿಗೆ ರೋಗ ಮತ್ತು ಹುಲ್ಲಿನ ರೋಗಗಳು. ಕಬ್ಬಿನಲ್ಲಿ ಯಥೇಚ್ಛವಾಗಿ ಹೂವು ಹೊರಡುವುದು, ಸಕಾಲದಲ್ಲಿ ಮಳೆಯ ಕೊರತೆ, ಕುಂಠಿತ ಬೆಳೆ, ಇವುಗಳ ಕಾರಣ ಕಬ್ಬಿನ ಉತ್ಪಾದನೆ ಪ್ರತಿವರ್ಷವೂ ಹೆಚ್ಚು ಕಡಿಮೆಯಾಗುತ್ತಿರುತ್ತದೆ. ಇವಲ್ಲದೆ ಮಂಡ್ಯ ಜಿಲ್ಲೆಯಲ್ಲಿ 600ಕ್ಕೂ ಹೆಚ್ಚು ಆಲೆಮನೆಗಳಿವೆ. ಇವು ಕಬ್ಬನ್ನು ಉಪಯೋಗಿಸಿಕೊಂಡು ಬೆಲ್ಲವನ್ನು ಉತ್ಪಾದಿಸುತ್ತವೆ. ಆದ್ದರಿಂದ ಸಕ್ಕರೆ ಕೈಗಾರಿಕೆಗಳು ಹಲವು ವೇಳೆ ಸಮಸ್ಯೆಗಳನ್ನೆದುರಿಸಬೇಕಾಗುತ್ತದೆ.

ಸಕ್ಕರೆ ಕೈಗಾರಿಕೆಗಳು ಎದುರಿಸಬೇಕಾದ ಇನ್ನೊಂದು ಪ್ರಮುಖ ತೊಡಕೆಂದರೆ ಕಡಿಮೆ ಇಳುವರಿ. ಕಡಿಮೆ ಸತ್ತ್ವದ ಕಬ್ಬಿನ ಬಿತ್ತನೆ. ಕಡಿಮೆ ಇಳುವರಿಗೆ ಒಂದು ಮುಖ್ಯ ಕಾರಣ ಕಬ್ಬನ್ನು ಅಭಿವೃದ್ಧಿಗೊಳಿಸುವ ಶಾಖೆ ಇಲ್ಲದಿರುವುದು. ಸಾಕಷ್ಟು ಅಲ್ಪಾವಧಿ ಸಾಲ ಸರಿಯಾದ ಕಾಲದಲ್ಲಿ ದೊರಕದಿರುವುದು, ವ್ಯವಸಾಯಗಾರರು ಹೆಚ್ಚು ರಾಸಾಯನಿಕ ಗೊಬ್ಬರವನ್ನು ಉಪಯೋಗಿಸದಿರುವುದು, ಆಧುನಿಕ ಕೃಷಿ ಯಂತ್ರ ಸಾಧನಗಳನ್ನು ಬಳಸದಿರುವುದು, ಇವೆಲ್ಲವೂ ಕಡಿಮೆ ಇಳುವರಿಗೆ ಕಾರಣಗಳಾಗಿವೆ.

ಈ ಕೈಗಾರಿಕೆಗೆ ಸಂಬಂಧಿಸಿದಂತೆ ತಾಂತ್ರಿಕಜ್ಞಾನವೂ ಯಂತ್ರವೂ ಆಧುನಿಕವಾಗಿಲ್ಲದಿರುವುದು ಇನ್ನೊಂದು ಸಮಸ್ಯೆ. ಸಕ್ಕರೆ ಉತ್ಪಾದನೆಯ ವೆಚ್ಚವೂ ಹೆಚ್ಚಾಗುತ್ತಿದೆ. ಇದಕ್ಕೆ ಕಾರಣವೆಂದರೆ ಕಾರ್ಮಿಕರ ಹೆಚ್ಚಿನ ವೇತನ, ತೆರಿಗೆಗಳ ಆಧಿಕ್ಯ, ಹೆಚ್ಚು ವೆಚ್ಚದಿಂದ ಕಡಿಮೆ ಪರಿಮಾಣದ ಉತ್ಪಾದನೆ, ಮುಂತಾದವು.

ಉತ್ಪಾದನೆಯಾದ ಸಕ್ಕರೆಯ ವಿತರಣೆಯದು ಇನ್ನೊಂದು ಸಮಸ್ಯೆ. ಇದನ್ನು ಸರ್ಕಾರ ನಿಯಂತ್ರಣಗೊಳಿಸಿದೆ. ವಿತರಣೆಯ ತೊಡಕಿನಿಂದಾಗಿ ಸಕ್ಕರೆಯ ದಾಸ್ತಾನು ಒಮ್ಮೊಮ್ಮೆ ಅಧಿಕವಾಗಿ ಉಳಿಯುವುದುಂಟು. ಇದನ್ನು ದಾಸ್ತಾನು ಮಾಡಲು ಸಾಕಷ್ಟು ಆಧುನಿಕ ಮಳಿಗೆಗಳು ಇಲ್ಲದ ಕಾರಣ ಕೈಗಾರಿಕೆಗಳೇ ಇದಕ್ಕೆ ತಕ್ಕ ಸೌಲಭ್ಯವನ್ನು ಕಲ್ಪಿಸಿಕೊಳ್ಳಬೇಕೆಂದು ಸರ್ಕಾರ ಬಯಸುತ್ತದೆ. ಆದರೆ ಈ ಸಮಸ್ಯೆಯ ಪರಿಹಾರ ಅಷ್ಟು ಸುಲಭವಲ್ಲ.

ಮೈಸೂರು ರಾಜ್ಯದ ಅನೇಕ ಕಾರ್ಖಾನೆಗಳಲ್ಲಿ ಸಂಶೋಧನಾಲಯಗಳಿಲ್ಲ; ಕಾರ್ಮಿಕರಿಗೆ, ತಂತ್ರಜ್ಞರಿಗೆ ತರಬೇತು ಸೌಲಭ್ಯಗಳಿಲ್ಲ. ನುರಿತ ತಂತ್ರಜ್ಞರ ಅಭಾವ ಮತ್ತು ಅಭಿವೃದ್ಧಿ ಶಾಖೆಗಳಿಲ್ಲದಿರುವುದು ಒಂದು ದೊಡ್ಡ ಕೊರತೆ.

ವ್ಯವಸಾಯಗಾರರು ಸಕ್ಕರೆ ಕಾರ್ಖಾನೆಗಳಿಗೆ ತಾವು ಒದಗಿಸಬೇಕಾದ ಕಬ್ಬನ್ನು ಒದಗಿಸದೆ ಬೆಲ್ಲವನ್ನು ತಯಾರಿಸಲು ಉಪಯೋಗಿಸುತ್ತಾರೆ. ಈ ರೀತಿಯಾಗಿ ಕಾರ್ಖಾನೆಗಳಿಗೆ ಕಬ್ಬಿನ ಕೊರತೆ ಯುಂಟಾಗುತ್ತದೆ. ಹೀಗೆ ಕಾನೂನಿಗೆ ವಿರೋಧವಾಗಿ ಕಬ್ಬನ್ನು ಉಪಯೋಗಿಸುವವರ ಮೇಲೆ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮವನ್ನು ಕೈಗೊಳ್ಳಬೇಕು. ಮೈಸೂರು ರಾಜ್ಯದ ಎಲ್ಲ ಸಕ್ಕರೆ ಕೈಗಾರಿಕೆಗಳೂ ಕಬ್ಬಿಗಾಗಿ ವ್ಯವಸಾಯಗಾರರನ್ನೇ ಅವಲಂಬಿಸಿರುತ್ತವೆ. ಕಬ್ಬು ಬೆಳೆಯಲು ತಮ್ಮವೇ ಆದ ಸಾಕಷ್ಟು ಜಮೀನುಗಳನ್ನು ಇಟ್ಟುಕೊಂಡಿಲ್ಲ.

ಸಲಹೆಗಳು

ಕಬ್ಬು ಬೆಳೆಯಲು ಒಳ್ಳೆಯ ಬಿತ್ತನೆಗಳನ್ನು ಸರಬರಾಯಿ ಮಾಡುವ ಏರ್ಪಾಟುಗಳನ್ನು ಹೆಚ್ಚಿಸಬೇಕು. ಕೈಗಾರಿಕೆಗಳಿರುವ ಸುತ್ತಮುತ್ತಲ ಹಳ್ಳಿಗಳಿಗೆ ಸಣ್ಣ ನೀರಾವರಿ ಅನುಕೂಲವನ್ನು ಒದಗಿಸಬೇಕು. ಬಾವಿಗಳನ್ನು ತೋಡಿಸಬೇಕು. ಬಾವಿಗಳಿಗೆ ಅನುಕೂಲವಿಲ್ಲದ ಪ್ರದೇಶಗಳಲ್ಲಿ ಮಳೆಯ ನೀರನ್ನು ಶೇಖರಿಸಲು ಅಣೆಕಟ್ಟುಗಳನ್ನು ಕಟ್ಟಬೇಕು. ಕಾಲಕ್ಕೆ ಸರಿಯಾಗಿ, ತಪ್ಪದೆ ಕ್ರಮವಾಗಿ ಕೃತಕ ಗೊಬ್ಬರಗಳ ಸರಬರಾಯಿ ಆಗುವಂತೆ ವ್ಯವಸ್ಥೆ ಏರ್ಪಡಿಸಬೇಕು.

ಪ್ರತಿಯೊಂದು ಕಾರ್ಖಾನೆಯೂ ಪ್ರತ್ಯೇಕವಾಗಿ ತನ್ನದೇ ಆದ ಕಬ್ಬಿನ ಅಭಿವೃದ್ಧಿ ಶಾಖೆಯನ್ನು ತೆರೆಯಬೇಕು. ಈ ಶಾಖೆಯನ್ನು ನಡೆಸಿಕೊಂಡು ಬಂದಿರುವ ಕಾರ್ಖಾನೆಗಳು ಈ ಶಾಖೆಯ ಸಿಬ್ಬಂದಿಯನ್ನು ವಿಸ್ತರಿಸಿ ಶಾಖೆಯ ಕೆಲಸಕಾರ್ಯಗಳು ಅತಿ ಪರಿಣಾಮಕಾರಿಯಾಗುವಂತೆ ಸೂಕ್ತ ಮೇಲ್ವಿಚಾರಣೆ ಏರ್ಪಡಿಸಬೇಕು. ಈ ಶಾಖೆಗಳು ಕಬ್ಬಿನ ವ್ಯವಸಾಯಕ್ಕೆ ಬೇಕಾಗುವ ನೆರವನ್ನು ವ್ಯವಸಾಯಗಾರರಿಗೆ ನೀಡಬೇಕು.

ಕಾರ್ಖಾನೆಗಳು ಕುಶಲ ಕೆಲಸಗಾರರಿಗೆ, ತಂತ್ರಜ್ಞರಿಗೆ ಮತ್ತು ಕಾರ್ಮಿಕರಿಗೆ ತರಬೇತಿನ ಅನುಕೂಲಗಳನ್ನು ಕಲ್ಪಿಸಬೇಕು. ಆಧುನಿಕ ಯಂತ್ರೋಪಕರಣಗಳ ವ್ಯವಸ್ಥೆ ಮಾಡಬೇಕು ಮತ್ತು ಅಧಿಕೋತ್ಪಾದನೆ ಕಡಿಮೆ ವೆಚ್ಚದಲ್ಲಿ ಸಾಧ್ಯವಾಗುವಂತೆ ಸಂಶೋಧನಾಲಯಗಳು ಶ್ರಮಿಸಬೇಕು.

ಕಾರ್ಖಾನೆಗಳು ಆದಷ್ಟು ಕಡಿಮೆ ವೆಚ್ಚದಲ್ಲಿ ಕಬ್ಬಿನ ಸಾಗಾಣಿಕೆಗೆ ವ್ಯವಸ್ಥೆಯನ್ನು ಏರ್ಪಡಿಸಬೇಕು. ವ್ಯವಸಾಯಗಾರರಿಗೆ ಅಲ್ಪಾವಧಿ ಸಾಲ ಸಕಾಲದಲ್ಲಿ ದೊರೆಯುವಂತಿರಬೇಕು, ಕಾರ್ಖಾನೆಯೊಳಗೆ ಸಾಗಾಣಿಕೆ ವ್ಯವಸ್ಥೆಯನ್ನು ಉತ್ತಮಗೊಳಿಸಬೇಕು.

ಕಬ್ಬಿನ ಬೆಲೆಯನ್ನು ನಿಗದಿ ಮಾಡಬೇಕು. ಹೆಚ್ಚು ಬೆಲೆ ನಿಗದಿಯಾದಲ್ಲಿ ವ್ಯವಸಾಯಗಾರರು ಇತರ ಬೆಳೆಗಳ ವ್ಯವಸಾಯವನ್ನು ಮಾಡದಿರಬಹುದು. ಸಕ್ಕರೆ ಬೆಲೆಯೂ ಹೆಚ್ಚುವ ಸಂಭವವುಂಟು.

ಕಾರ್ಖಾನೆಗಳು ಅತ್ಯಾಧುನಿಕ ಯಂತ್ರೋಪಕರಣಗಳನ್ನು ಬಳಸಲು ಹೆಚ್ಚು ಗಮನ ಕೊಡಬೇಕು. ಅಭಿವೃದ್ಧಿ ಯೋಜನೆಗೆ ಆದ್ಯ ಗಮನವೀಯಬೇಕು. ಇದಕ್ಕಾಗಿ ಕಾರ್ಖಾನೆಗಳಿಗೆ ದೀರ್ಘಾವಧಿ ಸಾಲ ಕಡಿಮೆ ದರದಲ್ಲಿ ಸುಲಭವಾಗಿ ದೊರೆಯುವಂತಿರಬೇಕು.

ವಿವಿಧ ಪ್ರದೇಶಗಳ ಕೃಷಿ ವಾಯುಗುಣಕ್ಕೆ ಹೊಂದಿಕೊಳ್ಳುವಂಥ, ಅಲ್ಲಿಯ ವಾಯುಗುಣಕ್ಕೆ ಅನುಗುಣವಾದ ಹೊಸ ಕಬ್ಬಿನ ತಳಿಯನ್ನು ಬಳಸಿ ಇಳುವರಿ ಹೆಚ್ಚಿಸುವಂತೆ ಮಾಡಬೇಕು. ಇದರಿಂದ ಗುಣ ಮತ್ತು ಪರಿಮಾಣ ಎರಡರಲ್ಲೂ ಪ್ರಗತಿ ಸಾಧಿಸುತ್ತದೆ.

ಸಕ್ಕರೆಯ ಮೇಲೆ ಈಗಾಗಲೇ ಸುಂಕ ಮತ್ತು ತೆರಿಗೆಗಳು ಅಧಿಕವಾಗಿವೆ. ಇವು ಕಡಿಮೆಯಾಗಬೇಕು; ಹೊಸ ತೆರಿಗೆಗಳನ್ನು ವಿಧಿಸಬಾರದು.

ಸಕ್ಕರೆ ಕೈಗಾರಿಕೆಯನ್ನು ಆದ್ಯಪ್ರಶಸ್ತ ಕೈಗಾರಿಕೆಗಳ ಸಾಲಿಗೆ ಸೇರಿಸಬೇಕು. ಹೆಚ್ಚು ರಸವತ್ತಾದ ಮತ್ತು ಹೆಚ್ಚು ಇಳುವರಿ ಕೊಡುವ ಕಬ್ಬನ್ನು ಬೆಳೆಯಬೇಕಾದರೆ ಸಾಂದ್ರೀಕೃತವಾದ ಮತ್ತು ಹೆಚ್ಚು ಪರಿಣಾಮಕಾರಿಯಾಗುವ ವ್ಯವಸಾಯ ಮಾಡಲು ಆದ್ಯಗಮನ ನೀಡಬೇಕು.

ನಮ್ಮ ರಾಜ್ಯದ ಸಕ್ಕರೆ ಕಾರ್ಖಾನೆಗಳ ಸರಾಸರಿ ಕಬ್ಬಿನ ಉಪಯೋಗ ಒಂದು ದಿನಕ್ಕೆ 1,000 ಟನ್ನುಗಳು ಮಾತ್ರ. ಕಾರ್ಖಾನೆಗಳ ಕಬ್ಬಿನ ಸರಾಸರಿ ಉಪಯೋಗವನ್ನು ದಿನಕ್ಕೆ 3,000 ಟನ್ನುಗಳಿಗೆ ಹೆಚ್ಚಿಸಬೇಕು. ಹೊಸವಾಗಿ ಸ್ಥಾಪಿಸುವ ಸಕ್ಕರೆ ಕಾರ್ಖಾನೆಗಳಿಗೆ ಕನಿಷ್ಠ 3,000 ಟನ್ನುಗಳನ್ನು ಉಪಯೋಗಿಸಬೇಕೆಂಬ ನಿಬಂಧನೆಯನ್ನು ವಿಧಿಸಬೇಕು. ಹೀಗೆ ಮಾಡುವುದರಿಂದ ಸಕ್ಕರೆ ಉತ್ಪಾದನ ವೆಚ್ಚವನ್ನು ಆದಷ್ಟು ಕಡಿಮೆ ಮಾಡಬಹುದು ಮತ್ತು ರಾಷ್ಟ್ರೀಯ-ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸ್ಪರ್ಧೆಯನ್ನು ಎದುರಿಸುವುದು ಸಾಧ್ಯವಾಗುತ್ತದೆ.

ಎಚ್. ಎ. ಖಾನ್

ಗ್ರಂಥಾಲಯ ಕಾನೂನು ಮತ್ತು ಬ್ರಿಟನಿನ ಸಾರ್ವಜನಿಕ ಗ್ರಂಥಾಲಯಗಳ ಬೆಳವಣಿಗೆ

ಸಾರ್ವಜನಿಕ ಗ್ರಂಥಾಲಯ ಸೇವೆ ಸಲ್ಲಿಸುವಲ್ಲಿ ಬ್ರಿಟನ್ ಮತ್ತು ಅಮೆರಿಕ ಸಂಯುಕ್ತಸಂಸ್ಥಾನಗಳು ಜಗತ್ತಿನ ರಾಷ್ಟ್ರಗಳಲ್ಲಿ ಪ್ರಮುಖ ಪಾತ್ರ ಪಡೆದಿವೆ. ಅಲ್ಲಿಯ ಜನರಿಗೆ ಸಾಮಾಜಿಕ, ಆರ್ಥಿಕ, ರಾಜಕೀಯ, ವೈಜ್ಞಾನಿಕ, ಕೈಗಾರಿಕಾ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ತಕ್ಕ ರೀತಿಯಲ್ಲಿ ಸಮಾಚಾರ ನೀಡುವುದರಲ್ಲಿ ಇವು ಅತ್ಯಂತ ಆವಶ್ಯಕ ಸಂಸ್ಥೆಗಳಾಗಿವೆ. ಯಾರಿಗಾದರೂ ಯಾವುದೇ ವಿಷಯದಲ್ಲಿ ಆತಂಕಗಳು ಬಂದರೆ ಅವುಗಳ ನಿವಾರಣೆಗೆ ಅವನು ಸಾರ್ವಜನಿಕ ಗ್ರಂಥಾಲಯದ ನೆರವು ಕೇಳುವುದು ಅಲ್ಲಿ ನಿತ್ಯ ಜೀವನದ .ವಾಡಿಕೆಯಾಗಿದೆ. ಉದಾಹರಣೆಗೆ ಒಬ್ಬ ಕಿಟಕಿ ತೋಟಗಾರಿಕೆಯ ಬಗೆಗೆ ವಿಚಾರಿಸಿದರೆ ಮತ್ತೊಬ್ಬಳು ಮಿಂಸಿಂದ ಮಾಡಬಹುದಾದ ವಿವಿಧ ಅಡಿಗೆಗಳ ವಿಧಾನ ಕೇಳಬಹುದು. ಸಾರ್ವಜನಿಕ ಗ್ರಂಥಾಲಯಗಳು ಸಾಮಾನ್ಯ ಜೀವನದಲ್ಲಿ ಇಷ್ಟು ನಿಕಟವಾಗಿ ಸೇವೆ ಸಲ್ಲಿಸುವುದಕ್ಕೆ ಅವುಗಳ ವ್ಯವಸ್ಥಿತ ಬೆಳವಣಿಗೆ ಒಂದು ಮುಖ್ಯ ಕಾರಣ. ಬ್ರಿಟನಿನಲ್ಲಿ ಕಾನೂನಿನ ಸಹಾಯದಿಂದ ಸಾರ್ವಜನಿಕ ಗ್ರಂಥಾಲಯ ಯಾವ ರೀತಿಯಲ್ಲಿ ಬೆಳವಣಿಗೆಹೊಂದಿ ಇಂಥ ಅಚ್ಚುಮೆಚ್ಚಿನ ಸೇವೆ ಸಲ್ಲಿಸಲು ಸಾಧ್ಯವಾಯಿತೆಂಬುದನ್ನು ಈ ಲೇಖನದಲ್ಲಿ ಚರ್ಚಿಸಿದೆ.

ಬ್ರಿಟನಿನ ಪ್ರಥಮ ಗ್ರಂಥಾಲಯ ಕಾಯಿದೆಯ ಹಿನ್ನೆಲೆ

ಬ್ರಿಟನ್ 1850ರಲ್ಲಿ ತನ್ನ ಪ್ರಥಮ ಸಾರ್ವಜನಿಕ ಗ್ರಂಥಾಲಯ ಕಾಯಿದೆಯನ್ನು ಜಾರಿಗೆ ತಂದಿತು. ಇದಕ್ಕೆ ಮುಂಚೆ ಆ ದೇಶದಲ್ಲಿ ಸಾರ್ವಜನಿಕ ಗ್ರಂಥಾಲಯಗಳು ಆಧುನಿಕ ಅರ್ಥದಲ್ಲಿ ಅಸ್ತಿತ್ವದಲ್ಲಿರಲಿಲ್ಲ1. ಆದಾಗ್ಯೂ ಕೆಲವು ಲೋಕಪ್ರೇಮಿಗಳು ಹದಿನೇಳನೆಯ ಶತಮಾನದ ಪ್ರಾರಂಭದಲ್ಲಿ ಮೊಟ್ಟಮೊದಲಿಗೆ 'ಜನಪ್ರಿಯ' ಗ್ರಂಥಾಲಯಗಳನ್ನು ಸ್ಥಾಪಿಸುವ ಪ್ರಯತ್ನಮಾಡಿದರು. ಸಾರ್ವಜನಿಕರಿಗೆ ಶುಲ್ಕ ವಿಧಿಸದೆ ಸೇವೆಸಲ್ಲಿಸುವ ಈ ಬಗೆಯ ಗ್ರಂಥಾಲಯ ಕಾವೆಂಟ್ರಿಯಲ್ಲಿ 1609ರಲ್ಲಿ ಸ್ಥಾಪಿತವಾಯಿತು. ಹದಿನೇಳನೆಯ ಶತಮಾನದ ಕೊನೆಯಲ್ಲಿ ಸ್ಕಾಟ್‌ಲೆಂಡಿನ ಪಾದ್ರಿ ಜೇಮ್ಸ್ ಕರ್ಕ್‌ವುಡ್ 77 ಗ್ರಂಥಾಲಯಗಳನ್ನು ಸ್ಥಾಪಿಸುವಲ್ಲಿ ಸಫಲನಾದ. ಆದರೆ 1828ರ ಸಂಖ್ಯಾವಿಚಾರಣೆಯ ಮೇರೆಗೆ ಇವುಗಳಲ್ಲಿ ಕೆಲವು ಮಾತ್ರವೇ ಅಲ್ಲಲ್ಲಿ ಕಾಣಬರುತ್ತಿದ್ದವು ಎಂದು ತಿಳಿಯುತ್ತದೆ2.

---

1 ಖಾನ್, ಎಚ್. ಎ : ಸಾರ್ವಜನಿಕ ಗ್ರಂಥಾಲಯ-ಅರ್ಥ ಮತ್ತು ವ್ಯಾಪ್ತಿ. ಮಾನವಿಕ ಕರ್ಣಾಟಕ, ಸಂ. ೨, ಸಂ. ೨, ಪುಟ ೩೫-೪೧, ಫೆಬ್ರುವರಿ 1972

2 Predeek, Albert : *A History of Libraries in Great Britain and North America.* A.L.A., 1947, p. 52

ಹದಿನೆಂಟನೆಯ ಶತಮಾನದ ಕೊನೆಯಲ್ಲಿ ಮತ್ತು ಹತ್ತೊಂಬತ್ತನೆಯ ಶತಮಾನದ ಮೊದಲ ದಶಕಗಳಲ್ಲಿ ಉದಯವಾದ ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ಉದ್ಭವಿಸಿದ ಸಾಮಾಜಿಕ ವರ್ಗಗಳಲ್ಲಿ ಪುಸ್ತಕ ಮತ್ತು ಸಾಮಾನ್ಯ ಶಿಕ್ಷಣದ ಅವಶ್ಯಕತೆ ಕಂಡುಬರಹತ್ತಿತು. ರಾಷ್ಟ್ರದ ಆರ್ಥಿಕ ಬೆಳವಣಿಗೆಯಿಂದಾಗಿ ಈ ಜನರ ಸಾಂಸ್ಕೃತಿಕ ಆವಶ್ಯಕತೆಗಳ ಪೂರೈಕೆಗೆ ಸಮಯ ಮತ್ತು ಸಾಧನಗಳು ಲಭ್ಯವಾದುವು. ಆದರೆ ಆಗಿದ್ದ ಸಾಮಾನ್ಯ ಮತ್ತು ಔಪಚಾರಿಕ ಶಿಕ್ಷಣ ವ್ಯವಸ್ಥೆ ಚೆನ್ನಾಗಿರಲಿಲ್ಲ. ಪೌರಸಭೆಗಳು ಮತ್ತು ಇತರ ಲೋಕೋಪಯೋಗಿ ಸಂಸ್ಥೆಗಳು ಸುಧಾರಣೆಗೆ ವಿರೋಧವಾದ ಸಾಂಪ್ರದಾಯಿಕ ವಿಧಾನಗಳನ್ನು ಅನುಸರಿಸಿದ್ದುವು. ಹೀಗಾಗಿ ವಿಶೇಷವಾಗಿ ಶಾಲೆಗಳು ಮತ್ತು ಗ್ರಂಥಾಲಯಗಳು ಆಂಗ್ಲೋ-ಸ್ಯಾಕ್ಸನರ ಎರಡು ವೈಶಿಷ್ಟಗಳಾದ ಜನೋಪಕಾರ ಮತ್ತು ಸ್ವಾವಲಂಬನೆಯನ್ನು ನಂಬಬೇಕಾಗಿ ಬಂತು. ಹೀಗೆ ಬ್ರಿಟನ್ನಿನಲ್ಲಿ ಕೈಗಾರಿಕಾ ಕ್ರಾಂತಿಯಿಂದ ಜಾಗೃತಗೊಂಡ ಸಾಮಾನ್ಯ ಶಿಕ್ಷಣದ ಆವಶ್ಯಕತೆಯನ್ನು ವ್ಯವಸ್ಥಿತ ಸ್ವಾವಲಂಬನೆ ಮತ್ತು ಶ್ರೀಮಂತರ ಉದಾರ ದೇಣಿಗೆಗಳಿಂದ ಪೂರೈಸುವ ಪ್ರಯತ್ನಗಳನ್ನು ಮಾಡಲಾಯಿತು. ಇದು ಬ್ರಿಟಿಷ್ ಸಾಮಾನ್ಯ ಜೀವನದ ಒಂದು ವಿಶಿಷ್ಟಗುಣವೂ ಆಗಿದ್ದಿತು.

ಹತ್ತೊಂಬತ್ತನೆಯ ಶತಮಾನದ ಪ್ರಾರಂಭದಲ್ಲಿ ಸ್ಕಾಟ್‌ಲೆಂಡಿನಲ್ಲಿ ಜನಪ್ರಿಯ ಗ್ರಂಥಾಲಯಗಳನ್ನು ಸ್ಥಾಪಿಸುವಲ್ಲಿ ತೀವ್ರ ಚಟುವಟಿಕೆಗಳು ಕಂಡುಬಂದುವು. ಸ್ಕಾಟ್‌ಲೆಂಡಿನ ಸಾಮ್ಯುಯೆಲ್ ಬ್ರೌನ್ ಹ್ಯಾಡಿಂಗ್ಟನ್ 1817ರಲ್ಲಿ ಸಂಚಾರೀ ಗ್ರಂಥಾಲಯಗಳನ್ನು ಮೊಟ್ಟಮೊದಲಿಗೆ ಪ್ರಾರಂಭಿಸಿದ.

ಪೌರಸಭೆಯ ವರಮಾನದ ಸಹಾಯದಿಂದ ಶುಲ್ಕವಿಲ್ಲದೆ ಸೇವೆ ನೀಡುವ ಗ್ರಂಥಾಲಯ ಇಂಗ್ಲೆಂಡಿನ ವಾರಿಂಗ್‌ಟನ್‌ನಲ್ಲಿ ನವೆಂಬರ್ 1848ರಲ್ಲಿ ಪ್ರಾರಂಭವಾಯಿತು. 1849ರಲ್ಲಿ ಸಾಲ್‌ಫೋರ್ಡ್‌ನಲ್ಲಿ ಇದೇ ಬಗೆಯ ಮತ್ತೊಂದು ಗ್ರಂಥಾಲಯ ಸ್ಥಾಪನೆಯಾಯಿತು. ದೊಡ್ಡ ಊರುಗಳಲ್ಲಿ ವಸ್ತು ಸಂಗ್ರಹಾಲಯಗಳನ್ನೂ ಸ್ಥಾಪಿಸಬೇಕೆಂಬುದಾಗಿ 1845ರ ಕಾಯಿದೆಯ ವಿಧಿಯ ಪ್ರಕಾರ ಇವೆರಡೂ ಗ್ರಂಥಾಲಯಗಳು ಸ್ಥಾಪನೆಯಾದುವು.

ಆದರೆ ಬ್ರಿಟನ್ನಿನಲ್ಲಿ ನಿಜವಾದ ಸಾರ್ವಜನಿಕ ಗ್ರಂಥಾಲಯ ಕಾಯಿದೆ ಜಾರಿಗೆ ಬಂದದ್ದು 1850ರ ಆಗಸ್ಟ್ 14ರಂದು. 1849ರಲ್ಲಿ ನೇಮಕವಾಗಿದ್ದ ಸಾರ್ವಜನಿಕ ಗ್ರಂಥಾಲಯ ಸಮಿತಿಯ ವರದಿಯ ಪ್ರಕಾರ ಬ್ರಿಟಿಷ್ ಪಾರ್ಲಿಮೆಂಟ್ ಈ ಕಾಯಿದೆಯನ್ನು ಅಂಗೀಕರಿಸಿತು. ಈ ದೇಶದ ಸಾರ್ವಜನಿಕ ಗ್ರಂಥಾಲಯ ಇತಿಹಾಸದಲ್ಲಿ ಇದು ಮಹತ್ವದ ಮೈಲಿಗಲ್ಲು. ಈ ಕಾಯಿದೆ ಪಾರ್ಲಿಮೆಂಟ್ ಸದಸ್ಯರ ಮತ್ತು ಜನಸಾಮಾನ್ಯರ ತೀವ್ರ ವಿರೋಧಕ್ಕೆ ಗುರಿಯಾಯಿತು. ಇದು ಸಾರ್ವಜನಿಕ ಗ್ರಂಥಾಲಯಗಳು ಬೇಕೆಂಬ ಸಾರ್ವಜನಿಕ ಬೇಡಿಕೆಯಿಂದ ಬಂದ ಕಾಯಿದೆಯೋ, ಎಡ್ವರ್ಡ್ ಎಡ್ವರ್ಡ್ಸ್, ವಿಲಿಯಮ್ ಇವಾರ್ಟ್ ಮುಂತಾದ ಉತ್ಸಾಹಿಗಳು ಸಾರ್ವಜನಿಕ ಕಲ್ಯಾಣಕ್ಕಾಗಿ ಸುಸಜ್ಜಿತವಾಗಿ ಮುಂದಿಟ್ಟ ಕಾಯಿದೆಯೋ ಎಂಬುದನ್ನು ಅವಲೋಕಿಸಬೇಕು.

ಆ ಕಾಲದ ಸಾಮಾಜಿಕ ಇತಿಹಾಸವನ್ನು ಅಭ್ಯಸಿಸಿದಲ್ಲಿ ಈ ವಿಷಯದ ಬಗ್ಗೆ ಪರಸ್ಪರ ವಿರುದ್ಧ ದೃಷ್ಟಿಕೋಣಗಳು ಕಂಡುಬರುತ್ತವೆ. ಕೆಳಮಧ್ಯಮ ವರ್ಗದವರು ಮತ್ತು ಕಾರ್ಮಿಕರು 'ಓದಿನಿಂದ ಶಿಕ್ಷಣ' ಎಂಬ ಭಾವನೆಯನ್ನು ಭದ್ರವಾಗಿ ನಂಬಿದ್ದರೆಂಬುದು ಡಾ. ಇ. ಎ. ಸಾವೇಜರು 'ದಿ ಸ್ಕಾಟ್ಸ್‌ಮನ್'ದಲ್ಲಿ (20ನೆಯ ಫೆಬ್ರವರಿ, 1950) ಬರೆದ ಪತ್ರದಿಂದ ಸ್ಪಷ್ಟವಾಗುತ್ತದೆ. ಅವರು ಮುಂದೆ ಸಾಗಿ, ಈ ಜನರ ಬೆಂಬಲವಿಲ್ಲದಿದ್ದರೆ ಈ ವಿಧೇಯಕ ಕಾಯಿದೆಯಾಗುವುದು ಸಾಧ್ಯವಿರಲಿಲ್ಲವೆಂದು ಬರೆದಿದ್ದಾರೆ. ಇದೇ ರೀತಿ ಲೈಬ್ರರಿ ಅಸೋಸಿಯೇಷನ್ 'ನೂರು ವರ್ಷ ಸಲ್ಲಿಸಿದ ಸಾರ್ವಜನಿಕ ಗ್ರಂಥಾಲಯ ಸೇವೆ' ಯೆಂಬ ವರದಿಯಲ್ಲಿ (ಪು.3) "ಸ್ಥಳೀಯ ಸಂಸ್ಥೆಗಳನ್ನು ಮತ್ತು ಸಾರ್ವಜನಿಕ ಗ್ರಂಥಾಲಯಗಳನ್ನು ಸ್ಥಾಪಿಸಲು ಯಾರೂ ಒತ್ತಾಯ ಮಾಡಲಿಲ್ಲ. ಅವು ಜನರ ಬೇಡಿಕೆಯಿಂದ ಬಂದುವು". ಎಂದು ಹೇಳಿದೆ.

ಈ ದೃಷ್ಟಿಕೋನಗಳು ಅನುಮಾನವಿಲ್ಲದೆ ತೃಪ್ತಿಕರವಾಗಿವೆ ಎಂದು ಹೇಳಬಹುದು. ಆದರೆ 1800ರಿಂದ 1850ರ ಸಾರ್ವಜನಿಕ ಗ್ರಂಥಾಲಯ ಇತಿಹಾಸವನ್ನು ಕೂಲಂಕಷವಾಗಿ ಅಭ್ಯಸಿಸಿದರೆ ಗ್ರಂಥಾಲಯ ಬೆಳವಣಿಗೆಗೆ ಗ್ರಂಥಾಲಯ ವೃತ್ತಿಯ ಸದಸ್ಯರಿಂದ, ವಿಶೇಷವಾಗಿ ಎಡ್ವರ್ಡ್ ಎಡ್ವರ್ಡ್ಸ್‌ನಿಂದ ಮತ್ತು ಸಾರ್ವಜನಿಕ ಗ್ರಂಥಾಲಯ ಸೇವೆ ಎಲ್ಲರಿಗೂ ಸಮನಾಗಿ ಸಿಗದಿರುವ ಕಾರಣ ಗಮನಿಸಿ

ಮೇಲುವರ್ಗದ ಜನ ಪ್ರೋತ್ಸಾಹ ಕೊಟ್ಟಿದ್ದರಿಂದ ಅವಕ್ಕೆ ಪ್ರೋತ್ಸಾಹ ಲಭ್ಯವಾಯಿತು ಎಂದು ತಿಳಿಯುತ್ತದೆ. ಬ್ರಿಟನಿನ ಪ್ರಜೆಗಳು ಸ್ವಾತಂತ್ರ್ಯ ಹಾಗೂ ನ್ಯಾಯ ಪ್ರಿಯರು. ಅವರಿಗೆ ತಮ್ಮ ಕೆಲವು ಪ್ರಜೆಗಳಿಗೆ ಓದುವ ಅವಕಾಶ ಸಿಗದಿರುವುದು ಅತಿ ಅನ್ಯಾಯವಾಗಿ ತೋರಿತು. "ಸಾರ್ವಜನಿಕ ಗ್ರಂಥಾಲಯಗಳು ಜನಸಾಮಾನ್ಯರ ಮೇಲೆ ಒತ್ತಾಯವಾಗಿ ಬಂದವು ಎಂದು ಹೇಳಲಿಕ್ಕೆ ಯಾವ ಆಧಾರವೂ ಇಲ್ಲ. ಆದರೆ ಜನಸಾಮಾನ್ಯರಲ್ಲಿ ಬಹು ಸಂಖ್ಯಾತರು ಅವನ್ನು ವಿರೋಧಿಸಿದರು ಅಥವಾ ಅವುಗಳ ಬಗ್ಗೆ ನಿರ್ಲಕ್ಷ್ಯ ತೋರಿಸಿದರು ಎಂದು ಹೇಳಲಿಕ್ಕೆ ಸಾಕಷ್ಟು ಚಿಹ್ನೆಗಳಿವೆ. ಯಾರಾದರೂ ಸಾರ್ವಜನಿಕ ಗ್ರಂಥಾಲಯಗಳು ಬೇಕು ಎಂದು ಬೇಡಿದ್ದಿದ್ದರೆ ಅದು ಕೇವಲ ಅಲ್ಪಸಂಖ್ಯಾತರಿಂದ ಬಂದ ಬೇಡಿಕೆಯೇ ವಿನಾ ಜನಸಾಮಾನ್ಯರಿಂದಲ್ಲ... ಓದಿನಿಂದ ಶಿಕ್ಷಣ ಸಾಧ್ಯವೆಂಬ ನಂಬಿಕೆ ಆಗಿನ ಕಾಲದ ಜನರಲ್ಲಿ ಮೂಡಿತ್ತೆಂಬುದು ಖಚಿತ. ಆದರೆ ಇದು ಪುಸ್ತಕಗಳ ಗುಣವಿವೇಚನೆಯೇ ಹೊರತು ಸಾರ್ವಜನಿಕ ಗ್ರಂಥಾಲಯಗಳಿಲ್ಲದ ಬಗ್ಗೆ ಬೇಡಿಕೆಯೆಂಬುದಲ್ಲ. ಸಾರ್ವಜನಿಕ ಗ್ರಂಥಾಲಯಗಳ ಅಗತ್ಯವಿದೆಯೆಂಬುದಕ್ಕೆ ಸೂಚನೆಗಳಿಲ್ಲದಿದ್ದರೂ 1850ರ ವಿಧೇಯಕವನ್ನು ಮಂಡಿಸಲಾಯಿತು. ಅವು ಅವಶ್ಯವಾಗಿದ್ದುವು ಎಂಬುದು ಬೇರೆ ವಿಷಯ".3

ಇಲ್ಲಿ ಇನ್ನೊಂದು ಗಮನಾರ್ಹ ಸಂಗತಿಯೆಂದರೆ ಈ ಶಾಸನಕ್ಕೆ ಪ್ರೋತ್ಸಾಹ ನೀಡಿದವರ ಉದ್ದೇಶಗಳು. ಈ ಉದ್ದೇಶಗಳು ಬಹಳ ವಿಭಿನ್ನವಾಗಿದ್ದುವು. ಮಾನವೋಪಕಾರಿಗಳು ತಮ್ಮ ದುರ್ದೈವಿ ತಮ್ಮಂದಿರ ಸಾಮಾಜಿಕ ಸ್ಥಿತಿಗತಿಗಳನ್ನು ಸುಧಾರಿಸಲಿಕ್ಕೆ ಇಚ್ಛಿಸಿದರು. ಗ್ರಂಥಾಲಯಗಳು ಜನರ ಏಳ್ಗೆಗೆ ಒಂದು ಸಾಧನೆಯೆಂದು ಅವರು ಭಾವಿಸಿದರು. ಗ್ರಂಥಾಲಯಗಳ ಮೂಲಕ ವಿದ್ಯಾರ್ಜನೆ ಸಾಗಿ ಹೆಚ್ಚು ಉತ್ಪಾದನೆಯೂ ಇದರಿಂದಾಗಿ ಹೆಚ್ಚಿನ ಲೌಕಿಕ ಅಭಿವೃದ್ಧಿಯೂ ಆಗುವುದೆಂಬುದು ಕೈಗಾರಿಕೋದ್ಯಮಿಗಳ ಆಕಾಂಕ್ಷೆಯಾಗಿತ್ತು. ವಿದ್ಯಾಧಿಕಾರಿಗಳು ಎಲ್ಲ ವರ್ಗದ ಜನರಿಗೂ ವಿದ್ಯೆಯ ಸೌಲಭ್ಯ ದೊರೆತರೆ ಆಗುವ ಸಹಜ ಲಾಭಗಳೇನೆಂಬುದನ್ನು ತಿಳಿದರು. ಆ ಗುರಿ ಮುಟ್ಟಲು ಗ್ರಂಥಾಲಯಗಳು ಸುಲಭ ಸಲಕರಣೆಗಳೆಂದು ಅವರಿಗೆ ಮನವರಿಕೆಯಾಗಿತ್ತು. ಜನಸಾಮಾನ್ಯರು ಸೆರೆ ಅಂಗಡಿಗಳಲ್ಲಿ ಮತ್ತು ವೇಶ್ಯಾಕೂಟಗಳಲ್ಲಿ ತೋರುವ ಹೀನತೆಯನ್ನು ತೊರೆದುಹಾಕಿ ಉಚ್ಚಮಟ್ಟದ ಜೀವನಸಾಗಿಸುವ ವಿಧಾನ ತೋರಿಸಲು ಗ್ರಂಥಾಲಯಗಳು ಒಂದು ರೀತಿಯ ದಾರಿದೀಪಗಳೆಂದು ಧಾರ್ಮಿಕಸಂಸ್ಥೆಗಳ ಅಭಿಪ್ರಾಯವಾಗಿತ್ತು.

ಹೀಗೆ ಸಮಕಾಲೀನ ಅಭಿಮತ ಮತ್ತು ಪ್ರೋತ್ಸಾಹಕರ ಉದ್ದೇಶಗಳನ್ನು ಪರಿಶೀಲಿಸಿದರೆ ಸಾರ್ವಜನಿಕ ಗ್ರಂಥಾಲಯಗಳ ಬೆಳವಣಿಗೆಗೆ ಮೊದಲ ಹೆಜ್ಜೆ ಇಟ್ಟವರು ಸಮಾಜದ ಮೇಲ್ಸ್ತರಗತಿಯ ವರ್ಗದವರಲ್ಲದೆ ಕಾರ್ಮಿಕವರ್ಗದವರಲ್ಲ ಎಂಬ ತೀರ್ಪಿಗೆ ಬರುತ್ತೇವೆ. ಆದರೆ ಒಮ್ಮೆ ಗ್ರಂಥಾಲಯಗಳು ಸ್ಥಾಪಿತವಾಗಿ ತಮ್ಮ ಅರ್ಹತೆಯನ್ನು ಸ್ಥಾಪಿಸಿದಾಗ ಎಲ್ಲ ವರ್ಗದ ಜನರೂ ಸಾರ್ವಜನಿಕ ಗ್ರಂಥಾಲಯಗಳ ಅಭಿವೃದ್ಧಿಗೆ ಸಹಾಯ ನೀಡಿದರು.

ಸಾರ್ವಜನಿಕ ಗ್ರಂಥಾಲಯ ಕಾಯಿದೆ, 1850

ಪೌರಸಭೆಗಳು ಗ್ರಂಥಾಲಯಗಳ ಉಪಯೋಗದ ಸಲುವಾಗಿ ಕಟ್ಟಡಗಳನ್ನು ಖರೀದಿಮಾಡಲು ಮತ್ತು ನಡೆಸಿಕೊಂಡು ಬರಲು ಈ ಕಾಯಿದೆ ಅನುಮತಿ ಇತ್ತಿತು. ಇದಲ್ಲದೆ ವರ್ಷಕ್ಕೆ ಒಂದು ಪೌಂಡಿಗೆ ಅರ್ಧ ಪೆನ್ನಿಯ ಪ್ರಕಾರ ತೆರಿಗೆ ವಿಧಿಸಲಿಕ್ಕೆ ಅವಕ್ಕೆ ಅಧಿಕಾರ ನೀಡಿತು. ಆದರೆ ಈ ಕಾಯಿದೆ ಅನುಮೋದಕ ಕಾಯಿದೆಯಾಗಿ ಬಂತು. ಅಂದರೆ ಯಾವ ಪ್ರದೇಶದಲ್ಲಿ ಜನಸಂಖ್ಯೆ 10.000 ಅಥವಾ ಅದಕ್ಕೆ ಮೀರಿ ಇರುತ್ತದೋ ಮತ್ತು ಈ ಕಾಯಿದೆ ಅನ್ವಯಿಸಲು ಕರೆದ ವಿಶೇಷ ಸಭೆಯಲ್ಲಿ ಮೂರನೆ ಎರಡು ಅಂಶ ಜನ ಬೆಂಬಲ ನೀಡುವರೋ ಆ ಪ್ರದೇಶಗಳಲ್ಲಿ ಮಾತ್ರ ಈ ಕಾಯಿದೆ ಅನ್ವಯಿಸುತ್ತಿತ್ತು.

3 Mursion W. S. The Public Library : Its origins, purpose and significance as a social institution. 2nd revd. edn., London, Harrap, 1971. p. 25

ಈ ಕಾಯಿದೆಯ ಪ್ರಕಾರ ಅಸ್ತಿತ್ವದಲ್ಲಿ ಬಂದ ಗ್ರಂಥಾಲಯಗಳು ಸಾರ್ವಜನಿಕರಿಗೆ ಯಾವ ಶುಲ್ಕವೂ ಇಲ್ಲದೆ ಪ್ರವೇಶ ಮತ್ತು ಪುಸ್ತಕಗಳನ್ನು ಮನೆಗೆ ಎರವಲು ಕೊಡಬೇಕಾಗಿತ್ತು. ಈ ಕಾಯಿದೆಗೆ ಅನುಗುಣವಾಗಿ ಆಸ್ತಿಯನ್ನುಕೊಳ್ಳಬಹುದಾಗಿತ್ತು ಮತ್ತು ಗ್ರಂಥಾಲಯದ ಸಲುವಾಗಿ ಸಿಬ್ಬಂದಿಯನ್ನು ನೇಮಿಸಬಹುದಾಗಿತ್ತು. ಆದರೆ ಈ ಕಾಯಿದೆಯ ಒಂದು ದೊಡ್ಡ ಕುಂದೆಂದರೆ ಗ್ರಂಥಾಲಯಕ್ಕೆ ಬೇಕಾದ ಪುಸ್ತಕ ಹಾಗು ಮತ್ತಿತರ ಸಲಕರಣೆಗಳನ್ನು ಕೊಂಡುಕೊಳ್ಳಲಿಕ್ಕೆ ಅನುಮತಿ ಇರಲಿಲ್ಲ.

ಮುಂದಿನ ಐದು ವರ್ಷಗಳಲ್ಲಿ ಈ ಕಾಯಿದೆಯ ಕುಂದುಗಳನ್ನು ಸರಿಪಡಿಸಲು ವಿವಿಧ ತಿದ್ದುಪಡಿ ಮಸೂದೆಗಳನ್ನು ಮಂಡಿಸಿದರು. 1855ರ ಕಾಯಿದೆಯ ಕೆಲವು ಮುಖ್ಯ ಕಲಮುಗಳಿವು: 1 ಜನಸಂಖ್ಯೆಯ ಪರಿಮಿತಿಯನ್ನು 5.000ಕ್ಕೆ ಇಳಿಸುವದು: 2. ಎರಡು ಅಥವಾ ಮೂರು ಗ್ರಾಮಾಂತರ ಪ್ರದೇಶಗಳ ಒಟ್ಟು ಜನಸಂಖ್ಯೆ 5.000ಕ್ಕೂ ಹೆಚ್ಚಾಗಿದ್ದರೆ ಆ ಪ್ರದೇಶಗಳನ್ನು ಒಟ್ಟುಗೂಡಿಸಿ ಈ ಕಾಯಿದೆಯನ್ನು ಅಂಗೀಕರಿಸುವುದು: 3 ತೆರಿಗೆಯ ದರವನ್ನು ಪೌಂಡಿಗೆ ಒಂದು ಪೆನ್ನಿಯಂತೆ ಏರಿಸುವದು : 4 ಪುಸ್ತಕ. ವೃತ್ತಪತ್ರಿಕೆ. ನಕಾಶೆ ಮುಂತಾದವುಗಳನು ಕೊಳ್ಳಲು ಅನುಮತಿ ಕೊಡುವದು.

ಮುಂದಿನ ಕೆಲವು ತಿದ್ದುಪಡಿ ಮಸೂದೆಗಳು ಗ್ರಂಥಾಲಯಗಳಲ್ಲಿ ಹೆಚ್ಚಿನ ಸುಧಾರಣೆಗಳನ್ನು ತಂದುವು. ಅವುಗಳಲ್ಲಿ ಮುಖ್ಯವಾದವು ಇವು: ಗ್ರಂಥಾಲಯದ ಆಸ್ತಿಯನ್ನು ನಾಶಪಡಿಸಿದವನಿಗೆ ಅಥವಾ ನಷ್ಟಪಡಿಸಿದವನಿಗೆ ಆರು ತಿಂಗಳ ವರೆಗೆ ಶಿಕ್ಷೆಯನ್ನು 1861ರ ಕಾಯಿದೆಯಲ್ಲಿ ಸೂಚಿಸಲಾಯಿತು: 1866ರ ಕಾಯಿದೆಯಲ್ಲಿ ಜನಸಂಖ್ಯೆಯ ಪರಿಮಿತಿಯನ್ನು ತೆಗೆದು ಹಾಕಲಾಯಿತು: 1887ರ ಕಾಯಿದೆಯ ಅನುಸಾರ ಗ್ರಂಥಾಲಯ ಸಮಿತಿ ಇರಬೇಕೆಂದು ವಿಧಿಸಲಾಯಿತುಮತ್ತು ಗ್ರಂಥಾಲಯದ ಅಧಿಕಾರಗಳನ್ನು ಖಜಾನೆಯಿಂದ ಸರಕಾರಕ್ಕೆ ವರ್ಗಾಯಿಸಲಾಯಿತು.

1897ರ ಕಾಯಿದೆ ಇನ್ನೂ ಹೆಚ್ಚಿನ ಬದಲಾವಣೆಗಳನ್ನು ತಂದಿತು: 1 ಲಂಡನ್ ಮತ್ತು ಮತ್ತಿತರ ಪ್ರದೇಶಗಳಲ್ಲಿ ಸ್ಥಳೀಯ ಕಾಯಿದೆಗಳು ಹೆಚ್ಚಿನ ದರ ವಿಧಿಸಿದ್ದರೆ ಅವನ್ನು ಬಿಟ್ಟು ಉಳಿದ ಎಲ್ಲೆಡೆಯಲ್ಲೂ ತೆರಿಗೆಯ ದರ ಪೌಂಡಿಗೆ ಒಂದು ಪೆನ್ನಿಯಂತೆ ಇರಬೇಕು: 2 ಗ್ರಾಮಾಂತರ ಪ್ರದೇಶಗಳಲ್ಲಿ ಸಾಕಷ್ಟು ಜನಸಂಖ್ಯೆ ಇರದಿದ್ದರೂ ಅವು ಗ್ರಂಥಾಲಯ ಸೇವೆ ಸಲ್ಲಿಸಲು ಒಂದುಗೂಡಬಹುದು; 3 ಮತದಾರರ ಒಪ್ಪಿಗೆ ಪಡೆದು ಒಂದು ಗ್ರಾಮ ಪಕ್ಕದ ಜಿಲ್ಲೆಯನ್ನು ಸೇರಬಹುದು: 4 ಒಂದು ಜಿಲ್ಲೆಯ ಜನ ಆ ಜಿಲ್ಲೆಯ ಗ್ರಂಥಾಲಯಗಳ ಪುಸ್ತಕಗಳನ್ನು ಎರವಲು ತೆಗೆದುಕೊಳ್ಳಲು ಯಾವ ಶುಲ್ಕವನ್ನೂ ಕೊಡಕೂಡದು: 5 ಗ್ರಂಥಾಲಯ ಮಂಡಳಿ ತನ್ನ ಎಲ್ಲ ಅಥವಾ ಯಾವುದೇ ಅಧಿಕಾರವನ್ನು ಗ್ರಂಥಾಲಯ ಸಮಿತಿಗೆ ನಿಯೋಜಿಸಬಹುದು.

ಗ್ರಂಥಾಲಯ ಕಾಯಿದೆಯನ್ನು ಮತದಾರರ ಅನುಮತಿಯಿಲ್ಲದೆ ಅನ್ವಯಿಸಲಿಕ್ಕೆ ಪೌರಸಭೆಗಳಿಗೆ 1893ರ ಕಾಯಿದೆ ಅಧಿಕಾರ ಕೊಟ್ಟಿತು. ಇದಲ್ಲದೆ ಈ ಕಾಯಿದೆ ಪರಸ್ಪರ ಸಮೀಪವಾದ ಎರಡು ಅಥವಾ ಹೆಚ್ಚಿನ ಜಿಲ್ಲೆಗಳು ಗ್ರಂಥಾಲಯ ಸೇವೆಯ ಸಲುವಾಗಿ ಒಂದುಗೂಡಲು ಸಹಾಯಮಾಡಿತು. 1901ರ ಕಾಯಿದೆ ಗ್ರಂಥಾಲಯ ಮಂಡಳಿಗೆ ಉಪನಿಯಮಗಳನ್ನು ಮಾಡಲಿಕ್ಕೆ ಮತ್ತು ಒಂದು ಗ್ರಂಥಾಲಯ ಇನ್ನೊಂದು ಗ್ರಂಥಾಲಯ ಜಿಲ್ಲೆಯ ಗ್ರಂಥಾಲಯವನ್ನು ಪರಸ್ಪರ ಆಧಾರದ ಮೇಲೆ ಉಪಯೋಗಿಸಲು ಅಧಿಕಾರಕೊಟ್ಟಿತು.

ಅತಿ ಹೆಚ್ಚಿನ ಸುಧಾರಣೆಗಳನ್ನು ತಂದ ಮುಂದಿನ ಕಾಯಿದೆ 1919ರದು. ಇದು ಪೆನ್ನಿ ದರವನ್ನು ತೊಡೆದು ಹಾಕಿ ಗ್ರಂಥಾಲಯ ಮಂಡಳಿಗಳಿಗೆ ತಮ್ಮ ಬೇಡಿಕೆಗನುಸಾರ ಸಾರ್ವಜನಿಕ ಗ್ರಂಥಾಲಯಗಳ ಸಲುವಾಗಿ ಹಣವನ್ನು ಖರ್ಚು ಮಾಡಲು ಅನುಕೂಲಮಾಡಿತು. ಜಿಲ್ಲಾ ಮಂಡಳಿಗಳಿಗೆ ಜಿಲ್ಲೆಯ ಯಾವುದೇ ಭಾಗದಲ್ಲಿ ಗ್ರಂಥಾಲಯ ಕಾಯಿದೆ ಅನುಸರಿಸದಿದ್ದಲ್ಲಿ. ಆ ಭಾಗದಲ್ಲಿ ಅನುಸರಿಸಲು ಅಧಿಕಾರ ನೀಡಿತು: ಮತ್ತು ಪಟ್ಟಣ ಹಾಗೂ ಗ್ರಾಮಗಳ ಗ್ರಂಥಾಲಯ ಮಂಡಳಿಗಳು ಪ್ರತ್ಯೇಕವಾಗಿರಲು ಅನುಮತಿ ನೀಡಿತು. ಇದಲ್ಲದೆ ಈ ಕಾಯಿದೆಯ ಪ್ರಕಾರ ಆಗಿದ್ದ ಮಂಡಳಿಗಳು ಜಿಲ್ಲಾ ಮಂಡಳಿಗಳಿಗೆ ತಮ್ಮ ಅಧಿಕಾರವನ್ನು ಒಪ್ಪಿಸಬಹುದಾಗಿತ್ತು.

ಹೀಗೆ 1850ರಿಂದ 1919ರ ವರೆಗೆ ವಿವಿಧ ಗ್ರಂಥಾಲಯ ಕಾಯಿದೆಗಳ ಕಲಮುಗಳನ್ನು ವಿಮರ್ಶಿಸಿದಲ್ಲಿ ಕಾಯಿದೆಗಳ ಮುಖ್ಯ ಕಲಮುಗಳು ಈ ಕೆಲವು ಮುಖ್ಯ ಅಂಶಗಳಿಗೆ ಸಂಬಂಧಿಸಿದ್ದವೆಂದು ತಿಳಿ

ಯುತ್ತದೆ: ಗ್ರಂಥಾಲಯ ದರ, ಸೇವೆಸಲ್ಲಿಸಬೇಕಾದ ಜನಸಂಖ್ಯೆ, ಕಡಿಮೆ ಜನಸಂಖ್ಯೆಯಿರುವ ಪ್ರದೇಶಗಳ ಗ್ರಂಥಾಲಯ ಮಂಡಳಿಗಳು ಗ್ರಂಥಾಲಯ ಸೇವೆ ಸಲ್ಲಿಸಲು ಒಟ್ಟುಗೂಡುವುದು—ಈ ಎಲ್ಲ ಅಂಶಗಳನ್ನು ಕ್ರಮೇಣ ಸಡಿಲಿಸಿ ಗ್ರಂಥಾಲಯ ಕಾಯಿದೆ ಹೆಚ್ಚಿನ ಪ್ರದೇಶಗಳಿಗೆ ಅನ್ವಯಿಸುವ ಹಾಗೆ ಮಾಡಿದರು. ಒಂದು ಪ್ರದೇಶದ ಜನಕ್ಕೆ ಅಥವಾ ಮಂಡಳಿಗೆ ಗ್ರಂಥಾಲಯ ಸುಧಾರಣೆಗಳು ಆವಶ್ಯಕವೆನಿಸಿದಾಗ ಆ ಸುಧಾರಣೆಗಳನ್ನು ಪ್ರಾರಂಭಿಸುತ್ತಿದ್ದರು. ಹೀಗೆ ಜನರ ಮನಸ್ಸಿನ ವಿರುದ್ಧ ಯಾವುದೇ ಗ್ರಂಥಾಲಯ ಕಾರ್ಯವೂ ಆಗಲಿಲ್ಲ. ಬಹುಶಃ ಇದೇ ಕಾರಣದಿಂದ ಇಂಗ್ಲೆಂಡಿನಲ್ಲಿ ಗ್ರಂಥಾಲಯ ಸೌಲಭ್ಯಗಳನ್ನು ಎಲ್ಲ ಪ್ರದೇಶಗಳಿಗೂ ನೀಡಲು ಮತ್ತು ಗ್ರಂಥಾಲಯ ಮಂಡಳಿಗಳ ಹಣಕಾಸಿನ ವ್ಯವಸ್ಥೆಯನ್ನು ಉತ್ತಮಗೊಳಿಸಲು ಸುಮಾರು 70 ವರ್ಷಗಳ ಕಾಲ ಹಿಡಿಸಿತು. ಗ್ರಂಥಾಲಯಗಳ ವಿಧಿಗಳನ್ನು ಒತ್ತಾಯವಾಗಿ ಜಾರಿಗೆ ತಂದಿದ್ದ ಪಕ್ಷದಲ್ಲಿ ಗ್ರಂಥಾಲಯ ಬೆಳವಣಿಗೆ ಹೆಚ್ಚಾಗಬಹುದಿತ್ತು ಎಂಬುದು ಸಂದೇಹಾಸ್ಪದ. ನಾವು ಮುಂದೆ ಕೆನಿಯನ್ ಸಮಿತಿಯ ವರದಿಯನ್ನು(1927) ಪರಿಶೀಲಿಸಿದಾಗ ಈ ಸಂದೇಹ ದೃಢವಾಗುತ್ತದೆ.

ಗ್ರಂಥಾಲಯ ಕಾನೂನು ಮತ್ತು ಸಾರ್ವಜನಿಕ ಗ್ರಂಥಾಲಯ ಬೆಳವಣಿಗೆ

ಮೇಲ್ಕಾಣಿಸಿದ ಚರ್ಚೆಯಿಂದ ಇಂಗ್ಲೆಂಡಿನಲ್ಲಿ ಸಾರ್ವಜನಿಕ ಗ್ರಂಥಾಲಯಗಳ ಬೆಳವಣಿಗೆಗೆ ಗ್ರಂಥಾಲಯ ಕಾನೂನಿನ ಕೆಲವು ಮುಖ್ಯ ಕೊಡುಗೆಗಳು ಸ್ಪಷ್ಟವಾಗುತ್ತವೆ: 1 ಶುಲ್ಕವಿಲ್ಲದೆ ಸಾರ್ವಜನಿಕ ಗ್ರಂಥಾಲಯಗಳನ್ನು ಜನರಿಗೆ ಒದಗಿಸುವುದು; 2 ಈ ಗ್ರಂಥಾಲಯಗಳನ್ನು ನಿರ್ವಹಿಸಲು ಬೇಕಾಗುವ ಹಣವನ್ನು ಗ್ರಂಥಾಲಯ ತೆರಿಗೆಯ ರೂಪದಲ್ಲಿ ಪಡೆಯುವುದು; 3 ಕಡಿಮೆ ಜನಸಂಖ್ಯೆಯ ಪ್ರದೇಶಗಳನ್ನು ಗ್ರಂಥಾಲಯ ಸೇವೆಯ ಸಲುವಾಗಿ ಒಟ್ಟುಗೂಡಿಸುವುದು; 4 ಜಿಲ್ಲಾಮಂಡಳಿಗಳಿಗೆ ಗ್ರಂಥಾಲಯ ಕಾಯಿದೆಗಳ ವಿಧಿಗಳನ್ನು ಜಾರಿಗೆ ತರಲು ಅಧಿಕಾರ ಸಲ್ಲಿಸುವುದು. 5 ಗ್ರಂಥಾಲಯದ ಕಟ್ಟಡಕ್ಕೆ, ಸಿಬ್ಬಂದಿಗೆ ಮತ್ತು ಪುಸ್ತಕಗಳಿಗೆ ಬೇಕಾಗುವ ಖರ್ಚನ್ನು ಗ್ರಂಥಾಲಯದ ನಿಧಿಯಿಂದ ವಿನಿಯೋಗಿಸುವುದು. ಹೀಗೆ ಗ್ರಂಥಾಲಯ ಕಾನೂನು ಇಂಗ್ಲೆಂಡಿನಲ್ಲಿ ನಿಜವಾದ ಸಾರ್ವಜನಿಕ ಗ್ರಂಥಾಲಯಗಳ ಬೆಳವಣಿಗೆಗೆ ಬೇಕಾಗುವ ಮೂಲ ಆವಶ್ಯಕತೆಗಳನ್ನು ಪೂರೈಸಿತು.

ಕೆನಿಯನ್ ಸಮಿತಿಯ ವರದಿ

1919ರ ಕಾನೂನಿನ ಮೇರೆಗೆ ಜಿಲ್ಲಾ ಮಂಡಳಿಗಳು ಸ್ಥಾಪಿತವಾದುದರಿಂದ ಸಾರ್ವಜನಿಕ ಗ್ರಂಥಾಲಯಗಳ ಬೆಳವಣಿಗೆ ತೀವ್ರಗತಿಯಲ್ಲಿ ಸಾಗಿತು. ಆದರೂ ಗ್ರಂಥಾಲಯ ಸೇವೆಗಳು ಸುಸಂಘಟಿತವಾಗಿದ್ದಿಲ್ಲವೆಂಬುದು ಗೋಚರವಾಗಿತ್ತು. ಇದಲ್ಲದೆ ಗ್ರಂಥಾಲಯ ಮಟ್ಟದ ಬಗ್ಗೆ ಜಿಲ್ಲಾ ಮಂಡಳಿಗಳಲ್ಲಿ ಬಹಳ ವ್ಯತ್ಯಾಸವಿತ್ತು. ಕೆಲ ಪ್ರದೇಶಗಳಲ್ಲಿ ತಕ್ಕ ಗ್ರಂಥಾಲಯ ಸೇವೆಗಳನ್ನು ನೀಡದಿದ್ದುದಕ್ಕೆ ಬಹುಶಃ ಬೇಜವಾಬ್ದಾರಿ ಮತ್ತು ಅಲಕ್ಷ್ಯಗಳು ಕಾರಣವಾಗಿರಬಹುದು. ಇವನ್ನೆಲ್ಲ ವಿಚಾರಿಸಿ ವರದಿ ನೀಡಲು 1924ರಲ್ಲಿ ಕೆನಿಯನ್ ಸಮಿತಿಯ ನೇಮಕವಾಯಿತು. ಈ ಸಮಿತಿಯ ಅಧ್ಯಕ್ಷ ಸರ್ ಫ್ರೆಡರಿಕ್ ಕೆನಿಯನ್.

ಜನರಲ್ಲಿ ಗ್ರಂಥಾಲಯದ ಬಗ್ಗೆ ಇದ್ದ ನಿರಾಸಕ್ತಿಯನ್ನು ಕಂಡು ಅದನ್ನು ಹೋಗಲಾಡಿಸಲು ಗ್ರಂಥಾಲಯ ಸೇವೆಯನ್ನು ಕಡ್ಡಾಯವಾಗಿ ಮಾಡಬೇಕು ಎಂಬ ಭಾವನೆಗೆ ಈ ಸಮಿತಿ ವಿರೋಧ ವ್ಯಕ್ತಪಡಿಸಿತು. "ಸ್ವಾತಂತ್ರ್ಯವೇ ಬೌದ್ಧಿಕ ಸಂಸ್ಕೃತಿಯ ಸತ್ವ. ಪ್ರಯೋಗ ಸ್ವಾತಂತ್ರ್ಯ, ಸ್ಥಳೀಯ ಆವಶ್ಯಕತೆಗಳಿಗೆ ತಕ್ಕಂತೆ ಅಳವಡಿಕೆ, ಸಮರ್ಥ ಮತ್ತು ಅನುಭವಿ ಗ್ರಂಥಪಾಲರ ಪ್ರವರ್ತನಶೀಲತೆ–ಇವುಗಳಲ್ಲಿ ಇಂದಿನ ಗ್ರಂಥಾಲಯಬೆಳವಣಿಗೆಯ ವೈಶಿಷ್ಟ್ಯವನ್ನು ಕಾಣಬಹುದು. ಸರಿಯಾದ ಮೇಲ್ಪಂಕ್ತಿಯ ಪ್ರಭಾವದಿಂದಲೂ, ಸಾರ್ವಜನಿಕಾಭಿಪ್ರಾಯದ ಒತ್ತಡದಿಂದಲೂ, ಹಿಂದುಳಿದ ಪ್ರದೇಶಗಳಲ್ಲಿ ಸಮರ್ಪಕ ಅಭಿವೃದ್ಧಿ ಸಾಧಿಸಬಹುದೆಂಬುದು ನಮ್ಮ ನಂಬುಗೆ. ಹಿಂದುಳಿದ ಮತ್ತು ಮುಂದುವರಿದ ಪ್ರದೇಶಗಳಲ್ಲಿಯ ಬೆಳವಣಿಗೆಯ ಸಾಧನವನ್ನು ನಾವು ನಿರುಪಾಧಿಕ ಸಹಕಾರದ ರಾಷ್ಟ್ರೀಯ ವ್ಯವಸ್ಥೆಯಲ್ಲಿ

ಕಾಣಬಹುದು"4. ಗ್ರಂಥಾಲಯ ಸೇವೆಯನ್ನು ಉತ್ತಮಗೊಳಿಸಲು ಮತ್ತು ಗ್ರಂಥಾಲಯ ಸೌಕರ್ಯ ಗಳನ್ನು ಹೆಚ್ಚಿಸಲು ಗ್ರಂಥಾಲಯ ಆಡಳಿತ ಇತ್ಯಾದಿಗಳಿಗೆ ಅನ್ವಯಿಸುವಂತೆ ಸಂಸತ್ತಿನ ಒಂದು ಕ್ರೋಢೀಕೃತ ಕಾಯಿದೆಯಾಗಬೇಕೆಂದು ಅದು ಒತ್ತಿ ಹೇಳಿತು. ಗ್ರಂಥಾಲಯ ಸಮಿತಿಗಳ ಮತ್ತು ಗ್ರಂಥಾಲಯ ಆಡಳಿತದ ಬಗ್ಗೆ ಮಾಡಿದ ಈ ಸಮಿತಿಯ ಶಿಫಾರಸುಗಳನ್ನು ಲೋಕಲ್ ಲೈಬ್ರರಿ ಆಕ್ಟ್ 1933 ಅಂಗೀಕರಿಸಿತು. ಆದರೆ ಇದರ ಬೇರೆ ಶಿಫಾರಸುಗಳ ಮೇಲೆ ಯಾವುದೇ ಕ್ರಮ ತೆಗೆದು ಕೊಳ್ಳಲಿಲ್ಲ.

ಮ್ಯಾಕ್‌ಕಾಲ್ವಿನ್ ವರದಿ

ಎಲ್. ಆರ್. ಮ್ಯಾಕ್‌ಕಾಲ್ವಿನ್ ಎಂಬ ಒಬ್ಬ ಗ್ರಂಥಪಾಲ ಎರಡನೆಯ ಮಹಾಯುದ್ಧ ನಡೆದಾಗ ತನ್ನ ದೇಶದ ಗ್ರಂಥಾಲಯ ಸೇವೆಯನ್ನು ಪರಿಶೀಲಿಸಿ, 'ದಿ ಪಬ್ಲಿಕ್ ಲೈಬ್ರರಿ ಸಿಸ್ಟಂ ಆಫ್ ಗ್ರೇಟ್ ಬ್ರಿಟನ್: ಎ ರಿಪೋರ್ಟ್ ಆನ್ ಇಟ್ಸ್ ಪ್ರೆಸೆಂಟ್ ಕಂಡಿಷನ್ ವಿತ್ ಪ್ರಪೋಸಲ್ಸ್ ಫಾರ್ ಪೋಸ್ಟ್ ವಾರ್ ರೀಕನ್‌ಸ್ಟ್ರಕ್ಷನ್' ಎಂಬ ವರದಿಯನ್ನು 1942ರಲ್ಲಿ ಪ್ರಕಟಿಸಿದ. ಈ ವರದಿ ಇಂಗ್ಲಿಷ್ ಗ್ರಂಥಾಲಯ ಪದ್ಧತಿಯನ್ನು ತುಂಬ ಹೊಗಳಿದೆ. ಆದರೆ ಕೆಲವು ಪ್ರದೇಶಗಳಲ್ಲಿ ಗ್ರಂಥಾಲಯ ಸೇವೆಯ ಬಗ್ಗೆ ಇರುವ ನಿರ್ಲಕ್ಷ್ಯಕ್ಕೆ ಅವನು ಕೊಟ್ಟಿರುವ ಈ ಆರು ಕಾರಣಗಳಲ್ಲಿ ನಮಗೆ ಈ ವರದಿಯ ಪ್ರಾಮುಖ್ಯತೆ ಕಾಣ ಬರುತ್ತದೆ: 1 ಅಯೋಗ್ಯ. ಅನರ್ಹ ಮತ್ತು ನಿಷ್ಫಲ ಸಿಬ್ಬಂದಿ; 2 ಜನರ ಔದಾಸೀನ್ಯ, 3 ಸ್ಥಳೀಯ ಸಂಸ್ಥೆಗಳ ಔದಾಸೀನ್ಯವನ್ನು ಎದುರಿಸಲು ಸಾರ್ವಜನಿಕ ಹಿತದೃಷ್ಟಿಯುಳ್ಳವರ ಅಸಾಮರ್ಥ್ಯ: 4 ಸ್ಥಳೀಯ ಮಂಡಳಿಗಳ ಹಣಕಾಸಿನ ಮಿತಿಗಳು; 5 ಜನಸಂಖ್ಯೆಗೆ ತಕ್ಕಂತೆ ಸ್ಥಳೀಯ ಸೇವೆ ಸಲ್ಲಿಸುವ ಕೇಂದ್ರಗಳ ಕೊರತೆ; 6 ಸ್ಥಳೀಯ ಮಂಡಳಿಗಳ ಪರಸ್ಪರ ಅಸಹಕಾರ ಮನೋಭಾವ. ಈ ಕಾರಣಗಳನ್ನು ಪರಿಶೀಲಿಸಿದರೆ ಇಂಗ್ಲೆಂಡಿನಲ್ಲಿ ಸಾರ್ವಜನಿಕ ಗ್ರಂಥಾಲಯ ಪದ್ಧತಿ ಅಷ್ಟೇನೂ ಚೆನ್ನಾಗಿರಲಿಲ್ಲವೆಂಬುದು ವೇದ್ಯವಾಗುತ್ತದೆ. ಇದು ಗ್ರಂಥಾಲಯ ಕಾನೂನು ಬಂದ 92 ವರ್ಷಗಳ ಮೇಲೆ ಕಾಣುವ ಸ್ಥಿತಿ! ಈ ಅವಧಿಯಲ್ಲಿ ಇಂಗ್ಲೆಂಡಿನಂಥ ಮುಂದುವರಿದ ದೇಶದಲ್ಲಿ ಎಲ್ಲರಿಗೂ ಎಲ್ಲೆಡೆಯಲ್ಲಿಯೂ ಸೇವೆಸಲ್ಲಿಸುವ ಗ್ರಂಥಾಲಯ ಕೇಂದ್ರಗಳನ್ನು ಸ್ಥಾಪಿಸಬಹುದಾಗಿತ್ತು. ಇಂಗ್ಲೆಂಡ್ ತಕ್ಕ ಮತ್ತು ಅರ್ಹ ಸಿಬ್ಬಂದಿಯನ್ನು ಏಕೆ ತರಬೇತು ಮಾಡಲಿಲ್ಲ? ಹಣಕಾಸಿನ ಕೊರತೆಗಳು ಮುಂದುವರಿಯಲಿಕ್ಕೆ ಆಸ್ಪದ ಏಕೆ ಕೊಟ್ಟಿತು? ಗ್ರಂಥಾಲಯಗಳಲ್ಲಿ ಸಾರ್ವಜನಿಕರ ಆಸಕ್ತಿ ಇಲ್ಲದಲ್ಲಿ ಅದನ್ನು ಕುದುರಿಸಲು ಪ್ರಸಾರ ಹಾಗೂ ಮತ್ತಿತರ ಉಪಾಯಗಳನ್ನು ಏಕೆ ಉಪಯೋಗಿಸಲಿಲ್ಲ? ಇದರಿಂದ ಬಹುಶಃ ಜನರು ನಿಷ್ಪ್ರಯೋಜಕ ಗ್ರಂಥಾಲಯ ಸೇವೆಯ ವಿರುದ್ಧ ಪ್ರತಿಭಟಿಸಬಹುದಾಗಿತ್ತು. ಮಂಡಳಿಗಳಲ್ಲಿ ಒತ್ತಾಯದಿಂದ ಸಹಕರಿಸಲು ಉಪಾಯ ಗಳನ್ನು ಏಕೆ ತೆಗೆದುಕೊಳ್ಳಲಿಲ್ಲ?–ಎಂಬೆಲ್ಲ ಪ್ರಶ್ನೆಗಳು ಉದ್ಭವಿಸುವುದು ಸಹಜ.

ಈ ದುಸ್ಥಿತಿಗೆ ಮೂಲ ಕಾರಣವೆಂದರೆ ಗ್ರಂಥಾಲಯ ಕಾನೂನಿನ ಅನುಮತಿ ಸ್ವರೂಪ. ಹಿಂದುಳಿದ ಪ್ರದೇಶಗಳಲ್ಲಿ ಬಲವಾದ ಪ್ರಭಾವಶಾಲಿ ಸಾರ್ವಜನಿಕ ಅಭಿಪ್ರಾಯ ಇರಲಿಲ್ಲವಾದ ಕಾರಣ ಅವು ಹಿಂದುಳಿದುವು. ಈ ಪ್ರದೇಶಗಳಿಗೆ ತೆರವಾಗಿದ್ದ ಒಂದೇ ಒಂದು ಮಾರ್ಗವೆಂದರೆ ತಮ್ಮ ನೆರೆಹೊರೆಯವರ ಉದಾ ಹರಣೆ ಅನುಸರಿಸುವುದು: ಇದನ್ನು ಅವು ಅರ್ಧ-ಮರ್ಧ ಮನಸ್ಸಿನಿಂದ ಮಾಡಲಿಕ್ಕೆ ಪ್ರಯತ್ನಿಸಿದುವು. ಇದಲ್ಲದೆ ಗ್ರಂಥಾಲಯದ ಅಭಿವೃದ್ಧಿಗೆ ಯಾವುದೇ ತರ್ಕಬದ್ಧ ಯೋಜನೆ ಇರಲಿಲ್ಲ: ಸ್ಥಳೀಯ ಮಂಡಳಿ ಗಳು ಈ ಕಾರ್ಯದಲ್ಲಿ ಮೊದಲ ಹೆಜ್ಜೆ ತೆಗೆದುಕೊಳ್ಳಬೇಕಾಗಿತ್ತು. ಕೇಂದ್ರ ಸರ್ಕಾರವಲ್ಲ. ಹೀಗಾಗಿ ಕೆಲವು ಪ್ರದೇಶಗಳಲ್ಲಿ ಅತ್ಯುತ್ತಮವಾದ ಸೇವೆಯೂ ಮತ್ತಿತರ ಪ್ರದೇಶಗಳಲ್ಲಿ ಸಾಧಾರಣವಾದ ಸೇವೆಯೂ ಇದ್ದರೆ ಇನ್ನಿತರ ಕಡೆಗಳಲ್ಲಿ ಸಾಕಷ್ಟು ಸೇವೆ ಲಭ್ಯವಿರಲಿಲ್ಲ.

---

4 Hewitt A. R. : '*Roberts Report*' *on the structure of the Public Libaary service in England* & Wales. I L.A. 4:394, Jul–Oct 1962. P. 42–43

ರಾಬರ್ಟ್ಸ್‌ ವರದಿ

ಈ ಕುಂದುಕೊರತೆಗಳನ್ನು ಹೋಗಲಾಡಿಸುವುದು ರಾಬರ್ಟ್ಸ್‌ ಸಮಿತಿಯ ಹೊಣೆಯಾಯಿತು. ಈ ಸಮಿತಿ ತನ್ನ ವರದಿಯನ್ನು 1959ರಲ್ಲಿ ಒಪ್ಪಿಸಿತು. ಸಾರ್ವಜನಿಕ ಗ್ರಂಥಾಲಯದ ಆಡಳಿತಕ್ಕೆ ಸೂಕ್ತ ರಚನೆ ಇರಬೇಕೆಂದು ಈ ಸಮಿತಿ ಶಿಫಾರಸು ಮಾಡಿತು; ಗ್ರಂಥಾಲಯಗಳಿಗೆ ಸರ್ಕಾರದ ಸಚಿವ ಹೊಣೆಗಾರನೆಂದು ಇದು ಹೇಳಿತು; ಸಾರ್ವಜನಿಕ ಗ್ರಂಥಾಲಯ ಸೇವೆ ಕಾನೂನುಬದ್ಧವಾಗಿಯೂ ಕಡ್ಡಾಯವಾಗಿಯೂ ಇರಬೇಕಲ್ಲದೆ ಐಚ್ಛಿಕವಾಗಿರಬಾರದೆಂದು ಇದು ಒತ್ತಿ ಹೇಳಿತು. ಕೊನೆಯ ಶಿಫಾರಸು ಅತಿ ಮುಖ್ಯವಾದ್ದು. ಏಕೆಂದರೆ ಇದು ಆ ದೇಶದ ಗ್ರಂಥಾಲಯ ಬೆಳವಣಿಗೆಯ ಕಾರ್ಯನೀತಿಯನ್ನು ಮೂಲವಾಗಿ ಮಾರ್ಪಾಡು ಮಾಡಿತು.

ಗ್ರಂಥಾಲಯ ಬೇಡಿಕೆಗಳನ್ನು ಕಾಲಾನುಗುಣ ಬದಲಾವಣೆಗಳನ್ನು ಗಮನಿಸಿ ಅವನ್ನು ಪೂರೈಸಲು ಮತ್ತು ರಾಬರ್ಟ್ಸ್‌ ಶಿಫಾರಸುಗಳನ್ನು ಕಾನೂನಿನ ಮೂಲಕ ಜಾರಿಗೆ ತರಲು ಸರ್ಕಾರ 1964ರಲ್ಲಿ 'ಪಬ್ಲಿಕ್ ಲೈಬ್ರರೀಸ್ ಅಂಡ್ ಮ್ಯೂಸಿಯಮ್ಸ್ ಆಕ್ಟ್' ಜಾರಿಗೆ ತಂದಿತು.

ಈ ಕಾಯಿದೆಯ ಪ್ರಕಾರ ಆದ ಕೆಲವು ಅತಿ ಮುಖ್ಯ ಬದಲಾವಣೆಗಳಿವು 6:

ಮೊದಲನೆಯದಾಗಿ ಸಾರ್ವಜನಿಕ ಗ್ರಂಥಾಲಯ ಸೇವೆಯ ಮೇಲ್ವಿಚಾರಣೆಮತ್ತು ಸುಧಾರಣೆಗೆ ಉತ್ತೇಜನ ಕೊಡುವದು ಪಾರ್ಲಿಮೆಂಟಿಗೆ ಜವಾಬ್ದಾರನಾದ ಸರ್ಕಾರಿ ಸಚಿವನ ಒಂದು ನಿರ್ದಿಷ್ಟ ಕಾರ್ಯವೆಂದು ಸಾರಿತು. ಮತ್ತು ಅದಕ್ಕೆ ತಕ್ಕಂತೆ ಅವನಿಗೆ ವಿಸ್ತಾರವಾದ ಅಧಿಕಾರ ಕೊಟ್ಟಿತು.

ಗ್ರಂಥಾಲಯ ಸೇವೆಗಳಲ್ಲಿ ರಾಷ್ಟ್ರಾದ್ಯಂತ ಏಕರೂಪ ಸಹಕಾರಿ ಪದ್ಧತಿ ಇರಬೇಕು. ಸೂಕ್ತಸೇವೆ ಸಲ್ಲಿಸದ ಗ್ರಂಥಾಲಯ ಮಂಡಳಿಗಳು ತಮ್ಮ ಅಧಿಕಾರ ಕಳೆದುಕೊಳ್ಳಬೇಕಾಗಬಹುದು.

ವಿಸ್ತಾರವಾದ ಮತ್ತು ದಕ್ಷವಾದ ಸೇವೆಸಲ್ಲಿಸುವುದು ಗ್ರಂಥಾಲಯ ಮಂಡಳಿಗಳ ಕರ್ತವ್ಯವೆಂದು ವಿಧಿಸಲಾಯಿತು. ಮೊದಲಿನ ಕಾಯಿದೆಗಳಲ್ಲಿದ್ದಂತೆ ಅಧಿಕಾರಗಳು ಐಚ್ಛಿಕವಾಗಿರಲಿಲ್ಲ.

ಇದರಲ್ಲಿ ಅಧಿಕಾರಗಳು ಮತ್ತು ಕರ್ತವ್ಯಗಳನ್ನು ಸ್ಥೂಲವಾಗಿ ಹೇಳಿದ್ದರಿಂದ ಗ್ರಂಥಾಲಯ ಮಂಡಳಿಗಳಿಗೆ ತಮ್ಮ ಕರ್ತವ್ಯಗಳನ್ನು ಯಾವುದೇ ಆತಂಕಗಳಿಲ್ಲದೆ ನಿರ್ವಹಿಸಲು ಸಾಧ್ಯವಾಯಿತು. ಮೊದಲಿನ ಕಾಯಿದೆಗಳಲ್ಲಿ ಈ ಅಂಶವಿದ್ದಿಲ್ಲ.

ಯಾವ ಸ್ಥಳೀಯ ಮಂಡಳಿಗಳಿಗೆ ಮೊದಲು ಗ್ರಂಥಾಲಯ ಅಧಿಕಾರಗಳಿರಲಿಲ್ಲವೋ ಅಥವಾ ಇದ್ದು ಕಳೆದು ಹೋಗಿದ್ದುವೋ ಅವುಗಳಿಗೆ ಅಧಿಕಾರ ಪಡೆಯಲು ಒಪ್ಪಿಗೆ ನೀಡಲಾಯಿತು. ಇದರಿಂದಾಗಿ ಕೆಲವು ದೊಡ್ಡ ಪಟ್ಟಣಗಳಲ್ಲಿ ಜಿಲ್ಲಾ ಮಂಡಳಿಗಳನ್ನು ಬಿಟ್ಟು ಸ್ವತಂತ್ರವಾಗಿ ಗ್ರಂಥಾಲಯ ಮಂಡಳಿಗಳನ್ನು ಸ್ಥಾಪಿಸಲು ಆಸ್ಪದವಾಯಿತು.

ಇದಲ್ಲದೆ ಈ ಕಾಯಿದೆಯ ಅನುಸಾರ ಗ್ರಂಥಾಲಯ ಸಲಹಾ ಮಂಡಳಿಗಳನ್ನು ರಚಿಸಬಹುದಾಗಿತ್ತು. ಇವುಗಳ ಕರ್ತವ್ಯ ದ್ವಿಮುಖ: 1 ತಮ್ಮ ಸ್ವಂತ ಪ್ರವರ್ತನೆಯ ಮೇರೆಗೆ ಗ್ರಂಥಾಲಯಗಳನ್ನು ಕುರಿತು ಸಲಹೆ ನೀಡುವದು; 2 ನಿರ್ದಿಷ್ಟವಾದ ಕೆಲವು ಸಮಸ್ಯೆಗಳ ಬಗ್ಗೆ ಅವುಗಳನ್ನು ಕೇಳಿಕೊಂಡಾಗ ಅವಕ್ಕೆ ಸಲಹೆ ನೀಡುವದು (1964ರ ಕಾಯಿದೆ. ಕಲಂ. 2[1]).

ಮೇಲ್ಕಾಣಿಸಿದ ಕಾಯಿದೆಯ ಅಂಶಗಳು ಸಾರ್ವಜನಿಕ ಗ್ರಂಥಾಲಯ ಸೇವೆಗೆ ಆಡಳಿತ. ಹಣಕಾಸು. ಗ್ರಂಥಾಲಯ ಸೌಲಭ್ಯಗಳು ಮತ್ತು ಸಹಕಾರದ ದೃಷ್ಟಿಯಿಂದ ಒಂದು ಭದ್ರವಾದ ತಳಹದಿಯನ್ನು ನೀಡಿದುವೆಂದು ಸ್ಪಷ್ಟವಾಗುತ್ತದೆ. ಎಲ್ಲಿ ಗ್ರಂಥಾಲಯಗಳು ಶಿಷ್ಟಸೇವೆಗಳನ್ನು ಸರಿಯಾಗಿ ನೀಡುವುದಿಲ್ಲವೋ ಅಲ್ಲಿ ಉತ್ತಮ ಗ್ರಂಥಾಲಯಗಳು ಇರಬೇಕೆಂದು ಈ ಕಾಯಿದೆ ಆಗ್ರಹಿಸುತ್ತದೆ. ಈ ಎಲ್ಲ

---

5. ಈ ವರದಿಯ ಅಧಿಕೃತನಾಮ '*Report on the structure of the Public Library Service*' ಎಂದಿದೆ.

6. Hewitt, A. R: *A summary of public library law: England, Wales, Scotland & N Ireland, London*, A. A. L., 1965 p. 9

ದೃಷ್ಟಿಗಳಿಂದ ನೋಡಲಾಗಿ ಇಂಗ್ಲೆಂಡಿನ ಸಾರ್ವಜನಿಕ ಗ್ರಂಥಾಲಯಗಳು ಬೇರೆಯವರಿಗೆ ಅನುಕರಿಸಲು ಮಾದರಿ ಗ್ರಂಥಾಲಯಗಳಾಗಬಹುದೆಂದು ಹೇಳಬಹುದು.

ಇಂಗ್ಲೆಂಡಿನ ಸಾರ್ವಜನಿಕ ಗ್ರಂಥಾಲಯ ಅಭಿವೃದ್ಧಿಯ ಇತಿಹಾಸದ ಅಭ್ಯಾಸ ಮಾಡಿದಾಗ ಅದರಲ್ಲಿಯ ಕೆಲವು ವೈಶಿಷ್ಟ್ಯಗಳನ್ನು ಕಾಣಬಹುದು: ಮೊದಲನೆಯದಾಗಿ. ಸ್ವರೂಪದಲ್ಲಿ ಇದು ಸ್ಥಳೀಯವಾಗಿತ್ತು. ಅಂದರೆ ಸಾರ್ವಜನಿಕ ಗ್ರಂಥಾಲಯಗಳ ಬೆಳವಣಿಗೆಗೆ ಗ್ರಾಮದವರು, ಪಟ್ಟಣದವರು ಅಥವಾ ಜಿಲ್ಲಾಮಂಡಳಿಗಳು ಮೊದಲು ಪ್ರಯತ್ನಿಸಬೇಕಾಗಿತ್ತು. ಪ್ರತಿ ಪ್ರದೇಶವೂ ತನ್ನ ಅಗತ್ಯಗಳ ಮತ್ತು ಸಾಧನಗಳ ಪ್ರಕಾರ ಬೆಳೆಯಿತು. ಹೀಗಾಗಿ ರಾಷ್ಟ್ರೀಯ ಮಟ್ಟದಲ್ಲಿ ಒಂದೇ ಸಮನಾದ ಬೆಳವಣಿಗೆ ಕಾಣಬರುವುದಿಲ್ಲ. ರಾಷ್ಟ್ರಾದ್ಯಂತ ಗ್ರಂಥಾಲಯ ಸೇವೆಗಳಲ್ಲಿ ಸಹಕಾರವಿರಬೇಕೆಂಬ ಅಂಶವನ್ನು ಸೇರಿಸಿದ್ದು 1964ರ ಕಾಯಿದೆಯಲ್ಲಿಯೇ. ಸರ್ಕಾರ ಬಹುತೇಕವಾಗಿ ತೆರೆಯ ಮರೆಯಲ್ಲಿದ್ದು, ಆಡಳಿತ ದೃಷ್ಟಿಯಿಂದ ತನ್ನ ಪ್ರಭಾವ ಬೀರಿದ್ದಲ್ಲವೆ. ಕಾನೂನುಗಳಿಂದಲ್ಲ. ಸಾರ್ವಜನಿಕ ಗ್ರಂಥಾಲಯದಂಥ ಒಂದು ಸಾಮಾಜಿಕ ಸಂಸ್ಥೆಯನ್ನು ಸ್ಥಳೀಯ ಸಹಾಯದ ಮೇಲೆ ಬೆಳೆಸಬೇಕಾದರೆ ಸ್ಥಳೀಯ ಜನ ತಮ್ಮ ಹೊಣೆಗಾರಿಕೆಯನ್ನು ಅರಿತಿರಬೇಕು ಮತ್ತು ಅದನ್ನು ಕಾರ್ಯರೂಪಕ್ಕೆ ತರಲು ಅಧಿಕಾರ ಮತ್ತು ಸಾಧನಗಳು ಅವರಲ್ಲಿರಬೇಕೆಂಬುದಾಗಿ ಒಂದು ಭಾವನೆಯಾಯಿತು. ಇಂಗ್ಲೆಂಡಿನ ಬಹಳ ಪ್ರದೇಶಗಳು ಈ ನಿರೀಕ್ಷೆಯನ್ನು ಪೂರೈಸಿದುವು. ಆದರೆ ಈ ಹೊಣೆಗಾರಿಕೆಯನ್ನರಿತ ನಾಗರಿಕರು ಸಾರ್ವಜನಿಕ ಗ್ರಂಥಾಲಯ ಬೆಳವಣಿಗೆಯ ಪ್ರಾರಂಭದಲ್ಲಿ. ತಮ್ಮ ನೆರೆಹೊರೆಯವರಿಗೆ ತಕ್ಕ ಗ್ರಂಥಾಲಯ ಸೇವೆಗಳಿಲ್ಲದ್ದನ್ನು (ಬಹುಶಃ ಸಾಧನಗಳು ಕಡಿಮೆ ಇದ್ದುದರಿಂದಾಗಿ) ಏಕೆ ಗಮನಿಸಲಿಲ್ಲ? ರಾಷ್ಟ್ರೀಯ ಮಟ್ಟದಲ್ಲಿ ಗ್ರಂಥಾಲಯ ಸೇವೆ ನೀಡಿದರೆ ಅದು ಹೆಚ್ಚು ಪರಿಣಾಮಕಾರಿಯಾಗುವುದೆಂದು ಅವರು ಏಕೆ ಅರಿಯಲಿಲ್ಲ? ಆಗ ಇಂಗ್ಲೆಂಡಿನಲ್ಲಿ ಇದು ಸ್ಥಳೀಯ ಉತ್ಸಾಹ ಮತ್ತು ಸ್ಥಳೀಯ ಚೈತನ್ಯಗಳನ್ನೇ ಅತಿಯಾಗಿ ಅವಲಂಬಿಸಿತ್ತೆಂದು ತೋರಿಸುವುದಿಲ್ಲವೆ? ಒಬ್ಬ ಸಾಮಾನ್ಯ ಬ್ರಿಟಿಷ್ ನಾಗರಿಕ ಎಷ್ಟರಮಟ್ಟಿಗೆ ಇತರರೊಂದಿಗೆ ಬೆರೆಯದ ಸ್ವಭಾವದವನೆಂಬುದನ್ನು ಇದು ವ್ಯಕ್ತಪಡಿಸುತ್ತದೆ. ಇದು ಅಕ್ರಿಯ ಸರ್ಕಾರಕ್ಕೂ ಅನ್ವಯಿಸುವ ಮಾತು.

ಎರಡನೆಯದಾಗಿ, ಗ್ರಂಥಾಲಯ ಕಾಯಿದೆ ಕಡ್ಡಾಯವಾಗಿರದೆ ಅನುಮತೀಯವಾಗಿತ್ತು. ನಾವು ಈಗಾಗಲೇ ಗಮನಿಸಿದ ಇಂಗ್ಲೆಂಡಿನ ವಿವಿಧ ಗ್ರಂಥಾಲಯ ಕಾಯಿದೆಗಳಿಂದ ಈ ಅಂಶ ಸ್ಪಷ್ಟವಾಗುತ್ತದೆ. ಗ್ರಂಥಾಲಯ ಪರಿಣತರು ಮತ್ತು ಇತರ ಮೇಧಾವಿಗಳು ಹಾಗೂ ಕೇಂದ್ರ ಮತ್ತು ಪ್ರಾಂತೀಯ ಸರ್ಕಾರಗಳು ಸಾರ್ವಜನಿಕ ಗ್ರಂಥಾಲಯದ ಉದಾತ್ತ ಪರಿಣಾಮಗಳನ್ನು ತಿಳಿದುಕೊಂಡಿದ್ದರೂ ಅವರು ಸ್ಥಳೀಯ ಮಂಡಳಿಗಳ ಮೂಲಕ ಈ ಸೇವೆಯನ್ನು ಏಕೆ ಕಡ್ಡಾಯವಾಗಿ ಮಾಡಲಿಲ್ಲ? ಕೆನಿಯನ್ ಸಮಿತಿ ಈ ಸಮಸ್ಯೆಯನ್ನು ಪರಿಶೀಲಿಸಿದಾಗ ಹಿಂದುಳಿದ ಪ್ರದೇಶಗಳಲ್ಲಿ ಸಾರ್ವಜನಿಕ ಗ್ರಂಥಾಲಯಗಳ ಬೆಳವಣಿಗೆ ಮತ್ತು 'ಸಾರ್ವಜನಿಕಾಭಿಪ್ರಾಯದ ಒತ್ತಡದಿಂದ' ಆಗಲಿಕ್ಕೆ ಸಾಕು ಎಂದು ಹೇಳಿತು. ಆದರೆ ಈ ಎರಡೂ ವಿಧಾನಗಳು ಗ್ರಂಥಾಲಯ ಕಾಯಿದೆ ಜಾರಿಗೆ ಬಂದ ಮೇಲೆ 77 ವರ್ಷಗಳಾದರೂ (1850ರಿಂದ 1927ರ ವರೆಗೆ). ರಾಷ್ಟ್ರದ ಗ್ರಂಥಾಲಯ ಸೇವೆಯ ಸರಪಳಿಯಲ್ಲಿ ಕೆಲವು ನಿರ್ಬಲ ಕೊಂಡಿಗಳನ್ನು ಉಳಿಸಿತ್ತೆಂಬುದನ್ನು ಸ್ಪಷ್ಟಪಡಿಸುತ್ತದೆ. ಈ ಮಾತು ಬಹುಶಃ ಆ ಸಮಿತಿಗೂ ಅನ್ವಯಿಸುತ್ತದೆ. ಮುಂಬರುವ ಗ್ರಂಥಾಲಯ ಕಾಯಿದೆಯಲ್ಲಿ ಗ್ರಂಥಾಲಯ ಸೇವೆಯನ್ನು ಕಡ್ಡಾಯವಾಗಿ ಮಾಡಬೇಕೆಂದು ರಾಬರ್ಟ್ಸ್ ವರದಿಯಲ್ಲಿ ಸೂಚಿಸಲು ಈ ಪರಿಸ್ಥಿತಿಯೇ ಕಾರಣ. ಇಂಗ್ಲೆಂಡಿನ ಗ್ರಂಥಾಲಯ ಇತಿಹಾಸದಿಂದ ಒಂದು ಸಕಾರಣವಾಗಿ ಮಾಡಬಹುದಾದ ತೀರ್ಮಾನವೆಂದರೆ ಅಭಿವೃದ್ಧಿ ಹೊಂದಿದ ಪ್ರಜಾಪ್ರಭುತ್ವವಾದಿ ರಾಷ್ಟ್ರದಲ್ಲಿಯೂ ಕೆಲವು ಹಿಂದುಳಿದ ಪ್ರದೇಶಗಳನ್ನು ಮುಂದುವರಿದ ಪ್ರದೇಶಗಳಿಗೆ ಸಮನಾಗಿ ಬೆಳೆಸಬೇಕಾದರೆ ಅದಕ್ಕೆ ಸೂಕ್ತ ಪ್ರಮಾಣದ ಒತ್ತಾಯ ಹೇರುವದು ಅವಶ್ಯವೆಂಬುದು. ಇಂಥ ಪ್ರದೇಶಗಳನ್ನು ತಮಗೆ ತಾವೇ ಬೆಳವಣಿಗೆಹೊಂದಲಿಕ್ಕೆ ಬಿಟ್ಟರೆ ಹೆಚ್ಚು ಹಣ ತಗಲುವದಲ್ಲದೆ ಹೆಚ್ಚು ವೇಳೆ ಮತ್ತು ಶಕ್ತಿ ವ್ಯಯವಾಗುತ್ತವೆ.

ಹಿಂದುಳಿದ ಪ್ರದೇಶಗಳ ಬೆಳವಣಿಗೆಗೆ ಒಂದು ಅತ್ಯುತ್ತಮ ಉಪಾಯವೆಂದರೆ ರಾಷ್ಟ್ರಾದ್ಯಂತ ಅಭಾಧಿತವಾದ ಸಹಕಾರ ಪದ್ಧತಿಯೆಂಬುದಾಗಿ ಕೆನಿಯನ್ ಸಮಿತಿ ಸೂಚಿಸಿತ್ತು. ದುರ್ದೈವದಿಂದ ಈ

ಶಿಫಾರಸನ್ನು ಅಂಗೀಕರಿಸಲಿಲ್ಲ. ಇದು ಇಂಗ್ಲೆಂಡ್ ಮಾಡಿದ ಒಂದು ಭಾರಿ ತಪ್ಪು. ಏಕೆಂದರೆ ರಾಬರ್ಟ್ಸ್‌ನ ಸಮಿತಿ ಇದೇ ವಿಚಾರವಾಗಿ ಮುಂದುವರಿದು ಬಹಳ ಬಲವಾಗಿ ಶಿಫಾರಸು ಮಾಡಿತು ಮತ್ತು 1964ರ ಕಾಯಿದೆ ಅವನ್ನು ಜಾರಿಗೆ ತಂದಿತು. ಇದರಿಂದ ನಾವು ಕಲಿಯಬೇಕಾದ ಪಾಠವೆಂದರೆ ರಾಷ್ಟ್ರೀಯ ಸಮಸ್ಯೆಯನ್ನು ಅಭ್ಯಸಿಸಿ ವರದಿ ಮಾಡಲಿಕ್ಕೆ ಒಂದು ದೇಶ ಒಂದು ಸಲಹಾ ಮಂಡಳಿಯನ್ನು ನೇಮಿಸಿದ ಅನಂತರ, ಅದರ ಮೂಲ ಶಿಫಾರಸುಗಳನ್ನಾದರೂ ನ್ಯಾಯವಾಗಿ ಜಾರಿಗೆ ತರಬೇಕು. ಇಂಗ್ಲೆಂಡ್ 1930ರಲ್ಲಿ ತುಳಿದು ನಿಷ್ಫಲಗೊಂಡ ಮಾರ್ಗವನ್ನು ಈಗ ನಾವು ಭಾರತದಲ್ಲಿ ತುಳಿಯುತ್ತಿದ್ದೇವೆ. ತಪ್ಪುಗಳನ್ನು ಮಾಡಿಯೇ ಪಾಠಕಲಿತುಕೊಳ್ಳುವದು ನಮಗೆ ಅನಿವಾರ್ಯವೋ ಅಥವಾ ಅವನ್ನು ತಪ್ಪಿಸಿ ನಾವು ಹೆಚ್ಚು ವೇಗದಿಂದ ಅಭಿವೃದ್ಧಿ ಹೊಂದಬೇಕೋ? ನಮ್ಮ ದೇಶ ಎರಡನೆಯ ಮಾರ್ಗವನ್ನು ಅನುಸರಿಸಲೆಂದು ನಾವು ಆಶಿಸಬೇಕಾಗಿದೆ.

ಮೂರನೆಯದಾಗಿ, ಗ್ರಂಥಾಲಯಗಳಿಗೆ ಬೇಕಾಗುವ ಹಣಕಾಸು ಪೂರ್ತಿಯಾಗಿ ಸಾರ್ವಜನಿಕರಿಂದ ಬರುತ್ತಿತ್ತು. ಉಳಿದ ಒಂದೇ ಒಂದು ಹೆಚ್ಚಿನ ಸಹಾಯದ ಮೂಲವೆಂದರೆ ಮುಖ್ಯವಾಗಿ ಆಂಡ್ರೂ ಕಾರ್ನೇಜಿ ಕೊಟ್ಟ ಉದಾರ ದೇಣಿಗೆಗಳು. ಕೈಗಾರಿಕೆಯಲ್ಲಿ ಬೆಳೆದ ರಾಷ್ಟ್ರವಾದ ಇಂಗ್ಲೆಂಡಿಗೆ ಈ ಪರಿಸ್ಥಿತಿ ಚೆನ್ನಾಗಿ ಒಪ್ಪುತ್ತದೆ. ಬಹುತೇಕ ಸ್ಥಳೀಯ ಸರ್ಕಾರಗಳು ಅಗತ್ಯವಿದ್ದ ಹಣವನ್ನು ಶೇಖರಿಸಲು ಸಾಧ್ಯವಿತ್ತು.

ತೆರಿಗೆಯ ಬಗ್ಗೆ ಹೇಳುವುದಾದರೆ, ಭಾರತ ಇಂಗ್ಲೆಂಡಿನ ಅನುಭವದ ಲಾಭ ಪಡೆಯಬಹುದು. ಭಾರತ ಸಾರ್ವಜನಿಕ ಬೆಂಬಲವನ್ನೇ ಅವಲಂಬಿಸಿ ರಾಷ್ಟ್ರೀಯ ಸಾರ್ವಜನಿಕ ಗ್ರಂಥಾಲಯ ಬೆಳವಣಿಗೆಯ ಕಾರ್ಯ ಕೈಗೊಳುವದು ಸಾಧ್ಯವಿಲ್ಲ. ಇಂಗ್ಲೆಂಡ್ ಕೈಗಾರಿಕಾ ದೇಶವಾಗಿ, ಜನರ ಜೀವನಮಟ್ಟ ಹೆಚ್ಚಿದ್ದು, ಸಾರ್ವಜನಿಕರ ಸಹಾಯವನ್ನೇ ಅವಲಂಬಿಸಿ ತನ್ನ ಸಾರ್ವಜನಿಕ ಗ್ರಂಥಾಲಯ ಬೆಳವಣಿಗೆ ಸಾಗಿಸಿತು. ತದ್ವಿರುದ್ಧವಾಗಿ, ಭಾರತ ಮುಖ್ಯತಃ ಕೃಷಿರಾಷ್ಟ್ರ; ಮತ್ತು ಇಲ್ಲಿಯ ಜೀವನಮಟ್ಟಗಳೂ ಕಡಿಮೆ. ಆದ್ದರಿಂದ ತೆರಿಗೆಯ ಹಣವನ್ನೆ ಪೂರ್ತಿಯಾಗಿ ಅವಲಂಬಿಸುವದು ಉಚಿತವಲ್ಲ. ತೆರಿಗೆಯಿಂದ ಬಂದ ಹಣವನ್ನು ಕೇಂದ್ರೀಯ ಮತ್ತು ರಾಜ್ಯ ಸರ್ಕಾರಗಳ ಉದಾರ ಅನುದಾನಗಳಿಂದ ಹೆಚ್ಚಿಸಬೇಕು. ಇದಲ್ಲದೆ ನಮ್ಮಲ್ಲಿದ್ದ ಶ್ರೀಮಂತರು ಸಾರ್ವಜನಿಕ ಅಭಿವೃದ್ಧಿಕಾರ್ಯದ ಸಲುವಾಗಿ ಉದಾರ ಧನಸಹಾಯ ಮಾಡಲು ಮುಂದಾಗಬೇಕು.

ನಾಲ್ಕನೆಯದಾಗಿ, ಸಾರ್ವಜನಿಕ ಸಂಸ್ಥೆಗಳಾದ ಗ್ರಂಥಾಲಯ ಸಂಘ, ಯಂಗ್‌ಮೆನ್ಸ್ ಕ್ರಿಶ್ಚಿಯನ್ ಅಸೋಸಿಯೇಷನ್, ಶೈಕ್ಷಣಿಕ ಸಂಸ್ಥೆಗಳಾದ ಶಾಲೆಗಳು, ಕಾಲೇಜುಗಳು, ಕೈಗಾರಿಕಾ ಕೇಂದ್ರಗಳು—ಇವು ಗ್ರಂಥಾಲಯ ಬೆಳವಣಿಗೆಗೆ ಸಹಾಯದ ಕೈ ನೀಡಿದುವು. ಹೀಗೆ ಇಂಗ್ಲೆಂಡಿನಲ್ಲಿ ಸಾರ್ವಜನಿಕ ಗ್ರಂಥಾಲಯ ತನ್ನ ಪಾತ್ರವನ್ನು ತಾನೇ ನಿರ್ವಹಿಸಲಿಲ್ಲ. ಇದು ಜನರ ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ ಬೆಳವಣಿಗೆಯ ಗುರಿಯನ್ನಿಟ್ಟು ಎಲ್ಲ ಸಂಸ್ಥೆಗಳ ಸಹಕಾರವನ್ನು ಕೋರಿ ಸಹಾಯ ಪಡೆಯಿತು. ಹೀಗಾಗಿ ಇಂಗ್ಲೆಂಡಿನಲ್ಲಿ ಸಾರ್ವಜನಿಕ ಗ್ರಂಥಾಲಯ ಹೆಚ್ಚು ಲೋಕಪ್ರಿಯವಾಯಿತು. ಇದರ ಸೇವೆಗಳು ಬಹಳ ಪರಿಣಾಮಕಾರಿಯಾದುವು.

ಇವೆಲ್ಲವನ್ನೂ ಇಂಗ್ಲೆಂಡ್ ಸಾಧಿಸಲು ಕಾರಣಗಳು ಹಲವಾರು. ಅವುಗಳಲ್ಲಿ ನಮ್ಮ ಚರ್ಚೆಯ ದೃಷ್ಟಿಯಿಂದ ಮುಖ್ಯವಾದದ್ದು ಅಲ್ಲಿ ಹೆಚ್ಚು ಪ್ರಮಾಣದಲ್ಲಿರುವ ಸಾಕ್ಷರತೆ. ಮನುಷ್ಯನಲ್ಲಿ ನಾಗರಿಕತೆಯನ್ನು ಪೋಷಿಸುತ್ತದೆ; ಸಹನಾಗರಿಕರಿಗೆ ಸಹಾಯ ಸಲ್ಲಿಸುವ ಪ್ರವೃತ್ತಿ ಬೆಳೆಯಿಸುತ್ತದೆ. ಭಾರತದಲ್ಲಿ ಶೇಕಡ 70ರಷ್ಟು ಅನಕ್ಷರತೆ ಇರುವುದೊಂದು ದೊಡ್ಡ ಸಮಸ್ಯೆ. ಈ ದುರ್ದೈವ ಪರಿಸ್ಥಿತಿಯನ್ನು ನಿರ್ಮೂಲಗೊಳಿಸಲು ಸಾಮಾಜಿಕ, ಶೈಕ್ಷಣಿಕ ಮತ್ತು ಸಾರ್ವಜನಿಕ ಉದ್ಧಾರ ಬಯಸುವ ಸಂಸ್ಥೆಗಳ ಸಹಕಾರ ಪಡೆಯಲು ಅವುಗಳ ಮನವೊಲಿಸುವ ವಿಧಾನಗಳನ್ನು ಅನುಸರಿಸಬೇಕಲ್ಲದೆ, ಕಾನೂನಿಂದ ಅವನ್ನು ಒದಗಿಸುವುದು ಕರ್ತವ್ಯವೆಂದು ಬಲವಾಗಿ ದೃಢಪಡಿಸುತ್ತದೆ. ನಮ್ಮಲ್ಲಿರುವ ಜಾತಿ ಮತ್ತು ವರ್ಗಗಳ ಪಕ್ಷಪಾತ, ಭಾಷಾಗುಂಪುಗಳು ಮತ್ತು ಸಾಂಸ್ಕೃತಿಕ ಮಟ್ಟಗಳಲ್ಲಿರುವ ವ್ಯತ್ಯಾಸಗಳನ್ನು ಗಣನೆಗೆ ತೆಗೆದುಕೊಂಡಲ್ಲಿ ಈ ಸಲಹೆ ಹೆಚ್ಚು ಮಹತ್ವದ್ದಾಗಿ ಕಾಣುತ್ತದೆ ಮತ್ತು ತೀವ್ರ ಕ್ರಮ ತೆಗೆದುಕೊಳ್ಳಲು ಆಹ್ವಾನಿಸುತ್ತದೆ. ನಾವು ಯಾವುದೇ ಬೆಳವಣಿಗೆಯ ಕಾರ್ಯಕ್ರಮವನ್ನು ರಾಷ್ಟ್ರೀಯ ದೃಷ್ಟಿ

ಯಿಂದ ನೋಡಬೇಕು; ಮತ್ತು ಪಿಂಗಡಿಸುವ ಪ್ರಭಾವಗಳು ತಮ್ಮ ತಲೆ ಎತ್ತದಂತೆ ಮಾಡುವುದು ಬಹಳ ಉಚಿತ.

ಸಾರ್ವಜನಿಕ ಗ್ರಂಥಾಲಯಗಳು ಪ್ರೌಢಶಿಕ್ಷಣ ಆಂದೋಲನದಲ್ಲಿ ಪಾತ್ರವಹಿಸಿದ್ದರಿಂದ ತಮ್ಮ ಮಹತ್ವವನ್ನು ಮತ್ತು ಸ್ಥಿತಿಯನ್ನು ಹೆಚ್ಚಿಸಿದುವು. ಈ ಪ್ರಯತ್ನದಲ್ಲಿ ಸಾರ್ವಜನಿಕ ಗ್ರಂಥಾಲಯಗಳು ವಿಶ್ವವಿದ್ಯಾಲಯ ಮತ್ತು ಸಂಶೋಧನ ಗ್ರಂಥಾಲಯಗಳ ಸಹಕಾರ ಪಡೆದದ್ದು ಅತಿ ಸಮಯೋಚಿತ. ಸ್ಟಾನ್‌ಲೀ ಜಾಸ್ಟ್ ಸಾರ್ವಜನಿಕ ಗ್ರಂಥಾಲಯಗಳ ಕಾರ್ಯದ ಈ ಅಂಗವನ್ನು ಆಂಗ್ಲೋ– ಅಮೆರಿಕನರು ನಾಗರಿಕತೆಗೆ ಕೊಟ್ಟ ದೇಣಗೆ ಎಂದು ಸರಿಯಾಗಿ ವಿವರಿಸಿದ್ದಾನೆ.

ಇಂಗ್ಲೆಂಡ್ ಮತ್ತು ಭಾರತಗಳಲ್ಲಿ ಸಾರ್ವಜನಿಕ ಗ್ರಂಥಾಲಯಗಳ ಬೆಳವಣಿಗೆಯಲ್ಲಿರುವ ಇನ್ನೊಂದು ವಿಶಿಷ್ಟ ಅಂತರವೆಂದರೆ ಇಂಗ್ಲೆಂಡಿನಲ್ಲಿ ಸಾರ್ವಜನಿಕ ಗ್ರಂಥಾಲಯಗಳನ್ನು ಪೌರಸಭೆಗಳ ಸೇವೆಯ ಒಂದು ಅಂಗವೆಂದು ಮತ್ತು ಅವನ್ನು ಸ್ಥಳೀಯ ಹಣಕಾಸಿನಿಂದ ನಡೆಸಬೇಕೆಂದು ಭಾವಿಸುತ್ತಾರೆ. ಭಾರತದಲ್ಲಿ ಇನ್ನೂ ನಾವು ನಮ್ಮ ಜನರಿಗೆ ಗ್ರಂಥಾಲಯಗಳು ಸಾರ್ವತ್ರಿಕ ಅವಶ್ಯಕತೆ ಎಂದು ದೃಢಪಡಿಸಬೇಕಾಗಿದೆ. ; ಮತ್ತು ಇವಕ್ಕೆ ತಗಲುವ ವೆಚ್ಚ ಸ್ಥಳೀಯ, ರಾಜ್ಯ ಮತ್ತು ಕೇಂದ್ರ ಸರ್ಕಾರ ಬೊಕ್ಕಸದಿಂದ ಬರಬೇಕಾದದ್ದು ಎಂದು ನಮಗೆ ಮನವರಿಕೆಯಾಗಬೇಕಾಗಿದೆ.

ಇಂಗ್ಲೆಂಡ್ ಮತ್ತು ಇತರ ದೇಶಗಳಿಂದ ನಾವು ಕಲಿಯುವ ಒಂದು ಮರೆಯಲಾಗದ ಪಾಠವೆಂದರೆ, ನಮ್ಮ ಸಾರ್ವಜನಿಕ ಗ್ರಂಥಾಲಯಗಳನ್ನು ಶುಲ್ಕವಿಲ್ಲದೆ ಎಲ್ಲರಿಗೂ ತೆರೆದಿಡುವುದು. ಎಲ್ಲಿಯ ವರೆಗೆ ನಾವು ಒಂದಿಲ್ಲೊಂದು ಹೆಸರಿನಿಂದ 'ಠೇವಣಿ' ಅಥವಾ 'ಶುಲ್ಕ'ವನ್ನು ಜನರ ಮೇಲೆ ಹೇರುವೆವೋ ಅಲ್ಲಿಯ ವರೆಗೆ ಸಾರ್ವಜನಿಕ ಗ್ರಂಥಾಲಯಗಳು ಬೀರಬಹುದಾದ ಪ್ರಭಾವಗಳ ಮೇಲೆ ತೀವ್ರವಾದ ಆತಂಕಗಳನ್ನು ಉಂಟು ಮಾಡುತ್ತೇವೆ. ಈ ಮೂಲ ಕಾರಣವನ್ನು ನಾವು ಅಲಕ್ಷಿಸಿದರೆ ನಮ್ಮ ಎಲ್ಲ ಪ್ರಯತ್ನಗಳೂ ವ್ಯರ್ಥವೇ.

ಇಂಗ್ಲೆಂಡಿನ ರಾಬರ್ಟ್ಸ್ ಸಮಿತಿಯ ಶಿಫಾರಸುಗಳ ಮೇರೆಗೆ ಸಾರ್ವಜನಿಕ ಗ್ರಂಥಾಲಯದ ಮಾನಕಗಳನ್ನು ರಚಿಸಲು ಮುಂದೆ ಸರ್ಕಾರ ಮತ್ತೊಂದು ಸಮಿತಿಯನ್ನು ನೇಮಿಸಿತು. 1964ರ ಕಾಯಿದೆಯ ಅನುಸಾರ ಸಾರ್ವಜನಿಕ ಗ್ರಂಥಾಲಯಗಳ ಸೇವೆ ಫಲಕಾರಿಯಾಗಿದೆಯೋ ಎಂಬುವನು ಅಳೆಯಲು ಈ ಸಮಿತಿ ನಿರ್ಮಿಸಿದ ಮಾನಕಗಳನ್ನು ಉಪಯೋಗಿಸುತ್ತಾರೆ. ನಮ್ಮಲ್ಲಿ ನಮ್ಮ ಸ್ಥಳೀಯ ಸ್ಥಿತಿಯನ್ನರಿತು ಮಾನಕಗಳನ್ನು ರಚಿಸುವುದು ಮತ್ತು ಅವನ್ನು ಅಂಗೀಕರಿಸಲು ವ್ಯವಸೆ ಮಾಡುವುದು ಅವಶ್ಯಕವಾಗಿದೆ.

ಡಾ. ಕೆ. ಎಸ್. ಗುರುಬಸವೇಗೌಡ

ದ್ರಾವಿಡ ಭಾಷೆಗಳ ಪುರುಷವಾಚಕ ಸರ್ವನಾಮಗಳು

I

ಈ ಲೇಖನವಲ್ಲಿ[1] ದ್ರಾವಿಡ ಭಾಷೆಗಳ ಉತ್ತಮ ಪುರುಷ ಮತ್ತು ಮಧ್ಯಮ ಪುರುಷ ಸರ್ವನಾಮಗಳ ಪ್ರಕೃತಿ (ನಾಮಿನೇಟಿವ್) ಮತ್ತು ವಿಕೃತಿ (ಆಬ್ಲಿಕ್) ರೂಪಗಳ ತೌಲನಿಕ ಅಭ್ಯಾಸದಿಂದ ಮೂಲ ದ್ರಾವಿಡ ರೂಪಗಳನ್ನು ಪುನರ್ರಚಿಸಲು ಪ್ರಯತ್ನಿಸಿರುವ ಮೂರು ವಿದ್ವಾಂಸರ ಅಭಿಪ್ರಾಯಗಳನ್ನು ವಿವರಣಾತ್ಮಕವಾಗಿ ಸಂಗ್ರಹಿಸಲಾಗಿದೆ.

ಮೊದಲು ಉತ್ತಮ ಪುರುಷ ಏಕವಚನದ ರೂಪಗಳನ್ನು ನೋಡೋಣ. ಈ ರೂಪಗಳನ್ನು ಧ್ವನಿಸಾಮ್ಯದ ಆಧಾರದಿಂದ ಎರಡು ಭಾಗವಾಗಿ ವಿಂಗಡಿಸಿಕೊಳ್ಳಲಾಗಿದೆ. ಅವು ಈ ರೀತಿ ಇವೆ:

ಭಾಗ 1

	ಪ್ರಕೃತಿ	ವಿಕೃತಿ
ತಮಿಳು	ಯಾನ್	ಎನ್–
ಮಲಯಾಳಂ	—	ಎನ್–
ಕೋತ	ಆನ್	ಎನ್–, ಎ–
ತೋಡ	ಓನ್	ಏನ್–
ಕನ್ನಡ	ಆನ್	ಎನ್–
ಕೊಡಗು	—	ಎನ್–
ತುಳು	ಯಾನಿ, ಏನಿ2	ಎನ್–
ತೆಲುಗು	ಏನು	—
ಕುಇ	ಆನು	—
ಗೊಂಡಿ	ಅನಾ, ಅನ್ನಾ, ಅನ	—
ಕೊಲಾಮಿ	ಆನ್	ಅನ್–

---

1 ಈ ಲೇಖನವನ್ನು ಫೆಬ್ರುವರಿ 1970ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ಕನ್ನಡ ವಿಭಾಗದ ವಿಚಾರಗೋಷ್ಠಿಯಲ್ಲಿ ಓದಲಾಯಿತು.

2 ತುಳು, ಕೊಡಗು, ಮಲಯಾಳಂ ಮತ್ತು ಇನ್ನು ಕೆಲವು ಭಾಷೆಗಳಲ್ಲಿ ಬರುವ ಕೆಲವು ವರ್ಣಗಳನ್ನು ಗುರುತಿಸುವ ಧ್ವನಿ ಸಂಕೇತಗಳು ಕನ್ನಡದ ಲಿಪಿ ಮಾಲೆಯಲ್ಲಿ ಇಲ್ಲದಿರುವುದರಿಂದ, ಅವನ್ನು ಕನ್ನಡದ ಲಿಪಿ ಸಂಕೇತಗಳಿಂದ ಗುರುತಿಸಲಾಗಿದೆ. ಸಂದರ್ಭೋಚಿತವಾಗಿ ಅವನ್ನು ಅಡಿ ಟಿಪ್ಪಣಿಗಳಲ್ಲಿ ಸೂಚಿಸಲಾಗುತ್ತದೆ.

ನಾಯ್ಕಿ	ಆನ್	ಅನ್
ಪರ್ಜಿ	ಆನ್	ಅನ್–
ಒಲ್ಲಾರಿ	ಆನ್	ಅನ್–
ಗದ್ಬ	ಆನ್	ಅನ್–
ಪೆಂಗೊ	ಆನ್ (ಎಙ)	—
ಕುರುಖ್	ಏನ್	ಎಙ–
ಬ್ರಾ.ಹೂಇ	ಈ	(?) ಕನ್–

ಭಾಗ 2

ತಮಿಳು	ನಾನ್ (>ಆಧುನಿಕ ಉ. ಭಾ.ನಾಪ್)	—
ಮಲಯಾಳಂ	ಞಾನ್ (ಆಧುನಿಕ ಉ. ಭಾ. ನಾನ್)	—
ಕನ್ನಡ	ನಾನ್ (ಆಧುನಿಕ ನಾನು)	ನನ್–
ಕೊಡಗು	ನಾನಿ3, ನಾ	ನನ್–, ನಾ–
ತೆಲುಗು	ನೇನು, ನಾನು	ನನ್–, ನಾ–
ಗೊಂಡಿ	(ಉ. ಭಾ.) ನ(ನ್) ನಾ, ನನ್	ನಾ–
ಕುಇ	(ಉ. ಭಾ) ನಾನು	ನನ್–, ನಾ
ಕುವಿ	(ಉ. ಭಾ) ನಾನೂ, (ಉ.ಭಾ.) ನಾನು	ನಾ–
ಕೊಂಡ	ನಾನ್	ನಾ–
ಪೆಂಗೊ	—	ನಙ–, ನಾ–

ಈಗ ಮೇಲಿನ ರೂಪಗಳಲ್ಲಿ ಕಂಡುಬರುವ ಸ್ವರ ಮತ್ತು ವ್ಯಂಜನಗಳ ಸಾಮ್ಯ–ವೈಷಮ್ಯಗಳನ್ನು ನೋಡೋಣ.

ಸ್ವರಗಳು: ಆ/ಅ. ಆ/ಎ. ಏ/ಎ. ಓ/ಎ ಮತ್ತು (ಈ/(?)ಕನ್); (ಭಾಗ–1)
ಆ/ಅ, ಆ/ಅ, ಏ/ಅ (ಭಾಗ–2)4

ವ್ಯಂಜನಗಳು: ಯ್/ ϕ5 (ಭಾಗ–1)
ನ್/ನ್, ಞ್/ ϕ(ಭಾಗ–2)

ಮೂಲ ದ್ರಾವಿಡ ರೂಪಗಳ ಪುನರ್ರಚನೆಯ ಬಗ್ಗೆ ವಿದ್ವಾಂಸರು ಸಾಕಷ್ಟು ಚರ್ಚಿಸಿದ್ದಾರೆ. ಈ ಲೇಖನ ಮುಖ್ಯವಾಗಿ ಮೂರು ವಿದ್ವಾಂಸರ ಅಭಿಪ್ರಾಯವನ್ನು ಮಂಡಿಸಲು ಯತ್ನಿಸಿದೆ.

ಮೊದಲನೆಯದಾಗಿ ಕಮಿಲ್ ಜ್ವಲಬಿಲ್ (1962)ರವರ ಅಭಿಪ್ರಾಯವನ್ನು ನೋಡೋಣ: ಅವರು ಮೂಲದ್ರಾವಿಡ ರೂಪಗಳನ್ನು ಈ ರೀತಿ ಪುನರ್ರಚಿಸುತ್ತಾರೆ—*ಆನ್।/*ಅನ್–. ಇವುಗಳ ಪುನರ್ರಚನೆಗೆ ಅವರು ಕೊಡುವ ಕಾರಣಗಳು:

1 ಪಟ್ಟಿ ರೂಪಗಳು ಸ್ವರದಿಂದಲೇ ಪ್ರಾರಂಭವಾಗುತ್ತವೆ. 2 ಅಲ್ಲದೆ ಯಕಾರ ಅ–ಆ ಮತ್ತು ಎ–ಏ ಸ್ವರಗಳ ಪೂರ್ವದಲ್ಲಿ ಬರುವುದನ್ನು ಅನೇಕ ಪದಗಳಲ್ಲಿ ಕಾಣುತ್ತೇವೆ. ಈ ಸ್ವರಗಳ ಪೂರ್ವದಲ್ಲಿ

---

3 ನೋಡಿ: ಅಡಿ ಟಿಪ್ಪಣಿ 2

4 ಭಾಗ–1 ಮತ್ತು ಭಾಗ–2 DED (*A Dravidian Etymological Dictionary*) ಯಲ್ಲಿರುವ ಸಂಖ್ಯೆ 4234ಕ್ಕೆ ಅನ್ವಯಿಸುತ್ತದೆ.

5 ϕ ಎಂಬ ಚಿಹ್ನೆ ಶೂನ್ಯವನ್ನು ಸೂಚಿಸುತ್ತದೆ.

ಈ ವ್ಯಂಜನಕ್ಕೆ ಅರ್ಥವ್ಯತ್ಯಾಸ ಮಾಡುವ ಸಾಮರ್ಥ್ಯವಿಲ್ಲದ ಕಾರಣ, ಈ ವ್ಯಂಜನವನ್ನು ಪುನರ್ರಚಿಸುವುದು ಸಮಂಜಸವಲ್ಲ—ಎಂದು ಹೇಳಿ ಕೆಲವು ಉದಾಹರಣೆಗಳನ್ನು ನಿದರ್ಶನವಾಗಿ ಕೊಡುತ್ತಾರೆ.
ತಮಿಳು: ಯಾಮುಮ್~ಆಮುಮ್ (ಕನ್ನಡ: ಆಮ್. ಆವ್; ತುಳು: ಏಮ್. ಇತ್ಯಾದಿ)
ತಮಿಳು: ಯಾನುಮ್~ಆನುಮ್(ಕನ್ನಡ: ಆನ್; ಕೊಡಗು: ಆನ್; ಕೋತ: ಆನ್; ತೋಡ: ಆನ್; ತುಳು: ಆನೇ.

ತೆಲುಗು: ಏನುಂಗು; ಪರ್ಜಿ: ಏನು; ಗದ –ಒಲ್ಲಾರಿ: ಏನಿಗ್
ಭ. ಕೃಷ್ಣಮೂರ್ತಿಯವರು (1968) ಮೂಲದ್ರಾವಿಡ ರೂಪಗಳನ್ನು ಈ ರೀತಿ ಪುನರ್ರಚಿಸುತ್ತಾರೆ: *ಯಾನ್,*ಯನ್–. ಇದಕ್ಕೆ ಅವರು ಕೊಡುವ ಕಾರಣಗಳು ಈ ರೀತಿ ಇವೆ:

1 ಯಕಾರದ ಪರದಲ್ಲಿ ಬರುವ ಸ್ವರಗಳಾದ ಅ–ಆ ಮತ್ತು ಎ–ಏ ಅರ್ಥವ್ಯತ್ಯಾಸ ಮಾಡುವ ಸಾಮರ್ಥ್ಯವನ್ನು ಕಳೆದುಕೊಂಡಿರುವುದರಿಂದ ಅ–ಆ ಮತ್ತು ಎ–ಏ ಸ್ವರಗಳಿಗಿರುವ ವಿರೋಧ ಆ ಸ್ಥಾನದಲ್ಲಿ ತಟಸ್ಥವಾಗಿದೆ. ಅಲ್ಲದೆ ಈ ಸ್ಥಾನದಲ್ಲಿ ಬರುವ ಸ್ವರದ ವರ್ಣನೆಯನ್ನು ಖಚಿತವಾಗಿ ಮಾಡುವುದು ಕಷ್ಟ. ಆದುದರಿಂದ ಯಕಾರದ ಪರದಲ್ಲಿ ಬರುವ ಸ್ವರ ಅ–ಆ ಎಂಬುದೂ ಅಲ್ಲ, ಎ–ಏ ಎಂಬುದೂ ಅಲ್ಲ. ಸಾಮಾನ್ಯವಾಗಿ ಹೇಳುವುದಾದರೆ ದಕ್ಷಿಣ ದ್ರಾವಿಡ ಭಾಷೆಗಳಲ್ಲಿ ಯಕಾರದ ಪರದಲ್ಲಿ ದೀರ್ಘಸ್ವರ ಆ ಎಂಬುದೂ (ಪ್ರಕೃತಿಯಲ್ಲಿ)ಹ್ರಸ್ವಸ್ವರ ಎ ಎಂಬುದೂ (ವಿಕೃತಿಯಲ್ಲಿ) ಕಾಣಿಸಿಕೊಳ್ಳುತ್ತವೆ.

2 ಮಲಯಾಳಂ ಭಾಷೆಯಲ್ಲಿ ಕಂಡುಬರುವ ರೂಪಗಳಾದ ಞಾನ್/ಞನ್—ಬಹುವಚನ ಸಸಮ್ಮುಖಿ ಞಾಮ್/ಞಮ್–ರೂಪಗಳ ಸಾದೃಶದಿಂದ ಪರಿವರ್ತನೆಗೊಂಡ ರೂಪಗಳು.

3 ಅಲ್ಲದೆ ಬೇರೆ ಭಾಷೆಗಳಲ್ಲಿ ಕಂಡು ಬರುವ ಆನ್, ಏನ್/ ಅನ್, ಎನ್ ರೂಪಗಳು ಮತ್ತು ನಾ, ನೇ/ನನ್, ನಾ(ನಜ್) ರೂಪಗಳು *ಞಾನ್/*ಞನ್– ರೂಪಗಳಿಂದ ಪರಿವರ್ತನೆ ಹೊಂದಿದ ರೂಪಗಳು.

4 ಮೂಲದ್ರಾವಿಡ *ಞಕಾರ ಮಲಯಾಳಂನಲ್ಲಿ ಕಂಡುಬರುತ್ತದೆ. ಇದು ಬೇರೆ ಭಾಷೆಗಳಲ್ಲಿ ನಕಾರವಾಗುವುದನ್ನು ಗಮನಿಸಬೇಕು. ಆದರೆ ನಕಾರ ಞಕಾರವಾಗುವ ಬದಲಾವಣೆ ಮಾತ್ರ ಕಂಡು ಬರುವುದಿಲ್ಲ. ಆದುದರಿಂದ ನಕಾರವನ್ನು ಪುನರ್ರಚಿಸುವುದು ಸೂಕ್ತವಲ್ಲ.

ಮೇಲಿನ ಹೇಳಿಕೆಯನ್ನು ಈ ರೀತಿ ತೋರಿಸಬಹುದು:

ಉ.ಪು.ಏ.ವ	ಉ.ಪು.ಬ.ವ
*ಯಾನ್/*ಯನ್–	*ಯಾಮ್/*ಯಮ್–

*ಞಾನ್/*ಞನ್–←*ಞಾಮ್/*ಞಮ್–(*<ನ್–ಯಾಮ್/*ನ್–ಯಮ್–)

ತೋಡ ಮತ್ತು ಬ್ರಾಹೂಇ ಭಾಷೆಯ ತೊಡಕನ್ನು ಭ. ಕೃಷ್ಣಮೂರ್ತಿಯವರು ಈ ರೀತಿ ವಿವರಿಸುತ್ತಾರೆ: ತೋಡ ಮತ್ತು ಬ್ರಾಹೂಇ ಭಾಷೆಗಳಲ್ಲಿ ಪ್ರಕೃತಿ ರೂಪ ಓನ್ ಮತ್ತು ಈ: ವಿಕೃತಿ ರೂಪ ಏನ್–, ಎ–ಮತ್ತು (?) ಕನ್–. ತೋಡ ಭಾಷೆಯ ಓಕಾರ ಏಕಾರದಿಂದ ಬಂದಿದೆ ಎನ್ನುವುದಕ್ಕೆ ವಿಕೃತಿ ರೂಪದಲ್ಲಿರುವ ಏಕಾರ ಸಹಾಯಕವಾಗುತ್ತದೆ. ಬ್ರಾಹೂಇ ಭಾಷೆಯಲ್ಲಿ ಬರುವ ಈಕಾರ ಏಕಾರದಿಂದ ಬಂದಿರಬೇಕು ಎಂಬುದಕ್ಕೆ ನಿದರ್ಶನ ಬೇರೆ ಆಧಾರದಿಂದ ದೊರೆಯುತ್ತದೆ. ಉದಾಹರಣೆಗೆ ಬ್ರಾಹೂಇ ಬೀಸುನ್: ಕುರುಖ್ ಬೇಕಸೂ.

ಈಗ ಪಿ. ಎಸ್. ಸುಬ್ರಹ್ಮಣ್ಯಂ (1967–68)ರವರ ಪುನರ್ರಚನೆಯನ್ನು ನೋಡೋಣ. ಇವರೂ ಮೂಲದ್ರಾವಿಡ ರೂಪ *ಯಾನ್/*ಯನ್–ಎಂದು ತಿಳಿಸುತ್ತಾರೆ.

ತೋಡ ಮತ್ತು ಬ್ರಾಹೂಇ ಭಾಷೆಗಳಲ್ಲಿಯ ಭಿನ್ನ ರೂಪಗಳ ಅಸ್ತಿತ್ವಕ್ಕೆ ಅವರು ಕೊಡುವ ವಿವರಣೆಯನ್ನು ಮೊದಲು ನೋಡೋಣ.

ತೋಡ ಭಾಷೆಯ ರೂಪಗಳ ಬದಲಾವಣೆಯನ್ನು ಈ ರೀತಿ ತೋರಿಸಬಹುದು:
ಓನ್ < ಮೂಲತೋಡ *ಆನ್ < ಮೂಲದ್ರಾವಿಡ *ಯಾನ್;

ಈ ವಾದಕ್ಕೆ ಪೋಷಕವಾಗಿ ಕೆಲವು ಉದಾಹರಣೆಗಳನ್ನು ಅವರು ಕೊಡುತ್ತಾರೆ:

ತೋಡ	(ಕನ್ನಡ)	ತಮಿಳು
ಕೋಲ್	(ಕಾಲು)	ಕಾಲ್ (DED 1238)
ನೋಂಗ್	(ನಾಲ್ಕು)	ನಾನ್ಕು (DED 3024)
ನೋಡ್	(ನಾಡು)	ನಾಟು (DED 3012)

ಬ್ರಾಹೂಇ ಭಾಷೆಯ ರೂಪವಾದ ಈಯನ್ನು ದ್ರಾವಿಡ ಭಾಷೆಯ ನಿಯಮಗಳ ಆಧಾರದಿಂದ ವಿವರಿಸುವುದು ಕಷ್ಟ. ಆದ್ದರಿಂದ ಮಧ್ಯಮ ಪುರುಷ ಏಕವಚನ ರೂಪ ಸಾದೃಶದಿಂದ ಈ ಪರಿವರ್ತನೆ ನಡೆದಿದೆ ಎಂದು ಎಮೆನೋ ಅವರ ಅಭಿಪ್ರಾಯವನ್ನು ಅವರು ಅನುಮೋದಿಸುತ್ತಾರೆ.6 ತಮಿಳು, ಕನ್ನಡ ಮತ್ತು ಕೊಡಗು ಭಾಷೆಗಳಲ್ಲಿ ಕಂಡುಬರುವ ಆದಿ ನಕಾರಕ್ಕೂ ಮಲಯಾಳಂ ಭಾಷೆಯಲ್ಲಿ ಬರುವ *ಞಾನ್ (ಭಾಗ–2) ಎಂಬುದಕ್ಕೂ ಅವರು ಕೊಡುವ ಐತಿಹಾಸಿಕ ವಿವರಣೆಯನ್ನು ಮುಂದೆ ಕೊಡಲಾಗಿದೆ:

*ಯಾನ್ ಮತ್ತು *ಯನ್ ರೂಪಗಳ ಪುನರ್ರಚನೆಗೆ ಪಿ. ಎಸ್. ಸುಬ್ರಹ್ಮಣ್ಯಂರವರು ಕೊಡುವ ಕಾರಣಗಳನ್ನು ನೋಡೋಣ:

1 ಹಳೆಯ ತಮಿಳಿನಲ್ಲಿ ಕೇವಲ ಹತ್ತು ಪದಗಳು ಯಕಾರದಿಂದ ಪ್ರಾರಂಭವಾಗುತ್ತವೆ. ಅಲ್ಲದೆ ಈ ವ್ಯಂಜನದ ಪರದಲ್ಲಿ ಆಕಾರ ಬರುತ್ತದೆ. *ಯಾ ಎಂಬುದು ತುಳು. ತೆಲುಗು ಕುರುಖ್ ಮತ್ತು ಮಾಲ್ಟೊ ಭಾಷೆಗಳಲ್ಲಿ ಏ ಆಗುತ್ತದೆ: ಉಳಿದ ಭಾಷೆಗಳಲ್ಲಿ ಆ ಆಗುತ್ತದೆ.

2 ಈಗ ವಿಕೃತಿ ರೂಪದ ಪುನರ್ರಚನೆಯನ್ನು ನೋಡೋಣ. ಪ್ರಕೃತಿ ರೂಪದ ದೀರ್ಘಸ್ವರ ವಿಕೃತಿರೂಪದಲ್ಲಿ ಹ್ರಸ್ವವಾಗುವುದು. ಈ ವಿಕೃತಿರೂಪಗಳ ಪರದಲ್ಲಿ ಬರುವ ಸಾಧಿತ ಪ್ರತ್ಯಯ ಸ್ವರಾದಿಯಾಗಿರುತ್ತದೆ. ಈ ರೀತಿಯ ಬದಲಾವಣೆಯನ್ನು ಬೇರೆಡೆಯಲ್ಲೂ ಕಾಣುತ್ತೇವೆ. ಆದುದರಿಂದ ಮೂಲದ್ರಾವಿಡ ಪ್ರಕೃತಿ ರೂಪವಾದ *ಯಾನ್ ವಿಕೃತಿ ರೂಪದಲ್ಲಿ *ಯನ್– ಆಗಿ ಪರಿವರ್ತನೆ ಹೊಂದುತ್ತದೆ. ಈ *ಯನ್– ರೂಪ ಯಾವ ದ್ರಾವಿಡ ಭಾಷೆಗಳಲ್ಲೂ ಬಳಕೆಯಲ್ಲಿಲ್ಲ. ಆದರೂ, ಈ ಮೂಲ ರೂಪದ ಸಹಾಯದಿಂದ ಬೇರೆ ರೂಪಗಳ ಪರಿವರ್ತನೆಯನ್ನು ವಿವರಿಸಬಹುದು. ಈ ಯಕಾರದ ಪರಿಸರ ಪರಿಮಿತವಾದುದು. ಅಲ್ಲದೆ ದ್ರಾವಿಡ ಭಾಷೆಗಳ ವರ್ಣ ಪರಿವರ್ತನೆಯ ನಿಯಮಗಳ ಸಾಲಿನಲ್ಲೂ ಬರುವುದಿಲ್ಲ. ಈ ವ್ಯಂಜನದ ಪರದಲ್ಲಿ ಅ ಸ್ವರವಲ್ಲದೆ ಬೇರೆ ಯಾವ ಸ್ವರವೂ ಬರುವುದಿಲ್ಲ. ಆದುದರಿಂದ *ಯನ್–ರೂಪ ದಕ್ಷಿಣ ಮತ್ತು ಉತ್ತರ ದ್ರಾವಿಡ ಭಾಷೆಗಳ ಎನ್ ಆಗಿಯೂ, ಮಧ್ಯ ದ್ರಾವಿಡ ಭಾಷೆಗಳಲ್ಲಿ ಅನ್ ಆಗಿಯೂ ಪರಿವರ್ತನೆ ಹೊಂದುತ್ತದೆ. ಕುರುಖ್ ಮತ್ತು ಮಾಲ್ಟೊ ಭಾಷೆಗಳ ವಿಕೃತಿ ರೂಪದಲ್ಲಿ ಕಂಡುಬರುವ ಗಕಾರದ ಮೂಲವನ್ನು ಚತುರ್ಥಿ ವಿಭಕ್ತಿ ಪ್ರತ್ಯಯದ ಸಹಾಯದಿಂದ ವಿವರಿಸಬಹುದು: ಈ ಬದಲಾವಣೆಯನ್ನು ಈ ರೀತಿ ತೋರಿಸಬಹುದು:

ಎಂಗ್– < *ಎನ್–ಅಕ್ < ಮೂಲದ್ರಾವಿಡ *ಯನ್–ಅಕ್ (ತಮಿಳು: ಎನ್–ಅಕ್ಕು– 'ನನಗೆ)

ಇಲ್ಲಿ ಚತುರ್ಥಿ ವಿಭಕ್ತಿ ಪ್ರತ್ಯಯದ ಅಕಾರ ಲೋಪವಾಗುತ್ತದೆ: ಅಲ್ಲದೆ ಕಕಾರ ಗಕಾರವಾಗಿ ಪರಿವರ್ತನೆ ಹೊಂದುತ್ತದೆ. ಆದುದರಿಂದ ಬ್ರಾಹೂಇ ಭಾಷೆಯ ವಿಕೃತಿ ರೂಪವಾದ ಕನ್ ಕೂಡ *ಎನ್–ಕ್(< ಮೂಲ ಉತ್ತರ ದ್ರಾವಿಡರೂಪ *ಎನ್–ಕ್) ಇಂದ ಪರಿವರ್ತನೆ ಹೊಂದಿದೆ ಎಂದು

Emeneau, M. B.: *Brahui and Dravidian Comparative Grammar*, Berkeley (1962)

ಹೇಳಬಹುದು. *ಎನ್-ಕ್ ಎಂಬುದರಲ್ಲಿಯ ಅಂತ್ಯ ವ್ಯಂಜನ ಬ್ರಾಹೂಈ ಭಾಷೆಯಲ್ಲಿ ಪದಾದಿಯಲ್ಲಿ ಬರುತ್ತದೆ. ಅಲ್ಲದೆ ಎ ಸ್ವರ ಅ ಆಗುತ್ತದೆ. ಈ ಬದಲಾವಣೆಯನ್ನು ಬ್ರಾಹೂಈಯಲ್ಲಿ ಬೇರೆಡೆಯಲ್ಲಿಯೂ ಕಾಣುತ್ತೇವೆ. ಉದಾಹರಣೆಗೆ ಬ್ರಾಹೂಈ ಹಲ್ 'ಇಲಿ' < ಮೂಲ ದ್ರಾವಿಡ *ಎಲ್ಲಿ (DED 710)ಇಂದ ಪರಿವರ್ತನೆಗೊಂಡಿದೆ. ಆದುದರಿಂದ ಭಾಷೆಗಳಲ್ಲಿ ಮೂಲದ ಚತುರ್ಥಿ ವಿಭಕ್ತಿ ಪ್ರತ್ಯಯ ಮೂಲ ಉತ್ತರ ದ್ರಾವಿಡದಲ್ಲಿ ವಿಕೃತಿ ರೂಪವಾಗಿ ಬಳಕೆಯಲ್ಲಿ ಉಳಿಯಿತು.

3 ಮೂಲ ದ್ರಾವಿಡ ವಿಕೃತಿ ರೂಪವಾದ *ಯನ್–ಮಧ್ಯ ದ್ರಾವಿಡ ಭಾಷೆಗಳಲ್ಲಿ ಅನ್– ಆಗಿ ಪರಿವರ್ತನೆ ಹೊಂದಿರುವುದನ್ನು ಈಗಾಗಲೇ ಗಮನಿಸಿದ್ದೇವೆ. ಈ ಬದಲಾವಣೆ ಕೊಲಾಮಿ ಪರ್ಜಿ ಭಾಷಾ ಗುಂಪುಗಳಲ್ಲಿಯೂ ಉಳಿಯಿತು. ಆದರೆ ತೆಲುಗು, ಗೊಂಡಿ, ಕೊಂಡ, ಪೆಂಗೊ, ಮಂಡ, ಕುಈ ಮತ್ತು ಕುವಿ (ಇವುಗಳನ್ನು ತೆಲುಗು– ಕುಈ ಭಾಷಾವರ್ಗವೆಂದು ಕರೆಯಬಹುದು) ಭಾಷೆಗಳಲ್ಲಿ ವರ್ಣಗಳ ಸ್ಥಾನಪಲ್ಲಟದಿಂದಾಗಿ ನಕಾರ ಪದಾದಿ ಸ್ಥಾನಕ್ಕೆ ಪಲ್ಲಟ ಹೊಂದಿತು. ಆದುದರಿಂದ ಅನ್–ರೂಪ ನ–ಆಯಿತು.

ಮೇಲಿನ ವಿಕೃತಿ ರೂಪಗಳಲ್ಲಿಯ ಬದಲಾವಣೆಯನ್ನು *ಯನ್–ರೂಪದ ಸಹಾಯದಿಂದ ಸುಲಭವಾಗಿ ವಿವರಿಸಲಾಗಿದೆ.

4 ತೆಲುಗು–ಕುಈ ಭಾಷೆಗಳ ಗುಂಪಿನಲ್ಲಿ, ಕೆಲವು ಭಾಷೆಗಳ ಪ್ರಕೃತಿರೂಪದ ಆದಿಯಲ್ಲಿ ನಕಾರ ಬರುತ್ತದೆ. ಅಲ್ಲದೆ ತೆಲುಗು, ಗೊಂಡಿ ಮತ್ತು ಕುಈ ಭಾಷೆಗಳಲ್ಲಿ ಎರಡೆರಡು ರೂಪಗಳು ಬಳಕೆಯಲ್ಲಿರುವುದನ್ನು ಕಾಣುತ್ತೇವೆ. ಇವುಗಳಲ್ಲಿ ಒಂದು ರೂಪ ನಕಾರದಿಂದ ಪ್ರಾರಂಭವಾದರೆ, ಇನ್ನೊಂದು ರೂಪ ಸ್ವರದಿಂದ ಪ್ರಾರಂಭವಾಗುತ್ತದೆ. ತೆಲುಗಿನ ರೂಪವಾದ ಏನು ಎಂಬುದು ನೇನು ಎಂಬ ರೂಪಕ್ಕಿಂತ ಹಳೆಯದು ಎಂಬುದಕ್ಕೆ ನನ್ನಯ್ಯನ 'ಮಹಾಭಾರತಮು' ಮತ್ತು ನನ್ನಿಚೋಡನ 'ಕುಮಾರ ಸಂಭವಮು') (ಕ್ರಿ.ಶ. 11) ಗ್ರಂಥಗಳು ಸಹಾಯಮಾಡುತ್ತವೆ. ಆದುದರಿಂದ ಪ್ರಕೃತಿರೂಪದ ಆದಿಯಲ್ಲಿ ಬರುವ ನಕಾರ ವಿಕೃತಿರೂಪದ ಆದಿಯಲ್ಲಿ ಬರುವ (ವಿಕೃತಿ ರೂಪದ ಆದಿವ್ಯಂಜನ ನಕಾರವು ಸ್ಥಾನ ಪಲ್ಲಟದಿಂದಾಗಿ ಪದಾದಿಯಲ್ಲಿ ಬಂದಿದೆ) ನಕಾರ ಸಾದೃಶದಿಂದ ಸೃಷ್ಟಿಯಾದುದು. ಈ ರೀತಿ ಸಾದೃಶದಿಂದ ಉಂಟಾದ ಬದಲಾವಣೆಯನ್ನು ಇತ್ತೀಚಿನ ತೆಲುಗು, ಕೊಂಡ, ಕುವಿ ಮತ್ತು ಗೊಂಡಿಯ ಕೆಲವು ಉಪಭಾಷೆಗಳಲ್ಲೂ ಕಾಣಬಹುದು. ಆದರೆ ಪೆಂಗೊ, ಮಂಡ ಮತ್ತು ಗೊಂಡಿ, ಕುಈ ಭಾಷೆಗಳ ಕೆಲವು ಉಪಭಾಷೆಗಳು ಸ್ವರದಿಂದ ಪ್ರಾರಂಭವಾಗುವ ರೂಪಗಳನ್ನು ಇನ್ನೂ ಉಳಿಸಿಕೊಂಡಿವೆ. ಆದುದರಿಂದ ಈ ಭಾಷಾ ವರ್ಗಗಳ ಮೂಲರೂಪ ಸ್ವರದಿಂದ ಪ್ರಾರಂಭವಾಗುವ ರೂಪವಾಗಿತ್ತು ಎಂಬುದನ್ನು ಗಮನಿಸಬೇಕು. ಈ ಮೇಲಿನ ಭಾಷೆಗಳಲ್ಲಿ ಕಾಣುವ ಪದಾದಿ ವ್ಯಂಜನವಾದ ನಕಾರದ ಬೆಳವಣಿಗೆಯನ್ನು ತೆಲುಗು ಭಾಷೆಯ ನಕಾರದ ಬೆಳವಣಿಗೆಗೆ ಹೋಲಿಸಬಹುದು; ಅಥವಾ ಈ ಬದಲಾವಣೆ ತೆಲುಗಿನಲ್ಲಿ ಮೊದಲು ಕಾಣಿಸಿಕೊಂಡು ಅನಂತರ ಈ ಭಾಷೆಗಳ ಮೇಲೆ ಪ್ರಭಾವ ಬೀರಿತು ಎಂದು ಹೇಳಬಹುದು. ಗೊಂಡಿ ಭಾಷೆಯ ಪ್ರಕೃತಿರೂಪದಲ್ಲಿ ಇರಬೇಕಾದ ದೀರ್ಘಸ್ವರ ಹ್ರಸ್ವವಾಗಲು. ರೂಪಾಂತ್ಯದಲ್ಲಿ ಬರುವ ಸಾಧಿತ ಪ್ರತ್ಯಯದ ಆದಿಸ್ವರವಾದ ಆಕಾರ ಕಾರಣ.

II

ಉತ್ತಮ ಪುರುಷ ಬಹುವಚನ ರೂಪಗಳನ್ನು ಧ್ವನಿ ಸಾಮ್ಯದ ಆಧಾರದಿಂದ ಮೂರು ಭಾಗಗಳನ್ನಾಗಿ ವಿಂಗಡಿಸಿಕೊಳ್ಳಲಾಗಿದೆ. ಅವುಗಳನ್ನು ಅಸಮ್ಮುಖಿ ಮತ್ತು ಸಸಮ್ಮುಖಿ(ಮೊದಲ ಎರಡು ಭಾಗಗಳಲ್ಲಿ ಅಸಮ್ಮುಖಿ ರೂಪಗಳೂ. ಮೂರನೆಯ ಭಾಗದಲ್ಲಿ ಸಸಮ್ಮುಖಿ ರೂಪಗಳೂ ಇವೆ) ಎಂದು ಕರೆಯಬಹುದು. ಅವುಗಳ ವಿಂಗಡಣೆ ಈ ರೀತಿ ಇದೆ:

ಭಾಗ–3

ಉತ್ತಮ ಪುರುಷ ಅಸಮ್ಮುಖಿ (ಎಕ್ಸ್‌ಕ್ಲೂಸಿವ್) ರೂಪಗಳು 7 (ಈ ಭಾಗದಲ್ಲಿ ತೋಡ ಭಾಷೆಯ ಸಸಮ್ಮುಖಿ ರೂಪಗಳನ್ನು ಕೊಡಲಾಗಿದೆ)

---

7 ಭಾಗ–3 DEDಯಲ್ಲಿರುವ ಸಂಖ್ಯೆ 4231ಕ್ಕೆ ಅನ್ವಯಿಸುತ್ತದೆ.

	ಪ್ರಕೃತಿ	ವಿಕೃತಿ
ತಮಿಳು	ಯಾವ್; ಯಾಙ್‌-ಕಳ್	ಎವ್-
ಮಲಯಾಳಂ	—	ಎಙ್-ಙಳ್-
ಕೋತ	ಆವ್	ಎವ್-ಅವ್-
ತೋಡ	ಎವ್ (ಒವ್)	ಎವ್ (ಒವ್-)
ಕನ್ನಡ	ಆವ್	ಎವ್-
ಕೊಡಗು	ಎಙ್‌ಗ	ಎಙ್‌ಗ-
ತುಳು	(ಉ. ಭಾ.) ಯಙ್-ಕುಳಿ	ಯಙ್-ಕುಳೆ-
	ಎಙ್-ಕುಳಿ	ಎಙ್-ಕುಳೆ-
ತೆಲುಗು	ಏಮು	—
ಗೊಂಡಿ	ಅಮ್ಮ್-ಅಟ್~ಅಟ್	—
	ಅಮ್ಮ್-ಒಟ್	—
	ಅವ್ಮ್-ಒಕ್	—
ಕುಇ	ಆಮು	—
ಕೊಲಾಮಿ	ಆಮ್	ಆಮ್-
ನಾಯ್ಕಿ	ಆಮ್	ಅಮ್-
ಪರ್ಜಿ	ಅಮ್	ಅಮ್-
ಒಲ್ಲಾರಿ	ಆಮ್	ಅಮ್-
ಗದ್ಬ	ಆಮ್	ಅಮ್-
ಪೆಂಗೊ	ಆಪ್ (ಎಙ್)	—
ಕುರುಖ್	ಏಮ್	ಎಮ್-
ಮಾಲ್ಟೊ	ಏಮ್	ಎಮ್-

ಭಾಗ–4

	ಪ್ರಕೃತಿ	ವಿಕೃತಿ
ತಮಿಳು	ನಾಙ್-ಕಳ್	—
ಮಲಯಾಳಂ	ಞಾಙ್-ಙ್ಙಳ್	ಞಙ್-ಙ್ಙಳ್-
ಕೊಡಗು	ನಙ್-ಗ	ನಙ್-ಗ-
ತೆಲುಗು	ನೇಮು,ಮೇಮು	ಮಮ್ಮ್-, ಮಾ-
ಗೊಂಡಿ	ಮಮ್ಮ್-ಅಟ್ಸ್	
	ಅಟ್, ಮಾ-ಟ್	ಮಾ-
	ಮಾವ್-ಅಟ್, ಮಮ್ಮ್-ಒಟ್	
	ಮಮೊ, ಮರ್-ಅಟ್, ಮವ್‌ಮ,	
	ಮಾವ್	
ಕೊಂಡ	ಮಾಪ್	ಮಾ-
ಕುಇ	(ಉ. ಭಾ.) ಮಾಮು	ಮಾ-

ಕುವಿ:	(ಉ.ಭಾ) ಮಾಮ್‌ಬೂ, ಮಾಮ್‌ಬು, ಮಾರ್‌ರೋ, ಮಾರೊ	ಮಾ–
ಪೆಂಗೊ	—	ಮಜ್‌ಗ್–ಮಾ–

ಭಾಗ–5

ಉತ್ತಮ ಪುರುಷ ಸಸಮ್ಮುಖ ಬಹುವಚನರೂಪಗಳು8 (ಗೊಂಡಿಯ ಅಸಮ್ಮುಖ ರೂಪವನ್ನು ಕೊಡಲಾಗಿದೆ)

	ಪ್ರಕೃತಿ	ವಿಕೃತಿ
ತಮಿಳು	ನಾಮ್	ನಮ್(ಮ್)–
ಮಲಯಾಳಂ	ನಾಮ್	ನಮ್(ಮ್)–
ಕನ್ನಡ	ನಾಮ್	ನಮ್(ಮ್)–
ತುಳು	ನಮ	ನಮು–
ತೆಲುಗು	ಮನಮು	ಮನ–(? < ನಮ್-ಅ)
[ಗೊಂಡಿ	ನಮಾಟ್(ಅಸಮ್ಮುಖ)	ಮಾ—]
ಕೊಲಾಮಿ	ನೇನ್ಡ್	ನೇನ್ಡ್–
ನಾಯ್ಕಿ	ನೇನ್ಡ್/ನೇಮ್	ನೇನ್ಡ್–
ಕುರುಖ್	ನಾಮ್	ನಮ್-, ನಜ್-ಗ-
ಮಾಲ್ಟೊ	ನಾಮ್	ನಮ್–
[ಬ್ರಾಹೂಇ	ನನ್ (ಅಸಮ್ಮುಖ ಮತ್ತು ಸಸಮ್ಮುಖ)	ನನ್–]

ಈ ಮೇಲಿನ ರೂಪಗಳಿಂದ ಮೂಲದ್ರಾವಿಡ ರೂಪಗಳನ್ನು ಪುನರ್ರಚಿಸುವ ಮುನ್ನ, ಮೂಲ ದ್ರಾವಿಡದಲ್ಲಿ ಅಸಮ್ಮುಖ ಮತ್ತು ಸಸಮ್ಮುಖ ಎಂಬ ಎರಡು ಬಗೆಯ ಬಹುವಚನ ರೂಪಗಳು ಇದ್ದುವೆ ಇಲ್ಲವೆ ಎಂಬುದನ್ನು ನೋಡಬೇಕು. ಈ ವಿಷಯದ ಬಗ್ಗೆ ವಿದ್ವಾಂಸರು ಸಾಕಷ್ಟು ಚರ್ಚೆ ನಡೆಸಿದ್ದಾರೆ. ಕೆಲವರು ಈ ರೀತಿಯ ಎರಡು ಬಹುವಚನಗಳು ಮೂಲದ್ರಾವಿಡದಲ್ಲಿ ಇರಲಿಲ್ಲ ಎಂದು ವಾದಿಸಿದರೆ, ಈ ರೂಪಗಳು ಮೂಲದ್ರಾವಿಡದಲ್ಲಿ ಇದ್ದುವು ಎಂದು ಬಹುಮಂದಿ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ವಿಭಿನ್ನ ಅಭಿಪ್ರಾಯಗಳನ್ನು ಚರ್ಚೆ ಮಾಡುವ ಬದಲು, ಬಳಕೆಯಲ್ಲಿರುವ ಈ ರೂಪಗಳ ಪುನರ್ರಚನೆಯ ಬಗ್ಗೆ ಚರ್ಚೆ ಮಾಡುವುದು ಸೂಕ್ತ. ಈಗ ಕಮಿಲ್ ಜ್ವಲಬಿಲ್, ಭ. ಕೃಷ್ಣಮೂರ್ತಿ ಮತ್ತು ಪಿ. ಎಸ್. ಸುಬ್ರಹ್ಮಣ್ಯಂರವರ ಅಭಿಪ್ರಾಯವನ್ನು ನೋಡೋಣ.

ಕಮಿಲ್ ಜ್ವಲಬಿಲ್‌ರವರು ಅಸಮ್ಮುಖ ಮತ್ತು ಸಸಮ್ಮುಖ ಬಹುವಚನ ರೂಪಗಳ ಅಸ್ತಿತ್ವದ ಬಗ್ಗೆ ಸಂದೇಹ ವ್ಯಕ್ತಪಡಿಸಿದ್ದರೂ, ಎರಡು ರೂಪಗಳನ್ನು ಮೂಲದ್ರಾವಿಡಕ್ಕೆ ಪುನರ್ರಚಿಸುತ್ತಾರೆ. *ಆಮ್/*ಅಮ್–ಗಳನ್ನು ಅಸಮ್ಮುಖ ರೂಪಗಳಿಗೂ (ಭಾಗ–3 ಮತ್ತು 4), *ನಾಮ್/*ನಮ್-ಗಳನ್ನು ಸಸಮ್ಮುಖ ರೂಪಗಳಿಗೂ ಪುನರ್ರಚಿಸುತ್ತಾರೆ. ಉತ್ತಮ ಪುರುಷ ಏಕವಚನಕ್ಕೆ ಕೊಟ್ಟಿರುವ ಕಾರಣಗಳನ್ನು ಇಲ್ಲಿಯೂ ಕೊಡುತ್ತಾರೆ. ಅಲ್ಲದೆ ಇವರು ಎರಡು ಬಹುವಚನ ರೂಪಗಳಿದ್ದುವೆಂಬುದನ್ನು ಅಷ್ಟು ಒಪ್ಪಿಕೊಳ್ಳದಿರುವುದರಿಂದ ಇಲ್ಲಿಗೇ ಕೈ ಬಿಡುವುದು ಉತ್ತಮ.

ಭ. ಕೃಷ್ಣಮೂರ್ತಿಯವರು *ಯಾಮ್/*ಯಮ್–ರೂಪಗಳನ್ನು ಅಸಮ್ಮುಖಕ್ಕೂ (ಭಾಗ-3 ಮತ್ತು 4). *ಞಾಮ್/*ಞಮ್–ರೂಪಗಳನ್ನು ಸಸಮ್ಮುಖಕ್ಕೂ ಪುನರ್ರಚಿಸುತ್ತಾರೆ. ಅಸಮ್ಮುಖ ರೂಪಗಳ ಪುನರ್ರಚನೆಗೆ ಉತ್ತಮ ಪುರುಷ ಏಕವಚನದ ಪುನರ್ರಚನೆಗೆ ಕೊಟ್ಟಿರುವ ಕಾರಣಗಳನ್ನೇ ಇಲ್ಲಿಯೂ ಕೊಡುತ್ತಾರೆ. ಆದರೆ ಇಲ್ಲಿ ಒಂದು ಏಕವಚನದ ವಿರುದ್ಧ ಎರಡು ರೂಪಗಳನ್ನು ಪುನರ್ರಚಿಸ

8 ಭಾಗ 5 ಸಂಖ್ಯೆ DED 3019ಕ್ಕೆ ಅನ್ವಯಿಸುತ್ತದೆ.

ಬೇಕು. ಆದುದರಿಂದ ಸಸಮುಚ್ಚಯ ಬಹುವಚನಕ್ಕೆ *ಞಾಮ್ ಞಮ್– ರೂಪಗಳನ್ನು ಪುನರ್ರಚಿಸುತ್ತಾರೆ. ಈ ರೂಪ ಸ್ವಲ್ಪ ವಿವಾದಾಸ್ಪದವಾದುದು. ಆದರೂ, ಇದಕ್ಕೆ ಪೂರಕವಾಗಿ ಕೊಡುವ ಕೆಲವು ಕಾರಣಗಳನ್ನು ನೋಡಬಹುದು.

1 ಞಾ ಕಾರ ಮತ್ತು ಯ ಕಾರಗಳು ಪದಾದಿಯಲ್ಲಿ ಅರ್ಥವ್ಯತ್ಯಾಸ ಮಾಡುವ ಸಾಮರ್ಥ್ಯವನ್ನು ಪಡೆದಿದ್ದುವು ಎಂಬುದಕ್ಕೆ ಪೂರ್ವ ತಮಿಳಿನಲ್ಲಿ ಬಳಕೆಯಲ್ಲಿದ್ದ ಈ ಪದಗಳನ್ನು ಉದಾಹರಣೆಗೆ ಕೊಡುತ್ತಾರೆ: ಯಾಯ್ 'ನನ್ನ ತಾಯಿ'. ಞಾಯ್ 'ನಿನ್ನ ತಾಯಿ'9. ಮೂಲದ್ರಾವಿಡದಲ್ಲಿ *ಯಾನ್ 'ನಾನು' *ಯಾಮ್ 'ನಾವು' (ಅಸಮುಚ್ಚಯ). ಮತ್ತು *ಞಾಮ್ 'ನಾವು' (ಸಸಮುಚ್ಚಯ) ಎಂಬ ರೂಪಗಳು ಇದ್ದುವು. ಇವುಗಳಲ್ಲಿ ಞಾಮ್‌ರೂಪ *ನ್–ಯಾಮ್ 'ನೀನು ಮತ್ತು ನಾವು' ಎಂಬ ರೂಪದಿಂದ ಪರಿವರ್ತನೆ ಹೊಂದಿದೆ ಎಂದು ಹೇಳಬಹುದು. ಇಲ್ಲಿಯ ನಕಾರ ಮೂಲ ದ್ರಾವಿಡದ *ನೀನ್ ನೀಮ್ 'ನೀನು' (ಏಕವಚನ ಮತ್ತು ಬಹುವಚನ) ಎಂಬುದರ ಬದ್ಧ ವರ್ಣಾಕಾರ ಭೇದ ರೂಪ. ಞಾಮ್ ಬಹುವಚನ ರೂಪದಿಂದ ಞಾನ್ ಏಕವಚನ ರೂಪ ಹುಟ್ಟಿಕೊಳ್ಳುತ್ತದೆ. ಈ ಞಾನ್ ರೂಪ *ಯಾನ್ ಮತ್ತು ಯಾಮ್ ರೂಪ ಸಾದೃಶದಿಂದ ಹುಟ್ಟಿದುದು.

ಈಗ ಪಿ. ಎಸ್. ಸುಬ್ರಹ್ಮಣ್ಯಂರವರ ಪುನರ್ರಚನೆಯ ವಿವರಣೆಯನ್ನು ನೋಡಬಹುದು.

1 ಮೇಲಿನ ಎಲ್ಲ ರೂಪಗಳೂ *ಯಾಮ್ ಇಂದ ಪರಿವರ್ತನೆ ಹೊಂದಿವೆ ಎಂದು ಹೇಳಲು. ಈ ರೂಪ ಹಳೆಯ ತಮಿಳಿನಲ್ಲಿ ಕಂಡು ಬರುವುದು ಒಂದು ಮುಖ್ಯ ಕಾರಣ. ಉತ್ತಮ ಪುರುಷ ಏಕ ವಚನದಲ್ಲಿ ಕಂಡು ಬಂದ ಬದಲಾವಣೆಗಳನ್ನು ಇಲ್ಲಿಯೂ ಕಾಣುತ್ತೇವೆ. ತಮಿಳು ಭಾಷೆಯ ರೂಪಗಳಲ್ಲಿ ಕಂಡುಬರುವ ಯಾಙ್ಕಳ್ ಮತ್ತು ನಾಙ್ಕಳ್ ರೂಪಗಳಲ್ಲಿಯ -ಕಳ್ ಪ್ರತ್ಯಯ ಬಹುವಚನವನ್ನು ಸೂಚಿಸುತ್ತದೆ. ಈ ಪ್ರತ್ಯಯ ಯಾಮ್ ಮತ್ತು ನಾಮ್ ಬಹುವಚನ ರೂಪಗಳಿಗೆ ಹತ್ತುವುದರಿಂದ, ಎರಡು ಬಹುವಚನ ಸೂಚಕ ರೂಪಗಳು ಕಂಡು ಬರುತ್ತವೆ. ಮಲಯಾಳಂ ಭಾಷೆಯ ಬಹುವಚನ ರೂಪ ತಮಿಳು ಭಾಷೆಯ ಬಹುವಚನ ರೂಪದಿಂದ ಮಾರ್ಪಟ್ಟ ರೂಪ.

ಮಲಯಾಳಂ ಭಾಷೆಯ ಉತ್ತಮ ಪುರುಷ ಏಕವಚನ ರೂಪವಾದ ಞಾನ್ ಬಹುವಚನ ರೂಪವಾದ ಞಾಙ್ಙಳ್ ರೂಪದ ಆಧಾರದಿಂದ ಮಾರ್ಪಟ್ಟ ರೂಪ. ಈ ಞಾನ್ ರೂಪ ಸಾಹಿತ್ಯದಲ್ಲಿ ಬಳಕೆಗೆ ಬರುವ ಮುನ್ನ, ಶಾಸನಗಳಲ್ಲಿ ನಾನ್ ರೂಪ ಬಳಕೆಯಲ್ಲಿತ್ತು ಎಂಬುದನ್ನು ಗಮನಿಸಬೇಕು. ಅಲ್ಲದೆ ಈ ರೂಪ ಮಧ್ಯ ತಮಿಳಿನಲ್ಲೂ ಬಳಕೆಯಲ್ಲಿತ್ತು.

ಮೂಲ ಗೋಂಡಿ ರೂಪವಾದ ಆಮ್‌ನಿಂದ ಅಮ್ಮಟ್ ರೂಪ ಸೃಷ್ಟಿಯಾಯಿತು. ಇಲ್ಲಿ ಆದಿ ದೀರ್ಘಸ್ವರ ಹ್ರಸ್ವವಾಗಲು ಕಾರಣ. ಈ ರೂಪಕ್ಕೆ ಬಹುವಚನ ರೂಪಗಳಾದ –ಅಟ್/–ಆಟ್ ಹತ್ತುವುದು ಎಂದು ಹೇಳಬಹುದು.

2 *ಯಾಮ್ ರೂಪದ ವಿಕೃತಿ ರೂಪವಾದ *ಯಮ್–ರೂಪ ದಕ್ಷಿಣ ದ್ರಾವಿಡ ಭಾಷೆಗಳಲ್ಲಿ ಮತ್ತು ಉತ್ತರ ದ್ರಾವಿಡ ಭಾಷೆಗಳಲ್ಲಿ ಎಮ್–ರೂಪವಾಗಿಯೂ, ಮಧ್ಯದ್ರಾವಿಡ ಭಾಷೆಗಳು ಅಮ್-ರೂಪವಾಗಿಯೂ ಪರಿವರ್ತನೆ ಹೊಂದಿವೆ. *ಎಮ್ ರೂಪಕ್ಕೆ –ಕಳ್ ಎಂಬ ಬಹುವಚನ ಪ್ರತ್ಯಯ ಹತ್ತುವುದರಿಂದ *ಎಙ್ಕಳ್- ಎಂಬ ರೂಪ ಸೃಷ್ಟಿಯಾಯಿತು: ಈ ರೂಪದಿಂದ ಇತ್ತೀಚಿನ ತಮಿಳು, ಹಳೆಯ ಮಲಯಾಳಂ, ಕೊಡಗು ಮತ್ತು ತುಳು ಭಾಷೆಗಳ ರೂಪಗಳು ಪರಿವರ್ತನೆ ಹೊಂದಿದುವು. ಇಲ್ಲಿ ಕೊಡಗು ಮತ್ತು ತಮಿಳು ಭಾಷೆಗಳು ರೂಪಾಂತ್ಯದಲ್ಲಿ ಬರುವ ಳಕಾರವನ್ನು ಕಳೆದುಕೊಂಡಿವೆ.

ಕೊಡಗು ಭಾಷೆಯ ನಙ್ಗ ರೂಪ ಮೂಲದಲ್ಲಿ ನಾಙ್ಕಳ್ ರೂಪಕ್ಕೆ ವಿಕೃತಿ ರೂಪವಾಗಿದ್ದು, ಅನಂತರ ಅವುಗಳಿಗಿರುವ ವಿರೋಧ ಕಳೆದು ಹೋಗಿರಬೇಕು. ಆದುದರಿಂದ ನಙ್ಗ ರೂಪ ಈಗ ಕೊಡಗು ಭಾಷೆಯ ಪ್ರಕೃತಿ ಮತ್ತು ವಿಕೃತಿ ಎರಡು ರೂಪಗಳಲ್ಲೂ ಬಳಕೆಯಲ್ಲಿದೆ. ಈ ರೀತಿಯ ಬದಲಾವಣೆಯನ್ನು ತುಳು

---

9 T. P. Meenakshisundaram: 'The Phoneme y in Ancient Tamil.' *Studies in Indian Linguistics* [Professor M. B. Emeneau ṣaṣṭpūrti Volume] Ed. Bh. Krishnamurti (1968)

ಮತ್ತು ತೋಡ ಭಾಷೆಗಳಲ್ಲೂ ಕಾಣುತ್ತೇವೆ. ಈ ಬದಲಾವಣೆಗೆ ಈ ಭಾಷೆಗಳ ವಿಕೃತಿ ರೂಪ ಎಲ್ಲ ವಿಭಕ್ತಿ (ನಾಮ ಪ್ರಕೃತಿಯನ್ನು ಬಿಟ್ಟು) ಪ್ರತ್ಯಯಗಳ ಜೊತೆ ಹೆಚ್ಚು ಬಳಕೆಯಲ್ಲಿದ್ದುದೇ ಕಾರಣ. ಆದುದರಿಂದ ಪ್ರಕೃತಿರೂಪ ಕೇವಲ ನಾಮರೂಪಕ್ಕೆ ಮಾತ್ರ ಮೀಸಲಾಯಿತು. ಮಲಯಾಳಂ ಭಾಷೆಯ ಅಸಮ್ಮುಖ ಬಹುವಚನದ ವಿಕೃತಿ ರೂಪವಾದ ಇಞ್‌ಗಳ್ ಪ್ರಕೃತಿ ರೂಪವಾದ ಇಙಞ್ ಗಳ್ ರೂಪ ಸಾದೃಶದಿಂದ ಸೃಷ್ಟಿಯಾದುದು. ಇಞ್‌ಗಳ್ ರೂಪ ಈಗಿನ ಆಡು ಭಾಷೆಯಲ್ಲಿ ಪ್ರಕೃತಿ ರೂಪವಾಗಿಯೂ ಬಳಕೆಯಲ್ಲಿದೆ.

3 ಮೂಲ ಮಧ್ಯ ದ್ರಾವಿಡ ಭಾಷೆಗಳ ಪ್ರಕೃತಿ ರೂಪವಾದ *ಅವ್–ಕೊಲಾಮಿ–ಪರ್ಜಿ ಭಾಷಾ ಗುಂಪುಗಳಲ್ಲಿ ಉಳಿದುಕೊಂಡಿದೆ. ಇತರ ಮಧ್ಯ ದ್ರಾವಿಡ ಭಾಷೆಗಳಲ್ಲಿ, ಅಂದರೆ ತೆಲುಗು–ಕುಇ ವರ್ಗಗಳಲ್ಲಿ ಈ ರೂಪ ಅಕಾರದಿಂದ ಪ್ರಾರಂಭವಾಗುವ ಚತುರ್ಥಿ ಮತ್ತು ಷಷ್ಠಿ ವಿಭಕ್ತಿ ಪ್ರತ್ಯಯಗಳ ಪೂರ್ವದಲ್ಲಿ ಸ್ಥಾನ ಪಲ್ಲಟದ ಕಾರಣದಿಂದಾಗಿ ಮಾ– ಆಗುತ್ತದೆ.

ತೆಲುಗಿನ ಮಾ–ಕುನ್, ಗೊಂಡಿಯ ಮಾ–ಕ್(ಊನ್), ಕೊಂಡ ಮಜ್‌ಗಿ, ಕುಇ ಮಾಜ್‌ಗಿ ಮತ್ತು ತಮಿಳಿನ ಎವ್–ಅಕ್ಕು ರೂಪಗಳನ್ನು ಮೂಲ ದ್ರಾವಿಡ ರೂಪವಾದ *ಯವ್-ಅಕ್ಕು ಎಂಬುದರಿಂದ ಪರಿವರ್ತನೆ ಹೊಂದಿವೆ ಎಂದು ಸಾಧಿಸಬಹುದು. ತೆಲುಗು ಭಾಷೆಯಲ್ಲಿ ಸ್ವರದಿಂದ ಮತ್ತು ವ್ಯಂಜನದಿಂದ ಪ್ರಾರಂಭವಾಗುವ ಎರಡು ರೂಪಗಳೂ ಬಳಕೆಯಲ್ಲಿವೆ. ಆದರೆ ಸ್ವರದಿಂದ ಪ್ರಾರಂಭವಾಗುವ ರೂಪ, ವ್ಯಂಜನದಿಂದ ಪ್ರಾರಂಭವಾಗುವ ರೂಪಕ್ಕಿಂತಲೂ ಹಳೆಯದು ಎಂಬುದಕ್ಕೆ ನನ್ನಯ್ಯನ 'ಮಹಾಭಾರತಮು' ಮತ್ತು ನನ್ನಿಚೂಡನ 'ಕುಮಾರ ಸಂಭವಮು' ಗ್ರಂಥಗಳು (ಕ್ರಿ.ಶ. 11ನೆಯ ಶತಮಾನ) ಸಹಾಯ ಮಾಡುತ್ತವೆ. ಈ ಗ್ರಂಥಗಳಲ್ಲಿ ಸ್ವರದಿಂದ ಪ್ರಾರಂಭವಾಗುವ ರೂಪ ಗಳು ಹೆಚ್ಚು ಬಳಕೆಯಲ್ಲಿವೆ. ಅಲ್ಲದೆ ಪ್ರಕೃತಿ ರೂಪದ ಆದಿ ವ್ಯಂಜನ ವಿಕೃತಿ ರೂಪದ ಆದಿ ವ್ಯಂಜನದ ಸಾದೃಶದಿಂದ ಸೃಷ್ಟಿಯಾದುದು. ಈ ರೀತಿ ಬೆಳವಣಿಗೆಯನ್ನು ಕೊಂಡ, ಕುಇ, ಕುವಿ ಮತ್ತು ಗೊಂಡಿಯ ಕೆಲವು ಉಪಭಾಷೆಗಳಲ್ಲೂ ಕಾಣುತ್ತೇವೆ.

ಕೊಂಡ ಭಾಷೆಯ ಮಾಪ್ ಮತ್ತು ಕುವಿ ಭಾಷೆಯ ಮಾಮ್‌ಬು ರೂಪಗಳ ಮೂಲ ರೂಪ *ಮಾಮ್‌ಪ್‌ಎಂದು ಊಹಿಸಬಹುದು. ಈ *ಮಾಮ್‌ಪ್ ರೂಪ ಇದಕ್ಕಿಂತ ಹಳೆಯ ರೂಪವಾದ *ಆಮ್ ಇಂದ ಪರಿವರ್ತನೆ ಹೊಂದಿರಬೇಕು. *ಆಮ್ ರೂಪ *ಮಾಮ್ ರೂಪವಾಗಿ ಮಾರ್ಪಡಲು ವಿಕೃತಿ ರೂಪದಲ್ಲಿಯ ಮಕಾರ ಕಾರಣ. ಈ ಅಂತ್ಯ ವ್ಯಂಜನ ಮಕಾರದ ಪರದಲ್ಲಿ ಪಕಾರ ಬರುವುದರಿಂದ *ಮಾಮ್‌ಪ್ ರೂಪ ಸೃಷ್ಟಿಯಾಗುತ್ತದೆ. ಕೊಂಡ ಭಾಷೆಯ ಇನ್ನೊಂದು ರೂಪದಲ್ಲಿ ಕಂಡು ಬರುವ ಮಾನ್ ರೂಪದ ಅಂತ್ಯ ವ್ಯಂಜನವಾದ ಪಕಾರದ ಸ್ಥಾನದಲ್ಲಿ ಬರುತ್ತದೆ. ಈ ಬೆಳವಣಿಗೆಗೆ ಉತ್ತಮ ಪುರುಷ ಏಕವಚನ ನಕಾರದ ಸಾದೃಶವೇ ಕಾರಣ.

ಗೊಂಡಿ ಭಾಷೆಯಲ್ಲಿಯ ಮರಾಟ್ (ಸಸಮ್ಮುಖ) ರೂಪ ಮಧ್ಯಮ ಪುರುಷ ಬಹುವಚನ ರೂಪವಾದ ಮಿರಾಟ್ ಎಂಬುದರ ಸಾದೃಶದಿಂದ ಸೃಷ್ಟಿಯಾದುದು.

ಮಡಿಯ ಗೊಂಡಿಯ ಮಾಟ್ ಮತ್ತು ಕೊಂಡ ಭಾಷೆಯ ಮಾಟ್(ಉ) ರೂಪಗಳು ವಿಕೃತಿ ರೂಪವಾದ ಮಾ ಎಂಬುದಕ್ಕೆ ಬಹುವಚನ ಪ್ರತ್ಯಯವಾದ ಟ ಎಂಬುದನ್ನು ಹತ್ತಿಸುವುದರಿಂದ ಸೃಷ್ಟಿ ಯಾದ ಹೊಸ ರೂಪಗಳು.

4 ಕುಇ ಮತ್ತು ಕುವಿ ಭಾಷೆಗಳು ಮೂಲ ಸಸಮ್ಮುಖ ಕಳೆದುಕೊಂಡು, ಅದರ ಜಾಗದಲ್ಲಿ ಹೊಸ ರೂಪಗಳನ್ನು ಸೃಷ್ಟಿಸಿಕೊಂಡವು. ಕುಇ ಭಾಷೆಯ ಆಜು ಮತ್ತು ಕುವಿ ಭಾಷೆಯ ಮಾರ್(ರ್)ಉ ರೂಪಗಳು ಮೂಲ ಕುಇ–ಕುವಿ ಭಾಷೆಗಳ ರೂಪವಾದ *ಆರ್‌ಇಂದ ಪರಿವರ್ತನೆ ಹೊಂದಿರಬಹುದು. ಮಧ್ಯಮ ಪುರುಷ ಬಹುವಚನ ರೂಪವಾದ ರೇಫ, ಉತ್ತಮಪುರುಷ ಏಕವಚನದ ಆಕಾರದ ಪರದಲ್ಲಿ ಬರುವುದರಿಂದ ಈ *ಆರ್ ರೂಪ ಸೃಷ್ಟಿಯಾಗಿರಬಹುದು. ಕುಇ ಭಾಷೆಯಲ್ಲಿ *ರ್ ಎಂಬುದು ಜ ಕಾರವಾಗುವುದನ್ನು ಬೇರೆಡೆಯಲ್ಲೂ ಕಾಣಬಹುದು. ಕುವಿ ಭಾಷೆಯ ಆದಿ ವ್ಯಂಜನ ಮಕಾರ ಸಸಮ್ಮುಖ ರೂಪದ ಪ್ರಭಾವದಿಂದ ಉಂಟಾಗಿದೆ. ಈ ಎರಡು ಭಾಷೆಗಳಲ್ಲಿ ಕಂಡು ಬರುವ ಸಸಮ್ಮುಖ ರೂಪಗಳ ಸೃಷ್ಟಿ, ಇವುಗಳಿಗಿರುವ ಹತ್ತಿರದ ಸಂಬಂಧವನ್ನು ಸೂಚಿಸುತ್ತದೆ.

ಈಗ ಸಸಮ್ಮುಖಿ ಬಹುವಚನ ರೂಪಗಳ ಪುನರ್ರಚನೆಗೆ ಪಿ. ಎಸ್. ಎಸ್. ಅವರು ಕೊಡುವ ಕಾರಣಗಳನ್ನು ನೋಡೋಣ:

1 ಅವರು ಸಸಮ್ಮುಖಿ ಬಹುವಚನ ರೂಪಕ್ಕೆ *ನಾಮ್ ಮತ್ತು *ನಮ್- ರೂಪಗಳನ್ನು ಪುನರ್ರಚಿಸುತ್ತಾರೆ. ಕೊಲಾಮಿ ಮತ್ತು ನಾಯ್ಕಿ ಭಾಷೆಗಳನ್ನು ಬಿಟ್ಟರೆ ಬೇರೆಲ್ಲ ಭಾಷೆಗಳ ರೂಪಗಳು *ನಾಮ್, *ನಮ್ ರೂಪಗಳಿಂದ ಪರಿವರ್ತನೆ ಹೊಂದಿವೆ ಎಂದು ಸಾಧಿಸಬಹುದು. ಹಳಗನ್ನಡದಲ್ಲಿ ಆಮ್ ಎಂಬ ರೂಪ ಅಸಮ್ಮುಖಿ ಬಹುವಚನವಾಗಿಯೂ. ನಾವು ಎಂಬುದು ಸಸಮ್ಮುಖಿ ಬಹುವಚನವಾಗಿಯೂ ಬಳಕೆಯಲ್ಲಿದ್ದುವು. ಆದರೆ ಆಧುನಿಕ ಕನ್ನಡದಲ್ಲಿ ನಾವು ಎಂಬ ರೂಪ ಮಾತ್ರ ಬಳಕೆಯಲ್ಲಿ ಉಳಿಯಿತು. ಕನ್ನಡದಲ್ಲಿ *ಮಕಾರ ವಕಾರವಾಗುವ ಬದಲಾವಣೆಯನ್ನು ನೋಡಬಹುದು.

ಯಾಮ್ ರೂಪ ಮಧ್ಯ ತಮಿಳಿನ ಕಾಲದಲ್ಲಿ ಬಳಕೆಯಲ್ಲಿಲ್ಲದ ಕಾರಣ, ಅದರ ಸ್ಥಾನವನ್ನು ನಾಙ್ಕಳ್ ರೂಪ ಆಕ್ರಮಿಸಿಕೊಂಡಿತು. ಕಳ್ ಬಹುವಚನ ಪ್ರತ್ಯಯ ಸಸಮ್ಮುಖಿ ಬಹುವಚನ ನಾಮ್ ರೂಪಕ್ಕೆ ಹತ್ತುವುದರಿಂದ ನಾಙ್ಕಳ್ ರೂಪ ಸೃಷ್ಟಿಯಾಯಿತು.

2 ಕೊಲಾಮಿ-ನಾಯ್ಕಿ ಭಾಷೆಗಳ ರೂಪಗಳಾದ ನೇಸ್ ಮತ್ತು ನೇಮುಗಳು ಮೂಲದ್ರಾವಿಡ* *ನಾಮ್ ರೂಪದಿಂದ ಪರಿವರ್ತನೆ ಹೊಂದಿವೆ ಎಂದು ಹೇಳುವುದು ಕಷ್ಟವಾಗುತ್ತದೆ. ಏಕೆಂದರೆ, ಏಕಾರ *ಆಕಾರದಿಂದ ಪರಿವರ್ತಿತವಾಯಿತು ಎಂದು ಹೇಳಲು ಬೇರೆಡೆಯಲ್ಲಿ ಈ ರೀತಿಯ ಬದಲಾವಣೆ ನಡೆಯುವುದು ಕಂಡು ಬರುವುದಿಲ್ಲ. ಅಲ್ಲದೆ ಪ್ರಕೃತಿ ಮತ್ತು ವಿಕೃತಿಯಲ್ಲಿ ಒಂದೇ ರೂಪ ಬಳಕೆಯಲ್ಲಿರುವುದು ದ್ರಾವಿಡ ಭಾಷೆಗಳ ಪ್ರಕೃತಿ ಮತ್ತು ವಿಕೃತಿ ರೂಪದಲ್ಲಾಗುವ ಬದಲಾವಣೆಯ ನಿಯಮಕ್ಕೆ ವಿರುದ್ಧವಾಗಿದೆ. (ಪ್ರಕೃತಿ ರೂಪದ ಆದಿಸ್ವರ ವಿಕೃತಿಯಲ್ಲಿ ಹ್ರಸ್ವವಾಗುವ ನಿಯಮ). ಆದುದರಿಂದ ತೆಲುಗು ಭಾಷೆಯ ಏಮು ಮತ್ತು ವೇಮು ರೂಪಗಳು ಮೂಲ ಕೊಲಾಮಿ-ನಾಯ್ಕಿ ಭಾಷೆಯ *ನಾಮ್ ರೂಪವನ್ನು ನೇಮ್ ರೂಪವಾಗಿ ಪರಿವರ್ತಿಸಿರಬಹುದು. ಅನಂತರ ಅಂತ್ಯ ವ್ಯಂಜನವಾದ ಮಕಾರದ ಸ್ಥಾನವನ್ನು ಬಹುವಚನ ಸೂಚಕ ಸಕಾರ ಆಕ್ರಮಿಸಿಕೊಳ್ಳುವುದರಿಂದ ನೇಸ್ ರೂಪ ಸೃಷ್ಟಿಯಾಗಿದೆ. ಈ ರೀತಿಯ ಬಹುವಚನ ಪ್ರತ್ಯಯಗಳನ್ನು ಗೊಂಡಿ ಭಾಷೆಯಲ್ಲಿಯೂ ಕಾಣುತ್ತೇವೆ.

3 ಪ್ರಕೃತಿಯ ದೀರ್ಘಸ್ವರ ವಿಕೃತಿಯಲ್ಲಿ ಹ್ರಸ್ವವಾಗುವ ಬದಲಾವಣೆಯನ್ನು ಈ ಹಿಂದೆಯೇ ನೋಡಿದ್ದೇವೆ. ಆದರೆ ಬ್ರಾಹೂಈ ಈ ನಿಯಮಕ್ಕೆ ಹೊರತಾಗಿದೆ. ಮೂಲದಲ್ಲಿ ಬ್ರಾಹೂಈ ಭಾಷೆ *ನಮ್ ರೂಪವನ್ನು ವಿಕೃತಿಯಲ್ಲಿ ಹೊಂದಿದ್ದು. ಅನಂತರ ಆ ರೂಪವನ್ನು ಪ್ರಕೃತಿಯಲ್ಲಿ ಬಳಸಿಕೊಂಡಿತು. ಇಲ್ಲಿ. ಅಂತ್ಯ ವ್ಯಂಜನ ಮಕಾರವಾಗಿರಬೇಕಾಗಿದ್ದುದು ನಕಾರವಾಗಿದೆ. ಇದಕ್ಕೆ ಕಾರಣ ಉತ್ತಮ ಪುರುಷ ಏಕವಚನ ವಿಕೃತಿ ರೂಪದಲ್ಲಿಯ ಅಂತ್ಯ ವ್ಯಂಜನ ನಕಾರದ ಪ್ರಭಾವ.

4 ತೆಲುಗು ಭಾಷೆಯ ಬೇರೆ ವಿಕೃತಿ ರೂಪಗಳಲ್ಲಿ ನಡೆಯುವ ಸ್ಥಾನ ಪಲ್ಲಟ ಇಲ್ಲಿಯೂ ನಡೆಯುವುದರಿಂದ *ನಮ್-ಅ ರೂಪ ಮನ- ಆಗುತ್ತದೆ. ಮನ- ರೂಪದ ಮೂಲ ರೂಪ *ನಾಮ್ ಈಗ ತೆಲುಗಿನಲ್ಲಿ ಬಳಕೆಯಲ್ಲಿರುವ ಮನಮು ಎಂಬ ರೂಪ ಮನ ರೂಪಕ್ಕೆ ಸರ್ವನಾಮದ ಬಹುವಚನ ಪ್ರತ್ಯಯವಾದ ಮಕಾರ ಹತ್ತುವುದರಿಂದ ಸೃಷ್ಟಿಯಾಗಿದೆ. ಇಲ್ಲಿ ಬರುವ ಅಂತ್ಯ ಸ್ವರವಾದ ಉಕಾರ ತೆಲುಗು ಭಾಷೆಯ ರಚನೆಯ ನಿಯಮಕ್ಕೆ ಅನುಗುಣವಾಗಿದೆ. ತುಳು ಭಾಷೆಯ ನಮ ರೂಪ ಮೂಲದಲ್ಲಿ ವಿಕೃತಿ ರೂಪವಾಗಿ ಬಳಕೆಯಲ್ಲಿದ್ದಿರಬಹುದು.

5 ಕೋತ ಮತ್ತು ತೋಡ ಭಾಷೆಗಳ ಆದಿಯಲ್ಲಿರಬೇಕಾದ ನಕಾರ ನಶಿಸಿಹೋಗಿದೆ. ಇದು ಈ ಭಾಷೆಗಳ ಮೂಲ ರೂಪದಲ್ಲಿಯೇ ಆದ ಬದಲಾವಣೆ ಇರಬೇಕು. ಕೋತ ಭಾಷೆಯ ಆಮ್* ನಾಮ್ ರೂಪದಿಂದ ಪರಿವರ್ತನೆ ಹೊಂದಿದೆ. ಇದರ ವಿಕೃತಿ ರೂಪ ಅಮ್–*ನಮ್ ರೂಪದಿಂದ ಪರಿವರ್ತನೆ ಗೊಂಡಿದೆ. ತೋಡ ಭಾಷೆಯ ಒಮ್ < ಮೂಲಕೋತ–ತೋಡ ಅಮ್ < ಮೂಲದ್ರಾವಿಡ*ನಮ್ —ಹೀಗೆ ಪರಿವರ್ತನೆ ಹೊಂದಿದೆ. ತೋಡ ಭಾಷೆಯ ವಿಕೃತಿ ರೂಪ ಪ್ರಕೃತಿ ರೂಪದ ಸ್ಥಾನವನ್ನು ಕ್ರಮೇಣ ಪಡೆಯಿತು.

6 ಈಗ ಉತ್ತಮ ಪುರುಷ ಏಕವಚನ ರೂಪದಲ್ಲಿ ಬರುವ ಆದಿವ್ಯಂಜನ ನಕಾರದ ಐತಿಹಾಸಿಕ ಬೆಳವಣಿಗೆಯನ್ನು ನೋಡೋಣ. ಈ ವ್ಯಂಜನ ತಮಿಳು. ಕನ್ನಡ ಮತ್ತು ಕೊಡಗು ಭಾಷೆಗಳಲ್ಲಿ ಕಂಡು

ಬರುತ್ತದೆ. ಸಾಹಿತ್ಯದ ಆಧಾರದಿಂದ ಹೇಳುವುದಾದರೆ ತಮಿಳಿನ ಯಾನ್ ಮತ್ತು ಕನ್ನಡದ ಆನ್ ರೂಪಗಳು ತಮಿಳಿನ ನಾನ್ ಮತ್ತು ಕನ್ನಡದ ನಾನು ರೂಪಗಳಿಗಿಂತ ಹಳೆಯ ರೂಪಗಳು ಎಂಬುದು ತಿಳಿಯುತ್ತದೆ. ಆದ್ದರಿಂದ ಈ ರೂಪಗಳಲ್ಲಿ ಬರುವ ಆದಿವ್ಯಂಜನ, ಬಹುವಚನ ರೂಪದಲ್ಲಿಯ ಆದಿ ವ್ಯಂಜನದ ಸಾದೃಶದಿಂದ ಸೃಷ್ಟಿಯಾದುದು ಎಂದು ಹೇಳಬಹುದು. (ಈ ಬದಲಾವಣೆಯನ್ನು ಕೊಡಗು ಭಾಷೆಯಲ್ಲಿಯೂ ನೋಡಬಹುದು).
ಹಳೆಯ ತಮಿಳಿನ ಅಸಮ್ಮುಖ ರೂಪವಾದ ಯಾಮ್ ಕಾಲಕ್ರಮೇಣ ನಾಜ್‌ಕಳ್ ಆಗಿ ಪರಿವರ್ತನೆ ಹೊಂದುವುದರಿಂದ ಮೂಲರೂಪ ನಶಿಸಿ ಹೋಗುತ್ತದೆ. ಇದೇ ರೀತಿ ಕನ್ನಡದ ಹಳೆಯ ರೂಪವಾದ ಆಮ್ ಎಂಬುದರ ಸ್ಥಾನವನ್ನು ನಾವು ಎಂಬ ರೂಪ ಆಕ್ರಮಿಸಿಕೊಳ್ಳುತ್ತದೆ.
ಬಹುವಚನ ರೂಪಗಳ ಆದಿಯಲ್ಲಿ ಬರುವ ನಕಾರ ಕಾಲಕ್ರಮೇಣ ಬಳಕೆಯಲ್ಲಿ ಭದ್ರವಾಗಿ ಉಳಿಯಿತು. ಆದಕಾರಣ ಉತ್ತಮ ಪುರುಷ ಏಕವಚನದ ಸ್ವರಾದಿ ರೂಪಗಳಲ್ಲೂ ಈ ನಕಾರ ಬಳಕೆಗೆ ಬಂತು.
ಮಲಯಾಳಂ ಭಾಷೆಯಲ್ಲಿಯ ಞಾನ್ ರೂಪವೂ ಬಹುವಚನದ ಸಾದೃಶ್ಯದಿಂದ ಸೃಷ್ಟಿಯಾದುದು ಎಂಬುದನ್ನು ಈ ಹಿಂದೆಯೇ ನೋಡಿದ್ದೇವೆ.

ಉಪಸಂಹಾರ

ಮೂವರು ವಿದ್ವಾಂಸರೂ ಮೂಲದ್ರಾವಿಡದ ಉತ್ತಮ ಪುರುಷದ ಸರ್ವನಾಮದ ಪುನರ್ರಚನೆಯನ್ನು ಮಾಡಿರುವ ರೀತಿ ಹೀಗಿದೆ:

		ಏಕವಚನ	ಬಹುವಚನ (ಅಸಮ್ಮುಖ ಮತ್ತು ಸಸಮ್ಮುಖ)
1	ಕಮಿಲ್ ಜ್ವಲಬಿಲ್	*ಆನ್/*ಅನ್–	*ಆಮ್/*ಅಮ್– *ನಾಮ್/*ನಮ್–
2	ಭ. ಕೃಷ್ಣಮೂರ್ತಿ	*ಯಾನ್/*ಯನ್–	*ಯಾಮ್/*ಯಮ್– ಞಾಮ್/*ಞಮ್–
3	ಪಿ. ಎಸ್. ಸುಬ್ರಹ್ಮಣ್ಯಂ	*ಯಾನ್/*ಯನ್	*ಯಾಮ್/*ಯಮ್– *ನಾಮ್/*ನಮ್–

(ಅ) ಉತ್ತಮ ಪುರುಷ ಏಕವಚನ ಮತ್ತು ಅಸಮ್ಮುಖ ಬಹುವಚನ ರೂಪಗಳ ಆದಿವ್ಯಂಜನಯಕಾರವೆಂದು ಪರಿಗಣಿಸುವುದರಿಂದ. ಆ ವ್ಯಂಜನದ ಪರದಲ್ಲಿ ಬರುವ ಸ್ವರಗಳ ಬೆಳವಣಿಗೆಯನ್ನು ಸಕಾರಣವಾಗಿ ವಿವರಿಸಬಹುದು.

(ಆ) ಭ. ಕೃಷ್ಣಮೂರ್ತಿಯವರು ಸಸಮ್ಮುಖ ಬಹುವಚನ ರೂಪಕ್ಕೆ ಪುನರ್ರಚಿಸುವ *ಞಾಮ್/*ಞಮ್–ರೂಪಗಳಿಗೆ ಕೊಟ್ಟಿರುವ ಕಾರಣಗಳು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ. ಆದಕಾರಣ ಪಿ. ಎಸ್. ಸುಬ್ರಹ್ಮಣ್ಯಂರವರು ಪುನರ್ರಚಿಸಿರುವ *ನಾಮ್ ಮತ್ತು *ನಮ್– ರೂಪಗಳನ್ನು ಇಟ್ಟುಕೊಳ್ಳಬಹುದು.

(ಇ) ಉತ್ತಮ ಪುರುಷ ಏಕವಚನದಲ್ಲಿ (ಭಾಗ–2) ಬರುವ ಆದಿ ವ್ಯಂಜನವಾದ ನಕಾರ ತಮಿಳು, ಕನ್ನಡ ಮತ್ತು ಕೊಡಗು ಭಾಷೆಗಳಲ್ಲಲ್ಲದೆ ತೆಲುಗು, ಗೊಂಡಿ. ಕೊಂಡ. ಕುಇ ಮತ್ತು ಕುವಿ ಭಾಷೆಗಳ ಪ್ರಕೃತಿ ರೂಪಗಳಲ್ಲೂ ಕಂಡು ಬರುತ್ತದೆ. ಎಂಬುದನ್ನು ಪಿ. ಎಸ್. ಸುಬ್ರಹ್ಮಣ್ಯಂರವರು ಚರ್ಚಿಸಬಹುದಾಗಿತ್ತು.

(ಈ) ಮೇಲಿನ ರೂಪಗಳಲ್ಲಿ ಕಂಡುಬರುವ ಆದಿ ವ್ಯಂಜನಕ್ಕಿಂತ ಅಂತ್ಯದಲ್ಲಿ ಬರುವ ವ್ಯಂಜನಗಳಾದ ನಕಾರ (ಏಕವಚನ ಸೂಚಿ) ಮತ್ತು ಮಕಾರ (ಬಹುವಚನ ಸೂಚಿ)ಗಳು ಮುಖ್ಯ ಎಂಬುದನ್ನು ಗಮನಿಸಬೇಕು. ಈ ಮಕಾರವಲ್ಲದೆ ಇನ್ನೂ ಕೆಲವು ಬಹುವಚನಸೂಚಕ ಪ್ರತ್ಯಯಗಳು ಗೊಂಡಿ ಕುಇ. ಕುವಿ ಮತ್ತು ಕೊಲಾಮಿ–ಪರ್ಜಿ ಭಾಷೆಗಳಲ್ಲಿ ಕಂಡು ಬರುತ್ತವೆ ಎಂಬುದನ್ನು ನೋಡಿದ್ದೇವೆ.

III

ಈಗ ಮಧ್ಯಮ ಪುರುಷ ಏಕವಚನ ಮತ್ತು ಬಹುವಚನ ರೂಪಗಳನ್ನು ಅವುಗಳ ಧ್ವನಿ ಸಾಮ್ಯದ ಆಧಾರದ ಮೇಲೆ ವಿಂಗಡಿಸಿಕೊಂಡು. ಅವುಗಳ ಪುನರ‍್ರಚನೆಗೆ ಪ್ರಯತ್ನಿಸೋಣ.

ಮಧ್ಯಮ ಪುರುಷದ ರೂಪಗಳನ್ನು ಮುಖ್ಯವಾಗಿ ಎರಡು ಭಾಗಗಳಾಗಿ ವಿಂಗಡಿಸಿಕೊಳ್ಳಬಹುದು. (ಎರಡನೆಯ ಭಾಗವನ್ನು ಮತ್ತೆ ಎರಡು ಉಪಭಾಗಗಳಾಗಿ ಒಡೆಯಬಹುದು). ಇಲ್ಲಿ ಒಂದು ಏಕ ವಚನದ ವಿರುದ್ಧ ಒಂದೇ ಬಹುವಚನ ರೂಪ ಬರುವುದರಿಂದ. ಉತ್ತಮ ಪುರುಷದ ರೂಪಗಳಷ್ಟು ಹೆಚ್ಚು ವಿವಾದಕ್ಕೆ ಅವಕಾಶ ಕೊಡುವುದಿಲ್ಲ.

ಭಾಗ 1

ಮಧ್ಯಮ ಪುರುಷ ಏಕವಚನ10

ಪ್ರಕೃತಿ		ವಿಕೃತಿ
ತಮಿಳು	ನೀ	ನಿನ್ (ನ್)–
ಮಲಯಾಳಂ	ನೀ	ನಿನ್ (ನ್)–
ಕೋತ	ನೀ	ನಿನ್–
ತೋಡ	ನೀ	ನಿನ್–
ಕೊಡಗು	ನೀನಿ, ನೀ11	ನಿನ್–, ನೀ–
ತುಳು	ಈ	ನಿನ್–, ಇನ್–
ತೆಲುಗು	ನೀವು, ಈವು	ನಿನ್–, ನೀ–
ಕೊಲಾಮಿ	ನೀವು	ಇನ್–
ನಾಯ್ಕಿ	ನೀವ್, ಈವ್	ಇನ್–
ಪರ್ಜಿ	ಈನ್	ಇನ್–
ಒಲ್ಲಾರಿ	ಈನ್	ಇನ್–
ಗದ್ಬ	ಈನ್	ಇನ್ (ನ್)–
ಗೊಂಡಿ	—	ನೀ–
ಕುಇ	ಈನು, ನೀನು	ನೀ–, ನಿನ್–, ನೀ–
ಕುವಿ	ನೀನೂ, ನೀನು	ನೀ–
ಕೊಂಡ	—	ನಿಜ್–, ನೀ–
ಪೆಂಗೊ	ಈನ್ (ಎಙ)	ನಿಙ್ಗ್–, ನೀ–
ಕುರುಖ್	ನೀನ್	ನಿಙ್ಗ್–
ಮಾಲ್ತೊ	ನೀನ್	ನಿಙ್ಗ್–
ಬ್ರಾಹೂಇ	ನೀ	ನೇ–, ನ್–

ಭಾಗ–2 ಅ

ಮಧ್ಯಮ ಪುರುಷ ಬಹುವಚನ12

	ಪ್ರಕೃತಿ	ವಿಕೃತಿ
ತಮಿಳು	ನೀಮ್, ನೀಙ್–ಕಳ್, ನೀರ್, ನೀಯಿರ್	—
ಮಲಯಾಳಂ	ನಿಙ್–ಙಗ್	ನಿಙ್–ಙಳ್–
ಕೋತ	ನೀಮ್	ನಿಮ್–

10 ಭಾಗ–1 ನೋಡಿ—DED ಸಂಖ್ಯೆ 3051

11 ನೋಡಿ—ಅಡಿ ಟಿಪ್ಪಣಿ 2

12 ನೋಡಿ—DED ಸಂಖ್ಯೆ 3055

ತೋಡ	ನೀಮ್	ನಿಮ್–
ಕನ್ನಡ	ನೀಮ್ (ನೀವು) ನೀಂಗಳ್	ನಿಮ್(ಮ್)–
ಕೊಡಗು	ನಿಜ್–ಗ	ನಿಜ್–ಗ–
ತುಳು	(ಉ. ಭಾ.) ನೀ–ಕಳ13 ಇನ್–ಕುಳು, ಈರು	ನೀ–ಕುಳೆ–, ಇನ್– ಕುಳೆ–, ಈರೆ–
ತೆಲುಗು	ಈರು	—
ಗೊಂಡಿ	(ಉ. ಭಾ.) ನಿಮ್–ಅಟ್, ನಿಮ್–ಎಟ್, ಇಮ್–ಎಟ್ ಇಮ್ಮ್–ಅಟ್, ಇಮ್ಮ್–ಆಟ್	
ಕೊಲಾಮಿ	ನೀರ್	ಇಮ್–
ನಾಯ್ಕಿ	ನೀರ್	ಇಮ್–
ಪರ್ಜಿ	ಈಮ್	ಇಮ್–
ಒಲ್ಲಾರಿ	ಈಮ್	ಇಮ್–
ಗದ್ಬ	ಈಮ್	ಇಮ್ಮ್–
ಕುಇ	ನೀಮ್	ನಿಮ್–
ಪೆಂಗೊ	ಈಪ್ (ಎಜ್)	—
ಕುರುಖ್	ನೀಮ್	ನಿಮ್–
ಮಾಲ್ಟೊ	ನೀಮ್	ನಿಮ್–

ಭಾಗ–2ಆ

	ಪ್ರಕೃತಿ	ವಿಕೃತಿ
ಹಳೆಯ (ತಮಿಳು)	—	ನುಮ್–(ಆಧುನಿಕ) ಉಮ್–, ಉಜ್–ಕಳ್– ನುಮ್–
ಬ್ರಾಹೂಇ	ನುಮ್	ನುಮ್–

ಭಾಗ2 ಇ.

ಮಧ್ಯಮ ಪುರುಷ ಏಕವಚನ14

ಗೊಂಡಿ	(ಉ. ಭಾ.) ನಿಮಾ, ನಿಮ್ (ಮ್)ಅ, ನಿಮ್–ಅಟ್, ನಿಮ್–ಎಟ್; ಇಮ, ಇಮ್ಮಾ, ಇಮ್ಮ್–ಅಟ್, ಇಮ್–ಅಟ್, ಇಮ್–ಎಟ್	ನೀ–

ಭಾಗ–3

ಮಧ್ಯಮ ಪುರುಷ ಬಹುವಚನ

	ಪ್ರಕೃತಿ	ವಿಕೃತಿ
ತೆಲುಗು	ಮೀರು	ಮಿಮ್ಮ್–, ಮೀ–
ಗೊಂಡಿ,	ಮಿಮ್–ಎಟ್, ಮೀಟ್	ಮೀ–

---

13 ನೋಡಿ—ಅಡಿ ಟಿಪ್ಪಣಿ 2

14 ನೋಡಿ—DED ಸಂಖ್ಯೆ 3051

ಕುಇ	ಮೀಮು	ಮೀ–
ಕುವಿ	ಮೀಮ್‌ಬೂ, ಮೀಮ್‌ಬು	ಮೀ–
ಕೊಂಡ	ಮೀರು	ಮಿನ್,–ಮೀ–
ಪೆಂಗೊ	—	ಮಿಜ್‌ಗ್–, ಮೀ–

ಮುಂದೆ ಕಾಣುವ ಮೂವರು ವಿದ್ವಾಂಸರ ಪುನರ್ರಚನೆ ಈ ರೀತಿ ಇದೆ:

		ಏಕವಚನ	ಬಹುವಚನ
1	ಕಮಿಲ್ ಜ್ವಲಬಿಲ್	*ಈನ್/*ಇನ್-	*ಈಮ್/*ಇಮ್–
2	ಭ. ಕೃಷ್ಣಮೂರ್ತಿ	*ನೀನ್ *ನಿನ್–	*ನೀಮ್/*ನಿಮ್–
3	ಪಿ. ಎಸ್. ಸುಬ್ರಹ್ಮಣ್ಯಂ	*ನೀ(ನ್), *ನಿನ್–	*ನೀಮ್/*ನಿಮ್–

ಜ್ವಲಬಿಲ್‌ರವರು ಸ್ವರಾದಿಗಳನ್ನು ಮೂಲದ್ರಾವಿಡಕ್ಕೆ ಪುನರ್ರಚಿಸುತ್ತಾರೆ. ಅವರು ಕೊಡುವ ಕಾರಣಗಳು ಈ ರೀತಿ ಇವೆ:

1 ಈ ರೂಪಗಳಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ, ಅಂತ್ಯವ್ಯಂಜನ. ಇಲ್ಲಿಯೂ ನಕಾರ ಏಕವಚನವನ್ನೂ ಮಕಾರ ಬಹುವಚನವನ್ನೂ ಸೂಚಿಸುತ್ತವೆ.

2 ಅಲ್ಲದೆ, ಮೇಲಿನ ರೂಪಗಳಲ್ಲಿ ಕಂಡುಬರುವ (ಕೆಲವು ಭಾಷೆಗಳಲ್ಲಿ) ಆದಿ ನಕಾರ ಇತ್ತೀಚೆಗೆ ಸೃಷ್ಟಿಯಾದುದು. ಆದುದರಿಂದ ಸ್ವರಾದಿ ರೂಪವನ್ನು ಪುನರ್ರಚಿಸುವುದು ಹೆಚ್ಚು ಸೂಕ್ತ ಎಂದು ತಿಳಿಸುತ್ತಾರೆ.

ಭ. ಕೃಷ್ಣಮೂರ್ತಿಯವರು ಮತ್ತು ಪಿ. ಎಸ್. ಸುಬ್ರಹ್ಮಣ್ಯಂರವರು ನಕಾರಾದಿ ರೂಪಗಳನ್ನು ಮೂಲದ್ರಾವಿಡಕ್ಕೆ ಪುನರ್ರಚಿಸುತ್ತಾರೆ. ಈ ಇಬ್ಬರು ವಿದ್ವಾಂಸರು ಕೊಡುವ ಕಾರಣಗಳನ್ನು ಕೆಳಗೆ ವಿವರಿಸಲಾಗಿದೆ. ಇವರಿಬ್ಬರ ವಿವರಣೆಯಲ್ಲಿ ಕಂಡುಬರುವ ಭಿನ್ನಾಭಿಪ್ರಾಯಗಳ ಕೆಲವಂಶಗಳನ್ನು ಮಾತ್ರ ಚರ್ಚಿಸಲಾಗಿದೆ.

ಈಗ *ನೀನ್/*ನಿನ್–ರೂಪಗಳ ಪುನರ್ರಚನೆಗೆ ಇವರು ಕೊಡುವ ಕೆಲವು ಮುಖ್ಯ ಕಾರಣಗಳನ್ನು ಮಾತ್ರ ನೋಡೋಣ.

1 ತಮಿಳು, ಮಲಯಾಳಂ, ಕೋತ, ತೋಡ, ಕೊಡಗು (ಐಚ್ಛಿಕವಾಗಿ), ತುಳು, ತೆಲುಗು ಮತ್ತು ಬ್ರಾಹೂಇ ಭಾಷೆಗಳು ಅಂತ್ಯ ವ್ಯಂಜನ ನಕಾರವನ್ನು ಪ್ರಕೃತಿ ರೂಪದಲ್ಲಿ ಕಳೆದುಕೊಂಡಿವೆ. ಆದರೆ ವಿಕೃತಿ ರೂಪಗಳಲ್ಲಿ ಈ ವ್ಯಂಜನವನ್ನು ಉಳಿಸಿಕೊಂಡಿವೆ (ಬ್ರಾಹೂಇಯನ್ನು ಬಿಟ್ಟು).

ಅಂತ್ಯವ್ಯಂಜನವಾದ ನಕಾರ ಮೂಲದ್ರಾವಿಡ ರೂಪಗಳಲ್ಲಿ ಬಳಕೆಯಲ್ಲಿದ್ದು, ಅನಂತರ ಈ ಭಾಷೆಗಳು ಅದನ್ನು ಕಾಲಕ್ರಮೇಣ ಕಳೆದುಕೊಂಡಿರಬಹುದು. ಏಕೆಂದರೆ, ಈ ನಕಾರ ಮುಖ್ಯವಾಗಿ ಏಕವಚನವನ್ನು ಪ್ರತಿನಿಧಿಸುತ್ತದೆ. ತುಳು ಮತ್ತು ಮಧ್ಯದ್ರಾವಿಡ ಭಾಷೆಗಳಾದ ಕೊಲಾಮಿ, ನಾಯ್ಕಿ, ಪರ್ಜಿ, ಒಲ್ಲಾರಿ ಮತ್ತು ಗದ್ಬ ಭಾಷೆಗಳಲ್ಲಿ ಆದಿ ನಕಾರ ಪ್ರಕೃತಿ ಮತ್ತು ವಿಕೃತಿ ರೂಪಗಳೆರಡರಲ್ಲೂ ಕಳೆದು ಹೋಗಿದೆ. ತುಳು ಭಾಷೆಯು ಈ ರೂಪ *ನೀನ್ ರೂಪದ ಆದಿ ಮತ್ತು ಅಂತ್ಯ ವ್ಯಂಜನಗಳೆರಡನ್ನೂ ಕಳೆದುಕೊಂಡಿದೆ.

ಮೂಲದ್ರಾವಿಡ *ನೀನ್ ರೂಪ ಮೂಲ ತೆಲುಗಿನಲ್ಲಿ ಈ ರೂಪವಾಗಿ ಪರಿವರ್ತನೆ ಹೊಂದುತ್ತದೆ (ಈ ರೀತಿಯ ಬದಲಾವಣೆಯನ್ನು ತುಳುವಿನಲ್ಲೂ ನೋಡಬಹುದು). ಅನಂತರ ಇತ್ತೀಚಿನ ತೆಲುಗಿನಲ್ಲಿ ಈ ರೂಪ ಈವು ಆಯಿತು. ಇದಕ್ಕೆ ಕಾರಣ ತೆಲುಗು ಭಾಷೆಯಲ್ಲಿ ದೀರ್ಘ ಸ್ವರಾಂತ್ಯ ಏಕಾಕ್ಷರಿ ಶಬ್ದಗಳು ಬಳಕೆಯಲ್ಲಿಲ್ಲದಿರುವುದು.

ಕೊಲಾಮಿ–ನಾಯ್ಕಿ ಭಾಷೆಗಳ ರೂಪದ ಅಂತ್ಯದಲ್ಲಿರುವ ವಕಾರ ತೆಲುಗು ಭಾಷೆಯ ಪ್ರಭಾವದಿಂದ ಬಂದಿರಬಹುದು. ಮಧ್ಯದ್ರಾವಿಡ ಭಾಷೆಯ ರೂಪವಾದ ಈನ್ ಪೆಂಗೊ ಭಾಷೆಯಲ್ಲಿ ಏನ್ ರೂಪವಾಗಿ ಪರಿವರ್ತನೆ ಹೊಂದಿದೆ.

ಕುಇ–ಕುವಿ ಮತ್ತು ಕುರುಖ್–ಮಾಲ್ಟೊ ಭಾಷೆಗಳ ಪ್ರಕೃತಿ ರೂಪದಲ್ಲಿರುವ ಆದಿ ನಕಾರ ವಿಕೃತಿರೂಪದಲ್ಲಿರುವ ನಕಾರದ ಸಾದೃಶದಿಂದ ಸಿದ್ಧಿಸಿದೆ.

ಗೊಂಡಿ ಭಾಷೆಯ ರೂಪಗಳನ್ನು ಮುಂದೆ ಚರ್ಚಿಸಲಾಗಿದೆ.

2 ಈಗ ವಿಕೃತಿ ರೂಪವಾದ *ನಿನ್–ಎಂಬುವರ ಪುನರ್ರಚನೆಗೆ ಕೊಡುವ ಕಾರಣಗಳನ್ನು ನೋಡೋಣ (ವಿಕೃತಿ ರೂಪದಲ್ಲಿ ಹ್ರಸ್ವಸ್ವರ ಇರುವುದಕ್ಕೆ ಈ ರೂಪದ ಪರದಲ್ಲಿ ಬರುವ ವಿಭಕ್ತಿ ಪ್ರತ್ಯಯಗಳು ಕಾರಣ).

ಕುರುಖ್ ಮತ್ತು ಮಾಲ್ತೊ ಭಾಷೆಗಳ ರೂಪಗಳು ಮೂಲ *ನಿನ್–ರೂಪಕ್ಕೆ ಚತುರ್ಥಿ ವಿಭಕ್ತಿ ಪ್ರತ್ಯಯ ಹತ್ತುವುದರಿಂದ ಸೃಷ್ಟಿಯಾದ ರೂಪಗಳು.

ಮೂಲದ್ರಾವಿಡ *ನಿನ್-ರೂಪ ಮೂಲ ಮಧ್ಯದ್ರಾವಿಡ ಭಾಷೆಗಳಲ್ಲಿ *ಇನ್ ರೂಪವಾಗಿ ಪರಿವರ್ತನೆ ಹೊಂದಿತು. ಈ ಪರಿವರ್ತನೆ ಹೊಂದಿದ ರೂಪ ಕೊಲಾಮಿ–ಪರ್ಜಿ ಭಾಷಾವರ್ಗಗಳಲ್ಲಿ ಹಾಗೆಯೇ ಉಳಿಯಿತು. ಕೊಲಾಮಿ–ನಾಯ್ಕಿ ಭಾಷೆಗಳು ಪ್ರಕೃತಿ ರೂಪದ ಆದಿ ವ್ಯಂಜನವನ್ನು ತೆಲುಗಿನಿಂದ ಎರವಲು ಪಡೆದರೂ ವಿಕೃತಿ ರೂಪದಲ್ಲಿ ಮಾತ್ರ ಯಾವ ಬದಲಾವಣೆಯೂ ಆಗಿಲ್ಲ. ಇದು ಕೊಲಾಮಿ ಪರ್ಜಿ ಭಾಷಾ ವರ್ಗಗಳ ವೈಶಿಷ್ಟ್ಯ ಎನ್ನಬಹುದು.

ಮಧ್ಯಮಪುರುಷ ಬಹುವಚನ ಪ್ರಕೃತಿ ರೂಪಕ್ಕೆ *ನೀಮ್ ರೂಪವನ್ನು ಪುನರ್ರಚಿಸಿದ್ದಾರೆ. ಈ ರೂಪದಿಂದ ಬೇರೆ ರೂಪಗಳ ಪರಿವರ್ತನೆಯನ್ನು ಸಕಾರಣವಾಗಿ ವಿವರಿಸಬಹುದು. ಆದರೆ ತಮಿಳು ಭಾಷೆಯ ನೀರ್. ತುಳುಭಾಷೆಯ ಈರ್, ಹಳೆಯ ತೆಲುಗಿನ ಈರು (ಗೊಂಡಿಯ ಮೀರಾಟ್, ಕೊಲಾಮಿ–ನಾಯ್ಕಿಯ ಈರ್ ರೂಪಗಳು ತೆಲುಗು ಭಾಷೆಯ ರೂಪಗಳಿಂದ ಪರಿವರ್ತನೆಗೊಂಡಿವೆ), ಕೊಂಡ ಭಾಷೆಯ ಮೀರು ಮತ್ತು, ಕುಇ ಭಾಷೆಯ ಈರು, ಮೀರು ರೂಪಗಳ ಮೂಲ ರೂಪ *ನೀರ್ ಎಂಬುದು. ಈ ರೂಪವನ್ನು ಮೂಲದ್ರಾವಿಡಕ್ಕೆ ಪುನರ್ರಚಿಸಲು ಮೇಲಿನ ಭಾಷೆಗಳ ಸಾಧಿತರೂಪಗಳು ಎರಡು ಭಾಷಾ ವರ್ಗಗಳಲ್ಲೂ ಕಂಡುಬರುವುದು (ದಕ್ಷಿಣ ಮತ್ತು ಮಧ್ಯ ದ್ರಾವಿಡ ಭಾಷೆಗಳು). ಮೇಲಿನ ಎರಡು (*ನೀಮ್, *ನೀರ್) ರೂಪಗಳೂ ಹಳೆಯ ತಮಿಳಿನಲ್ಲಿ ಕಂಡು ಬರುತ್ತವೆ. ಇವೆರಡು ರೂಪಗಳು ಮೂಲ ದ್ರಾವಿಡದಲ್ಲಿ ಬಳಕೆಯಲ್ಲಿದ್ದರೂ, ನೀಮ್ ರೂಪ ನೀರ್ ರೂಪಕ್ಕಿಂತ ಹಳೆಯ ರೂಪ ಎಂಬುದನ್ನು ಸಾಧಿಸಲು ಎರಡು ಕಾರಣಗಳನ್ನು ಕೊಡಬಹುದು:

1 ಪುರುಷವಾಚಕ ಮತ್ತು ಆತ್ಮಾರ್ಥಕ ಸರ್ವನಾಮಗಳಲ್ಲಿ ಮುಖ್ಯವಾಗಿ ಕಂಡುಬರುವ ಏಕವಚನ ಮತ್ತು ಬಹುವಚನ ಸೂಚಕ ವ್ಯಂಜನಗಳು ನ್ ಮತ್ತು ಮ್. ಆದುದರಿಂದ ಇಲ್ಲಿಯೂ ರೇಫಕ್ಕಿಂತ ಮಕಾರ ಹಳೆಯದು ಎಂಬುದು ತಿಳಿಯುತ್ತದೆ.

2 ವಿಕೃತಿ ರೂಪದಲ್ಲಿ ಮಕಾರ ಎಲ್ಲ ಭಾಷೆಗಳಲ್ಲೂ ಉಳಿದುಕೊಂಡು ಬಂದಿರುವುದರಿಂದ, ಮೂಲ ಪ್ರಕೃತಿ ರೂಪಗಳಲ್ಲೂ ಇದು ಬಳಕೆಯಲ್ಲಿದ್ದಿರಬಹುದು ಎಂದು ಹೇಳಬಹುದು. ಈಗ ಎರಡು ರೂಪಗಳನ್ನು ಮೂಲ ರೂಪಕ್ಕೆ ಪುನರ್ರಚಿಸಲು ಏನು ಕಾರಣ ಎಂಬುದನ್ನು ನೋಡೋಣ.

ಮಕಾರ ಉತ್ತಮ ಪುರುಷ ಮತ್ತು ಆತ್ಮಾರ್ಥಕ ಸರ್ವನಾಮಗಳಲ್ಲಿ ಬಹುವಚನ ಸೂಚಕ ವ್ಯಂಜನವಾಗಿ ಬಳಕೆಯಲ್ಲಿ ಉಳಿಯಿತು. ಆದರೆ *–ರ್ *-ಅರ್/*-ಇರ್ ಎಂಬ ಬಹುವಚನ ಸೂಚಕ ರೂಪಗಳು ಪ್ರಥಮ ಪುರುಷ ಮತ್ತು ಪ್ರಶ್ನಾರ್ಥಕ ಸರ್ವನಾಮಗಳಲ್ಲೂ, ಅಲ್ಲದೆ ಮಾನವ ನಾಮ ವಾಚಕ ರೂಪಗಳ ಬಹುವಚನ ಸೂಚಕ ಪ್ರತ್ಯಯವಾಗಿಯೂ, ಬಳಕೆಯಲ್ಲಿ ಉಳಿದುಕೊಂಡು (ಇದಕ್ಕೆ ಕೋತ. ತೋಡ ಮತ್ತು ಬ್ರಾಹೂಇ ಭಾಷೆಗಳು ಹೊರತಾಗಿವೆ) ಬಂದಿವೆ. ಸಾಮಾನ್ಯವಾಗಿ ಹೆಚ್ಚು ಬಳಕೆಯಲ್ಲಿರುವ ರೂಪಗಳು ಕಡಮೆ ಬಳಕೆಯಲ್ಲಿರುವ ರೂಪಗಳ ಮೇಲೆ ಪ್ರಭಾವ ಬೀರುವುದು ಒಂದು ವಾಡಿಕೆ. ಆದುದರಿಂದ *ನೀಮ್ ರೂಪದಲ್ಲಿರುವ ಮಕಾರದ ಸ್ಥಾನವನ್ನು ರೇಫ ಆಕ್ರಮಿಸಿಕೊಳ್ಳುತ್ತದೆ. ಅಲ್ಲದೆ ಎಲ್ಲ ಭಾಷೆಗಳ ಸಂಖ್ಯಾವಾಚಕ ಪ್ರತ್ಯಯವಾಗಿ ಈ ರೇಫ ಕಂಡು ಬರುವುದರಿಂದ *ನೀರ್ ರೂಪವನ್ನು ಪುನರ್ರಚಿಸುವ ಅಗತ್ಯ ಉಂಟಾಯಿತು.

ತಮಿಳು. ಮಲಯಾಳಂ, ಕೊಡಗು ಮತ್ತು ತುಳು ಭಾಷೆಗಳ ರೂಪಗಳು, .-ಕಳ್ ಎಂಬ ಬಹುವಚನ ಪ್ರತ್ಯಯ *ನೀಮ್‌ರೂಪಕ್ಕೆ ಹತ್ತುವುದರಿಂದ ಸೃಷ್ಟಿಯಾದವು.

ವಿಕೃತಿ ರೂಪಕ್ಕೆ *ನಿಮ್–ರೂಪವನ್ನು ಪುನರ್ರಚಿಸಲಾಗಿದೆ. ಈ ರೂಪ ದಕ್ಷಿಣ ಮತ್ತು ಉತ್ತರ

ದ್ರಾವಿಡ ಭಾಷೆಗಳಲ್ಲಿ ಉಳಿದುಕೊಂಡು ಬಂದಿದೆ. ಹಳೆಯ ತಮಿಳು ಮತ್ತು ಬ್ರಾಹೂಈ ಭಾಷೆಗಳಲ್ಲಿ (ಭಾ–2ಅ) ಇಕಾರ ಉಕಾರವಾಗಿ ಪರಿವರ್ತನೆ ಹೊಂದಲು ಪರದಲ್ಲಿ ಬರುವ ಮಕಾರ ಕಾರಣವಿರಬಹುದು. ಈ ರೀತಿಯ ಬೆಳವಣಿಗೆಯನ್ನು ಈ ಎರಡು ಭಾಷೆಗಳಲ್ಲಿ ಕಾಣುತ್ತೇವೆ.ಪೂರ್ವ ತಮಿಳಿನಲ್ಲಿ ನುಮ್ ರೂಪದ ಆದಿ ವ್ಯಂಜನವಾದ ನಕಾರ ನಶಿಸಿ ಹೋಗಿರಬಹುದು. ಆದ್ದರಿಂದ, ಉಮ್ ರೂಪಕ್ಕೆ -ಕಳ್ ಬಹುವಚನ ಪ್ರತ್ಯಯ ಹತ್ತುವುದರಿಂದ ಉಮ್‌ಕಳ್ ಎಂಬ ರೂಪ ಸೃಷ್ಟಿಯಾಗಿದೆ. ಪೂರ್ವ ತಮಿಳಿನಲ್ಲಿ ಉನ್ ರೂಪ ಮಧ್ಯಮ ಪುರುಷ ಏಕವಚನ ರೂಪವಾಗಿ ಬಳಕೆಯಲ್ಲಿ ಕಂಡು ಬಂದರೆ, ಹಳೆಯ ತಮಿಳಿನಲ್ಲಿ ನಿನ್ ರೂಪ ಕಂಡು ಬರುತ್ತದೆ. ಈ ಉನ್ ರೂಪದಲ್ಲಿರುವ ಉಕಾರ ಬಹುವಚನ ವಿಕೃತಿ ರೂಪದಲ್ಲಿರುವ ಉಕಾರದ ಸಾದೃಶದಿಂದ ಬಂದಿರಬೇಕು: ಇಲ್ಲವೆ, ಇಡೀ ಉನ್ ರೂಪವೇ ಉಮ್ ರೂಪದ ಸಾದೃಶ ದಿಂದ ಪರಿವರ್ತನೆ ಹೊಂದದಿರಬೇಕು.

ಬ್ರಾಹೂಈ ಭಾಷೆಯಲ್ಲಿಯ ವಿಕೃತಿ ರೂಪದ ರೂಪವೆ ಕಾಲಕ್ರಮೇಣ ಮಧ್ಯಮ ಪುರುಷ ಬಹುವಚನ ಪ್ರಕೃತಿ ರೂಪವಾಗಿ ಬಳಕೆಯಲ್ಲಿ ಉಳಿಯಿತು.

ಮೂಲ ಮಧ್ಯ ದ್ರಾವಿಡ ಭಾಷೆಗಳಲ್ಲಿ *ನಿಮ್–ರೂಪ *ಇಮ್–ರೂಪವಾಗಿ ಪರಿವರ್ತನೆ ಹೊಂದಿತು. ಈ ಭಾಷೆಗಳ ರೂಪಗಳು ಆದಿವ್ಯಂಜನ ನಕಾರವನ್ನು ಕಳೆದುಕೊಂಡಿವೆ. ಈ ರೂಪಗಳು ಕೊಲಾಮಿ–ಪರ್ಜಿ ಭಾಷಾ ವರ್ಗಗಳಲ್ಲಿ ಹಾಗೆಯೇ ಉಳಿದಿವೆ. ಆದರೆ ತೆಲುಗು–ಕುಈ ಭಾಷಾ ಗುಂಪುಗಳಲ್ಲಿ ಸ್ಥಾನಪಲ್ಲಟದಿಂದಾಗಿ ಇಮ್ ರೂಪ ಮೀ–ರೂಪವಾಗಿ ಪರಿವರ್ತನೆ ಹೊಂದುತ್ತದೆ.

ತೆಲುಗು, ಕೊಂಡ, ಕುಈ ಮತ್ತು ಕುವಿ ಭಾಷೆಗಳ ಪದಾದಿಯಲ್ಲಿ ಬರುವ ಮಕಾರ ವಿಕೃತಿ ರೂಪದ ಸಾದೃಶ್ಯದಿಂದ ಸೃಷ್ಟಿಯಾಗಿದೆ.

ಕೊಲಾಮಿ–ನಾಯ್ಕಿ ಭಾಷೆಗಳು ಹಳೆಯ ತೆಲುಗಿನಿಂದ ಮೊದಲು ಈರ್ ಎಂಬ ರೂಪವನ್ನು ತೆಗೆದುಕೊಳ್ಳುತ್ತವೆ. ಈ ರೂಪ ತೆಲುಗಿನ ಮಧ್ಯಮ ಪುರುಷ ಏಕವಚನವಾದ ನೀವ್ ರೂಪದ ಆದಿ ವ್ಯಂಜನವನ್ನು ಸೇರಿಸಿಕೊಳ್ಳುತ್ತವೆ. ಈ ಬೆಳವಣಿಗೆ ಸಾದೃಶದಿಂದಾಯಿತು.

ಈಗ ಗೊಂಡಿ ಭಾಷೆಯ ರೂಪಗಳನ್ನು ಚರ್ಚಿಸೋಣ. ಗೊಂಡಿ ಭಾಷೆ ತೆಲುಗು ಭಾಷೆಯ ಮೀರು ರೂಪವನ್ನು ಮೊದಲು ತೆಗೆದುಕೊಂಡು, ಅನಂತರ ಅದಕ್ಕೆ -ಆಟ್ ಎಂಬ ಬಹುವಚನ ಪ್ರತ್ಯಯವನ್ನು ಹಚ್ಚುವುದರಿಂದ ಮಿರಾಟ್ ಎಂಬ ರೂಪ ಸೃಷ್ಟಿಯಾಗುತ್ತದೆ. ಅಲ್ಲದೆ ದೀರ್ಘಸ್ವರ ಹ್ರಸ್ವವಾಗುವು ದನ್ನು ಗಮನಿಸಬೇಕು. ಗೊಂಡಿ ಭಾಷೆಯ ಇಮ್‌ಟ್ ರೂಪ *ಇಮ್ ರೂಪಕ್ಕೆ *ಆಟ್ ಬಹುವಚನ ಪ್ರತ್ಯಯವನ್ನು ಹಚ್ಚುವುದರಿಂದ ಸೃಷ್ಟಿಯಾದುದು. ಇಲ್ಲಿಯೂ ದೀರ್ಘಸ್ವರ ಹ್ರಸ್ವವಾಗುತ್ತದೆ. ಇಮ್‌ಟ್ ರೂಪ ಸಿದ್ಧಿಯಾದ ಮೇಲೆ, ಆ ರೂಪದ ಬಹುವಚನ ಪ್ರತ್ಯಯ ಟಕಾರವನ್ನು ತೆಗೆದು ಹಾಕುವುದರಿಂದ, ಏಕವಚನ ರೂಪವಾದ ಇಮ್ ಬಹುವಚನ ರೂಪದ ಸಂವಾದಿಯಾಗಿ ಸೃಷ್ಟಿಯಾಗು ತ್ತದೆ. ಗೊಂಡಿ ಭಾಷೆಯ ಕೆಲವು ಉಪಭಾಷೆಗಳಲ್ಲಿ ಕಂಡುಬರುವ (ಭಾಗ–2ಇ) ಆದಿ ವ್ಯಂಜನವಾದ ನಕಾರ ವಿಕೃತಿ ರೂಪದ ಸಾದೃಶದಿಂದ ಸೃಷ್ಟಿಯಾಗುತ್ತದೆ.

ಪೆಂಗೊ ಭಾಷೆಯ ಏಪ್, ಏಪೆಂಗ್ ಮತ್ತು ಕುವಿ ಭಾಷೆಯ ಮೀಮ್‌ಬು ಎಂಬ ರೂಪಗಳು ಮೂಲ *ಈಮ್ಬ್ < *ಈಮ್ ರೂಪಗಳಿಂದ ಸಾಧಿತವಾಗಿವೆ ಎನ್ನಬಹುದು. ತೋಡ ಮತ್ತು ಕೊಡಗು ಭಾಷೆಗಳಲ್ಲಿ ಕಂಡುಬರುವ ಪ್ರಕೃತಿ ರೂಪಗಳು ಮೂಲದಲ್ಲಿ ವಿಕೃತಿ ರೂಪಗಳಾಗಿದ್ದು, ಅನಂತರ ಎರಡು ರೂಪಗಳಲ್ಲೂ ಬಳಕೆಯಲ್ಲಿ ಉಳಿಯಿತು.

ಉಪಸಂಹಾರ

1 ದ್ರಾವಿಡ ಭಾಷೆಗಳಲ್ಲಿ ಪ್ರಕೃತಿ ರೂಪದ ದೀರ್ಘಸ್ವರ ವಿಕೃತಿಯಲ್ಲಿ ಹ್ರಸ್ವವಾಗುತ್ತದೆ. ಇದಕ್ಕೆ ಕಾರಣ, ವಿಕೃತಿಯ ಪರದಲ್ಲಿ ಬರುವ ವಿಭಕ್ತಿ ಪ್ರತ್ಯಯಗಳು ಮತ್ತು ಸ್ವರದಿಂದ ಆರಂಭವಾಗುವ ವಿಕೃತಿ ಪ್ರತ್ಯಯಗಳು.

2 ಮೂಲ ಮಧ್ಯ ದ್ರಾವಿಡ ಭಾಷೆಗಳು ಮಧ್ಯಮ ಪುರುಷ ಏಕವಚನದ ಪ್ರಕೃತಿ ಮತ್ತು ವಿಕೃತಿ ರೂಪಗಳ ಆದಿ ವ್ಯಂಜನ ನಕಾರವನ್ನು ಕಳೆದುಕೊಳ್ಳುತ್ತವೆ.

3ತೆಲುಗು–ಕುಇ ಭಾಷಾವರ್ಗಗಳಿಗೆ ಸೇರಿದ ಮಧ್ಯ ದ್ರಾವಿಡ ಭಾಷೆಗಳ ಚತುರ್ಥೀ ಮತ್ತು ಷಷ್ಠೀ ವಿಭಕ್ತಿ ಪ್ರತ್ಯಯವಾದ ಅಕಾರ ಪುರುಷ ವಾಚಕ ಸರ್ವನಾಮುಗಳಿಗೆ ಸೇರುವುದರಿಂದ, ಈ ಭಾಷೆಗಳ ರೂಪದಲ್ಲಿ ಸ್ಥಾನ ಪಲ್ಲಟ ನಡೆಯುತ್ತದೆ.

4 ಕೆಲವು ದ್ರಾವಿಡ ಭಾಷೆಗಳಲ್ಲಿ ಮೂಲ ವಿಕೃತಿ ರೂಪ ಕಾಲಕ್ರಮೇಣ ಪ್ರಕೃತಿ ರೂಪದಲ್ಲೂ ಬಳಕೆಯಲ್ಲಿ ಉಳಿಯಿತು. ಈ ಬದಲಾವಣೆಯನ್ನು ಮಲಯಾಳಂ, ತೋಡ, ಕೊಡಗು, ತೆಲುಗು ಮತ್ತು ಬ್ರಾಹೂಇ ಭಾಷೆಗಳ ಕೆಲವು ರೂಪಗಳಲ್ಲಿ ಕಾಣುತ್ತೇವೆ.

5 ಮೂಲದ್ರಾವಿಡ ಮಧ್ಯಮ ಪುರುಷ ಬಹುವಚನ ರೂಪವಾದ *ನೀವ್ ಜೊತೆಗೆ *ನೀರ್ ಎಂಬ ಮತ್ತೊಂದು ರೂಪವನ್ನು ಪುನರ್ರಚಿಸುತ್ತೇವೆ. ಇದಕ್ಕೆ ಕಾರಣ, ರ್ ಎಂಬ ಪ್ರತ್ಯಯ ಮಾನವ ನಾಮವಾಚಕಗಳಲ್ಲೂ ಪ್ರಶ್ನಾರ್ಥಕ ಸರ್ವನಾಮುಗಳ ರೂಪಗಳಲ್ಲೂ ಬಹುವಚನ ಸೂಚಕವಾಗಿ ಬರುವುದು; ಅಲ್ಲದೆ ಕಡಮೆ ಬಳಕೆಯ ಪ್ರತ್ಯಯವಾದ ಮಕಾರದ ಸ್ಥಾನವನ್ನು ಪಡೆಯುವುದು.

6 ಈ ಪುರುಷವಾಚಕ ಸರ್ವನಾಮುಗಳಲ್ಲಿ ನಡೆದ ಕೆಲವು ಮುಖ್ಯ ಬದಲಾವಣೆಯನ್ನು ಕೆಳಗೆ ಕೊಡಲಾಗಿದೆ:

(1) ತಮಿಳು. ಮಲಯಾಳಂ, ಕೋತ. ತೋಡ ಮತ್ತು ಕೊಡಗು ಭಾಷೆಗಳಲ್ಲಿಯ ಮಧ್ಯಮ ಪುರುಷ ಏಕವಚನದ ಅಂತ್ಯ ವ್ಯಂಜನವಾದ ನಕಾರ ನಶಿಸಿ ಹೋಗಿದೆ.

(2) ಕೋತ–ತೋಡ ಭಾಷೆಗಳಲ್ಲಿಯ ಉತ್ತಮ ಪುರುಷ ಸಸಮ್ಮುಖ ಬಹುವಚನ ರೂಪಗಳ ಆದಿವ್ಯಂಜನ ನಕಾರ ನಶಿಸಿ ಹೋಗಿದೆ.

(3) ಮಧ್ಯದ್ರಾವಿಡ ಭಾಷೆಗಳಲ್ಲಿ ಮೂಲ ದ್ರಾವಿಡ ರೂಪವಾದ *ಯನ್–ಎಂಬುದು ಅನ್–ರೂಪವಾಗುತ್ತದೆ: *ಯಾವ್–ರೂಪ ಅವ್—ರೂಪವಾಗುತ್ತದೆ: ಅಲ್ಲದೆ ಮಧ್ಯಮ ಪುರುಷ ಏಕವಚನ ಮತ್ತು ಬಹುವಚನ ರೂಪಗಳಲ್ಲಿಯ ಆದಿ ವ್ಯಂಜನವಾದ ನಕಾರ ನಶಿಸಿಹೋಗುವುದು.

(4) ತೆಲುಗು– ಕುಇ ಭಾಷೆಗಳ ವಿಕೃತಿ ರೂಪಗಳಲ್ಲಿ ಸ್ಥಾನಪಲ್ಲಟ ಕಾರ್ಯ ನಡೆಯುತ್ತದೆ.

(5) ಕುಇ–ಕುವಿ ಭಾಷೆಗಳಲ್ಲಿ *ಆರ್ ರೂಪ ಉತ್ತಮ ಪುರುಷ ಸಸಮ್ಮುಖ ಬಹುವಚನ ರೂಪವಾಗಿ ಸೃಷ್ಟಿಯಾಗುತ್ತದೆ.

(6) ಕುರುಖ್–ಮಾಲ್ಟೊ (ಮತ್ತು ಬ್ರಾಹೂಇ) ಭಾಷೆಗಳಲ್ಲಿಯ ಮೂಲ ಚತುರ್ಥೀ ವಿಭಕ್ತಿ ಪ್ರತ್ಯಯ ವಿಕೃತಿ ರೂಪವಾಗಿ ಪರಿವರ್ತನೆ ಹೊಂದುತ್ತದೆ.

ಈ ಲೇಖನದಲ್ಲಿ ಮೂಲದ್ರಾವಿಡ ಪುರುಷವಾಚಕ ಸರ್ವನಾಮುಗಳ ಪುನರ್ರಚನೆಗೆ ಸಂಬಂಧಿಸಿದ ಎಲ್ಲಾ ಸಮಸ್ಯೆಗಳಿಗೂ ಉತ್ತರ ಕೊಡಲು ಸಾಧ್ಯವಾಗಿಲ್ಲ. ಅಲ್ಲದೆ, ಭ. ಕೃಷ್ಣಮೂರ್ತಿಯವರ ಪುನರ್ರಚನೆ (*ಇಾವ್/*ಇವ್–)ಗಿಂತ ಪಿ. ಎಸ್. ಸುಬ್ರಹ್ಮಣ್ಯಂ ರವರ ಪುನರ್ರಚನೆ ಹೆಚ್ಚು ಸೂಕ್ತವಾಗಿ ಕಾಣುತ್ತದೆ—ಎಂಬುದು ಈ ಲೇಖಕನ ಅಭಿಮತ. ಇದಕ್ಕಿಂತ ಭಿನ್ನವಾದ ಪುನರ್ರಚನೆ ಸಾಧ್ಯವೇ ಎಂಬುದನ್ನು ವಿದ್ವಾಂಸರ ಅವಗಾಹನೆಗೆ ಬಿಡಲಾಗಿದೆ15.

---

15 ಈ ಲೇಖನದಲ್ಲಿ ಬಳಸಿಕೊಂಡಿರುವ ಸರ್ವನಾಮುಗಳ ವರ್ಗೀಕರಣವನ್ನು ಭ. ಕೃಷ್ಣ ಮೂರ್ತಿಯವರ ಲೇಖನದಿಂದ ಪಡೆಯಲಾಗಿದೆ.

ಉತ್ತರ ಭಾರತದ ಇಂಡೋ-ಆರ್ಯನ್ ಭಾಷೆಯಾಡುತ್ತಿದ್ದವರು ಕ್ರಿ.ಪೂ. ಒಂದನೆಯ ಸಹಸ್ರಮಾನದ ಪ್ರಥಮಾರ್ಧದಷ್ಟು ಹಿಂದೆಯೇ ತಮ್ಮ ಭಾಷೆಯ, ಮುಖ್ಯವಾಗಿ ವೇದಗಳಲ್ಲಿ ಮತ್ತು ಅನಂತರದ ಸಂಸ್ಕೃತದ ಆರಂಭಿಕ ಸಾಹಿತ್ಯದಲ್ಲಿ ಸೆರೆಗೊಂಡಿದ್ದ ಸಾಹಿತ್ಯಕ ರೂಪಗಳಲ್ಲಿಯ ಭಾಷೆಯ, ಶಾಸ್ತ್ರೀಯ ಅಧ್ಯಯನ ಮಾಡಲಾರಂಭಿಸಿದ್ದರು. ಹಳೆಯ ಇಂಡೋ-ಆರ್ಯನ್ ಭಾಷೆಯನ್ನು ಕುರಿತು ಕ್ರಿ.ಪೂ. ಒಂದನೆಯ ಸಹಸ್ರಮಾನದ ಮಧ್ಯಕಾಲದಲ್ಲಿನ ಪ್ರಾಚೀನ ಭಾರತೀಯ ವೈಯಾಕರಣರು ಮಾಡಿದ ಶಾಸ್ತ್ರೀಯ ಅಧ್ಯಯನದ ಫಲವೇ ಪಾಣಿನಿಯ ಸಂಸ್ಕೃತ ವ್ಯಾಕರಣ (ಕ್ರಿ.ಪೂ. 5ನೆಯ ಶತಮಾನ). ಪ್ರಾಚೀನ ವಿಶ್ವದ ಯಾವುದೇ ಭಾಗದಲ್ಲೂ ಇಂಥ ಅಸಾಧಾರಣವಾದ ಭಾಷಿಕ ಸಾಧನೆ ಇದ್ದು ಕಂಡು ಬಂದಿಲ್ಲ. ಅಷ್ಟಾಧ್ಯಾಯೀ ಎಂಬ ಹೆಸರಿನ ಈ ವ್ಯಾಕರಣದಲ್ಲಿ ಪುಟ್ಟ ಸೂತ್ರಗಳ ರೂಪದಲ್ಲಿ ವೈದಿಕ ಮತ್ತು ಅಭಿಜಾತ ಸಂಸ್ಕೃತದ, ಎಂದರೆ ಹಳೆಯ ಇಂಡೋ-ಆರ್ಯನ್ ಭಾಷೆಯ ಧ್ವನಿಯ ಮತ್ತು ಶಬ್ದರೂಪ ರಚನೆಯ ವಿನ್ಯಾಸಗಳ ಅತ್ಯಂತ ವಿಸ್ತೃತವೂ ವಿವರಣಾತ್ಮಕವೂ ಆದ ರೀತಿಯ ವಿವೇಚನೆಯೊಂದನ್ನು ನೀಡಿದ್ದಾನೆ[1].

ಡಾ. ಎಸ್. ಕೆ. ಚಟರ್ಜಿ
ಡಾ. ಎಸ್. ಎಂ. ಕತ್ರೆ

---

1. India—Languages: Publications Division, Ministry of Information and Broadcasting, New Delhi (1970), ಪು 1-2

ಸೀತಾರಾಮ ಜಾಗೀರ್‌ದಾರ್

ಮಾಸವಾಡಿಯ ಸೇವುಣರು
ಶ್ರವಣಬೆಳ್ಗೊಳದ ಒಂದು ಶಿಲಾಲೇಖ

ಮಾಸವಾಡಿಯ ಸೇವುಣರನ್ನು ಕುರಿತ ಒಂದು ಲೇಖನವನ್ನು ಉಪಲಬ್ಧವಿರುವ ಸಾಮಗ್ರಿಯನ್ನು ಒಂದೆಡೆಗೆ ತಂದು ಪ್ರಥಮಬಾರಿಗೆ ಡಾ. ಎ. ವಿ. ನರಸಿಂಹಮೂರ್ತಿಯವರು 1967ರಲ್ಲಿ 'ಪ್ರಬುದ್ಧ ಕರ್ಣಾಟಕ' ಸಂ. 49, ಸಂಚಿಕೆ 3ರಲ್ಲಿ ಪ್ರಕಟಿಸಿದ್ದಾರೆ.[1] ಅವರು ಅದನ್ನು ತಮ್ಮ ಗ್ರಂಥ 'ಕರ್ಣಾಟಕದ ಸೇವುಣರ ಇತಿಹಾಸ' ಎಂಬುದರಲ್ಲಿ ಪರಿಶಿಷ್ಟವಾಗಿ ಸೇರಿಸಿದ್ದಾರೆ[2]. ಇತಿಹಾಸದ ಅಭ್ಯಾಸಿಗಳಿಗೆ ಅವರ ಕೃತಿ ತುಂಬ ಉಪಯುಕ್ತವಾಗಿದೆ. ಈ ಮನೆತನಕ್ಕೆ ಸಂಬಂಧಪಟ್ಟ ಸಾಮಗ್ರಿಗೆ ಹೊಸ ಶಾಸನವೊಂದನ್ನು ಸೇರಿಸುವುದು. ಕಿಂಚಿದ್ ವಿವೇಚಿಸುವುದು ಈ ಲೇಖನದ ಉದ್ದೇಶ. ಅದುವೆ ಶ್ರವಣಬೆಳ್ಗೊಳದ 139ನೆಯ ಶಿಲಾಲೇಖ (Ep. Car. Vol. II).

ಸಾವಿರ ವರ್ಷಗಳ ಹಿಂದೆ ಈಗಿನ ಬಿಜಾಪುರ ಹಾಗೂ ಧಾರ್ವಾಡ ಜಿಲ್ಲೆಗಳಲ್ಲಿ ಹಂಚಿಹೋದ ನೆಲದಲ್ಲಿ ಮಾಸವಾಡಿ 140 ಎಂಬೊಂದು ವಿಷಯವಿದ್ದಿತು. ಅದು ಅಸ್ತಿತ್ವಕ್ಕೆ ಯಾವ ಕಾಲಕ್ಕೆ ಬಂದಿತೆಂದು ಖಚಿತವಾಗಿ ಹೇಳಲು ಸಾಕಷ್ಟು ಆಧಾರಗಳಿಲ್ಲ. ಆದರೆ 10ನೆಯ ಶತಮಾನದಲ್ಲಿ ವಿಶೇಷ ಪ್ರಸಿದ್ಧಿಯನ್ನು ಹೊಂದಿದ ಕೆಲವೇ ರಾಜಮನೆತನಗಳಲ್ಲಿ ಒಂದಾಗಿತ್ತು—ಈ ಹೆಸರಿನಿಂದ ಆಳುತ್ತಿದ್ದ, ಈ ಭೂಭಾಗದ ರಾಜಮನೆತನ. ಮಾಸವಾಡಿಯ ಸೇವುಣರ ಶಾಸನಗಳಿಂದ ಅವರಿಗೆ ಸಾಮಾನ್ಯವಾಗಿ ಇದ್ದ ಎರಡು ಬಿರುದುಗಳೆಂದರೆ 'ಮಾಸವಾಡಿ ನೂಜಿ ನಲವತ್ತರ ಮನ್ನೆಯ' ಇಲ್ಲವೆ 'ರಣಮೂರ್ಖ' ಎಂಬುದು. 'ರಣಮೂರ್ಖ' ಇದು ಈ ವಂಶದಲ್ಲಿ ಹುಟ್ಟಿದ ಎಲ್ಲರ ಹೆಸರಿನೊಂದಿಗೆ ಬೆರೆತುಕೊಂಡು ಬಂದಿದೆ. ಈ ವಂಶದ ರಾಜರು ತಮ್ಮನ್ನು 'ರಣಮೂರ್ಖರಾಮಂ' 'ರಣಮೂರ್ಖಧವಳ' 'ರಣಮೂರ್ಖಕೇಸರಿ' 'ರಣಮೂರ್ಖಪಾರ್ಥ' ಎಂದು ಮುಂತಾಗಿ ಹೇಳಿಕೊಂಡಿದ್ದಾರೆ: ಸಮಸ್ತ ಗುಣಸಂಪನ್ನಂ ರಣಮೂರ್ಖರಾಮಂ ಯಾದವ್ಯವಂಶೋದ್ಭವರ್ ಶ್ರೀಮತ್ ಮಾಸವಾಡಿ[3] ನೂಜಿ

---

1 ಪ್ರ. ಕ. ಸಂ. 49, ಸಂ. 3, ಪುಟ 145–150

2 'ಕರ್ಣಾಟಕದ ಸೇವುಣರ ಇತಿಹಾಸ'. ಪರಿಶಿಷ್ಟ (2). ಪುಟ 119–123

3 ಮಾಸವಾಡಿಯೆಂದರೆ ಮಾಸಕವ್ವೆಯ ಭಕ್ತರು ಆಳುವ ನಾಡಾಗಿರಬಹುದು. 'ಮಾಸಕವ್ವೆ' ಎಂದರೆ ಮಹಾಲಕ್ಷ್ಮೀ: ಈ ಶಬ್ದ ಹಲವು ಭಿನ್ನರೂಪಗಳಿಂದ ಬಳಕೆಯಲ್ಲಿದೆ:

ಮಹಾಲಕ್ಷ್ಮೀ > ಮಹಾಲಚ್ಛೀ >
- ಮಹಾಲಚ್ಚೀ > ಮಾಲಚೀ > ಮಾಲಚಿ > ಮಾಳಚಿ
  - [ಮಾಳಚಿ / ಮಾಚಿ
- ಮಹಾಳಚ್ಚೀ (ಮ. ಪ್ರಾ)] > ಮಹಾಳಸಿ > ಮ್ಹಾಳಸಿ > ಮಾಳಸಿ
  - ಮಾಳಸಿಕೆ + ಅವ್ವೆ > ಮಾಸಕವ್ವೆ.
  - [ಮಾಳಸವ್ವ / ಮಾಸವ್ವ

ನಲವತ್ತರ ಮನ್ನೆಯ ಕುಪ್ಪರಸ...ಇತ್ಯಾದಿ4. ಮಾಸವಾಡಿಯೆಂದರೇನು? ಮತ್ತು 'ರಣಮೂರ್ಖ' ಎಂದರೇನು? ಇವು ಸ್ವಲ್ಪ ಕ್ಲಿಷ್ಟವಾದ ಸಂಗತಿಗಳೆ. ಇದನ್ನು ಗಮನಿಸಿಯೆ ಡಾ. ನರಸಿಂಹ ಮೂರ್ತಿಯವರು " ಇವರ ಇತರ ಬಿರುದುಗಳಾದ 'ರಣಮೂರ್ಖವಂಶೋದ್ಭವ', 'ರಣಮೂರ್ಖಧವಳ', 'ರಣಮೂರ್ಖಕೇಸರಿ', 'ರಣಮೂರ್ಖಪಾರ್ಥ'–ಇವುಗಳು ಏನನ್ನು ಸೂಚಿಸುತ್ತವೆ ಎಂದು ಖಚಿತವಾಗಿ ಹೇಳಲಾಗುವುದಿಲ್ಲ" ಎಂದಿದ್ದಾರೆ5. ಇಲ್ಲಿನ 'ರಣಮೂರ್ಖ' ಎಂಬುದು 'ಅರಿಷ್ಟ'6 ಎಂಬ ಬಗೆಯ ಶಬ್ದ. ಅದರಲ್ಲೂ 'ಮೂರ್ಖ' ಒಂದು ಕಾಲದಲ್ಲಿ ಒಳ್ಳೆಯ ಅರ್ಥವನ್ನೇ ಹೊಂದಿತ್ತು.7 ಪೊನ್ನನು ತನ್ನ ಕೃತಿ 'ಪಂಡಿತರುಂ ಮೂರ್ಖರುಮೆಕ್ಕೆಯಿಂ ಪೊಗಳೆ'8 ಎಂದು ಹೇಳಿದ್ದಾನೆ. ಕಾರಣ 'ಮೂರ್ಖ' ಎಂದರೆ ಇಂದಿನ 'ಮತಿಹೀನ' ಎಂಬ ಅರ್ಥವನ್ನು ಇಲ್ಲಿ ಸ್ವೀಕರಿಸುವುದು ಸಾಧುವಲ್ಲ. ಇಲ್ಲಿ ಬರುವ 'ರಣಮೂರ್ಖ' ಎಂದರೆ ಒಬ್ಬ ರಾಜನ ಹೆಸರೆಂಬುದು ಶ್ರ.ಬೆ.ದ 139ನೆಯ ಶಾಸನದಿಂದ ಖಚಿತವಾಗುತ್ತದೆ; ಆ ಭಾಗವಿಂತಿದೆ:

ಶ್ರೀಯುವತಿಗೆ ನಿಜವಿಜಯ
ಶ್ರೀಯುವತಿಯೆ ಸವತಿಯೆನಿಸೆ ರಣಮೂರ್ಖ ನೃಪಾ
ಮ್ನಾಯ'ದೊಳಾಯದ ಮೆಯ್ಗಲಿ
ಬಾಯಿಕನೆಂಬಂ ನೆಗಟ್ತೆಯಂ ಪ್ರಕಟಿಸಿದನ್॥9

'ರಣಮೂರ್ಖ ನೃಪ' ಎಂದರೆ 'ರಣ ಜಾಣಾಕ್ಷ' ಅರ್ಥಾತ್ ಪರಮಾತ್ಮನ ಹಾಗೆ (ಅವ್ಯಕ್ತ ಪರಮಾತ್ಮನೆಂಬ ಮೂರ್ಖನಂತೆ) ರಣರಂಗದ ವ್ಯಕ್ತಾವ್ಯಕ್ತ ವಿದ್ಯಮಾನಗಳನ್ನು ತಿಳಿದುಕೊಂಡವನು. ಈತನ ವಂಶದಲ್ಲಿ ಮುಂದೆ ಹುಟ್ಟಿದವರೆಲ್ಲರೂ ರಣಮೂರ್ಖ ವಂಶೋದ್ಭವರು. ಇನ್ನು 'ರಾಮ', 'ಧವಳ' 'ಪಾರ್ಥ', 'ಕೇಸರಿ' ಇತ್ಯಾದಿಗಳು. ರಾಷ್ಟ್ರಕೂಟ ಹಾಗೂ ಚಾಲುಕ್ಯ ರಾಜರು ತಳೆದ ಬಿರುದುಗಳಂತೆ ಇವೆ. ಆ ರಾಜನ ವಂಶದಲ್ಲಿ ಅವರು ಆ ಬಗೆಯ ಶೂರ ಧೀರರೆಂದು ಅವು ಸೂಚಿಸುತ್ತವೆ. ಆದುದರಿಂದ ಮಾಸವಾಡಿಯ ಸೇವೂರ ಮೂಲಪುರುಷನು ರಣಮೂರ್ಖ ನೃಪನಾಗುತ್ತಾನೆ; ಸದ್ಯ ತಿಳಿದಿರುವಂತೆ ಕುಪ್ಪೆಯನಲ್ಲ.10 ಏಕೆಂದರೆ ಈ ಕುಪ್ಪೆಯನಿಗೆ ಈ ವಂಶಕ್ಕೆ ಸಂಬಂಧಿಸಿದ ಅತಿಪ್ರೀತಿಯ ಬಿರುದುಗಳಾದ 'ಮಾಸವಾಡಿಯ 140ರ ಮನ್ನೆಯ' ಹಾಗೂ 'ರಣಮೂರ್ಖ' ಎಂಬುವುಗಳಲ್ಲಿ ಒಂದೂ ಇಲ್ಲ. ಮತ್ತೆ ಅವನು ಮಾಸವಾಡಿಯನ್ನು ಆಳುತ್ತಿದ್ದನೆಂಬುದಕ್ಕೂ ಆಧಾರಗಳಿಲ್ಲ. ಅಷ್ಟೇ ಅಲ್ಲ. ಅವನು ಪುಲಿಗೆರೆ ನಾಡನ್ನು ಆಳುತ್ತಿದ್ದನೆಂಬ ಪ್ರತಿಕೂಲವಾದ ಉಲ್ಲೇಖಗಳು ಇದ್ದುದು ಸ್ಪಷ್ಟವಿದೆ. ನೋಡಿ: (1) ಸ್ವಸ್ತ್ಯಮೋಘವರ್ಷ ಶ್ರೀ ಪೃಥಿವಿ ವಲ್ಲಭ ಮಹಾರಾಜಾಧಿರಾಜ ರಾಜ ಪರಮೇಶ್ವರ ಭಟಾರರ ರಾಜ್ಯಾಭಿವೃದ್ಧಿಯೊಳ್ಶಕನೃಪ ಕಾಲಾತೀತ ಸಂವತ್ಸರ ಶತಂಗಳೇೞ್ನೂಱೆಣ್ಬತ್ತೇೞನೆಯ ಪಾರ್ಥಿವ

---

4 S. I. I. Vol. Pt. I. Ins. No. 99—1044 A. D.

5 ಪ್ರ. ಕ. ಸಂ. 49–ಸಂ. 3 ಪುಟ 145 ಮತ್ತು ಕ. ಸೇ. ಇ. ಪರಿಶಿಷ್ಟ (2) ಪುಟ 119

6 ಅರಿಷ್ಟ < ನರಿಷ್ಟಃ = ಅಮಂಡ: ಅರಿಷ್ಟನೇಮಿ...ಇತ್ಯಾದಿಗಳನ್ನು ಗಮನಿಸಿ.

7 ಅವ್ಯಕ್ತಃ ಪರಮಾತ್ಮನೀ ಮೂರ್ಖೇ (ಅಭಿಧಾನ ರತ್ನಮಾಲಾ–ಪುಟ 139) –ಮದ್ರಾಸ್ ಯು. ಮು.

8 ಶಾಂತಿಪುರಾಣ ಆ 1—ಪದ್ಯ 8

9 Ep. car. vol. II No. 139 (Ed. R. Narasimhachar).
ಶ್ರೀಯುತ ರಾ. ನರಸಿಂಹಾಚಾರ್ಯರು ಈ ಶಾಸನದಲ್ಲಿನ ವಿಷಯಗಳನ್ನು ಸರಿಯಾಗಿ ಗುರುತಿಸಿಲ್ಲವೆಂದು ತೋರುತ್ತದೆ. ರಾಜಮನೆತನವನ್ನಂತೂ ಗುರುತಿಸಿಲ್ಲ.

10 ಪ್ರ. ಕ. ಸಂ. 49–ಸಂ. 3: ಪುಟ 145 ಮತ್ತು ಕ. ಸೇ. ಇ. ಪುಟ 119

ಸಂವತ್ಸರಂ ಪ್ರವರ್ತಿಸೆ ಪುರಿಗೆಱೆನಾಡ ಕುಪ್ಪೆಯನಾಳೆ (ಪಾದಗಳು: 1ರಿಂದ 6ರ ವರೆಗೆ)11...ಇತ್ಯಾದಿ. (2) ಸ್ವಸ್ತ್ಯಮೋಘವರ್ಷ ಶ್ರೀ ಪ್ರಿಥುವೀ ವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಭಟಾರರ್ ಪ್ರಿಥಿವೀ ರಾಜ್ಯಂಗೆಯ್ಯೆ ತತ್ಪ್ರಸಾದದಿಂದ ಪುರಿಗೆಱೆ ಮೂನೂಱುಮ[c] ಕುಪ್ಪೆಯರಸರಾಳೆ (ಪಾದಗಳು: 1–4ರ ವರೆಗೆ)12;–ಪುರಿಗೆರೆ 300ಕ್ಕೆ ಸಂಬಂಧಪಟ್ಟ ಕುಪ್ಪೆಯನು ಮಾಸವಾಡಿ 140ಕ್ಕೆ ಅಧಿಪತಿಯಾಗಿದ್ದು ಆ ವಂಶಕ್ಕೆ ಸಂಬಂಧಪಟ್ಟಿದ್ದನೆಂದು ಹೇಳಲು ಆಧಾರಗಳು ದೊರೆಯುವ ವರೆಗೆ ಕೈ ಬಿಡುವುದೇ ಲೇಸೆಂದು ತೋರುತ್ತದೆ? ಅವನಂತು ಮಾಸವಾಡಿ ಸೇವುಣರ ಮೂಲಪುರುಷನಲ್ಲ?

ಶ್ರವಣಬೆಳ್ಗೊಳದ ಶಾಸನವು ಈ ಸೇವುಣವಂಶದ ಬಗೆಗೆ ಸಂಪೂರ್ಣ ವಿವರಗಳನ್ನು ಕೊಡದಿದ್ದರೂ ಅದು ಮಹತ್ವದ ಶಾಸನವಾಗಿದೆ. ಏಕೆಂದರೆ 'ರಣಮೂರ್ಖನೃಪನ' ವಂಶದ ವಿವರವನ್ನು ಕೊಡುವುದಲ್ಲದೆ ಆ ವಂಶಕ್ಕೂ ರಾಷ್ಟ್ರಕೂಟವಂಶಕ್ಕೂ ಇರುವ ಸಂಬಂಧವನ್ನೂ ಅದು ತಿಳಿಸಿದೆ.

ರಣಮೂರ್ಖ ನೃಪನ ವಂಶದಲ್ಲಿ ಬಾಯಿಕನೆಂಬವನು ಪ್ರಸಿದ್ಧಿಯನ್ನು ಹೊಂದಿದನು. ಅತನಿಗೆ 'ಜಾಬಯ್ಯೆ' ಎಂಬವಳು ಹೆಂಡತಿ. ಆಕೆಗೆ 'ಮಾದುವ' ಹಾಗೂ 'ದೋಯಿಲಮ್ಮ' ಎಂಬ ಸೋದರರೂ 'ಸಾವಿಯಬ್ಬೆ' ಎಂಬ ಸೋದರಿಯೂ ಮಕ್ಕಳಾದರು. ಸಾವಿಯಬ್ಬೆಯನ್ನು 'ಧೋರನ ತನಯನೂ, ವಿಬುಧರಿಗೆ ಉದಾರನೂ, ಲೋಕವಿದ್ಯಾಧರನೂ' ಎಂದು ಪ್ರಸಿದ್ಧನಾದವನಿಗೆ ಕೊಟ್ಟು ಮದುವೆ ಮಾಡಲಾಗಿತ್ತು. ಈ ಸಾವಿಯಬ್ಬೆ ತನ್ನ ತನಯನು ಕಾಳಗದಲ್ಲಿ ಮರಣ ಹೊಂದಲು ಬಗಿಯೂರಲ್ಲಿ ತಾನೂ ಪ್ರಾಯಃ ನೋಸ್ತು ಮರಣ ಹೊಂದುತ್ತಾಳೆ. ಶ್ರವಣಬೆಳ್ಗೊಳದ ಶಾಸನ, ಅದರ 'ಪರೋಕ್ಷ ವಿನಯದ ಸ್ವರೂಪ'13.

ಈ ಶಾಸನವು ಮಧ್ಯದಲ್ಲಿ ವಿಶೇಷ ಸ್ಖಾಲಿತ್ಯಗಳಿಂದ ಕೂಡಿರುವದರಿಂದ ಎಲ್ಲ ವಿಷಯವನ್ನೂ ಕೂಲಂಕಷವಾಗಿ ಓದಲು ಸಾಧ್ಯವಿಲ್ಲ. ಇದರಲ್ಲಿ ತೇದಿ ಇಲ್ಲದ್ದೊಂದು ಕೊರತೆ. ಆದರೆ ಲಿಪಿಶಾಸ್ತ್ರದ ಆಧಾರದ ಮೇಲೆ ದಿವಂಗತ ರಾ. ನರಸಿಂಹಾಚಾರ್ಯರು ಇದರ ಕಾಲ ಕ್ರಿ. ಶ. ಸು. 950 ಎಂದಿದ್ದಾರೆ. ಇದು ಸರಿಯಾದರೆ ಇಲ್ಲಿ ಬರುವ ಧೋರನೆಂದರೆ ರಾಷ್ಟ್ರಕೂಟ 3ನೆಯ ಕೃಷ್ಣನ ತಮ್ಮನೂ ಕಕ್ಕಲನ ತಂದೆಯೂ ಆದ ನಿರುಪಮನಾಗಿರಬಹುದು. ನಿರುಪಮನ ಹೆಸರಿನೊಂದಿಗೆ ಧ್ರುವ>ಧೋರ–ಇವು ಬೆರೆತುಕೊಂಡು ಬರದಿದ್ದರೂ 'ನಿರುಪಮ' ಎಂದರೆ 'ಧ್ರುವ ನಿರುಪಮ' ಎಂದೇ ನಾವು ಗ್ರಹಿಸಬೇಕು. ಏಕೆಂದರೆ ರಾಷ್ಟ್ರಕೂಟವಂಶದಲ್ಲಿ ಇದು ಸಹಜವಾದ ಬಳಕೆ:

1 ...ಗೋವಿಂದ ರಾಜನೃಪತಿರ್ಹರಿಣಾ ಸಮಾನಃ॥
ತಸ್ಯಾನುಜೋ ನಿರುಪಮಸ್ತಮುದೀರ್ಣ್ಣಮೀಕ್ಷ್ಯ
ತ್ಯಕ್ತಂ ನೃಪೈರಪಿ ನಯೇನ ವಿಲುಪ್ಯಮಾನಂ॥
–ದೌಲತ್ತಾಬಾದ ತಾಮ್ರಶಾಸನ14

2 ಜಿತಾಶೇಷ ಮಹಿಪಾಲಃ ಪುರಂದರ ಜಿಗೀಷಯಾ
ಸಶ್ರೀ ನಿರುಪಮೋ ರಾಜಾ ಹಿತ್ವಾ ಮರ್ತ್ಯಂ ದಿವಂಗತಃ॥
–ಪೈಠಣ ತಾಮ್ರಶಾಸನ15

---

11 Karnatak Inscriptions Vol. I, No. 13, page 14 (Ed. R. S. Panchmukhi)

12 Ibid., No. 14, page 15

13 Epi. Car. Vol. II (Ed. R. Narasimhachar), No. 139

14 Ep. Ind. Vol. IX, pages 195–196

15 Ibid., Vol. III, page 105

3 ಯಸ್ತ ಪ್ರಭುಸ್ತ್ತುರ ಚಾರುರುದಾರ ಕೀರ್ತ್ತೇರ್ರಾಸೇ ದಿವಾ–
'ನ್ನಿರುಪಮಸ್ಯ' ಪಿತುಃ ಸಕಾಶಾತ। ಸತ್ಸ್ವಪ್ಯನೇಕ ತನಯೇ
ಷು ಗುಣಾತಿರೇಕಾನ್ಮೂರ್ಧ್ಧಾಭಿಷಿಕ್ತ ನೃಪಸಮ್ಮತಮಾಶು ರಾಜ್ಯಂ॥
—ಅಂಜನಾವತಿ ತಾಮ್ರಶಾಸನ16

4 ಗೋವಿಂದರಾಜ ಇತಿ ತಸ್ಯ ಬಭೂವ ನಾಮ್ನಾ ಸೂನುಃ
ಸಭೋಗಭರ ಭಂಗುರ ರಾಜ್ಯ ಚಿತ್ತಃ।
ಆತ್ಮಾನುಜೇ 'ನಿರುಪಮೇ' ವಿನಿವೇಶ್ಯ ಸಮ್ಯಕ್
ಸಾಮ್ರಾಜ್ಯಮೀಶ್ವರಪದಂ ಶಿಥಿಲೀ ಚಕಾರ॥
–ದೇವ್ಲೋಳಿ ತಾಮ್ರಶಾಸನ17

ಇಲ್ಲೆಲ್ಲ ಬರುವ 'ನಿರುಪಮ' ಎಂದರೆ ಧ್ರುವ>ಧೋರನೆಂಬ ಧ್ರುವ ನಿರುಪಮನೇ. ಕಾರಣ ಕಕ್ಕಲನ ತಂದೆ 'ನಿರುಪಮ' ಎಂಬಲ್ಲಿ ಕೂಡ ಆ ಹೆಸರು ಆತನ ಪಿತೃಗಳಲ್ಲೊಬ್ಬನ ಹೆಸರನ್ನೇ ಸೂಚಿಸುತ್ತದೆ ಎಂದರೆ ತಪ್ಪಲ್ಲ. ದೇವಗಿರಿಯ ಸೇವುಣರ 1ನೆಯ ವಡ್ಡಿಗನಿಗೆ ಈ ಧೋರ ಮಹಾನೃಪನ ಮಗಳನ್ನೆ ಕೊಟ್ಟು ಮದುವೆಯಾಗಿತ್ತೆಂದು ಡಾ. ಕೀಲ್‌ಹಾರ್ನರು ಬರೆದಿದ್ದಾರೆ.18 ಅವರ ಊಹೆ ನಮಗೆ ಸರಿಯೆಂದು ತೋರುತ್ತದೆ. ಶ್ರವಣಬೆಳ್ಗೊಳದ ಶಾಸನದ ಕಾಲಮಾನವನ್ನು ಗಮನಿಸಿದರೆ ಅಲ್ಲಿ ಬರುವ 'ಧೋರನು' ಮತ್ತು ಕಕ್ಕಲನ ತಂದೆ ನಿರುಪಮನು ಬೇರೆಯಲ್ಲವೆಂದೇ ಹೇಳಬಹುದು. ಒಬ್ಬ ವ್ಯಕ್ತಿಯನ್ನು ಒಮ್ಮೆ ಧೋರ, ಒಮ್ಮೆ ನಿರುಪಮ ಹೀಗೆ ಸಂಬೋಧಿಸುವುದು ಅಸ್ವಾಭಾವಿಕವಲ್ಲ.19 ಆದುದರಿಂದ ಕಕ್ಕಲನ ತಂದೆ ಧ್ರುವ ನಿರುಪಮನ ಹೆಣ್ಣುಮಕ್ಕಳಲ್ಲಿ ಒಬ್ಬಳನ್ನು ಸೇವುಣರ 1ನೆಯ ವಡ್ಡಿಗನಿಗೆ ಕೊಟ್ಟಿರಬೇಕು ಮತ್ತು ಆತನ ಮಗನೊಬ್ಬನಿಗೆ ಅದೇ ವಂಶದ ಇನ್ನೊಂದು ಮನೆತನದಿಂದ ಹೆಣ್ಣನ್ನು ತಂದಿರಬೇಕು. ಆ ಸೊಸೆಯೇ, ರಣಮೂರ್ಖ ನೃಪಾಮ್ನಾಯದಲ್ಲಿ ಪ್ರಸಿದ್ಧಿಯನ್ನು ಪ್ರಕಟಿಸಿದ ಬಾಯಿಕನ ಮಗಳು ಲೋಕವಿದ್ಯಾಧರನ ಹೆಂಡತಿ ನಾಯಿಯಬ್ಬೆ!

ಶ್ರವಣಬೆಳ್ಗೊಳದ ಶಾಸನದ ಈ ರಣಮೂರ್ಖ ನೃಪಾಮ್ನಾಯದವರೇ ಮಾಸವಾಡಿಯ ಸೇವುಣರು. ಇವರು, ತಮ್ಮನ್ನು, ದೇವಗಿರಿಯ ಸೇವುಣರ ಹಾಗೆ 'ಯಾದವವಂಶೋದ್ಭವ', 'ಯಾದವ ನಾರಾಯಣ', 'ದ್ವಾರಾವತೀ ಪುರವರಾಧೀಶ್ವರ', 'ಯಾದವ ಕುಲ ಕುಮುದಿನೀ ನಿಶಾಕರ', 'ಸೇವುಣಾನ್ವಯ ಪ್ರಸೂತ' 'ಸೇವುಣ ಭೀಮ' ಮುಂತಾಗಿ ಹೇಳಿಕೊಂಡಿರುವುದರಿಂದ 1ನೆಯ ಸೇವುಣ ಹಾಗೂ 1ನೆಯ ಭಿಲ್ಲಮನ ತರುವಾಯದಲ್ಲಿ ಜನಿಸಿದ 'ರಣಮೂರ್ಖ' ನೃಪನ ವಂಶದಲ್ಲಿ ಹುಟ್ಟಿ ಬಂದವರು. ಆತನ ಕಾಲಕ್ಕೆ ಸೇವುಣ ವಂಶ ಎರಡು ಕವಲಾಗಿ ಬೆಳೆದಿತೆಂದರೆ ತಪ್ಪಾಗದು. ಅಂತೆಯೆ ದೇವಗಿರಿಯ

---

16 Ibid., Vol. XXIII–8

17 Ibid., Vol. V–192

18 Ep. Ind., Vol. II, page 212

19 ರಾ. ಕೂ. 1ನೆಯ ಧ್ರುವ ನಿರುಪಮನ ಕಾಲದ ನರೆಯಂಗಲ್ಲ ಶಾಸನವೇ ಇದಕ್ಕೆ ಸಾಕ್ಷಿ:
1 ಓಂ ಸ್ವಸ್ತಿ ಶ್ರೀ ದೋರಂ ಪ್ರಿಥಿವೀ ರಾಜ್ಯಂ ಕೆಯ್ಯೆ ಮಾರ
2 ಕ್ಕರಸಮ್ಮನಮಾಸಿ ಪನ್ನಿಚ್ಛಾಸಿರಮುಮಾಳೆ ನರೆಯಂ
3 ಗಲ್ಲ ಸಾಸಿರ್ವ್ವರ ತುರುಪಿನ ಪುಯ್ಯಲೋಳ್
4 ಡೊಮ್ಮರ ಕಾಡಮಂ ಸತ್ತು ಸ್ವರ್ಗ್ಗಾಲಯಕ್ಕೇಱಿದಂ– Ep. Ind. Vol. VI. p. 163. ಕೇವಲ 'ನಿರುಪಮ' ಎಂಬ ಪ್ರಯೋಗಗಳನ್ನು ಈಗಾಗಲೆ ಕೊಟ್ಟಿದೆ. ಧ್ರುವ>ದೋರ>ಧೋರ ಇವು ಒಂದೇ ಶಬ್ದದ ಭಿನ್ನರೂಪಗಳು.

ಸೇವುಣರು ರಣಮೂರ್ಖಿ ವಂಶದವರಾಗಲು ಸಾಧ್ಯವಿಲ್ಲ. ಮತ್ತೆ ರಣಮೂರ್ಖಿ ವಂಶದವರು ತಮ್ಮನ್ನು 'ಸೇವುಣಾನ್ವಯ ಪ್ರಸೂತ' ಎಂದು ಹೇಳಿಕೊಳ್ಳುವಲ್ಲಿ ಸಾರ್ಥಕತೆಯೂ ಇದೆ. ವಿಜಭನೆ ಕಲಹದಿಂದ ಉಂಟಾಗಿದ್ದರೆ, ಒಂದು ಮನೆಯವರು ಇನ್ನೊಂದನ್ನು ಸ್ಮರಿಸುವುದು ಅಪರೂಪ. ಆದುದರಿಂದ ಈ ಎರಡು ಸೇವುಣ ಮನೆತನಗಳು ಒಂದು ವಂಶಕ್ಕೆ ಸಂಬಂಧಪಟ್ಟುವೆಂದು ತೋರುತ್ತದೆ.

'ಯಾದವವಂಶೋದ್ಭವ', 'ರಣಮೂರ್ಖಿ', 'ಮಾಸವಾಡಿಸೂಜನಾಲ್ವತ್ತರ ಮನ್ನೆಯ' ಇವುಗಳಲ್ಲಿ ಒಂದನ್ನೂ ಹೊಂದಿರದ, ಶ್ರೀಯುತ ರಾ. ಸ್ವಾ. ಪಂಚಮುಖಿಯವರು ಸಂಪಾದಿಸಿದ 'Karnatak Inscriptions, Vol. I ಈ ಕುಪ್ಪೆಯರಸನನ್ನು ಡಾ. ನರಸಿಂಹಮೂರ್ತಿಯವರ ಹಾಗೆ 'ಮಾಸವಾಡಿ ಸೇವುಣ'ರ ವಂಶಕ್ಕೆ ಸಂಬಂಧಪಟ್ಟ ವ್ಯಕ್ತಿಯೆಂದು ಹೇಳುವದಾದರೆ ಈತನನ್ನು S. I. I. ಅಂಗವಾಗಿ ಪ್ರಕಟವಾದ ಬೊಂಬಾಯಿ ಕರ್ನಾಟಕದ ಶಾಸನಗಳು' ಸಂಪುಟ 1ರಲ್ಲಿ ಬರುವ ಶಾಸನ ಸಂಖ್ಯೆ 11 ಮತ್ತು 12ರ 'ಯಾದವ ವಂಶೋದ್ಭವ' ನಾದ ಕುಪ್ಪೆಯರಸನೊಂದಿಗೆ ಸಮೀಕರಿಸಬೇಕಾಗುತ್ತದೆ.[20] ಆಗ ಈ ಎರಡು ಶಾಸನಗಳನ್ನಲ್ಲದೆ ನಾವು ಎಪಿ. ಇಂಡಿಕಾ ಸಂಪುಟ XIIIರಲ್ಲಿನ ಸೊರಟೂರ ಶಾಸನ ಹೀಗೆ ಇನ್ನೂ ಮೂರು ಶಾಸನಗಳನ್ನು ಡಾ. ಮೂರ್ತಿಯವರು ಈಗಾಗಲೇ ಕೊಟ್ಟಿರುವ ಪಟ್ಟಿಗೆ[21] ಸೇರಿಸಬೇಕು. ಆಗಲೂ ಕೂಡ ನಮ್ಮ ಮುಂದೆ 'ಮಾಸವಾಡಿ' ಎಂದರೇನು? ಈ ಪ್ರಶ್ನೆ ಬಗೆಹರಿಯುವದಿಲ್ಲ. ಏಕೆಂದರೆ ಇದರ ಪ್ರಸಕ್ತಿ ಆ ಶಾಸನಗಳಲ್ಲಿ ಇಲ್ಲ; ಅಷ್ಟೇ ಅಲ್ಲ. ಈ ಕುಪ್ಪರಸನು ಆಳುತ್ತಿದ್ದ 'ಮೆಬುಪ್ಪಡಿ' ಎಂದರೆ ಈಗಿನ 'ಮೇವುಂಡಿ' ಆತನ ರಾಜಧಾನಿಯಾಗಿದ್ದು ಅದು ಬೆಳುವಲನಾಡಿನಲ್ಲಿದ್ದಿತು. ಇದು ಗಮನಾರ್ಹವಾದ ವಿಷಯ. ಈ ಭೂಭಾಗಕ್ಕೆ 'ಮಾಸವಾಡಿ' ಎಂಬ ಹೆಸರು ಬಂದುದನ್ನು ಕ್ರಿ.ಶ. 897ರ ಶಾಸನವೊಂದರಲ್ಲಿ ಮೊದಲಬಾರಿಗೆ ಕಾಣುತ್ತೇವೆ[22]. ಇದು ಸರಿಯಾದರೆ, ಈ ಭೂಭಾಗಕ್ಕೆ 'ಮಾಸವಾಡಿ' ಎಂಬ ಹೆಸರು ಬರುವದಕ್ಕೆ ಕಾರಣ ಈ ಕುಪ್ಪರಸನೇ ಆಗಿರಬಹುದು. ಆತ ಸೇವುಣರ ವಂಶಕ್ಕೆ ಸಂಬಂಧಪಟ್ಟಿದ್ದನೆಂದು ಹೇಳಲು ಇರುವ ಆಧಾರವೆಂದರೆ 'ಯಾದವ ವಂಶೋದ್ಭವ' ಎಂಬ ಉಕ್ತಿ. ಈ ಕುಪ್ಪರಸ ಆಳುವ ನಾಡಿಗೆ 'ಮಾಸವಾಡಿ' ಎಂಬ ಹೆಸರು ಬರಬೇಕಾದರೆ ಪ್ರಾಯಃ ಆತ ಮಾಸವಾಡಿಯಿಂದ ಮೂಲತಃ ಬಂದವನಾಗಿರಬೇಕು. 'ಮ್ಹಾಸವಾಡಿ'ಯು ಭೀಮಾನದಿಯ ಉಪನದಿಯಾದ 'ಮಾಸ' ಅಥವಾ ಮಾನಗಂಗೆಯ ತಟದಲ್ಲಿದೆ. ಮಹಾಲಕ್ಷ್ಮೀ ದೇವಿಯ ನೆಲೆಯಾದ ಕೊಲ್ಹಾಪುರದ ಹತ್ತಿರದಲ್ಲಿಯೆ ಇದ್ದ ಸಾತಾರ ಜಿಲ್ಲೆಯ 'ಮ್ಹಾಸವಾಡ' ಸೇಉಣರ ದೇಶದಲ್ಲಿಯೆ ಇದ್ದಿತೆಂದು ಹೇಳಲು ಭೀಮಾನದೀತೀರ ಸೇಉಣರ ದೇಶದ ಅಂಗವಾಗಿತ್ತು ಎಂಬುದೇ ನಮಗೆ ಆಧಾರ. ಭೀಮಾನದಿ ಸೇಉಣರ ದೇಶದಲ್ಲಿ ಅಮೃತಧಾರೆಯಾಗಿ ಹರಿದಿದ್ದಾಳೆ ಎಂಬ ಹೇಳಿಕೆ ಸುಮಾರು ಎಂಟನೆಯ ಶತಮಾನದಲ್ಲಿದ್ದ[23] ಕವಿ ಸ್ವಯಂಭೂದೇವನ 'ಪಉಮಚರಿಉ' ಗ್ರಂಥದಿಂದ ಸುವ್ಯಕ್ತ. ಆ ಪದ್ಯವಿಂತಿದೆ:

ಪುಣು ಸರಿ ಭೀಮರಹಿ ಜಲೋಹ ಫಾರ
ಜಾ ಸೇಉಣ ದೇಸಹೋ ಅಮಿಯ ಧಾರ॥24

(ಪುನಃ ನದಿ ಭೀಮರಥಿ, ಅತಿಶಯ ಜಲದಿಂದ ಕೂಡಿ ಅದು ಸೇಉಣ ದೇಶದಲ್ಲಿ ಅಮೃತಧಾರೆಯಾಗಿದೆ.) ಸೇಉಣರ ಪ್ರಸಕ್ತಿಯನ್ನುಳ್ಳ ಈ ಕೃತಿ ಸೇಉಣರ ಬಗೆಗೆ ಹೊಸ ಬೆಳಕನ್ನು ಚೆಲ್ಲುತ್ತದೆ.[25] ಮ್ಹಾಸ

---

20 BK. In. Vol I, Ins. No. 11 & 12, pp. 7-8

21 (a) ಕ. ಸೇ. ಪುಟ ೧೪೨ (b) 'Seunas of Devagiri', pp. 212

22 BK. In. Vol. I, Ins. No. 22

23 Dr. Gulab Chandra Choudhary, Political History of Northern India from Jain Sources, p 17

24 Dr. H. C. Bhayani 'Pauma Chariu' (Part III), p. 88

25 ಸೇಉಣರ ಉಗಮದ ವಿವೇಚನೆ, ಇನ್ನೊಂದು ಲೇಖನದ ವಿಷಯ

ವಾಡಿಯಲ್ಲಿ ಕನ್ನಡ ಶಾಸನ ದೊರೆತಿದೆಯೆಂದು ಶ್ರೀ ಖರೆಯವರು ಬರೆದಿದ್ದಾರೆ: ಅದರ ಕಾಲ[26] ಕ್ರಿ.ಶ. 1069. ಮಂಗಳವಾಡಿಯು ಹಾಗೆ ಮ್ಹಾಸವಾಡಿ ಒಂದಾನೊಂದು ಕಾಲದಲ್ಲಿ ಕನ್ನಡದೇಶವಾಗಿತ್ತು! ಸೇಉಣರ ಮೂಲಸ್ಥಾನ ಕೇವಲ ನಾಸಿಕ ಜಿಲ್ಲೆ ಎಂಬ ಡಾ. ಆರ್. ಜಿ. ಭಂಡಾರ್ಕರ್, ಡಾ. ಅಳ್ತೇಕರ್ ಮತ್ತು ಡಾ. ವರ್ಮಾ ಇವರ ಮಾತು ಸರಿಯಲ್ಲ.[27] ಡಾ. ಅಳ್ತೇಕರರ ಪ್ರಕಾರ[28] ರಾಷ್ಟ್ರಕೂಟರು ಹೇಗೆ ಕನ್ನಡಿಗರೊ ಹಾಗೆ ನಮಗೆ ಸೇಉಣರೂ ಕನ್ನಡಿಗರು. ಡಾ. ನರಸಿಂಹಮೂರ್ತಿಯವರ ಹೇಳಿಕೆ 'The Seunas were of Kannada origin'[29] ಎಂಬುದು ಸಂಪೂರ್ಣ ಅರ್ಥವತ್ತಾದ ಮಾತು.

ಈ ಮಾಸವಾಡಿಯ ಸೇವುಣರ ಮೂಲಪುರುಷನನ್ನು ಗುರುತಿಸುವಲ್ಲಿ ಶ್ರವಣಬೆಳ್ಗೊಳದ ಶಿಲಾಲೇಖ ತುಂಬ ಉಪಯುಕ್ತವಾಗಿದೆ[30].

---

26 G. H. Khare 'Kolhapur Plates of silahar Gandaraditya' Ep. Ind. Vol. XXVII-p. 178, fn. 2

27 (a) Dr. R. G. Bhandarkar : Collected Works, Vol. III-p 138

(b) Dr. A. S. Altekar, 'The Yādavas of Seuṇa Dēśa'-EHD-Yz.p. 516

(c) Dr. O. P. Varma, 'The Yadavs and Their Times-p 2

28 Dr. A. S. Altekar, Rashtrakutas and Their Times-p. 18 and 21

29 Dr. A. V. Narasimha Murthy, "The Sevunas of Devagiri", p. 29

30 ಈ ಲೇಖನವನ್ನು ಬರೆಯುವಲ್ಲಿ ಗುರುಗಳಾದ ಪಾಂಡುರಂಗಾಚಾರ್ಯ ವೈದ್ಯ, ಟಿ. ವಿ. ವೆಂಕಟಾಚಲಶಾಸ್ತ್ರೀ ಹಾಗೂ ಎಂ. ಹನುಮಂತರಾಯರಿಗೆ ಋಣಿಯಾಗಿರುವೆ.

ಕೆ. ಎಸ್. ನಂಜುಂಡಪ್ಪ

೧೮೫೭ರ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ಣಾಟಕದ ಪಾತ್ರ

1857ರಲ್ಲಿ ಭಾರತದಲ್ಲಿ ನಡೆದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ಣಾಟಕ ಭಾಗವಹಿಸಿದ್ದಿತೋ, ಇಲ್ಲವೋ, ಎಂಬುದನ್ನು ಕುರಿತು ನಡೆಸಿದ ವಿವೇಚನೆಯೇ ಈ ಲೇಖನದ ಸಾರ. 1857ರ ಘಟನೆಯ ಮೇಲೆ ಕೂಲಂಕಷವಾಗಿ ಅಧ್ಯಯನ ನಡೆಸಿ ಸಾಕಷ್ಟು ಕುತೂಹಲಕಾರಕ ಸಂಗತಿಗಳನ್ನು ಬಯಲಿಗೆ ತಂದ ಸುರೇಂದ್ರನಾಥ ಸೇನ್‌ರವರು ತಮ್ಮ 'ಐಟೀನ್ ಫಿಫ್ಟಿ-ಸೆವೆನ್' ಎಂಬ ಪುಸ್ತಕದಲ್ಲಿ, ಭಾರತದ ಮಧ್ಯ ಮತ್ತು ಪೂರ್ವದ ಪ್ರದೇಶಗಳಲ್ಲಿ ಉಂಟಾದ ಈ ಘಟನೆಗಳ ಪ್ರಭಾವದಿಂದ ಕರ್ಣಾಟಕ ದೂರ ಉಳಿದಿತ್ತೆಂದು ಬರೆಯುತ್ತಾರೆ.[1] ಇದಕ್ಕೆ ಕಾರಣವಿಲ್ಲದಿಲ್ಲ. ದಕ್ಷಿಣ ಭಾರತದಲ್ಲಿ ನಡೆದ ಘಟನೆಗಳಿಗಿಂತ ಉತ್ತರ ಭಾರತದಲ್ಲಿ ನಡೆದ ಘಟನೆಗಳಿಗೇ ಈ ಲೇಖಕರು ಆದ್ಯತೆ ನೀಡಿದ್ದಾರೆಂಬುದು ಇದರಿಂದ ವ್ಯಕ್ತವಾಗುತ್ತದೆ. ಇದೇ ಲೇಖಕರ ಹಾದಿಯಲ್ಲಿಯೇ ಸಾಗಿದ ಆರ್. ಸಿ. ಮಜುಮದಾರರು ಸಹ 1857ರ ಸ್ವಾತಂತ್ರ್ಯ ಸಂಗ್ರಾಮದಲ್ಲಿ ದಕ್ಷಿಣ ಭಾರತ ಅಂತಹ ಪಾತ್ರವೇನೂ ವಹಿಸಿರಲಿಲ್ಲವೆಂದು ತಮ್ಮ ಗ್ರಂಥದಲ್ಲಿ ಹೇಳುತ್ತಾರೆ[2]. ಆದರೆ ಈ ಕ್ರಾಂತಿಯ ಸಮಕಾಲೀನವಾದ ಹಾಗೂ ಅನಂತರ ರಚಿತವಾದ ಹಲವಾರು ಕನ್ನಡ ಮತ್ತು ಇಂಗ್ಲಿಷ್ ಗ್ರಂಥಗಳು, ಈ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ಣಾಟಕ ನಿರ್ವಹಿಸಿದ ಪಾತ್ರದ ಬಗ್ಗೆ ಬೆಳಕನ್ನು ಚೆಲ್ಲುತ್ತವೆ.

ಇಂದು ಗುಲ್ಬರ್ಗ ಜಿಲ್ಲೆಯಲ್ಲಿ ಸಣ್ಣ ಪಟ್ಟಣವಾಗಿರುವ ಸುರಪುರದ ವೆಂಕಟಪ್ಪ ನಾಯಕ, ಧಾರವಾಡ ಜಿಲ್ಲೆ ನರಗುಂದ ಪ್ರದೇಶದ ಮೇಲೆ ಆಡಳಿತವನ್ನು ನಡೆಸಿದ ಬಾಬಾ ಸಾಹೇಬ್, ಬೀದರ್-ಧಾರವಾಡ ಜಿಲ್ಲೆಗಳ ಗಡಿಯಲ್ಲಿರುವ ಮುಂದರಗಿಯಲ್ಲಿ ಅಧಿಕಾರಿಯಾಗಿದ್ದ ಭೀಮರಾವ್, ಹಿಂದಿನ ಮುಧೋಳ್ ಪ್ರಾಂತ್ಯಕ್ಕೆ ಸೇರಿದ್ದ ಹುಲ್‌ಗಲಿ ಎಂಬ ಚಿಕ್ಕ ಹಳ್ಳಿಯ ಗುಡ್ಡಗಾಡು ಜನರು (ಬೇಡರು), ಇವರೇ ಮೊದಲಾದವರು 1857ರ ಸಂಗ್ರಾಮದಲ್ಲಿ ದಕ್ಷಿಣ ಭಾರತದಲ್ಲಿ ಬಹುಮುಖ್ಯ ಪಾತ್ರವಹಿಸಿದರು.

ಸುರಪುರದ ವೆಂಕಟಪ್ಪ ನಾಯಕ ದೊಡ್ಡ ದೇಶಾಭಿಮಾನಿಯಾಗಿದ್ದ ವ್ಯಕ್ತಿ. ಭಾರತದಲ್ಲಿ ಬ್ರಿಟಿಷರು ಯಾವ ರೀತಿಯಿಂದ ಹೇಗೆ ತಮ್ಮ ರಾಜ್ಯವನ್ನು ಕಟ್ಟಿದರು ಎಂಬುದನ್ನು ಅವನು ಬಹಳ ಸೂಕ್ಷ್ಮವಾಗಿ ಅರಿತಿದ್ದ. ಹಾಗೂ ಮೆಡೋಸ್ ಟೇಲರ್ ಎಂಬೊಬ್ಬ ಬ್ರಿಟಿಷ್ ಅಧಿಕಾರಿ ಅವನೊಂದಿಗೆ ವರ್ತಿಸಿದ್ದ ರೀತಿಯನ್ನೂ ಮನಗಂಡಿದ್ದ. ಈ ಸಮಯದಲ್ಲಿ ಭಾರತದಲ್ಲಿ ಹರಡಲಾರಂಭವಾಗಿದ್ದ ಸ್ವಾತಂತ್ರ್ಯ ವಿಚಾರ ಧಾರೆಗಳು ಇವನನ್ನು ಬ್ರಿಟಿಷ್ ಆಡಳಿತವನ್ನು ಕೊನೆಗಾಣಿಸಲೋಸುಗ ಹೋರಾಡುವಂತೆ

---

[1] S. Sen : *Eighteen Fifty-Seven*, Foreword.

[2] R. C. Majumdar : *The Sepoy Mutiny and the revolt of 1857*, pp. 93–94.

ಉತ್ತೇಜಿಸಿದುವು. 1857ರಲ್ಲಿ ಸ್ವಾತಂತ್ರ್ಯ ಸಂಗ್ರಾಮ ಪ್ರಾರಂಭವಾಗುವ ತನಕ ಯಾವುವೇ ಸನ್ನಿವೇಶಗಳು ಇವನ ಕ್ರಾಂತಿಕಾರಿ ಚಟುವಟಿಕೆಗಳಿಗೆ ತಕ್ಕ ಅವಕಾಶ ನೀಡಲಿಲ್ಲ. ಯುವಕನಾಗಿಯೂ, ಉತ್ಸಾಹಿ ಆಡಳಿತಗಾರನಾಗಿಯೂ ಇದ್ದ ವೆಂಕಟಪ್ಪ, ಬ್ರಿಟಿಷರ ಪ್ರಾಬಲ್ಯವನ್ನು ಮುರಿಯಲು ತನ್ನದೇ ಆದ ಮೂರು ಯೋಜನೆಗಳನ್ನು ಹಾಕಿಕೊಂಡಿದ್ದ. ಅವನ ದುರದೃಷ್ಟಕ್ಕೆ ಒಂದು ಯೋಜನೆಯಾದರೂ ಸಫಲಗೊಳ್ಳಲಿಲ್ಲ. ಪರಿಣಾಮವಾಗಿ, ಅವನು ಬ್ರಿಟಿಷರ ಕೈಯಲ್ಲಿ ಸಿಕ್ಕು ಹತನಾದ.

ವೆಂಕಟಪ್ಪ ಹಾಕಿಕೊಂಡಿದ್ದ ಮೂರು ಯೋಜನೆಗಳಲ್ಲಿ ಒಂದನೆಯದು, ಬಿಜಾಪುರ ಜಿಲ್ಲೆ ಜಂಬುಗಿಯ ದೇಶಮುಖನೊಡನೆ ಸಂಧಾನವೇರ್ಪಡಿಸಿ, ಅನಂತರ ಪಿತೂರಿ ಮಾಡಿ, ಬ್ರಿಟಿಷರ ಆಡಳಿತಕ್ಕೆ ಮಣ್ಣು ಮುಕ್ಕಿಸಬೇಕೆಂದಿತ್ತು. ಸುರಪುರ–ಗೌವಾರ್ ಊರಿನ ಗೌಡಪ್ಪ ಪಾಟೀಲನ ಮುಖಾಂತರ ವೆಂಕಟಪ್ಪ ಮತ್ತು ದೇಸಾಯಿ ಇಬ್ಬರೂ ಪಿತೂರಿ ನಡೆಸಿದರು. ಆದರೆ ಈ ಪಿತೂರಿ ಬಹಿರಂಗವಾಯಿತು. ಈ ಕಾರಣದ ಮೇಲೆ ಸುರಪುರದ ಬ್ರಿಟಿಷ್ ಅಧಿಕಾರಿ ಜಂಬುಗಿಯನ್ನು ಆಕ್ರಮಿಸಿ, ಅದನ್ನು ಕೊಳ್ಳೆ ಹೊಡೆಯುವಂತೆ ಆಜ್ಞೆಯೊಂದನ್ನು ಹೊರಡಿಸಿದ. ಆಜ್ಞೆ ಜಾರಿಗೆ ಬಂದು, ಬ್ರಿಟಿಷರು ದೇಸಾಯಿಯ ಕೋಟೆಯನ್ನು ಹಿಡಿದರು; ಅವನ ಮನೆಯನ್ನು ಜಪ್ತಿ ಮಾಡಿದರು. ಇಷ್ಟೇ ಅಲ್ಲದೆ, ದೇಸಾಯಿಯ ಕಡೆಯವರೆಲ್ಲರೂ ಶಿಕ್ಷೆಗೊಳಗಾದರು. ಒಟ್ಟಿನಲ್ಲಿ ಈ ಪ್ರಥಮ ಯೋಜನೆ ತಲೆಕೆಳಗಾಯಿತು.

ಇವನ ಎರಡನೆಯ ಯೋಜನೆಯನ್ನೂ ಪ್ರಯೋಗಿಸಲಾಯಿತು. ವೆಂಕಟಪ್ಪ ಬ್ರಿಟಿಷರ 29ನೆಯ ರೆಜಿಮೆಂಟನ್ನು ಪಕ್ಷಕ್ಕೆಳೆಯಲು ತನ್ನ ಕಾರ್ಯಭಾರಿ ಮಹಿಪಾಲ್ ಸಿಂಗನನ್ನು ಕಳುಹಿಸಿಕೊಟ್ಟ. ಆದರೆ ಮಹಿಪಾಲ್ ಸಿಂಗ್ ಆ ಕಾರ್ಯವನ್ನು ಮಾಡಿ ಮುಗಿಸುವ ಮುನ್ನವೇ ಬ್ರಿಟಿಷ್ ಗೂಢಚಾರರ ಕಣ್ಣಿಗೆ ಬಿದ್ದು ಅನುಮಾನಾಸ್ಪದ ರೀತಿಯಲ್ಲಿ ಬಂಧಿಸಲ್ಪಟ್ಟ. ಸೈನ್ಯದಲ್ಲಿ ದಂಗೆಯನ್ನು ಹರಡಲು ಪ್ರಯತ್ನಿಸುತ್ತಿದ್ದನೆಂಬ ಕಾರಣವನ್ನು ನೀಡಿ ಅವನನ್ನು ಗಲ್ಲಿಗೇರಿಸಿದರು. ಹೀಗೆ ಇವನ ಎರಡನೆಯ ಯೋಜನೆಯೂ ಗಾಳಿಗೆ ತೂರಿಹೋಯಿತು.

ಕಡೆಯದಾಗಿ, 1857ರ ದಂಗೆಯ ಪ್ರಧಾನ ಸೂತ್ರಧಾರ ನಾನಾ ಸಾಹೇಬನ ಪ್ರೋತ್ಸಾಹ ಮತ್ತು ಸಹಕಾರವನ್ನು ವೆಂಕಟಪ್ಪ ಬಯಸಿದ್ದ. ಇಂಗ್ಲಿಷರ ಮಗ್ಗಲು ಮುರಿಯಲು ಅರಬ್ಬರು ಮತ್ತು ರೋಹಿಲ್ಲರನ್ನೊಳಗೊಂಡ ಸೈನ್ಯವನ್ನು ಕಟ್ಟಲೂ ಯೋಜಿಸಿದ್ದ. ಅಂತೆಯೇ, ತನ್ನ ವಕೀಲರನ್ನು ನಾನಾ ಸಾಹೇಬನೆಡೆಗೆ ಕಳುಹಿಸಿಕೊಟ್ಟ; ಮತ್ತು ಜನರನ್ನು ಬೃಹತ್ ಪ್ರಮಾಣದಲ್ಲಿ ತನ್ನ ಸೈನ್ಯಕ್ಕೆ ಸೇರಿಸಿಕೊಳ್ಳುವ ಕಾರ್ಯವನ್ನು ಮುಂದುವರಿಸಿದ. ಬ್ರಿಟಿಷರು ವೆಂಕಟಪ್ಪನ ಚಟುವಟಿಕೆಗಳ ಬಗ್ಗೆ ಸದಾ ಜಾಗೃತರಾಗಿದ್ದರು. ವೆಂಕಟಪ್ಪನ ಈ ಬಗೆಯ ಚಲನವಲನಗಳನ್ನರಿತ ಅವರಿಗೆ, ಇವನು ತಮ್ಮ ಸಾಮರ್ಥ್ಯವನ್ನು ಮುರಿಯಲು ಸಿದ್ಧತೆ ನಡೆಸುತ್ತಿರುವನೆಂದು ಅರಿಯಲು ಬಹು ಸಮಯ ಬೇಕಾಗಲಿಲ್ಲ.[3]

ಬ್ರಿಟಿಷರು ಮದರಾಸು ಮತ್ತು ಮುಂಬಯಿಗಳಿಂದ ತಮ್ಮ ದಳಗಳನ್ನು ಸುರಪುರದತ್ತ ಕಳುಹಿಸಿಕೊಟ್ಟರು. ಈ ದಳಗಳು, ರಹಸ್ಯವಾಗಿಯೂ, ಗುಂಪಿನಿಂದ ಕೂಡಿಯೂ ಧಾವಿಸಲಾರಂಭಿಸಿದವು. ಅನಂತರ ಈ ಎರಡೂ ದಳಗಳು ಒಟ್ಟುಗೂಡಿ ಸುರಪುರ ಪಟ್ಟಣದ ಒಳಹೊಕ್ಕು ಲೂಟಿಮಾಡಲು ಪ್ರಾರಂಭಿಸಿದವು. ವೆಂಕಟಪ್ಪ ಇದ್ದಕಿದ್ದಂತೆಯೇ ಉಂಟಾದ ಈ ಅನಾಹುತದಿಂದ ಎದೆಗುಂದಿ, ಸಹಾಯಕ್ಕಾಗಿ ಹೈದರಾಬಾದಿನ ಸಾಲಾರ್‌ಜಂಗನಿಗೆ ಮೊರೆಯಿಟ್ಟ. ಆದರೆ ಸಾಲಾರ್‌ಜಂಗ್ ಬ್ರಿಟಿಷರ ಪರಮ ಮಿತ್ರನಾಗಿದ್ದುದರಿಂದ ವೆಂಕಟಪ್ಪ, ಅವನ ಕೈಯಲ್ಲಿ ಸೆರೆಸಿಕ್ಕು ಬಂದಿಯಾದ; ಬ್ರಿಟಿಷ್ ರಾಜಪ್ರತಿನಿಧಿಯ ವಶಕ್ಕೆ ಒಪ್ಪಿಸಲ್ಪಟ್ಟ. ಬ್ರಿಟಿಷರು ಅವನ ವಿಚಾರಣೆ ನಡೆಸಿದರು. ಅವನನ್ನು ರಾಜಧಾನಿಯಿಂದ ಹೊರಗೊಯ್ದರು. ಅನಂತರ ಬ್ರಿಟಿಷರು ಅವನನ್ನು ತಮ್ಮ ಕೋವಿಯ ಗುಂಡಿಗೆ ಬಲಿ ಕೊಟ್ಟರೆಂದು ತಿಳಿಯುತ್ತದೆ.[4]

ಬಾಬಾ ಸಾಹೇಬ್ ಎಂಬ ಹೆಸರಿನಿಂದ ಪ್ರಖ್ಯಾತನಾದ ನರಗುಂದದ ಭಾಸ್ಕರ್ ರಾವ್ ಭಾವೆಯೂ ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಎದ್ದ ಕ್ರಾಂತಿಯಲ್ಲಿ ಮುಖ್ಯ ಪಾತ್ರವಹಿಸಿದ. ಅದಕ್ಕೆ ಮುಖ್ಯ ಕಾರಣ

---

[3] *The Freedom Struggle in Hyderabad*, Vol. II, pp. 96–97

[4] Ibid., p. 99

ವೇನೆಂದರೆ, ನರಗುಂದದ ಸಿಂಹಾಸನಕ್ಕೆ ಬಾಬಾ ಸಾಹೇಬ ಸ್ವೀಕರಿಸಿದ ದತ್ತುಪುತ್ರನನ್ನು 'ಯುವರಾಜ'ನನ್ನಾಗಿ ಒಪ್ಪಿಕೊಳ್ಳಲು ಬ್ರಿಟಿಷ್ ನ್ಯಾಯಾಲಯ ತಿರಸ್ಕರಿಸಿದ್ದಿತು. ಇದಕ್ಕೆ ಮುನ್ನ ತನ್ನ ಸ್ವಂತ ಮಗ ಮೃತಿಹೊಂದಿದ್ದರಿಂದ ಬಾಬಾ ಸಾಹೇಬ, ಅವಶ್ಯವಾಗಿ ಒಬ್ಬ ಹುಡುಗನನ್ನು ದತ್ತು ತೆಗೆದುಕೊಳ್ಳಲೇ ಬೇಕಾಗಿದ್ದಿತು. ಆದರೆ ಬ್ರಿಟಿಷ್ ಅಧಿಕಾರಿಗಳ ವರ್ತನೆಯಿಂದ ಇವನಿಗೆ ಆಶಾಭಂಗವುಂಟಾಗಿ, ಇದಕ್ಕೆ ಸೇಡು ತೀರಿಸಿಕೊಳ್ಳಲು ಯತ್ನಿಸಿದ. ಮುಂದರಗಿ ಭೀಮರಾವ್, ಕೆಂಚನಗೌಡ ಮತ್ತು ಸರಟೂರಿನ ದೇಸಾಯಿ ಇವರೇ ಮೊದಲಾದ ಕರ್ನಾಟಕ ಧುರೀಣರ ಸಹಾಯವನ್ನು ಪಡೆದು, ಇಡೀ ಕರ್ನಾಟಕಾದ್ಯಂತ ಬ್ರಿಟಿಷರ ವಿರುದ್ಧ ದಂಗೆಯನ್ನು ಪ್ರಾರಂಭಿಸಲು ಒಂದು ಯೋಜನೆಯನ್ನು ಹಾಕಿಕೊಂಡ. ಅದನ್ನು ಸಾಧಿಸಲು ಭಾರಿ ಪ್ರಮಾಣದ ಸಿದ್ಧತೆ ನಡೆಯಿತು. ಆದರೆ ಇವನ ಸಿದ್ಧತೆಗಳು ಬಹು ಬೇಗನೆ ನಿಲ್ಲುವ ಪ್ರಸಂಗವೊದಗಿತು. ಏಕೆಂದರೆ, ಬ್ರಿಟಿಷ್ ಸರ್ಕಾರಕ್ಕೆ ಈ ಬಗ್ಗೆ ಸುಳಿವು ಸಿಕ್ಕಿ, ಮದ್ದು, ಗುಂಡು ಮತ್ತು ಆಯುಧಗಳನ್ನು ನರಗುಂದದಿಂದ ಧಾರವಾಡಕ್ಕೆ ಕೂಡಲೇ ಸಾಗಿಸುವಂತೆ ಅಲ್ಲಿದ್ದ ಬಾಬಾ ಸಾಹೇಬನ ಪ್ರತಿನಿಧಿಗೆ ಸೂಚಿಸಿತು. ಆಗಾಗಲೇ ನರಗುಂದದಲ್ಲಿ ತಮ್ಮ ವಿರುದ್ಧ ದಂಗೆಯೇಳುವ ಲಕ್ಷಣಗಳು ಸ್ಪಷ್ಟವಾಗಿ ಕಂಡುಬರುತ್ತಿದ್ದುದರಿಂದ, ಬ್ರಿಟಿಷರು ತತ್‌ಕ್ಷಣವೇ ತಮ್ಮೆಲ್ಲ ಯುದ್ಧ ಸಾಮಗ್ರಿಗಳನ್ನು, ಸಾಮಾನು ಸರಂಜಾಮುಗಳನ್ನು ಬಂಡುಕೋರರ ಕೈಗೆ ಬೀಳುವ ಮೊದಲೇ ಸುರಕ್ಷಿತ ಪ್ರದೇಶಕ್ಕೆ ಸಾಗಿಸಿದರು. ಬಾಬಾ ಸಾಹೇಬ ಬ್ರಿಟಿಷರು ಮಾಡಿಕೊಂಡ ಮನವಿಗೆ ಕಿವಿಗೊಡದೆ ಅವರ ವಿರುದ್ಧವಾಗಿ ದಂಗೆಯೆದ್ದ. ಈ ದಂಗೆಯನ್ನಡಗಿಸಲು ಮಾನ್‌ಸನ್ ಎಂಬೊಬ್ಬ ಬ್ರಿಟಿಷ್ ಸೇನಾಧಿಕಾರಿ ಗದಗ್‌ನಿಂದ ನರಗುಂದದೆಡೆಗೆ ಧಾವಿಸಿ ಬಂದು, ನರಗುಂದಕ್ಕೆ ಕೇವಲ 15 ಮೈಲಿ ದೂರವಿದ್ದ ಸೊರಬದ ಬಳಿ ಬೀಡು ಬಿಟ್ಟ. ಆದರೆ 1858ರ ಮೇ 29ರಂದು ಬಾಬಾ ಸಾಹೇಬನು ಮಾನ್‌ಸನ್‌ನ ಸೇನಾ ಶಿಬಿರದ ಮೇಲೆ ದಾಳಿಮಾಡಿ ಅವನನ್ನು ಕೊಂದು ಹಾಕಿದ. ಈ ಸುದ್ದಿ ಬ್ರಿಟಿಷರ ಕಿವಿಗೆ ಬೀಳುತ್ತಲೇ ಅವರು ಮಾಲ್‌ಕಾಮ್ ಎಂಬ ದಳಪತಿಯ ಅಧೀನದಲ್ಲಿ ಧಾರವಾಡದಿಂದ ಮತ್ತೊಂದು ಪಡೆಯನ್ನು ಕಳುಹಿಸಿ ಕೊಟ್ಟರು. ಮಾಲ್‌ಕಾಮ್ ನರಗುಂದದ ಕೋಟೆಯನ್ನು ಮುತ್ತಿ ಅದನ್ನು ಕೆಡವಿ ಹಾಕಿದನಲ್ಲದೆ, ಬಾಬಾ ಸಾಹೇಬನನ್ನು ಜೀವಸಹಿತ ಸೆರೆಹಿಡಿದ. ಅನಂತರ ಅವನನ್ನು ಬೆಳಗಾಂ ನಗರಕ್ಕೆ ಸಾಗಿಸಿ ಅಲ್ಲಿ ಅವನಿಗೆ ಫಾಸಿ ಶಿಕ್ಷೆ ವಿಧಿಸಿದರು.

ಇನ್ನೊಬ್ಬ ಸ್ವಾತಂತ್ರ್ಯವೀರ, ಮುಂದರಗಿಯ ಭೀಮರಾಯನೂ ಬ್ರಿಟಿಷರ ವಿರುದ್ಧ ದಂಗೆಯೆದ್ದ-ಇವನು ಮೊದಲು ಬ್ರಿಟಿಷರ ಕೈಕೆಳಗಿನ ಒಬ್ಬ ಅಧಿಕಾರಿಯಾಗಿದ್ದ. ಬ್ರಿಟಿಷರು ಇವನನ್ನು ಬಳ್ಳಾರಿ ಪ್ರದೇಶದಲ್ಲಿ ತಹಸೀಲ್ದಾರನನ್ನಾಗಿ ನೇಮಿಸಿದ್ದರು. ಕೆಲವು ಕಾರಣಗಳ ಮೇಲೆ ಇವನನ್ನು ಆ ಸ್ಥಾನದಿಂದ ಕಿತ್ತು ಹಾಕಿದರು. ಬ್ರಿಟಿಷರ ಈ ವರ್ತನೆ ಇವನನ್ನು ರೇಗಿಸಿತು. ಬ್ರಿಟಿಷರನ್ನು ಕರ್ನಾಟಕದಿಂದಲೇ ಹೊರದೂಡಬೇಕೆಂದು ಸಂಕಲ್ಪಿಸಿ, ಕರ್ನಾಟಕದ ಮುಖ್ಯ ಕ್ರಾಂತಿಕಾರರೊಡನೆ ಇವನು ತನ್ನ ಸಂಬಂಧ ಬೆಳೆಸಿದ. ಅಲ್ಲದೆ ಇವನು 1857ರ ಸಂಗ್ರಾಮದ ಪ್ರಮುಖ ನಾಯಕನಾಗಿದ್ದ ನಾನಾ ಸಾಹೇಬ ನೊಡನೆಯೂ ಸಾಕಷ್ಟು ಸಂಬಂಧ ಬೆಳೆಸಿದ್ದನೆಂದು ತಿಳಿದು ಬರುತ್ತದೆ.[5] ಭೀಮರಾಯನ ಎಲ್ಲ ಚಟುವಟಿಕೆಗಳ ಮೇಲೂ ಧಾರವಾಡದ ಜಿಲ್ಲಾಧಿಕಾರಿಯಾಗಿದ್ದ ಓಗಿಲ್‌ವಿ ಕಣ್ಣಿಟ್ಟು ಕಾಯುತ್ತಿದ್ದ. ಹಮ್ಮಿಗಿ ಭೀಮರಾಯನ ಸೇನಾ ಚಟುವಟಿಕೆಗಳ ಕೇಂದ್ರವಾಗಿದ್ದಿತು. ಓಗಿಲ್‌ವಿ ದುಂಬಾಲಿನಲ್ಲಿದ್ದ ಬ್ರಿಟಿಷ್ ಸೇನಾಧಿಪತಿಗಳಿಗೆ ಹಮ್ಮಿಗಿಯಲ್ಲಿಯ ಶಸ್ತ್ರಾಗಾರವನ್ನು ಹಿಡಿಯಲು ಸೂಚನೆ ಕೊಟ್ಟ. ಅವನ ಆಜ್ಞೆಯನ್ನನುಸರಿಸಿ ಬ್ರಿಟಿಷ್ ಸೇನೆ ಹಮ್ಮಿಗಿಯತ್ತ ಚಲಿಸುತ್ತಲೇ, ಭೀಮರಾವ್ ದುಂಬಾಲಿನತ್ತ ಹೊರಟು ಅಲ್ಲಿದ್ದ ಬ್ರಿಟಿಷರ ಖಜಾನೆಯನ್ನು ಲೂಟಿಮಾಡಿದ. ಅಲ್ಲಿಂದ ತನ್ನ ಜನರೊಂದಿಗೆ ಭೀಮರಾವ್ ಕೊಪ್ಪಳದತ್ತ ಸಾಗಿದ. ಅಲ್ಲಿ ಬ್ರಿಟಿಷ್ ಜಿಲ್ಲಾಧಿಕಾರಿಯ ಪಡೆಗೂ ಭೀಮರಾಯನ ಜನರಿಗೂ ಘರ್ಷಣೆ ನಡೆಯಿತು. ಭೀಮರಾವ್ ಸ್ಥಳದಲ್ಲೇ ಅಸುನೀಗಿದ. ಅವನ ಜನರಲ್ಲಿ ಬಹುಮಂದಿ ಬ್ರಿಟಿಷರ ಬಂದೂಕಿನ ಬಾಯಿಗೆ ತುತ್ತಾದರು. ಉಳಿದವರು ಕೈಸೆರೆ ಸಿಕ್ಕರು.

ಇದೇ ಸಮಯದಲ್ಲಿ ಹುಲ್‌ಗಲಿಯ ಬೇಡರೂ ಬ್ರಿಟಿಷರ ವಿರುದ್ಧ ದಂಗೆ ಎದ್ದರು. ಇವರು

---

5 ತಿ. ತಾ. ಶರ್ಮ: 'ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ', ಪು. 105

1857ರ ಸಂಗ್ರಾಮದಲ್ಲಿ ಪ್ರವೇಶಿಸಲು, ಮಹಾರಾಷ್ಟ್ರದ ದಕ್ಷಿಣ ವಲಯದಲ್ಲಿ ಬ್ರಿಟಿಷರ ಕಾರ್ಯಭಾರಿಯಾಗಿ ಅಧಿಕಾರ ನಿರ್ವಹಿಸುತ್ತಿದ್ದ ಸೇಟನ್‌ಕಾರ್ ಎಂಬುವನು ಬೇಡರ ವಿರುದ್ಧ ಹೊರಡಿಸಿದ ಆಜ್ಞೆಯೇ ಮುಖ್ಯ ಕಾರಣವಾಗಿದ್ದಿತು. 1857ರಲ್ಲಿ ಬ್ರಿಟಿಷ್ ಸರ್ಕಾರ ಹೊರಡಿಸಿದ 'ಶಸ್ತ್ರತ್ಯಾಗ ಕಾಯಿದೆ'ಯ ಪ್ರಕಾರ, ಆಯುಧವನ್ನು ಹೊಂದಿದವರೆಲ್ಲರೂ ಸರ್ಕಾರದ ಅನುಮತಿಯನ್ನು ಪಡೆಯಬೇಕಾಗಿತ್ತು. ಇದು ಬೇಡರಿಗೂ ಅನ್ವಯಿಸುತ್ತಿತ್ತು. ಆದರೆ ಬೇಡರು ಈ ಕಾಯಿದೆಯನ್ನು ವಿರೋಧಿಸಿದರು. ತತ್ಪರಿಣಾಮವಾಗಿ, 1857ರ ನವೆಂಬರ್ 29ರಂದು, ಲೆಫ್ಟಿನೆಂಟ್ ಕಾರ್ ತನ್ನ ಪಡೆಯೊಂದಿಗೆ ಬೇಡರು ವಾಸಿಸುತ್ತಿದ್ದ ಹಳ್ಳಿಯನ್ನು ಮುತ್ತಿದ. ಎರಡು ಗುಂಪಿನ ನಡುವೆಯೂ ಹೋರಾಟ ನಡೆದು ಬೇಡರಲ್ಲಿ ಬಹುಮಂದಿ ಸತ್ತರು; ಉಳಿದವರು ಬ್ರಿಟಿಷರ ಸೆರೆಯಾಳುಗಳಾದರು. ಹೀಗೆ ಬ್ರಿಟಿಷರು, ಬೇಡರು ಪ್ರಾರಂಭಿಸಿದ ದಂಗೆಯ ಹುಟ್ಟಡಗಿಸಿಬಿಟ್ಟರು.

ಏನೇ ಆದರೂ, 1857ರ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕ ತನ್ನ ಪಾಲಿನ ಪಾತ್ರವನ್ನು ಯಶಸ್ವಿಯಾಗಿ ನಿರ್ವಹಿಸಿತು; ಬ್ರಿಟಿಷರ ಆಡಳಿತವನ್ನು ತನ್ನ ಶಕ್ತಿಮೀರಿ ವಿರೋಧಿಸಿತು. ಸುರಪುರದ ವೆಂಕಟಪ್ಪ ನಾಯಕ, ನರಗುಂದದ ಬಾಬಾಸಾಹೇಬ್, ಮುಂಡರಗಿಯ ಭೀಮರಾವ್, ಹಲಗಲಿಯ ಬೇಡರು ಇವರೇ ಮೊದಲಾದವರು 1857ರ ಸಂಗ್ರಾಮದಲ್ಲಿ ಉತ್ತರ ಭಾರತದಲ್ಲಿ ಹೋರಾಡಿದ ಸ್ವಾತಂತ್ರ್ಯ ವೀರರಷ್ಟೇ ಪ್ರಮುಖರೆನಿಸಿದ್ದಾರೆ. ಕರ್ನಾಟಕದ ಸ್ವಾತಂತ್ರ್ಯ ವೀರರುಗಳ ಸಾಲಿನಲ್ಲಿ ಇವರುಗಳ ಹೆಸರು ಕೀರ್ತಿಗಳು ಶಾಶ್ವತವಾಗಿ ಬೆಳಗುತ್ತಿರುತ್ತವೆ.

ವಸ್ತುಕೋಶ

ನಾಲ್ಕನೆಯ ಯೋಜನೆಯ ನಡುಗಾಲದ ವಿವೇಚನೆ

ಯೋಜನಾ ಆಯೋಗ ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ನಡುಗಾಲದ ವಿವೇಚನೆಯನ್ನು 1971ರ ಡಿಸೆಂಬರ್ 22ರಂದು ಪಾರ್ಲಿಮೆಂಟಿನ ಮುಂದೆ ಮಂಡಿಸಿತು. ಈ ವರದಿಯಲ್ಲಿ ನಾಲ್ಕನೆಯ ಯೋಜನೆಯ ಮೊದಲ ಎರಡು ವರ್ಷಗಳಲ್ಲಿ ಆರ್ಥಿಕ ಕ್ಷೇತ್ರದಲ್ಲಾಗಿರುವ ಪ್ರಗತಿಯನ್ನು ಕೂಲಂಕಷವಾಗಿ ವಿಶ್ಲೇಷಿಸಲಾಗಿದೆ. ಇದಲ್ಲದೆ ಯೋಜನೆಯ ಉಳಿದ ಮೂರು ವರ್ಷಗಳಲ್ಲಿ ಸಾಧಿಸಬೇಕಾದ ಆರ್ಥಿಕ ಪ್ರಗತಿಯ ವೇಗದ ವಿಷಯವನ್ನು ಈ ವರದಿಯಲ್ಲಿ ನೋಡಬಹುದು. ಆರ್ಥಿಕ ಪ್ರಗತಿಯ ಹಾದಿಯಲ್ಲಿ ಕೆಲವು ಅಡ್ಡಿ ಆತಂಕಗಳು ಬರುತ್ತಿವೆಯೆಂದೂ ಅವುಗಳನ್ನು ಸರಿಪಡಿಸಲು ತಕ್ಕ ಕಾರ್ಯಕ್ರಮಗಳನ್ನು ತತ್‌ಕ್ಷಣವೇ ಕೈಗೊಳ್ಳಬೇಕೆಂದೂ ಕೈಗಾರಿಕಾ ಉತ್ಪಾದನೆಯನ್ನು ಅತ್ಯಧಿಕಗೊಳಿಸಬೇಕೆಂದೂ ಆಯೋಗದ ಅಭಿಪ್ರಾಯ. ಇಲ್ಲದಿದ್ದರೆ ನಾಲ್ಕನೆಯ ಯೋಜನೆಯ ಗುರಿಗಳನ್ನು ಮುಟ್ಟಲು ಸಾಧ್ಯವಾಗುವುದಿಲ್ಲವೆಂದು ಅದು ತನ್ನ ವರದಿಯಲ್ಲಿ ತಿಳಿಸಿರುತ್ತದೆ.

ನಾಲ್ಕನೆಯ ಯೋಜನೆಯಲ್ಲಿ ರಾಷ್ಟ್ರೀಯ ವರಮಾನವನ್ನು, 1968–69ರ ಬೆಲೆಯಲ್ಲಿ, 28,800 ಕೋಟಿ ರೂಪಾಯಿಗಳಿಂದ 37,900 ಕೋಟಿ ರೂಪಾಯಿಗಳಿಗೆ ಹೆಚ್ಚಿಸಬೇಕೆಂದು ಅಂದಾಜು ಮಾಡಲಾಗಿತ್ತು. ಅಂದರೆ ಇದನ್ನು ಸಾಧಿಸಲು ರಾಷ್ಟ್ರೀಯ ವರಮಾನವು ವರ್ಷಕ್ಕೆ ಸರಾಸರಿ ಸೇ. 5.6ರಷ್ಟು ಹೆಚ್ಚಬೇಕು. ಮೊದಲನೆಯ ಎರಡು ವರ್ಷಗಳ ಪ್ರಗತಿಯನ್ನು ತೆಗೆದುಕೊಂಡರೆ, ರಾಷ್ಟ್ರೀಯ ವರಮಾನ 1969–70ರಲ್ಲಿ ಸೇಕಡ 5.3ರಷ್ಟು ಹೆಚ್ಚಿತ್ತು ಮತ್ತು 1970-71ರಲ್ಲಿ ಇದು ಸೇಕಡ 4.8ರಷ್ಟು ಅಧಿಕವಾಗಿತ್ತು. ಎರಡು ವರ್ಷಗಳ ವರಮಾನದ ಸರಾಸರಿ ಏರಿಕೆಯನ್ನು ತೆಗೆದುಕೊಂಡರೆ ಇದು ಸೇಕಡ 5ರಷ್ಟಾಗುತ್ತದೆ. ಅಂದರೆ ಯೋಜನೆಯಲ್ಲಿ ಸಾಧಿಸಬೇಕಾದ ಗುರಿಗಿಂತ ಇದು ಸೇಕಡ 0.6ರಷ್ಟು ಕಡಿಮೆಯಾಗಿರುತ್ತದೆ.

ರಾಷ್ಟ್ರೀಯ ವರಮಾನದ ಬೆಳವಣಿಗೆಯ ವೇಗದಲ್ಲಿ ಕುಸಿತ ಕಂಡು ಬಂದಿರುವುದು ಎಲ್ಲರಿಗೂ ಕಳವಳವನ್ನುಂಟುಮಾಡಿದೆ. ನಾಲ್ಕನೆಯ ಯೋಜನೆ ತನ್ನ ಧ್ಯೇಯೋದ್ದೇಶಗಳನ್ನು ಸಾಧಿಸಬೇಕಾದರೆ ಮುಂದಿನ ಮೂರು ವರ್ಷಗಳಲ್ಲಿ ದೇಶದ ವರಮಾನ ವರ್ಷಕ್ಕೆ ಸರಾಸರಿ ಸೇಕಡ 6.2ರಷ್ಟು ಹೆಚ್ಚಬೇಕಾಗುತ್ತದೆ.

ವ್ಯವಸಾಯ ಕ್ಷೇತ್ರದಲ್ಲಿ ಉತ್ಪಾದನೆ 1969–71ರ ಅವಧಿಯಲ್ಲಿ ಪ್ರತಿವರ್ಷವೂ ಸರಾಸರಿ ಸೇಕಡ 5.2ರಷ್ಟು ಹೆಚ್ಚಿದೆ. ಅಂದರೆ ಯೋಜನೆಯಲ್ಲಿ ನಿಗದಿ ಮಾಡಿದ್ದ ಗುರಿಗಿಂತ ಸೇಕಡ 0.2ರಷ್ಟು ಹೆಚ್ಚಾಗಿರುತ್ತದೆ. ಇದು ಬಹಳ ಸ್ವಾಗತಾರ್ಹವಾದ ವಿಷಯ. ವ್ಯವಸಾಯಾಭಿವೃದ್ಧಿಯಲ್ಲಿ ನಾವು ಇಷ್ಟಕ್ಕೇ ಸಂತೃಪ್ತರಾಗಬಾರದೆಂದೂ ಯೋಜನಾ ಆಯೋಗ ಎಚ್ಚರಿಕೆ ನೀಡಿದೆ.

ನಾಲ್ಕನೆಯ ಯೋಜನೆಯ ಮೊದಲ ಎರಡು ವರ್ಷಗಳಲ್ಲಿ ಕೈಗಾರಿಕಾ ಕ್ಷೇತ್ರದಲ್ಲಿ ಆಗಿರುವ ಪ್ರಗತಿಯನ್ನು ನೋಡಿದರೆ ತುಂಬ ನಿರಾಶೆಯುಂಟಾಗುತ್ತದೆ. 1969–70 ಮತ್ತು 1970–71ರಲ್ಲಿ ಕೈಗಾರಿಕಾ ಉತ್ಪಾದನೆ ಸರಾಸರಿ ಸೇಕಡ 4.1ರಷ್ಟು ಹೆಚ್ಚಿರುತ್ತದೆ. ಈ ಕ್ಷೇತ್ರದಲ್ಲಿ ವರ್ಷಕ್ಕೆ ಸರಾಸರಿ ಸೇಕಡ 7.7ರಷ್ಟು ಉತ್ಪಾದನೆ ಹೆಚ್ಚಬೇಕೆಂದು ಯೋಜನೆಯಲ್ಲಿ ನಿಗದಿ ಮಾಡಲಾಗಿತ್ತು. ಆದ್ದರಿಂದ ಈ ಕ್ಷೇತ್ರ ತನ್ನ ಧ್ಯೇಯೋದ್ದೇಶಗಳನ್ನು ಸಾಧಿಸಬೇಕಾದರೆ ಮುಂದಿನ ಮೂರು ವರ್ಷಗಳಲ್ಲಿ ವರ್ಷಕ್ಕೆ ಸೇಕಡ 10.1ರಷ್ಟು ಉತ್ಪಾದನೆಯನ್ನು ಹೆಚ್ಚಿಸಬೇಕೆಂದು ಆಯೋಗ ತಿಳಿಸುತ್ತದೆ. ಕೈಗಾರಿಕಾ ಕ್ಷೇತ್ರದ ಸಾಮರ್ಥ್ಯವನ್ನು ಸಾಕಷ್ಟು ಉಪಯೋಗಿಸಿಕೊಳ್ಳದಿದ್ದುದರಿಂದಲೂ ಅದರ ಸಾಮರ್ಥ್ಯದ ಬೆಳವಣಿಗೆಗೆ

ಕೆಲವು ಅಂಶಗಳು ಅಷ್ಟು ಬಂದುದರಿಂದಲೂ. ಕೈಗಾರಿಕಾ ಉತ್ಪಾದನೆಯ ವೇಗದಲ್ಲಿ ಕಡಿಮೆಯಾಯಿತೆಂದು/ಯೋಜನಾ ಆಯೋಗ ತನ್ನ ವರದಿಯಲ್ಲಿ ತಿಳಿಸಿದೆ.

ಯೋಜನಾ ಆಯೋಗದ ಪ್ರಕಾರ ವಿದೇಶೀ ವ್ಯಾಪಾರ. ರಸ್ತೆ ಮತ್ತು ಸಾರಿಗೆ, ಉದ್ಯೋಗ. ನೀರಾವರಿ, ವಿದ್ಯುಚ್ಛಕ್ತಿ ಮುಂತಾದ ಇತರ ಕ್ಷೇತ್ರಗಳಲ್ಲಿ ನಾಲ್ಕನೆ ಯೋಜನೆಯ ಮೊದಲ ಎರಡು ವರ್ಷಗಳಲ್ಲಿ ಆಗಿರುವ ಸಾಧನೆ ಧ್ಯೇಯೋದ್ದೇಶಗಳಿಗಿಂತಬಹಳ ದೂರವಿರುತ್ತದೆ.

ಯೋಜನಾ ಮಂಡಳಿ ತನ್ನ ನಾಲ್ಕನೆಯ ಯೋಜನೆಯ ನಡುಗಾಲದ ವಿವೇಚನೆಯಲ್ಲಿ ಇಂದಿನ ಆರ್ಥಿಕತೆಯ ಪ್ರಗತಿಯನ್ನು ಕೂಲಂಕಷವಾಗಿ ವಿಶ್ಲೇಷಿಸಿದೆ. ಮುಂದಿನ ಮೂರು ವರ್ಷಗಳಲ್ಲಿ ಯೋಜನೆಯ ಧ್ಯೇಯೋದ್ದೇಶಗಳನ್ನು ಸಾಧಿಸಲು ತಕ್ಕ ಕ್ರಮಗಳನ್ನು ಕೈಗೊಳ್ಳಬೇಕೆಂದು ತಿಳಿಸುತ್ತದೆ. ಆದರೆ ಯೋಜನಾ ಮಂಡಲಿ ಇದಕ್ಕೆ ಯಾವ ರೀತಿಯ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂಬ ವಿಷಯವನ್ನು ಹೇಳದಿರುವುದು ತುಂಬ ಶೋಚನೀಯ ಸಂಗತಿ. ಸರ್ಕಾರದವರು ಆರ್ಥಿಕ ಪ್ರಗತಿಯ ವೇಗವನ್ನು ತ್ವರಿತಗೊಳಿಸಲು ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳಲು ಪ್ರಯತ್ನಿಸಿದರೂ ಕಾಲಾವಕಾಶ ಕಡಿಮೆ ಇರುವುದರಿಂದ ಯೋಜನೆಯ ಧ್ಯೇಯೋದ್ದೇಶಗಳನ್ನು ಸಾಧಿಸುವ ಸಂಭವ ಬಹಳ ಕಡಿಮೆ.

ಐದನೆಯ ಪಂಚವಾರ್ಷಿಕ ಯೋಜನೆಯ ರೂಪರೇಷೆಗಳು

ಯೋಜನಾ ಆಯೋಗ ತಯಾರು ಮಾಡಿದ್ದ 'ಐದನೆಯ ಪಂಚವಾರ್ಷಿಕ ಯೋಜನೆಯ ರೂಪರೇಷೆಗಳು: 1974–79' ಎಂಬ ಪತ್ರವನ್ನು (ಪೇಪರ್) ಕಳೆದ ತಿಂಗಳ ಮೇ 31ರಂದು ರಾಷ್ಟ್ರೀಯ ಅಭಿವೃದ್ಧಿ ಮಂಡಲಿ ತತ್ತ್ವಶಃ ಒಪ್ಪಿಕೊಂಡಿದೆ. ಈ ಪ್ರಬಂಧದ ಮುಖ್ಯಗುರಿಯೇನೆಂದರೆ ಯೋಜನೆ ಮತ್ತು ಅಭಿವೃದ್ಧಿ ವಿಷಯಗಳಲ್ಲಿ ಸರ್ಕಾರ ಹೊಸದಾಗಿ ಯೋಚಿಸುತ್ತಿರುವ ಅಂಶಗಳನ್ನು ಜನತೆಯ ಮುಂದಿಡುವುದು. ಯೋಜನಾ ಆಯೋಗದ ಪ್ರಬಂಧದ ಪ್ರಕಾರ. ಐದನೆಯ ಯೋಜನೆಯಲ್ಲಿ ಸರ್ಕಾರಿ ಕ್ಷೇತ್ರದಲ್ಲಿ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ವೆಚ್ಚ ಮಾಡಬೇಕೆಂದಿರುವ ಹಣದ ಎರಡರಷ್ಟನ್ನು ವೆಚ್ಚ ಮಾಡಲಾಗುವುದೆಂದು ಅಂದಾಜು ಮಾಡಲಾಗಿದೆ. ಅಂದರೆ ಐದನೆಯ ಯೋಜನೆಯಲ್ಲಿ ಸರ್ಕಾರಿ ಕ್ಷೇತ್ರದಲ್ಲಿ ಸುಮಾರು 30.000 ಕೋಟಿ ರೂಪಾಯಿಗಳಿಂದ 35.000 ಕೋಟಿ ರೂಪಾಯಿಗಳಷ್ಟು ವೆಚ್ಚಮಾಡುವ ಅಂದಾಜು ಮಾಡಲಾಗಿದೆ. ಮತ್ತೊಂದು ಪ್ರಮುಖ ಅಂಶವೇನೆಂದರೆ ಐದನೆಯ ಯೋಜನೆ ಹಿಂದಿನ ಯೋಜನೆಗಳಿಗಿಂತ ಗುರಿ. ಪ್ರಧಾನತೆ ಮತ್ತು ತಂತ್ರಗಳ ವಿಷಯದಲ್ಲಿ ಬೇರೆ ರೀತಿ ಇರುತ್ತದೆ. ಬಡತನದ ನಿವಾರಣೆ ಮತ್ತು ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಉದ್ಯೋಗವನ್ನು ಒದಗಿಸುವುದು ಐದನೆಯ ಯೋಜನೆಯ ಮುಖ್ಯಗುರಿ. ಇದುವರೆಗಿನ ಪಂಚವಾರ್ಷಿಕ ಯೋಜನೆಗಳು. ದೇಶದ ಆದಾಯ ಬಹಳ ತ್ವರಿತ ರೀತಿಯಲ್ಲಿ ಜಾಸ್ತಿಯಾಗುತ್ತಿದ್ದರೆ ಅದು ಅದರಷ್ಟಕ್ಕೇ ದೇಶದಲ್ಲಿ ಹೆಚ್ಚಿಗೆ ಉದ್ಯೋಗಗಳನ್ನು ಒದಗಿಸಿ ಪೂರ್ಣ ಉದ್ಯೋಗಸ್ಥಿತಿಯನ್ನು ತರುತ್ತದೆ ಮತ್ತು ಬಡಜನರ ಜೀವನ ಮಟ್ಟವನ್ನು ಮೇಲಕ್ಕೇರಿಸುತ್ತದೆ ಎಂಬ ಭಾವನೆಯಿಂದ ಕೂಡಿದ್ದುವು. ಜೊತೆಗೆ ದೇಶದಲ್ಲಿ ಐಶ್ವರ್ಯ ಮತ್ತು ಆದಾಯಗಳಲ್ಲಿರುವ ಅಸಮತೆಯನ್ನು ಕಡಿಮೆ ಮಾಡಲು ಸರ್ಕಾರದ ನೀತಿಗಳ ವ್ಯಾಪ್ತಿಯೂ ಮಿತವಾಗಿರಬೇಕೆಂಬುದಾಗಿ ಭಾವಿಸಲಾಗಿತ್ತು.

ಬಡತನವನ್ನು ಹೋಗಲಾಡಿಸಲು. ಅದರಲ್ಲೂ ಅತ್ಯಂತ ದಾರಿದ್ರ್ಯದಿಂದ ನರಳುತ್ತಿರುವ ಜನತೆಗೆ ಅತ್ಯಾವಶ್ಯಕವಾಗಿ ಬೇಕಾದ ಎಲ್ಲಾ ಸೌಕರ್ಯಗಳನ್ನು ಒದಗಿಸುವ ಭರವಸೆಯನ್ನು ಐದನೆಯ ಯೋಜನೆ ನೀಡುತ್ತದೆ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ಜವಾಬ್ದಾರಿ ಏನೆಂಬುದನ್ನೂ ಯೋಜನಾ ಆಯೋಗದ ಲೇಖನ ತೋರಿಸುತ್ತದೆ.

ಕಳೆದ 20 ವರ್ಷಗಳ ಆರ್ಥಿಕ ಅಭಿವೃದ್ಧಿಯನ್ನು ವಿಮರ್ಶಿಸಿದಾಗ ಬಡವರ ಪ್ರಮಾಣ. ಒಂದು ಗೊತ್ತಾದ ಕನಿಷ್ಠ ಮಟ್ಟದ ಜೀವನವನ್ನು ಆಧಾರವಾಗಿಟ್ಟುಕೊಂಡರೆ. ಬಹಳ ಮಟ್ಟಿಗೆ ಕಡಿಮೆಯಾಗಿದ್ದರೂ ಬಡತನದ ರೇಖೆಯ ಕೆಳಗಡೆ ಇರುವವರ ಒಟ್ಟು ಸಂಖ್ಯೆ ಇಂದಿಗೂ 20 ವರ್ಷಗಳ ಹಿಂದೆ ಎಷ್ಟು ಇತ್ತೋ ಅಷ್ಟೇ ಇದೆ ಎಂಬ ವಿಷಯವನ್ನು ಯೋಜನಾ ಆಯೋಗದ ಪುಟ್ಟ ವರದಿ ತಿಳಿಸುತ್ತದೆ. ನಿರುದ್ಯೋಗ

ಮತ್ತು ಐಶ್ವರ್ಯ ಹಂಚಿಕೆಯ ಸಮಸ್ಯೆಗಳ ಕಡೆ ಹೆಚ್ಚಿಗೆ ಗಮನ ಕೊಡದೆ ಹಿಂದೆ ಅನುಸರಿಸುತ್ತಿದ್ದಂತೆ ಆರ್ಥಿಕ ಅಭಿವೃದ್ಧಿಗೇ ಹೆಚ್ಚು ಗಮನ ಕೊಟ್ಟರೆ ಕಡು ಬಡತನದಿಂದ ನರಳುತ್ತಿರುವ ಗುಂಪಿಗೆ ಬೇಕಾದ ಕನಿಷ್ಠ ಅನುಭೋಗ ವಸ್ತುಗಳನ್ನು ಒದಗಿಸಲು ಕೊನೆಯ ಪಕ್ಷ 30ರಿಂದ 50ವರ್ಷಗಳು ಬೇಕಾಗುತ್ತವೆ ಎಂಬುದು ಯೋಜನಾ ಮಂಡಲಿಯ ಅಭಿಪ್ರಾಯ. ಇತ್ತೀಚೆಗೆ ದೇಶದ ಸಂಪನ್ಮೂಲಗಳು ಹೆಚ್ಚುತ್ತಿರುವುದರಿಂದ ಒಂದು ಕಡೆ ಅಭಿವೃದ್ಧಿಯ ವೇಗವನ್ನು ಹೆಚ್ಚಿಸಿಯೂ ಮತ್ತೊಂದು ಕಡೆ ದಾರಿದ್ರ್ಯ ಮತ್ತು ನಿರುದ್ಯೋಗ ಸಮಸ್ಯೆಗಳನ್ನು ಪರಿಹಾರ ಮಾಡಲು ಸಾಧ್ಯವಿದೆ ಎಂಬುದನ್ನು ಈ ವರದಿ ತಿಳಿಸುತ್ತದೆ. ಒಂದು ಕಡೆ ಕನಿಷ್ಠ ಮಟ್ಟದ ಜೀವನ ನಡೆಸಲು ಬೇಕಾದ ವಸ್ತುಗಳನ್ನು ಕೊಳ್ಳಲು ಈ ದಿನ ಕೊನೆಯ ಪಕ್ಷ ಒಬ್ಬ ವ್ಯಕ್ತಿಗೆ ಒಂದು ತಿಂಗಳಿಗೆ 35ರಿಂದ 40 ರೂಪಾಯಿಗಳು ಬೇಕು ಎಂದು ಯೋಜನಾ ಸಮಿತಿಯವರು ಅಂದಾಜು ಮಾಡಿರುತ್ತಾರೆ. ಭಾರತ ದೇಶದಲ್ಲಿ ಈ ಕನಿಷ್ಠ ಮಟ್ಟಕ್ಕಿಂತ ಕೆಳಗಡೆ ಇರುವವರ ಸಂಖ್ಯೆ ಸುಮಾರು 22 ಕೋಟಿ. ಬಡತನವನ್ನು ನಿವಾರಿಸಲು ನೇರಮಾರ್ಗವೆಂದರೆ ದೇಶದ ಎಲ್ಲ ಕಡೆಯಲ್ಲೂ ಅತ್ಯಧಿಕ ಪ್ರಮಾಣದಲ್ಲಿ ಉದ್ಯೋಗಾವಕಾಶಗಳನ್ನು ಕಲ್ಪಿಸುವುದು; ಮತ್ತೊಂದು ಕಡೆ ಆಹಾರ ವಸ್ತುಗಳ ಬೆಲೆಯಲ್ಲಿ ಒಂದು ಸ್ಥಿರತೆಯನ್ನು ತರುವುದು. ಆದ್ದರಿಂದಲೇ ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ ಅತ್ಯಾವಶ್ಯಕವಾದ ಅನುಭೋಗ ವಸ್ತುಗಳ ಬೆಲೆಯಲ್ಲಿ ಸ್ಥಿರತೆಯನ್ನು ಕಾಪಾಡುವುದು ಒಂದು ಮುಖ್ಯ ಗುರಿಯಾಗಿದೆ. ಇದಕ್ಕಾಗಿ ಸರ್ಕಾರದವರು ನಿತ್ಯ ಜೀವನದಲ್ಲಿ ಬೇಕಾಗುವ ಪದಾರ್ಥಗಳ ಸರಬರಾಯಿಯನ್ನು ಹೆಚ್ಚಿಸಲು ತಕ್ಕ ಉತ್ಪಾದನ ನೀತಿಗಳನ್ನು ಅನುಸರಿಸಬೇಕು. ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ ಬಂಡವಾಳ ವಿನಿಯೋಜನೆಯನ್ನು ನಿರ್ಧರಿಸುವಾಗ ಮತ್ತು ಉತ್ಪಾದನ ಕಾರ್ಯಗಳನ್ನು ನಿಗದಿಗೊಳಿಸುವಾಗ ಮೇಲ್ಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಂಡಿರಬೇಕು. ಈ ಎಲ್ಲ ಬಗೆಯ ಕಾರ್ಯಕ್ರಮಗಳನ್ನು ಕೈಗೊಂಡು ಸಾಕಷ್ಟು ಉದ್ಯೋಗವನ್ನು ಒದಗಿಸಿಕೊಟ್ಟರೂ, ಈ ಗುಂಪಿನಲ್ಲಿರುವವರ ಆದಾಯ ಅವರಿಗೆ ಬೇಕಾದ ಕನಿಷ್ಠ ಜೀವನ ಮಟ್ಟವನ್ನು ಮುಟ್ಟಲು ಸಾಲುವುದಿಲ್ಲ. ಆದ್ದರಿಂದ ಸರ್ಕಾರದವರು ಒಂದು ರಾಷ್ಟ್ರೀಯ ಯೋಜನೆಯ ಮೂಲಕ ಇವರೆಲ್ಲರಿಗೂ ವಿದ್ಯಾಭ್ಯಾಸ, ಆರೋಗ್ಯರಕ್ಷಣೆ, ಕುಡಿಯುವ ನೀರು, ವಸತಿಗೃಹಗಳು, ವಿದ್ಯುಚ್ಛಕ್ತಿ ಸೌಕರ್ಯ ಮುಂತಾದವನ್ನು ಪುಕ್ಕಟೆಯಾಗಿ ಒದಗಿಸಬೇಕು. ಐದನೆಯ ಯೋಜನೆಯಲ್ಲಿ ಹೆಚ್ಚು ಹೆಚ್ಚು ಉದ್ಯೋಗ ಒದಗಿಸಲು ಸಣ್ಣ ನೀರಾವರಿ, ಭೂಸಾರ ಸಂರಕ್ಷಣೆಯ ಕಾರ್ಯ, ಪ್ರಾಂತೀಯ ಅಭಿವೃದ್ಧಿ ಕಾರ್ಯಗಳು, ಕೋಳಿ ಮತ್ತು ಜಾನುವಾರುಗಳ ಸಾಕಣೆ, ಅರಣ್ಯ ಸಂಪತ್ತು, ಉಗ್ರಾಣ ಮತ್ತು ಮಾರಾಟ, ಸಣ್ಣ ಕೈಗಾರಿಕೆಗಳು, ರಸ್ತೆಗಳು, ಸಣ್ಣ ರೈತರ ಅಭಿವೃದ್ಧಿ ಆಯೋಗಗಳು, ಹಳ್ಳಿಗಳಲ್ಲಿ ತಾತ್ಕಾಲಿಕವಾಗಿ ಉದ್ಯೋಗವನ್ನು ಒದಗಿಸುವ ಕಾರ್ಯಗಳು. ಈ ಎಲ್ಲಾ ಪರಿಯೋಜನೆಗಳ ವ್ಯಾಪ್ತಿಯನ್ನು ಹೆಚ್ಚಿಸಬೇಕು—ಎಂದು ಯೋಜನಾ ಆಯೋಗ ಅಭಿಪ್ರಾಯಪಡುತ್ತದೆ.

ಹೆಚ್ಚು ಉದ್ಯೋಗಗಳನ್ನು ದೊರಕಿಸುವ ಯೋಜನೆಗಳಿಗೆ ಮತ್ತು ಒಂದು ಕನಿಷ್ಠ ಮಟ್ಟದ ಜೀವನಕ್ಕೆ ಬೇಕಾದ ಪದಾರ್ಥಗಳನ್ನು ಒದಗಿಸುವ ಯೋಜನೆಗಳಿಗೆ ಸುಮಾರು 10.000 ಕೋಟಿ ರೂಪಾಯಿಗಳಿಂದ 11.500 ಕೋಟಿ ರೂಪಾಯಿಗಳು ಬೇಕಾಗುತ್ತವೆ ಎಂದು ಯೋಜನಾ ಆಯೋಗ ಅಂದಾಜು ಮಾಡಿದೆ. ಈ ಯೋಜನೆಗಳು ಸಾಮಾಜಿಕ ನ್ಯಾಯದೃಷ್ಟಿಯಿಂದ ಬಹಳ ಪ್ರಮುಖವಾದವೂ ಐದನೆಯ ಯೋಜನೆಯಲ್ಲಿ ಇವು ಒಂದು ಸಣ್ಣ ಭಾಗದಂತೆ ಕಾಣುತ್ತವೆ. ಬೇಸಾಯ, ಕೈಗಾರಿಕೆ, ರಸ್ತೆ ಮತ್ತು ಸಾರಿಗೆಗಳ ಅಭಿವೃದ್ಧಿ ಹೆಚ್ಚಿಸಲೂ ಸ್ವಯಂ ಪೋಷಿತ ಆರ್ಥಿಕತೆಯನ್ನು 1978–79ರ ಅನಂತರದ ಅವಧಿಯಲ್ಲಿ ಸಂರಕ್ಷಿಸಲೂ, ಐದನೆಯ ಯೋಜನೆಯು ಒಟ್ಟು ಹೆಚ್ಚ ನಾಲ್ಕನೆ ಯೋಜನೆಯ ಎರಡರಷ್ಟಾಗಿರಬೇಕು ಎಂಬುದಾಗಿ ಸೂಚಿಸಿದೆ. ಈ ಯೋಜನೆಗೆ ಬೇಕಾದ ಇಷ್ಟು ಹೆಚ್ಚು ಹಣವನ್ನು ಒದಗಿಸಬೇಕಾದರೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಸತತವಾಗಿ ಶ್ರಮವಹಿಸಬೇಕು. ಇದಕ್ಕಾಗಿ ದೇಶದ ತೆರಿಗೆ ನೀತಿಯಲ್ಲಿ ತಕ್ಕ ಮಾರ್ಪಾಡು ಮಾಡಬೇಕು. ತೆರಿಗೆ ಕೊಡುವುದನ್ನು ತಪ್ಪಿಸಿಕೊಳ್ಳಲು ಯತ್ನಿಸುವವರನ್ನು ಹಿಡಿಯುವುದು. ಬೇಸಾಯದಿಂದ ಬರುವ ಆದಾಯದ ಮೇಲೆ ತೆರಿಗೆ ವಿಧಿಸುವುದು ಆದಾಯ ಹೆಚ್ಚಿದಂತೆ ಹೆಚ್ಚು ಹೆಚ್ಚು ತೆರಿಗೆ ಕೊಡಬೇಕಾಗುವಂತೆ ತೆರಿಗೆ ನೀತಿಯನ್ನು ರೂಪಿಸುವುದು —ಇವೆಲ್ಲ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಯೋಜನಾ ಆಯೋಗ ತನ್ನ ಪತ್ರದಲ್ಲಿ ತಿಳಿಸಿದೆ.

ಯೋಜನಾ ಆಯೋಗ ಸೂಚಿಸಿರುವ ಇನ್ನೊಂದು ಪ್ರಮುಖ ಅಂಶವೆಂದರೆ—ಭಾರತ ದೇಶದಲ್ಲಿ 1965–66ರಿಂದೀಚೆಗೆ ದಿನೇದಿನೇ ವಿದೇಶೀ ಆರ್ಥಿಕ ನೆರವಿನ ಅವಲಂಬನೆ ಕಡಿಮೆಯಾಗುತ್ತಿರುವುದಲ್ಲದೆ, ಐದನೆಯ ಯೋಜನೆಯ ಅಂತ್ಯದ ಹೊತ್ತಿಗೆ ದೇಶದ ಉತ್ಪಾದನೆ ಮತ್ತು ವಿತರಣೆಗಳಲ್ಲಿ ಸ್ವಯಂ ಪರಿಪೂರ್ಣತೆಯನ್ನು ಹೊಂದುವುದು ಎಂಬುದು. ಉದಾಹರಣೆಗೆ 1965–66ರಲ್ಲಿ ಭಾರತ ವರ್ಷಕ್ಕೆ ಸರಾಸರಿ 700 ಕೋಟಿ ರೂಪಾಯಿಗಳಷ್ಟು ವಿದೇಶೀ ಆರ್ಥಿಕ ನೆರವು ಪಡೆಯುತ್ತಿತ್ತು. 1971–72ರಲ್ಲಿ ಇದು 330 ಕೋಟಿ ರೂಪಾಯಿಗಳಿಗೆ ಇಳಿದಿತ್ತು. ಸರ್ಕಾರದವರು ರಫ್ತು ವ್ಯಾಪಾರವನ್ನು ಅಧಿಕ ರೀತಿಯಲ್ಲಿ ಹೆಚ್ಚಿಸಲು ಮಾಡುತ್ತಿರುವ ಪ್ರಯತ್ನಗಳಿಂದಲೂ ಹೊರದೇಶಗಳಿಂದ ಆಮದು ಮಾಡಿಕೊಳ್ಳುತ್ತಿದ್ದ ಪದಾರ್ಥಗಳ ಪ್ರಮಾಣ ಕಡಿಮೆಯಾಗುತ್ತಿರುವುದರಿಂದಲೂ, ದೇಶದ ವಿದೇಶಿ ವಿನಿಮಯದ ಮಟ್ಟವೂ ಏರುತ್ತಿದೆ. ಈ ಹಣವನ್ನು ವಿದೇಶೀ ಸಾಲಗಳನ್ನು ತೀರಿಸಲೂ ದೇಶದ ಆರ್ಥಿಕ ಅಭಿವೃದ್ಧಿಗೆ ಅತ್ಯಾವಶ್ಯಕವಾಗಿ ಬೇಕಾದ ಸಲಕರಣೆಗಳನ್ನು ಕೊಳ್ಳಲೂ ಉಪಯೋಗಿಸಬಹುದು.

ಐದನೆಯ ಯೋಜನೆಯ ಕರಡನ್ನು 1973ರ ಜೂನ್ ತಿಂಗಳಲ್ಲೂ ಅಂತಿಮವಾಗಿ ಯೋಜನೆಯನ್ನು 1974ರ ಮಾರ್ಚ್ ತಿಂಗಳ ವೇಳೆಗೂ ಪ್ರಕಟಿಸಲಾಗುವುದೆಂದು ಯೋಜನಾ ಆಯೋಗದ ಪತ್ರದಲ್ಲಿ ತಿಳಿಸಲಾಗಿದೆ.

ಐದನೆಯ ಪಂಚವಾರ್ಷಿಕ ಯೋಜನೆಯ ರೂಪರೇಷೆಗಳನ್ನು ಅಧ್ಯಯನ ಮಾಡಿದ ಮೇಲೆ ಕೆಲವು ಅಂಶಗಳು ಸಂದೇಹಕ್ಕೆ ಆಸ್ಪದ ನೀಡುತ್ತವೆ. ಕಳೆದ ಇಪ್ಪತ್ತೆರಡು ವರ್ಷಗಳ ಯೋಜನಾವಧಿಯಲ್ಲಿ ಬಡತನದ ಭಾರ ಮತ್ತು ನಿರುದ್ಯೋಗ ಸಮಸ್ಯೆಯನ್ನು ಇಳಿಸಲಾಗದಿದ್ದಾಗ, ಇನ್ನೈದು ವರ್ಷಗಳಲ್ಲಿ ಈ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಾಗುತ್ತದೆಯೇ ಎಂಬುದು ಒಂದು ಅಂಶ. ಮತ್ತೊಂದು ಅಂಶವೇನೆಂದರೆ, 20 ವರ್ಷಗಳ ಅವಧಿಯಲ್ಲಿ 20 ಕೋಟಿ ಜನರು ದೇಶದಲ್ಲಿ ಹೆಚ್ಚಿದ್ದಾರೆ. ಈ ರೀತಿ ಒಂದೇ ಸಮನೆ ತ್ವರಿತರೀತಿಯಲ್ಲಿ ಬೆಳೆಯುತ್ತಿರುವ ಜನಸಂಖ್ಯೆ ದೇಶದ ಆರ್ಥಿಕ ಅಭಿವೃದ್ಧಿಯ ಫಲವನ್ನೆಲ್ಲ ನಿಷ್ಪ್ರಯೋಜನಗೊಳಿಸುತ್ತಿದೆ. ಆದ್ದರಿಂದ ಮುಂಬರುವ ಪಂಚವಾರ್ಷಿಕ ಯೋಜನೆಗಳಲ್ಲಿ ಅತ್ಯಧಿಕ ರೀತಿಯಲ್ಲಿ ಕುಟುಂಬ ಯೋಜನೆಯ ಕಾರ್ಯವನ್ನು ವಿಸ್ತರಿಸಿ ದೇಶದ ಎಲ್ಲ ವರ್ಗಗಳವರಿಗೂ ಅದು ತ್ವರಿತ ರೀತಿಯಲ್ಲಿ ಮುಟ್ಟುವಂತೆ ಮಾಡಬೇಕು. ಪಂಚವಾರ್ಷಿಕ ಯೋಜನೆ ದೇಶದ ಆರ್ಥಿಕ ಅಭಿವೃದ್ಧಿಗೆ ಎಷ್ಟರ ಮಟ್ಟಿಗೆ ಮುಖ್ಯವೆನಿಸುವುದೋ ಕುಟುಂಬ ಯೋಜನೆಯೂ ಅಷ್ಟೇ ಮುಖ್ಯವಾದ್ದು.

ಬ್ಯಾಂಕಿಂಗ್ ಆಯೋಗದ ವರದಿ (1972)

ಭಾರತ ಸರ್ಕಾರದವರು 1969ರ ಫೆಬ್ರವರಿ 3ರಂದು ಆರ್. ಜಿ. ಸರಯ್ಯ ಅವರ ಅಧ್ಯಕ್ಷತೆಯಲ್ಲಿ ಬ್ಯಾಂಕಿಂಗ್ ಆಯೋಗವನ್ನು ನೇಮಿಸಿದ್ದರು. ಈ ಆಯೋಗದಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಮ್ಯಾನೇಜಿಂಗ್ ಡೈರೆಕ್ಟರಾದ ರಮಾನಂದ ರಾವ್, ಪ್ರಖ್ಯಾತ ಅರ್ಥಶಾಸ್ತ್ರಜ್ಞ ಭಬತೋಷ್ ದತ್ತ ಮತ್ತು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಪ್ರಮುಖ ಸಲಹೆಗಾರ ವಿ.ಜಿ. ಪೆಂಢಾರ್‌ಕರ್ ಇವರು ಸದಸ್ಯರಾಗಿದ್ದರು. ಪೆಂಢಾರ್‌ಕರ್ ಈ ಆಯೋಗದ ಕಾರ್ಯದರ್ಶಿಗಳಾಗಿಯೂ ಇದ್ದರು. 1929–31ರ ಸೆಂಟ್ರಲ್ ಬ್ಯಾಂಕಿಂಗ್ ವಿಚಾರಣಾ ಸಮಿತಿಯ ಅನಂತರ ಇಂಥ ಆಯೋಗವನ್ನು ಸರ್ಕಾರ ನೇಮಿಸಿದ್ದು ಇದೇ ಮೊದಲು. ಆಯೋಗಕ್ಕೆ ವಹಿಸಲಾಗಿದ್ದ ಪರ್ಯಾಲೋಚನಾಂಶಗಳು ಇವು:

1 ಈಗಿರುವ ವಾಣಿಜ್ಯ ಬ್ಯಾಂಕಿಂಗ್ ವ್ಯವಸ್ಥೆಯ ರಚನೆಯಲ್ಲಿ, ಅದರಲ್ಲೂ ಅದರ ಗಾತ್ರ, ಹರಡುವಿಕೆ ಮತ್ತು ಕಾರ್ಯ ಚಟುವಟಿಕೆಗಳ ವಿಷಯದಲ್ಲಿ ವಿಚಾರಣೆ ಮಾಡುವುದು ಮತ್ತು ಅದರ ರಚನಾಕ್ರಮವನ್ನು ಉತ್ತಮಗೊಳಿಸಲು ಸೂಕ್ತ ಸಲಹೆಗಳನ್ನು ನೀಡುವುದು.

2 ವಾಣಿಜ್ಯ ಬ್ಯಾಂಕಿಂಗ್ ವ್ಯವಸ್ಥೆ ತನ್ನ ಭೌಗೋಳಿಕ ವ್ಯಾಪ್ತಿಯನ್ನು ಮತ್ತು ಕಾರ್ಯ ಚಟುವಟಿಕೆಗಳನ್ನು ವಿಸ್ತರಿಸಲು ಬೇಕಾದ ಸಲಹೆಗಳನ್ನು ಕೊಡುವುದು.

3 ವಾಣಿಜ್ಯ ಬ್ಯಾಂಕುಗಳ ಕಾರ್ಯ ವಿಧಾನಗಳು ಮತ್ತು ವ್ಯವಸ್ಥಾಪನ ನೀತಿಗಳಲ್ಲಿ ಆಧುನಿಕತೆಯನ್ನುಂಟುಮಾಡಲು ತಕ್ಕ ಶಿಫಾರಸು ಮಾಡುವುದು.

4 ವಾಣಿಜ್ಯ ಬ್ಯಾಂಕುಗಳ ಮೌಲ್ಯ ಮತ್ತು ಬಂಡವಾಳ ರಚನಾಕ್ರಮಗಳನ್ನು ಪರಿಶೀಲಿಸುವುದು ಮತ್ತು ಬ್ಯಾಂಕಿಂಗ್ ವ್ಯವಸ್ಥೆಯ ಅಭಿವೃದ್ಧಿಗೆ ಬೇಕಾದ ಹಣಕಾಸಿನ ಆವಶ್ಯಕತೆಯನ್ನು ಮನಸ್ಸಿನಲ್ಲಿಟ್ಟುಕೊಂಡು, ಅಲ್ಲಿ ಸಾಕಷ್ಟು ಸಂಚಿತಿ ಮತ್ತು ಹೆಚ್ಚುವರಿ ಹಣವಿದೆಯೆ ಎಂಬ ವಿಷಯವನ್ನು ಕೂಲಂಕಷವಾಗಿ ವಿಮರ್ಶೆ ಮಾಡಿ ಅದಕ್ಕೆ ಸರಿಯಾದ ಶಿಫಾರಸುಗಳನ್ನು ಮಾಡುವುದು.

5 ಬ್ಯಾಂಕುಗಳಲ್ಲಿ ಕೆಲಸ ಮಾಡಲು ಬೇಕಾದ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳುವ ಮತ್ತು ಅವರಿಗೆ ತರಬೇತುಕೊಡುವ ಬಗ್ಗೆ ಈಗ ಅನುಸರಿಸುತ್ತಿರುವ ರೀತಿನೀತಿಗಳನ್ನು ವಿಮರ್ಶೆ ಮಾಡುವುದು. ಇದಲ್ಲದೆ ಎಲ್ಲ ತರಹದ ವ್ಯವಸ್ಥಾಪನಕ್ಕೆ ಬೇಕಾದ ಸಿಬ್ಬಂದಿಯನ್ನು ಪಡೆಯುವ ವಿಷಯದಲ್ಲಿ ಶಿಫಾರಸು ಮಾಡುವುದು.

6 ಸಹಕಾರ ಬ್ಯಾಂಕುಗಳು ಕೆಲಸ ಮಾಡುವ ರೀತಿಯನ್ನು ಕುರಿತು ವಿಮರ್ಶಿಸುವುದು; ವಾಣಿಜ್ಯ ಬ್ಯಾಂಕುಗಳು ಮತ್ತು ಸಹಕಾರ ಬ್ಯಾಂಕುಗಳ ನಡುವೆ ಪರಸ್ಪರ ಹೊಂದಾವಣೆಯನ್ನುಂಟು ಮಾಡುವುದು; ಅವುಗಳ ಅಭಿವೃದ್ಧಿಯ ವಿಷಯವಲ್ಲಿ ಸೂಕ್ತ ಸಲಹೆಗಳನ್ನು ಕೊಡುವುದು.

7 ಈಗಿರುವ ನಾನಾರೀತಿಯ ಬ್ಯಾಂಕೇತರ ಹಣಕಾಸಿನ ಸಂಸ್ಥೆಗಳ ಪಾತ್ರವನ್ನು ಪರಿಶೀಲಿಸುವುದು: ಅವುಗಳ ರಚನೆ ಮತ್ತು ಕಾರ್ಯಾಚರಣೆಯ ವಿಷಯವಲ್ಲಿ ವಿಚಾರ ಮಾಡಿ ಅವುಗಳ ರಚನಾತ್ಮಕ ಬೆಳವಣಿಗೆಗೆ ತಕ್ಕ ಕ್ರಮಗಳನ್ನು ಸೂಚಿಸುವುದು.

8 ಮುಲ್ತಾನಿಗಳು, ಷರಾಫರು ಇತ್ಯಾದಿ ದೇಶೀಯ ಬ್ಯಾಂಕಿಂಗ್ ಸಂಸ್ಥೆಗಳ ವಿಷಯದಲ್ಲಿ ಪರಿಶೀಲನೆ ನಡೆಸುವುದು; ಹಣದ ಮಾರುಕಟ್ಟೆಯಲ್ಲಿ ಈ ಸಂಸ್ಥೆಗಳ ಉಪಯುಕ್ತತೆಯನ್ನು ಪರಿಗಣನೆಗೆ ತೆಗೆದುಕೊಂಡು ತಕ್ಕ ಶಿಫಾರಸುಗಳನ್ನು ಮಾಡುವುದು.

9 ವಾಣಿಜ್ಯ ಬ್ಯಾಂಕುಗಳು ಮತ್ತು ಸಹಕಾರ ಬ್ಯಾಂಕುಗಳಿಗೆ ಸಂಬಂಧಪಟ್ಟಂತೆ ಇದುವರೆಗೆ ರಚಿಸಿರುವ ಕಾಯಿದೆಗಳನ್ನು ವಿಮರ್ಶಿಸುವುದು.

10 ಬ್ಯಾಂಕಿಂಗ್ ಆಯೋಗಕ್ಕೆ ಇನ್ನಾವುದಾದರೂ ಕೆಲವು ವಿಷಯುಗಳು ಯೋಗ್ಯವೆಂದು ಕಂಡು ಬಂದಲ್ಲಿ ಅವುಗಳನ್ನು ಪರಿಶೀಲಿಸಿ ಸೂಕ್ತಸಲಹೆಗಳನ್ನು ನೀಡುವುದು ಅಥವಾ ಬ್ಯಾಂಕಿಂಗ್ ಆಯೋಗ ಪರಿಶೀಲಿಸುತ್ತಿರುವ ವಿಷಯುಗಳಿಗೆ ಸಂಬಂಧಪಟ್ಟ ಇನ್ನಾವುದಾದರೂ ವಿಷಯಗಳನ್ನು ಸರ್ಕಾರದವರು ಕೊಟ್ಟರೆ ಅವುಗಳನ್ನೂ ವಿಚಾರ ಮಾಡುವುದು.

ಮೂರು ವರ್ಷಗಳ ಕಾಲ ಸತತವಾಗಿ ಮೇಲ್ಕಂಡ ವಿಷಯಗಳನ್ನು ಕುರಿತು ಅಧ್ಯಯನ ನಡೆಸಿದ ಮೇಲೆ 1972ರ ಫೆಬ್ರವರಿ 9ರಂದು ಬ್ಯಾಂಕಿಂಗ್ ಆಯೋಗ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು. ಈ ಆಯೋಗ ತನ್ನ ವರದಿಯಲ್ಲಿ 411 ಪ್ರಮುಖ ಶಿಫಾರಸುಗಳನ್ನು ಮಾಡಿದೆ. ಈ ವರದಿ ಸುಮಾರು 800 ಪುಟಗಳಷ್ಟಿರುತ್ತದೆ. ಆಯೋಗ 1.300 ಸಾಕ್ಷ್ಯಗಳನ್ನು ಪರಿಶೀಲಿಸಿದೆ ಮತ್ತು ಒಮ್ಮತದ ವರದಿಯನ್ನು ಸಲ್ಲಿಸುವುದರಲ್ಲಿ ಜಯಪ್ರದವಾಗಿದೆ.

ಬ್ಯಾಂಕಿಂಗ್ ಆಯೋಗದ ಪ್ರಮುಖ ಶಿಫಾರಸುಗಳು ಇವು:

1 1969ರ ಜುಲೈಯಲ್ಲಿ ರಾಷ್ಟ್ರೀಕರಣ ಮಾಡಿದ 14 ಬ್ಯಾಂಕುಗಳನ್ನು ಪುನರ್ ರಚಿಸಬೇಕು. ಇವುಗಳ ಪೈಕಿ ಸಣ್ಣ ಬ್ಯಾಂಕುಗಳನ್ನು ವಿಲೀನಗೊಳಿಸಿ ದೊಡ್ಡ ಬ್ಯಾಂಕುಗಳನ್ನು ಸ್ಥಾಪಿಸುವುದು. ಸಣ್ಣ ಬ್ಯಾಂಕುಗಳು ಪ್ರಾಂತೀಯ ಬ್ಯಾಂಕುಗಳಂತೆ ಕೆಲಸ ಮಾಡಬೇಕು. ದೇಶದಲ್ಲಿ ಈಗಿರುವ ಹಲವಾರು ಬ್ಯಾಂಕುಗಳ ಬದಲಾಗಿ ಮೂರು ಅಥವಾ ನಾಲ್ಕು ರಾಷ್ಟ್ರೀಯ ಬ್ಯಾಂಕುಗಳನ್ನು ಸ್ಥಾಪಿಸಬೇಕು.

2 ಬ್ಯಾಂಕುಗಳು ವಾರಕ್ಕೆ ಐದು ದಿನಗಳು ಮಾತ್ರ ಕೆಲಸಮಾಡಬೇಕೆಂದು ಶಿಫಾರಸು ಮಾಡಲಾಗಿದೆ.

3 ಎಲ್ಲ ಬ್ಯಾಂಕುಗಳಿಗೆ ಬೇಕಾದ ಸಿಬ್ಬಂದಿ ವರ್ಗದವರನ್ನು ನೇಮಿಸಲು ಒಂದೇ ಆಯ್ಕೆ ಸಮಿತಿ

ಇರಬೇಕು. ಒಂದೇ ರೀತಿಯ ಕೆಲಸ ಮಾಡುವ ಎಲ್ಲಾ ಬ್ಯಾಂಕುಗಳ ನೌಕರರಿಗೂ ಒಂದೇ ಮಟ್ಟದ ಸಂಭಾವನೆಯನ್ನು ಕೊಡಬೇಕು.

4 ಅಮೆರಿಕ ಮತ್ತು ಇಂಗ್ಲೆಂಡ್ ದೇಶಗಳಲ್ಲಿರುವಂತೆ ಒಂದು ವಸತಿ ನಿರ್ಮಾಣ ಹಣಕಾಸು ಕಾರ್ಪೋರೇಷನನ್ನು ಸ್ಥಾಪಿಸಬೇಕು. ಈ ಕಾರ್ಪೋರೇಷನ್ ಮೂಲಕ ದೇಶದಲ್ಲಿ ಗೃಹ ನಿರ್ಮಾಣಕ್ಕೆ ಧನ ಸಹಾಯಮಾಡಬೇಕು. ವಸತಿ ನಿರ್ಮಾಣ ಹಣಕಾಸು ಕಾರ್ಪೋರೇಷನ್‌ಗೆ ಬೇಕಾದ ಹಣಕಾಸನ್ನು ವಾಣಿಜ್ಯ ಬ್ಯಾಂಕುಗಳು ಒದಗಿಸಬೇಕು.

5 ಎಲ್ಲ ಬ್ಯಾಂಕೇತರ ಹಣಕಾಸು ಸಂಸ್ಥೆಗಳ ಮೇಲೆ ಕಟ್ಟುನಿಟ್ಟಾದ ನಿಯಂತ್ರಣಗಳನ್ನು ತರಬೇಕು. ಇದರಿಂದ ಸಾರ್ವಜನಿಕರ ಠೇವಣಿಗಳಿಗೆ ತಕ್ಕ ರಕ್ಷಣೆ ದೊರೆಯುತ್ತದೆ ಮತ್ತು ಈ ಸಂಸ್ಥೆಗಳ ಕ್ರಮಬದ್ಧವಾದ ಬೆಳವಣಿಗೆಗೂ ಸಹಕಾರಿಯಾಗುತ್ತದೆ. ಬ್ಯಾಂಕೇತರ ಹಣಕಾಸು ಸಂಸ್ಥೆಗಳ ಮೇಲೆ ಅಧ್ಯಯನ ನಡೆಸಿ ತಕ್ಕ ಶಿಫಾರಸು ಮಾಡಿರುವವರು ಖ್ಯಾತ ಅರ್ಥಶಾಸ್ತ್ರಜ್ಞ ಪ್ರೊಫೆಸರ್ ಭಬತೋಷ್‌ದತ್ತ. ಈಗ ರಿಸರ್ವ್ ಬ್ಯಾಂಕಿನ ವ್ಯಾಪ್ತಿ ಈ ಸಂಸ್ಥೆಗಳ ಮೇಲಿಲ್ಲ. ಆದ್ದರಿಂದ ಎಲ್ಲ ಹಣಕಾಸಿನ ಸಂಸ್ಥೆಗಳನ್ನು ರಿಸರ್ವ್ ಬ್ಯಾಂಕಿನ ಹತೋಟಿಗೆ ಒಳಪಡಿಸಲು ವ್ಯಾಪಕ ಕಾನೂನನ್ನು ಜಾರಿಗೆ ತರುವಂತೆ ಶಿಫಾರಸು ಮಾಡಲಾಗಿದೆ.

6 ದೇಶದ ಎಲ್ಲ ಕಡೆಯೂ 'ಮರ್ಚೆಂಟ್' ಬ್ಯಾಂಕುಗಳನ್ನು ಸ್ಥಾಪಿಸಬೇಕೆಂದು ಆಯೋಗ ಶಿಫಾರಸು ಮಾಡಿದೆ. ಈ ಬ್ಯಾಂಕುಗಳ ಉದ್ದೇಶವೇನೆಂದರೆ ಕೈಗಾರಿಕೆಗಳನ್ನು ಸ್ಥಾಪಿಸಲು ಮುಂದೆ ಬರುವವರಿಗೆ ತಕ್ಕ ಸಹಾಯ ನೀಡುವುದು. ಸದ್ಯಕ್ಕೆ ಮುಂಬಯಿ. ಮದರಾಸು. ಕಲ್ಕತ್ತ. ದೆಹಲಿ ಮತ್ತು ಬೆಂಗಳೂರು ಪಟ್ಟಣಗಳಲ್ಲಿ ಈ ಬ್ಯಾಂಕುಗಳನ್ನು ಸ್ಥಾಪಿಸಲು ಶಿಫಾರಸು ಮಾಡಿದೆ.

7 ಬ್ಯಾಂಕುಗಳ ಕಾರ್ಯ ವಿಧಾನಗಳನ್ನು ಆಧುನಿಕ ರೀತಿಯಲ್ಲಿ ಮಾರ್ಪಡಿಸಬೇಕು. ಇದಕ್ಕಾಗಿ ಸಂಶೋಧನೆಯ ಕಾರ್ಯಕ್ರಮಗಳಲ್ಲಿ ಹೆಚ್ಚು ಹೆಚ್ಚು ಗಣಕ ಯಂತ್ರಗಳನ್ನು ಮತ್ತು ಇತರ ಯಾಂತ್ರಿಕ ಸಲಕರಣೆಗಳನ್ನು ಉಪಯೋಗಿಸುವ ಅವಶ್ಯಕತೆಯನ್ನು ಎತ್ತಿ ಹೇಳಿದ್ದಾರೆ.

8 ಈಗಿರುವ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಬ್ಯಾಂಕ್ ಮ್ಯಾನೇಜ್‌ಮೆಂಟ್‌ಗೆ ಹೊಸ ಸ್ವರೂಪವನ್ನು ಕೊಡಬೇಕು. ಈಗ ಅದರಲ್ಲಿ ವಿದ್ಯಾತಜ್ಞರು ಮತ್ತು ತಾಂತ್ರಿಕ ತಜ್ಞರು ಮಾತ್ರ ಇದ್ದಾರೆ. ಬ್ಯಾಂಕಿಂಗ್ ಉದ್ಯಮದಲ್ಲಿ ಹೆಚ್ಚು ಅನುಭವವಿರುವವರನ್ನೂ ಸಹ ಇದರಲ್ಲಿ ಸೇರಿಸಿಕೊಳ್ಳಬೇಕು.

9 ಅಮೆರಿಕ ಸಂಯುಕ್ತಸಂಸ್ಥಾನದಂತೆ ಭಾರತದಲ್ಲಿಯೂ ಬ್ಯಾಂಕಿಂಗ್ ವ್ಯವಸ್ಥೆಯನ್ನು ಕುರಿತು ಹೆಚ್ಚು ಹೆಚ್ಚು ಸಂಶೋಧನೆಗಳನ್ನು ನಡೆಸಬೇಕು. ಇದಕ್ಕೆ ಬೇಕಾದ ಹಣಕಾಸು ಮತ್ತು ಇತರ ಸೌಲಭ್ಯಗಳನ್ನು ಸರ್ಕಾರದವರು ಮತ್ತು ರಿಸರ್ವ್ ಬ್ಯಾಂಕ್ ಆಫ್ ಇಂಡಿಯದವರು ನೀಡಬೇಕು.

10 ಬ್ಯಾಂಕಿಂಗ್ ಆಯೋಗ ಗ್ರಾಮಪ್ರದೇಶದಲ್ಲಿ ಅತ್ಯಧಿಕ ಪ್ರಮಾಣದಲ್ಲಿ ಗ್ರಾಮಾಂತರ ಬ್ಯಾಂಕುಗಳನ್ನು ಸ್ಥಾಪಿಸಬೇಕೆಂದು ವರದಿಯಲ್ಲಿ ತಿಳಿಸಿದೆ. ಇವುಗಳನ್ನು ಸಹಕಾರ ಬ್ಯಾಂಕುಗಳ ಜೊತೆ ಸೇರಿಸಿ ದೇಶದ 5.50.000 ಹಳ್ಳಿಗಳಿಗೂ ಬ್ಯಾಂಕಿಂಗ್ ಸೌಲಭ್ಯವನ್ನು ಒದಗಿಸಬೇಕು ಎಂದು ಅಭಿಪ್ರಾಯಪಟ್ಟಿದೆ. ಗ್ರಾಮಾಂತರ ಬ್ಯಾಂಕುಗಳು ರಾಷ್ಟ್ರೀಕರಣವಾಗಿರುವ ವಾಣಿಜ್ಯ ಬ್ಯಾಂಕುಗಳ ಉಪಾಂಗಗಳಾಗಿ ಕೆಲಸಮಾಡಬೇಕು. ಇವುಗಳಿಗೆ ಬೇಕಾದ ಬಂಡವಾಳದಲ್ಲಿ ಸೇಕಡ 51ರಷ್ಟನ್ನು ರಾಷ್ಟ್ರೀಕೃತ ಬ್ಯಾಂಕುಗಳು ಒದಗಿಸಬೇಕು. ಉಳಿದ ಸೇಕಡ 49ರಷ್ಟನ್ನು ಸ್ಥಳೀಯವಾಗಿ ಪಡೆಯಬಹುದೆಂದು ಶಿಫಾರಸು ಮಾಡಲಾಗಿದೆ.

ಬ್ಯಾಂಕಿಂಗ್ ಆಯೋಗದ ವರದಿ ಸರ್ಕಾರದ ಪರಿಶೀಲನೆಯಲ್ಲಿದೆ. ಒಟ್ಟಿನಲ್ಲಿ ನಿರಾಶೆಯುಂಟಾಗುತ್ತದೆ ಎನ್ನಬಹುದು. ಅರ್ಥಶಾಸ್ತ್ರಜ್ಞರು, ಹಣಕಾಸಿನ ತಜ್ಞರು ಮತ್ತು ಆರ್ಥಿಕ ಮತ್ತು ಹಣ

ಕಾಸಿನ ನೀತಿಗಳನ್ನು ರೂಪಿಸುವವರು ಈ ಆಯೋಗದ ವರದಿಗಾಗಿ ಬಹಳ ಆಶೆ ಆಕಾಂಕ್ಷೆಗಳಿಂದ ಕಾದಿದ್ದರು. ಆದರೆ ಈ ವರದಿಯಲ್ಲಿ ದೇಶದ ಹಿತಚಿಂತನೆಗೆ ಆವಶ್ಯಕವಾದ ಹೊಸ ಅಂಶಗಳಾಗಲಿ ಸಲಹೆಗಳಾಗಲಿ ಕಂಡುಬರುವುದಿಲ್ಲ.

ಪ್ರತ್ಯಕ್ಷ ತೆರಿಗೆ ವಿಚಾರಣಾ ಸಮಿತಿಯ ವರದಿ

ದೇಶದಲ್ಲಿ ಪ್ರತ್ಯಕ್ಷ ತೆರಿಗೆಗಳನ್ನು ಕೊಡದ ಹಾಗೆ ತಪ್ಪಿಸಿಕೊಳ್ಳುತ್ತಿರುವುದನ್ನು ಮತ್ತು ಈ ತೆರಿಗೆಗಳಿಂದ ನುಣುಚಿಕೊಳ್ಳುವುದನ್ನು ತಡೆಗಟ್ಟುವ ವಿಷಯಗಳನ್ನು ಪರಿಶೀಲಿಸಿ ಸೂಕ್ತ ಕ್ರಮವನ್ನು ಸಲಹೆ ಮಾಡುವಂತೆ ಭಾರತ ಸರ್ಕಾರದವರು 1970ರ ಮಾರ್ಚ್ 2ರಂದು ಒಂದು ತಜ್ಞರ ಸಮಿತಿಯನ್ನು ನೇಮಿಸಿದ್ದರು. ಸುಪ್ರೀಂ ಕೋರ್ಟಿನ ನಿವೃತ್ತ ಶ್ರೇಷ್ಠ ನ್ಯಾಯಾಧೀಶರಾದ ಕೆ. ಎನ್. ವಾಂಚೂ ಈ ಮಂಡಲಿಯ ಅಧ್ಯಕ್ಷರಾಗಿಯೂ ಎಂ. ಪಿ. ಚಿಟಾಲೆ, ಎಸ್. ಪ್ರಕಾಶ್ ಚೋಪ್ರಾ, ಪಿ. ಸಿ. ಪಥಿ ಮತ್ತು ಡಿ. ಕೆ. ರಂಗ್ನೇಕರ್‌ರವರು ಸದಸ್ಯರುಗಳಾಗಿಯೂ ಇದ್ದರು. ಈ ಮಂಡಲಿಗೆ ಆದಾಯ ತೆರಿಗೆಯ ಕಮಿಷನರಾದ ಎಸ್. ನಾರಾಯಣ್ ಕಾರ್ಯದರ್ಶಿಗಳಾಗಿದ್ದರು. ಈ ಸಮಿತಿಗೆ ವಹಿಸಿದ್ದ ಪರ್ಯಾಲೋಚನಾಂಶಗಳು ಈ ಕೆಳಗೆ ಕಂಡಂತಿವೆ:

1 ಕಪ್ಪುಹಣವನ್ನು ಹೊರಕ್ಕೆ ಎಳೆಯುವುದು ಮತ್ತು ಅದು ಹೆಚ್ಚು ಹರಡದಂತೆ ನೋಡಿಕೊಳ್ಳುವುದು—ಈ ವಿಷಯದಲ್ಲಿ ಸೂಕ್ತ ಸಲಹೆ ನೀಡುವುದು.

2 ಟ್ರಸ್ಟ್‌ಗಳು ಮುಂತಾದ ಅನೇಕ ರೀತಿಯ ನ್ಯಾಯಬದ್ಧವಾದ ನೆಪಗಳಿಂದ ತೆರಿಗೆಯನ್ನು ತಪ್ಪಿಸಿಕೊಳ್ಳುತ್ತಿರುವುದನ್ನು ತಡೆಗಟ್ಟಲು ಸೂಕ್ತಕ್ರಮಗಳನ್ನು ಸೂಚಿಸುವುದು.

3 ತೆರಿಗೆ ಬಾಕಿಯನ್ನು ಕಡಿಮೆ ಮಾಡಲು ಸರಿಯಾದ ಕ್ರಮಗಳನ್ನು ಸೂಚಿಸುವುದು.

4 ಈಗಿರುವ ತೆರಿಗೆ ನಿಯಮಗಳಲ್ಲಿರುವ ಅನೇಕ ರೀತಿಯ ವಿನಾಯತಿಗಳನ್ನು ಪರಿಶೀಲಿಸಿ ಇವುಗಳಲ್ಲಿ ಬದಲಾವಣೆಗೆ ಅಗತ್ಯವೇನಾದರೂ ಇದೆಯೆ ಎಂಬುದನ್ನು ನೋಡುವುದು,

5 ತೆರಿಗೆ ನಿರ್ಧರಿಸುವ ಮತ್ತು ಆಡಳಿತ ವ್ಯವಸ್ಥೆಯನ್ನು ಉತ್ತಮಗೊಳಿಸುವ ವಿಷಯಗಳಲ್ಲಿ ತಕ್ಕ ಶಿಫಾರಸು ಮಾಡುವುದು.

ಈ ಮಂಡಲಿ ತನ್ನ ಮೇಲೆ ಹೊರಿಸಿದ್ದ ಕಾರ್ಯಭಾರಗಳ ವಿಷಯದ ಮೇಲೆ ಸತತವಾಗಿ ಸುಮಾರು ಒಂದು ವರ್ಷ ಒಂಬತ್ತು ತಿಂಗಳುಗಳ ಕಾಲ ಅಧ್ಯಯನ ನಡೆಸಿ ತನ್ನ ಅಂತಿಮ ವರದಿಯನ್ನು 1971ರ ಡಿಸೆಂಬರ್ 24ರಂದು ಸರ್ಕಾರಕ್ಕೆ ಒಪ್ಪಿಸಿತು. ಈ ವರದಿ ಸುಮಾರು 315 ಪುಟಗಳಷ್ಟಿರುತ್ತದೆ. ವರದಿಯ ಮೊದಲನೆಯ ಕೆಲವು ಅಧ್ಯಾಯಗಳಲ್ಲಿ ಕಪ್ಪುಹಣ, ತೆರಿಗೆಯಿಂದ ನುಣುಚಿಕೊಳ್ಳುವುದು, ತೆರಿಗೆಗಳನ್ನು ತಪ್ಪಿಸಿಕೊಳ್ಳಲು ಪ್ರಯತ್ನಿಸುವುದು. ತೆರಿಗೆ ಬಾಕಿ ಮುಂತಾದ ಸಮಸ್ಯೆಗಳನ್ನು ಕುರಿತು ಕೂಲಂಕಷವಾಗಿ ವಿಮರ್ಶೆ ನಡೆಸಲಾಗಿದೆ. ಐದನೆಯ ಅಧ್ಯಾಯದಲ್ಲಿ ಪ್ರತ್ಯಕ್ಷ ತೆರಿಗೆ ನಿಯಮಗಳಲ್ಲಿರುವ ವಿನಾಯತಿಗಳ ವಿಚಾರವಾಗಿ ವಿಮರ್ಶೆ ನಡೆಸಿ ಇವುಗಳ ಬದಲಾವಣೆಗೆ ತಕ್ಕ ಶಿಫಾರಸುಗಳನ್ನು ಸಮಿತಿ ಮಾಡಿರುವುದನ್ನು ಕಾಣಬಹುದು. ಕೊನೆಯ ಅಧ್ಯಾಯದಲ್ಲಿ ತೆರಿಗೆ ನಿರ್ಧರಿಸುವ ಮತ್ತು ಆಡಳಿತ ವ್ಯವಸ್ಥೆಯ ವಿಷಯಗಳಲ್ಲಿ ವಿಚಾರ ವಿನಿಮಯ ಮಾಡಿ ಸೂಕ್ತ ಸಲಹೆಗಳನ್ನು ಕೊಟ್ಟಿರುವುದನ್ನು ಕಾಣಬಹುದು.

ಲೆಕ್ಕಕ್ಕೆ ಸಿಗದಂತೆ ಗುಟ್ಟಾಗಿ ಇಟ್ಟಿರುವ ಮತ್ತು ಭ್ರಷ್ಟಾಚಾರದಿಂದ ಸಂಪಾದಿಸಿರುವ ಹಣಕ್ಕೆ 'ಕಪ್ಪು ಹಣ' ಎಂದು ಈ ವರದಿಯಲ್ಲಿ ಹೇಳಿರುತ್ತದೆ. ಇಂಥ ಹಣ 1961–62ರಲ್ಲಿ ಸುಮಾರು 700 ಕೋಟಿ ರೂಪಾಯಿಗಳಷ್ಟಿತ್ತೆಂದೂ 1968–69ರಲ್ಲಿ ಇದರ ಮೊಬಲಗು ಸುಮಾರು 1.400 ಕೋಟಿ ರೂಪಾಯಿಗಳಷ್ಟಿತ್ತೆಂದೂ ಈ ಮಂಡಲಿಯವರು ಅಂದಾಜು ಮಾಡಿರುತ್ತಾರೆ. ಈ ವರದಿಯ ಪ್ರಕಾರ ತೆರಿಗೆ ತಪ್ಪಿಸಿಕೊಳ್ಳುವುದು ಮತ್ತು ಕಪ್ಪುಹಣದ ಸೃಷ್ಟಿ ದಿನೇ ದಿನೇ ಜಾಸ್ತಿಯಾಗುತ್ತಿರುವುದು—ಇವುಗಳಿಗೆ ಕಾರಣಗಳೇನೆಂದರೆ: 1 ಈಗಿರುವ ಪ್ರತ್ಯಕ್ಷ ತೆರಿಗೆಗಳ ನಿಯಮಗಳ ಪ್ರಕಾರ ತೆರಿಗೆ ದರ ಬಹಳ ಜಾಸ್ತಿ ಇರುತ್ತದೆ; 2 ಕೆಲವು ವಸ್ತುಗಳ ಸರಬರಾಯಿಯಲ್ಲಿ ಕೊರತೆ ಇದ್ದುದರಿಂದ ಸರ್ಕಾರದವರು ತಂದಿರುವ ಕಠಿಣ ನಿಯಂತ್ರಣಗಳು, 3 ರಾಜಕೀಯ ಪಕ್ಷಗಳಿಗೆ ಕೊಡುಗೆ, 4 ವ್ಯವಹಾರದಲ್ಲಿ ಲಂಚಕೋರತನ

ನಡವಳಿಕೆಗಳು. 5 ವ್ಯವಹಾರ ವೆಚ್ಚಗಳ ವಿಷಯದಲ್ಲಿ ಹಾಕಿರುವ ಮಿತಿಗಳು 6 ಮಾರಾಟ ತೆರಿಗೆ ಮತ್ತು ಇತರ ತೆರಿಗೆಗಳಲ್ಲಿರುವ ಹೆಚ್ಚಿನ ದರಗಳು. 7 ತೆರಿಗೆ ನಿಯಮಗಳನ್ನು ಸರಿಯಾಗಿ ಜಾರಿಗೆ ತರದಿರುವುದು ಮತ್ತು 8 ದಿನೇ ದಿನೇ ಹೆಚ್ಚುತ್ತಿರುವ ಅನೀತಿಯ ನಡವಳಿಕೆ.

ನಮ್ಮ ದೇಶದಲ್ಲಿ ತೆರಿಗೆ ಬಾಕಿ ಹೇರಳವಾಗಿ ಇರುವುದಕ್ಕೆ ಈ ಕೆಳಗೆ ಕಂಡ ಅಂಶಗಳು ಮುಖ್ಯವಾದುವೆಂದು ವರದಿಯಲ್ಲಿ ತಿಳಿಸಿರುತ್ತದೆ:

1 ವಸೂಲಿ ಕಾಲ ಬರುವುದಕ್ಕೆ ಮುಂಚೆಯೇ ಆ ಹಣವನ್ನು ಬಾಕಿ ಎಂದು ಹೇಳುವುದು.

2 ನಿಜಕ್ಕೆ ದೂರವಾದ ಮತ್ತು ಮನಸ್ಸಿಗೆ ಬಂದ ಹಾಗೆ ತೆರಿಗೆ ನಿರ್ಧರಿಸುವುದು.

3 ಆಡಳಿತ ವ್ಯವಸ್ಥೆಯ ನಿಧಾನ: ಉದಾಹರಣೆಗೆ ಆಡಳಿತ ವರ್ಗದವರು ತೆರಿಗೆ ನಿರ್ಧರಿಸುವುದನ್ನು ನಿಧಾನ ಮಾಡುವುದು ಮತ್ತು ಹಲವಾರು ವರ್ಗಗಳ ತೆರಿಗೆಯನ್ನು ಒಂದೇ ಸಾರಿ ನಿರ್ಧರಿಸಲು ಹೋಗುವುದು. ತೆರಿಗೆ ವಿಷಯದಲ್ಲಿ ಸಾರ್ವಜನಿಕರಿಂದ ಬರುವ ಅರ್ಜಿಗಳನ್ನು ವಿಚಾರಣೆ ನಡೆಸಿ ಬೇಗ ತೀರ್ಪು ಕೊಡದಿರುವುದು.

4 ಕಂಪನಿಗಳು ಇದ್ದಕ್ಕಿದ್ದ ಹಾಗೆ ಮುಚ್ಚಿ ಹೋಗುವುದು. ಜನರು ಬೇರೆ ದೇಶಗಳಿಗೆ ಹೊರಟು ಹೋಗುವುದು ಮತ್ತು ಕೆಲವು ಸಾರಿ ನಾಪತ್ತೆಯಾಗುವುದು–ಇವುಗಳಿಂದಲೂ ಬಾಕಿ ಜಾಸ್ತಿಯಾಗುವುದುಂಟು.

ಮೇಲ್ಕಂಡ ನ್ಯೂನತೆಗಳನ್ನು ಹೋಗಲಾಡಿಸಲು ಅನೇಕ ಕ್ರಮಗಳನ್ನು ಕೈಗೊಳ್ಳಬೇಕೆಂದು ವರದಿ ತಿಳಿಸುತ್ತದೆ. ತೆರಿಗೆ ಆಡಳಿತದಲ್ಲಿ ದಕ್ಷತೆ ಮತ್ತು ಪ್ರಾಮಾಣಿಕತೆ ಬಹಳ ಪ್ರಮುಖವಾದವು ಎಂದು ಹೇಳಿ, ಇವುಗಳನ್ನು ಉತ್ತಮ ಪಡಿಸುವ ವಿಷಯದಲ್ಲಿ ಅನೇಕ ಶಿಫಾರಸುಗಳನ್ನು ಮಾಡಿದೆ.

ಪ್ರತ್ಯಕ್ಷ ತೆರಿಗೆಗಳ ತನಿಖೆ ಸಮಿತಿಯ ವರದಿ ಸರ್ಕಾರಕ್ಕೂ ವಿದ್ವಾಂಸರಿಗೂ ಬಹಳ ಉಪಯುಕ್ತವಾಗುತ್ತದೆ ಎಂಬುದು ನಿಸ್ಸಂದೇಹ. ಇಲ್ಲಿ ಪ್ರತ್ಯಕ್ಷ ತೆರಿಗೆಯ ನಿಯಮಗಳ ಮೇಲೆ ಅನೇಕ ಅಂಶಗಳನ್ನು ಕೂಲಂಕಷವಾಗಿ ವಿಮರ್ಶಿಸಲಾಗಿದೆ. ಸರ್ಕಾರದವರು ಈ ವರದಿಯ ಮೇಲೆ ಸದ್ಯದಲ್ಲಿಯೇ ಅರ್ಥಶಾಸ್ತ್ರ ಮತ್ತು ಹಣಕಾಸಿನ ತಜ್ಞರನ್ನು ಸೇರಿಸಿ ಒಂದು ಗೋಷ್ಠಿಯನ್ನು ಏರ್ಪಡಿಸಲಿದ್ದಾರೆ. ಈ ವರದಿಯಲ್ಲಿ ಮಾಡಿರುವ ಶಿಫಾರಸ್ಸುಗಳನ್ನು ಸರ್ಕಾರ ಒಪ್ಪಿಕೊಂಡು ಅವುಗಳನ್ನು ಜಾರಿಗೆ ತರುವುದಾದರೆ ಈಗ ದಿನೇ ದಿನೇ ಹೆಚ್ಚುತ್ತಿರುವ ಕಪ್ಪು ಹಣದ ಮೊತ್ತ ಕಡಿಮೆಯಾಗುವುದಲ್ಲದೆ, ದೇಶದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ ವ್ಯವಹಾರವೂ ತೊಲಗುತ್ತದೆ. ಇಷ್ಟಲ್ಲದೆ ಇದರಿಂದ ದೇಶದಲ್ಲಿರುವ ಹಣದುಬ್ಬರದ ಸಮಸ್ಯೆಯೂ ಎಷ್ಟೋ ಪಾಲು ಕಡಿಮೆಯಾಗುತ್ತದೆ.

—ಡಾ. ಎಂ. ಮಾದಯ್ಯ

ಪುಸ್ತಕಲೋಕ

ರಾಗದರ್ಶನ : ಲೇಖಕರು: ಪ್ರೊ. ಎ. ಎಮ್. ಪುರಂದರೆ; ಪ್ರಕಾಶಕರು: ಪಠ್ಯಪುಸ್ತಕ ನಿರ್ದೇಶನಾಲಯ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; ಪುಟ 10 + 360; ಬೆಲೆ: ರೂ. 4.50

ಹಿಂದುಸ್ಥಾನೀ ಸಂಗೀತಪದ್ಧತಿಯ ರಾಗಲಕ್ಷಣಗಳನ್ನು ನಿರೂಪಿಸುವ ಈ ಗ್ರಂಥವು ಸ್ವಾಗತಾರ್ಹವಾಗಿದೆ. ರಾಗರಚನೆಯೇ ನಮ್ಮ ಸಂಗೀತದ ವೈಶಿಷ್ಟ್ಯವಾಗಿರುತ್ತಾ ರಾಗಭೇದಗಳನ್ನು ಲಕ್ಷ್ಯಾನುರೋಧವಾಗಿ ವಿವರಿಸುವ ಲಕ್ಷಣಗ್ರಂಥಗಳು ಕನ್ನಡದಲ್ಲಿಲ್ಲವೆಂಬ ಕೊರತೆಯನ್ನು ಈ ಗ್ರಂಥವು ಒಂದಂಶ ತುಂಬುತ್ತದೆ ಎಂಬುದು ಸಮಾಧಾನಕರವೂ ಅಭಿಮಾನಾಸ್ಪದವೂ ಆಗಿದೆ. ಸಂಸ್ಕೃತಾದಿ ಶಾಸ್ತ್ರ ಗ್ರಂಥಗಳಲ್ಲಿ ಮತಭೇದಗಳ ಗೊಂದಲದಿಂದ ಜಟಿಲವಾಗಿರುವ ಈ ರಾಗವಿಸ್ತರವನ್ನು ಸಾಮಾನ್ಯ ವಿದ್ಯಾರ್ಥಿಗಳಿಗೂ ಸುಲಭ ಗ್ರಾಹ್ಯವಾಗುವಂತೆ ಸರಳವಾಗಿಯೂ ಸುಬೋಧವಾಗಿಯೂ ಕನ್ನಡಕ್ಕೆ ತಂದಿರುವ ಈ ಗ್ರಂಥಕರ್ತರೂ, ಪಠ್ಯಪುಸ್ತಕ ಪ್ರಣಾಲಿಕೆಯಲ್ಲಿ ಪ್ರಕಾಶಕ್ಕೆ ತಂದಿರುವ ಕರ್ನಾಟಕ ವಿಶ್ವವಿದ್ಯಾಲಯದ ಪ್ರನೇತೃಗಳೂ. ಕನ್ನಡಿಗರ ಅಭಿನಂದನೆಗೆ ಅರ್ಹರು. ಇದು ಪ್ರೌಢವ್ಯಾಸಂಗದ 'ಪೂರಕ' ಗ್ರಂಥವೂ ಹೌದು. ಶಿಷ್ಯೋಪದೇಶ ಸೌಲಭ್ಯವುಳ್ಳ ಶಿಕ್ಷಣ ಗ್ರಂಥವೂ ಹೌದು.

ಸಂಗೀತವು ಓದಿ ಕಲಿಯುವ ವಿದ್ಯೆಯಲ್ಲ. ಲಕ್ಷಣಗಳನ್ನು ಎಷ್ಟೇ ವಿಸ್ತಾರವಾಗಿ ಬರೆದರೂ ಅದರ ಪ್ರಾಯೋಗಿಕ ಜ್ಞಾನವು ಗುರುಮುಖದಿಂದಲೇ ಪ್ರಾಪ್ತವಾಗಬೇಕು. ಆದುದರಿಂದ ಇಂಥ ಗ್ರಂಥಗಳಲ್ಲಿ ಲಕ್ಷಣಗಳು ಸಂಕ್ಷಿಪ್ತವಾಗಿದ್ದರೆ ದೋಷವಲ್ಲ, ಮುಖ್ಯಾಂಶಗಳು ಬಿಟ್ಟು ಹೋಗಬಾರದೆಂಬುದೇ ಮುಖ್ಯ. ಆ ಮಟ್ಟಿಗೆ, ಲಕ್ಷ್ಯ ಲಕ್ಷಣಗಳೆರಡರಲ್ಲಿಯೂ ಪರಿಣತರಾದ ಪ್ರೊ. ಪುರಂದರೆಯವರು ಅತ್ಯಂತ ದಕ್ಷತೆಯಿಂದ ಈ ಸಂಗ್ರಹಕಾರ್ಯವನ್ನು ನಿರ್ವಹಿಸಿರುತ್ತಾರೆಂದು ಹೇಳಬೇಕು.

ಕೀರ್ತಿಶೇಷ ಪಂಡಿತ ಭಾತ್‌ಖಂಡೆಯವರು ಹಿಂದುಸ್ಥಾನೀ ಸಂಗೀತ ಪದ್ಧತಿಯ ಆಧುನಿಕ ಲಕ್ಷ್ಯಮಾರ್ಗಕ್ಕೆ ಆಚಾರ್ಯಪುರುಷರೆಂಬುದು ಸರ್ವಶ್ರುತ. ಅವರು ಸಂಸ್ಕೃತದಲ್ಲಿ ರಚಿಸಿದ (ಚತುರ ಪಂಡಿತಾಭಿಧಾನದಲ್ಲಿ) 'ಲಕ್ಷ್ಯ ಸಂಗೀತ' ಮತ್ತು ಮರಾಠಿಯಲ್ಲಿ ವಿಸ್ತಾರವಾಗಿ ರಚಿಸಿದ, ನಾಲ್ಕು ಭಾಗಗಳುಳ್ಳ 'ಹಿಂದುಸ್ಥಾನೀ ಸಂಗೀತ ಪದ್ಧತಿ' ಎಂಬ, ಗುರುಶಿಷ್ಯರ ಪ್ರಶ್ನೋತ್ತರ ಸಂಭಾಷಣಾ ರೂಪದಲ್ಲಿರುವ ವಿಮರ್ಶಾತ್ಮಕ ಶಾಸ್ತ್ರಗ್ರಂಥಗಳನ್ನು (ಈ ಗ್ರಂಥದ ನಾಲ್ಕು ಭಾಗಗಳೂ ಹಿಂದಿಯಲ್ಲಿ ಭಾಷಾಂತರವಾಗಿವೆ) ಆಧರಿಸಿ ಪ್ರಸ್ತುತ ಗ್ರಂಥವು ರಚಿಸಲ್ಪಟ್ಟಿರುವುದು. ರಾಗಲಕ್ಷಣದಲ್ಲಿ ಆಮೇಲೆ ರೂಢಿಗೆ ಬಂದಿರುವ ಕೆಲವೊಂದು ವ್ಯತ್ಯಾಸಾಂಶಗಳನ್ನೂ ಮತಾಂತರಗಳನ್ನೂ ಗ್ರಂಥಕರ್ತರು ಅಲ್ಲಲ್ಲಿ ವಿವರಿಸಿರುವುದರಿಂದ ಇಂದಿನ ಪ್ರಚಲಿತ ರಾಗಸ್ವರೂಪಗಳಿಗೆ ಈ ಸಂಕ್ಷಿಪ್ತಗ್ರಂಥವು ಕೈಗನ್ನಡಿಯಂತಿದೆ. ದಿ. ಪಂಡಿತ ಭಾತ್‌ಖಂಡೆಯವರ ರಾಗ ವರ್ಗೀಕರಣದಂತೆ, ಕಲ್ಯಾಣ, ಬಿಲಾವಲ, ಖಮಾಜ. ಭೈರವ, ಪೂರ್ವೀ, ಮಾರವಾ, ಕಾಫೀ. ಅಸಾವರಿ. ಭೈರವಿ, ತೋಡಿ ಎಂಬ ಹತ್ತು ಮೇಳರಾಗಗಳೂ (ಥಾಟ್) ಇವುಗಳ ಜನ್ಯಶ್ರೇಣಿಯಲ್ಲಿ ಕ್ರಮವಾಗಿ 12 + 18 + 14 + 15 + 13 + 12 + 29 + 10 + 5 + 4ರಂತೆ 132ರಷ್ಟು ಇತರ ಪ್ರಚಲಿತ ರಾಗಗಳೂ ಈ ಗ್ರಂಥದಲ್ಲಿ, ಪ್ರತ್ಯೇಕರಾಗಭಾವದ್ಯೋತಕವಾದ ಸ್ವರ ಸಂಚಾರಗಳೊಡನೆ ಲಕ್ಷಣತಃ ನಿರೂಪಿಸಲ್ಪಟ್ಟಿವೆ.

ಈ ವರ್ಗೀಕರಣದ ಹಾಗೂ ವಿಭಿನ್ನ ರಾಗ ಸ್ವರೂಪಗಳ ಪರಿಜ್ಞಾನಕ್ಕೆ ಹಿನ್ನೆಲೆಯಾಗಿ ಒಂದೆರಡು ಮಾತುಗಳನ್ನು ಇಲ್ಲಿ ಹೇಳುವುದು ಪ್ರಸಜ್ಯವೆನಿಸುವುದು:

ಶಾಸ್ತ್ರ ವಿಹಿತವಾಗಿಯೇ ನಮ್ಮ ಸಂಗೀತದಲ್ಲಿ ರಾಗಭೇದಗಳುಂಟಾಗುವುದು ಎರಡು ವಿಧದಿಂದ. ಪ್ರಯೋಗಿಸುವ ಸ್ವರಗಳು ಭಿನ್ನವಾದಲ್ಲಿಯೂ ರಾಗಭೇದವಾಗುವುದು, ಅದಲ್ಲದೆ, ಭಿನ್ನ ಸ್ವರ ಪ್ರಯೋಗ

ಎಲ್ಲದಿದ್ದರೂ ಸ್ವರಗಳ ವಿನಿಯೋಗ. ಎಂದರೆ ಸ್ವರಗಳ ಸಂಚಾರ ಕ್ರಮವಷ್ಟೇ ಭಿನ್ನವಾಗಿರುವುದೂ ರಾಗಭೇದವೆಂದೆನಿಸಲ್ಪಡುವುದು. ಪರಂಪರೆಯಿಂದ ನಡೆದು ಬಂದಿರುವ ಈ ಕ್ರಮದಲ್ಲಿ, ಇವೆರಡೂ ವಿಧಗಳಿಂದ ಹುಟ್ಟುವ ಹಾಗೂ ಹುಟ್ಟಿಕೊಂಡಿರುವ ರಾಗಭೇದಗಳಿಗೆ ಒಂದು ಮಿತಿಯೇ ಇರುವುದಿಲ್ಲ. ಗಾನಕ್ರಮದ ವರ್ಣಾಲಂಕಾರಾದಿ ಸ್ವರ ಸಂಚಾರಗಳಲ್ಲಿ ಒಂದಿಷ್ಟು ವ್ಯತ್ಯಾಸವುಂಟಾಯಿತೆಂದರೆ ಅದೊಂದು ರಾಗಭೇದವೇ ಎಂಬ ಪರಿಕಲ್ಪನೆಯಿಂದ ರಾಗಗಳ ಸಂಖ್ಯೆ ಬೆಳೆಯುತ್ತಾ ಅವನ್ನು ಅಂಕೆಯಲ್ಲಿಟ್ಟುಕೊಳ್ಳುವುದೂ ನಾಮಮಾತ್ರ ಭಿನ್ನವೆಂಬಂತಿರುವವುಗಳನ್ನೆಲ್ಲ ಗುರುತಿಸುವುದೂ ಅಸಾಧ್ಯ ಮತ್ತು ಅವ್ಯವಹಾರ್ಯವೆಂಬ ಸ್ಥಿತಿಯುಂಟಾಗಿತ್ತೆಂಬುದೂ ವಾಸ್ತವವೇ ಆಗಿದೆ. ಅದಕ್ಕಾಗಿ ಮುಂದೆ ಶಾಸ್ತ್ರಕಾರರಿಂದ ಈ ರಾಗಗಳನ್ನು ಬೇರೆ ಬೇರೆ ವಿಧದಲ್ಲಿ ವರ್ಗೀಕರಿಸಿ ವ್ಯವಸ್ಥೆಗೊಳಿಸುವ ಪ್ರಯತ್ನ ನಡೆಯುತ್ತ ಬಂದಿದೆ. ಪುರುಷ ರಾಗ, ಸ್ತ್ರೀರಾಗ, ನಪುಂಸಕರಾಗ, ಭಾರ್ಯಾಪುತ್ರರಾಗಗಳು, ಶುದ್ಧ, ಸಾಲಗ, ಸಂಕೀರ್ಣ ಜಾತಿಗಳು, ಘನರಾಗ, ಕ್ಷುದ್ರರಾಗ, ರಕ್ತಿರಾಗ ಮುಂತಾದ ಹಲವೊಂದು ವರ್ಗೀಕರಣಗಳಾಗಿದ್ದರೂ ಹೊಸತಾಗಿ ಹುಟ್ಟುವವಕ್ಕೊಂದು ನಿಯಂತ್ರಣವಿಲ್ಲದುದರಿಂದ ಈ ಸಮಸ್ಯೆಗೆ ಸೂಕ್ತ ಪರಿಹಾರವಾಗಲಿಲ್ಲ.

ಇದಕ್ಕಾಗಿ ನಮ್ಮ ಕರ್ಣಾಟಕ ಸಂಪ್ರದಾಯದಲ್ಲಿ ಮೇಳರಾಗ ಪದ್ಧತಿ ಹುಟ್ಟಿತು. ವಿಜಯನಗರದ ಸ್ವಾಮಿ ವಿದ್ಯಾರಣ್ಯರೇ ಇದರ ಮೂಲ ಪ್ರವರ್ತಕರು. ಸಪ್ತಕದ ಯಾವುದಾದರೂ ಸ್ವರ ಅಥವಾ ಸ್ವರಗಳು ಭಿನ್ನವಾದರೇ ರಾಗಭೇದ. ಅದಲ್ಲದ ಕೇವಲ ಸಂಚಾರ ಭೇದವೆಂಬುದು ರಾಗಭೇದವಲ್ಲವೆಂಬ ತತ್ವದ ಮೇರೆ ಈ ಮೇಳ ಪದ್ಧತಿಯು ಕಟ್ಟಲ್ಪಟ್ಟಿದೆ. ಇದು ಮುಂದೆ ರಾಗಗಳು ಅಸಂಖ್ಯಾತವಾಗಿ ಹುಟ್ಟುವುದನ್ನು ಮಿತಿಗೊಳಿಸುವ ಜನನ ನಿಯಂತ್ರಣವೇ ಆಯಿತು. ಈ ತತ್ವದಂತೆ ಸ್ಥಾಯಿಯ ಶುದ್ಧ-ವಿಕೃತ ಹನ್ನೆರಡು ಸ್ವರಭೇದಗಳಿಂದ ಹುಟ್ಟಬಹುದಾದ ಮೇಳರಾಗಗಳು ಇಂತಿಷ್ಟೇ ಎಂಬ ನಿರ್ಧಾರದಿಂದ ಕೊನೆಯದಾಗಿ 72 ಮೇಳಕರ್ತರಾಗಗಳು ನಿರ್ಮಾಣಗೊಂಡು ಕರ್ಣಾಟಕ ಪದ್ಧತಿಯಲ್ಲಿ ಸುಸ್ಥಿರವಾದ ವ್ಯವಸ್ಥೆ ಏರ್ಪಟ್ಟಿತು.

ಉತ್ತರದಲ್ಲಿಯೂ ಇದೇ ಆದರ್ಶದಿಂದ ಮೇಳ ವರ್ಗೀಕರಣದ ಪ್ರಯತ್ನವು ನಡೆದಿತ್ತಾದರೂ ಅನ್ಯ ಸಂಪ್ರದಾಯದ ಪ್ರಭಾವದಿಂದ ವ್ಯವಸ್ಥೆಯಲ್ಲಿದ್ದ ಅಲ್ಲಿಯ ಲಕ್ಷ್ಯ ಮಾರ್ಗದಲ್ಲಿ ಇದಕ್ಕೆ ಸಾಕಷ್ಟು ಪ್ರೋತ್ಸಾಹ ದೊರೆಯದೆ ಅದು ಸಾರ್ವತ್ರಿಕವಾದ ಯಶಸ್ಸನ್ನು ಪಡೆಯಲಿಲ್ಲ. ರಾಗಭೇದ ಪರಿಗಣನೆಯಲ್ಲಿ ಸ್ವರ ವಿನಿಯೋಗದ ಭಿನ್ನ ವೈಶಿಷ್ಟ್ಯಕ್ಕೇ ರೂಢಿಯಲ್ಲಿ ಹೆಚ್ಚಿನ ಪ್ರಾಧಾನ್ಯವಿದ್ದುದೂ ಇದಕ್ಕೆ ಕಾರಣವಾಯಿತೆಂದು ತೋರುವುದು. ಕೊನೆಗಾದರೂ ಈ ವ್ಯವಸ್ಥೆಯನ್ನು ಯಶಸ್ವಿಯಾಗಿ ಸರ್ವಾದರಣೀಯವಾಗುವಂತೆ ರೂಢಿಗೆ ತಂದವರು ದಿ. ಭಾತ್‌ಖಂಡೆಯವರೇ. ರೂಢಮೂಲವಾಗಿದ್ದ ಸಾಂಪ್ರದಾಯಿಕ ವೈಲಕ್ಷಣ್ಯಗಳನ್ನು ಕೆಲವಂಶ ಉಳಿಸಿಕೊಂಡೇ ಅವರು ಇದನ್ನು ಸಾಧಿಸಿದರೆಂಬುದು ವಿಶೇಷ. ಆಯಾ ರಾಗಗಳ ವಿಶಿಷ್ಟ ಸ್ವರೂಪಕ್ಕೆ ಕಾರಣವಾಗುವ ರಾಗಭಾವಕ ಸ್ವರ ಸಂಚಾರಗಳೊಂದಿಗೆ ಮುಖ್ಯವಾಗಿ ಭಿನ್ನ ಸ್ವರ ಪ್ರಯೋಗ ಇರಬೇಕೆಂಬ ತತ್ವವನ್ನವಲಂಬಿಸಿ ವ್ಯಾಪಕವಾದ ದೃಷ್ಟಿಯಿಂದ ಈ ಹತ್ತು ಮೇಳಗಳನ್ನೂ ಜನ್ಯ ರಾಗಗಳನ್ನೂ ಅವರು ವರ್ಗೀಕರಿಸಿರುವುದಾಗಿದೆ.

ಪ್ರಸ್ತುತ ಗ್ರಂಥದಲ್ಲಿ ಪ್ರೊ. ಪುರಂದರೆಯವರು ಈ ವಿಚಾರವನ್ನು ಚೆನ್ನಾಗಿ ಗಮನಿಸಿಕೊಂಡಿರುವರೆಂಬುದು ಆಯಾ ರಾಗವಾಚಕ ಸ್ವರಾಕ್ಷಿಪ್ತಿಕೆಗಳ ಸಮೇತ ಶ್ರೀಯುತರು ಕೊಟ್ಟಿರುವ ರಾಗಲಕ್ಷಣಗಳಿಂದ ವ್ಯಕ್ತವಾಗುವುದು. ಹಿಂದುಸ್ತಾನೀ ರಾಗಗಳಲ್ಲಿ ಹೆಚ್ಚಾಗಿ ದ್ವಿರೂಪಿ ಸ್ವರಗಳ ಪ್ರಯೋಗವಿರುವುದು ಕಂಡು ಬರುತ್ತದೆ. ದಿ. ಭಾತ್‌ಖಂಡೆಯವರು ಮೇಳರಾಗ ವರ್ಗೀಕರಣದಲ್ಲಿ ಅದಕ್ಕೆ ಪ್ರಾಧಾನ್ಯವನ್ನು ಕೊಟ್ಟಿಲ್ಲ. ಪ್ರಾಯಶಃ ಗಾಯಕರ ವೈಯಕ್ತಿಕ ಪ್ರಭಾವದಿಂದ ರೂಢಿಗೆ ಬಂದಿರುವ ಈ ಪ್ರಯೋಗವು ರಾಗಸಾಂಕರ್ಯಕ್ಕೆ ಕಾರಣವಾಗಿ ಮೇಳವ್ಯವಸ್ಥೆಗೆ ಅಪಾಯವುಂಟಾಗಬಹುದೆಂದು ಅವರ ಅಭಿಪ್ರಾಯವಿದ್ದಂತೆ ಊಹಿಸಬಹುದು. ಈ ವಿಚಾರವನ್ನು ಲಕ್ಷ್ಯಾಭ್ಯಾಸಿಗಳು ಸೂಕ್ಷ್ಮ ಪರಿಶೀಲಿಸಿಕೊಂಡು ತಕ್ಕಮಾರ್ಗದಲ್ಲಿ ಮುಂದುವರಿಯುವುದು ಯುಕ್ತವಾಗಿ ಕಾಣುವುದು. ಅದೂ ಅಲ್ಲದೆ ಹಿಂದುಸ್ತಾನೀ ಗಾಯಕ ವಾದಕರಲ್ಲಿ ಹೆಚ್ಚಾಗಿ ಯಾವುದೇ ರಾಗ ವಿಸ್ತಾರದಲ್ಲಿ ಆ ರಾಗ ನಿರ್ದಿಷ್ಟವಲ್ಲದ ಅನ್ಯಸ್ವರಗಳನ್ನು ಸ್ಪರ್ಶ ಮಾಡುವ ಪ್ರವೃತ್ತಿಯು ಪ್ರಾಯಶಃ ಪರಂಪರೆಯಿಂದ ನಡೆದುಬಂದಿದೆ. ಮೇಳ ವರ್ಗೀಕರಣದ ಸುಭದ್ರತೆಯ ದೃಷ್ಟಿಯಿಂದ ಇದು ಅಪೇಕ್ಷಣೀಯವೇ ಎಂಬುದನ್ನು ವಿದ್ವಾಂಸರು ಪರಿಶೀಲಿಸತಕ್ಕದ್ದಿದೆ.

ಹೇಗಿದ್ದರೂ ಈ ಗ್ರಂಥಕರ್ತರು ಭಾತ್‌ಖಂಡೆಯವರ ಶಾಸ್ತ್ರರಚನೆಯಾದಂದಿನಿಂದ ಇಂದಿನ ವರೆಗೆ ಲಕ್ಷ್ಯಪ್ರಯೋಗದಲ್ಲಿ ಸಂಭವಿಸಿರುವ ವ್ಯತ್ಯಾಸಗಳನ್ನು ಪ್ರಸ್ತುತ ಗ್ರಂಥದಲ್ಲಿ ಅಳವಡಿಸಿಕೊಂಡಿರುವುದು ಪ್ರಸಕ್ತವೂ ಪ್ರಯೋಜನಕರವೂ ಆಗಿದೆ. ಅಂತೆಯೇ ಮತಭೇದವುಳ್ಳ ಕೆಲವೊಂದು ರಾಗಗಳ ಲಕ್ಷಣ ಸಂದರ್ಭದಲ್ಲಿ ಅಹೋಬಲ ಪಂಡಿತನೇ ಮೊದಲಾದ ಪೂರ್ವಶಾಸ್ತ್ರಕಾರರ ಗ್ರಂಥಗಳಿಂದ ಉದ್ಧರಿಸಿ ಕೊಟ್ಟಿರುವುದೂ ವಿಹಿತವೇ.

ಪ್ರಸ್ತಾವನೆಯಲ್ಲಿ ಗ್ರಂಥಕರ್ತರು "ಐತಿಹಾಸಿಕ ದೃಷ್ಟಿಯಿಂದ ಈಗ ನಮ್ಮಲ್ಲಿ ಪ್ರಾಚೀನ ಸ್ವರ ಮತ್ತು ರಾಗ ಸ್ವರೂಪಗಳೆರಡೂ ಉಳಿದಿಲ್ಲ. ಈಗಿನ ನಮ್ಮ ರಾಗಗಳು ಪ್ರಾಚೀನ ರಾಗಗಳೊಂದಿಗೆ ಕೇವಲ ನಾಮಸಾದೃಶ್ಯವನ್ನು ಹೊಂದುತ್ತವೆ. ಶ್ರುತಿಸ್ಥಾನಗಳ ಅನಿಶ್ಚಿತತೆ ಮತ್ತು ಸ್ವರಸ್ಥಾನಗಳ ವಿಕೃತ ರೂಪದಿಂದ ಈಗ ಪ್ರಚಲಿತವಿರುವ ರಾಗರೂಪಗಳೆಲ್ಲವೂ ಆಧುನಿಕವಾಗಿವೆ" ಎಂದಿರುವುದು ಪರಮಾರ್ಥ ಸತ್ಯದ ಮಾತು. ಅರ್ವಾಚೀನ ಸಂಸ್ಕೃತ ಶಾಸ್ತ್ರಗ್ರಂಥಗಳಲ್ಲಿ ಹಾಗೂ ಆಧುನಿಕ ಸಂಗೀತ ವಿದ್ವಾಂಸರಲ್ಲಿ ಸಹ ಈ ಕುರಿತು ಕೇವಲ ಅಂಧ ಪರಂಪರೆಯ ವ್ಯವಹಾರವು ನಡೆದು ಬಂದಿರುವುದರಿಂದ ಈ ವಿಚಾರವನ್ನು ಸ್ವಲ್ಪ ವಿಸ್ತಾರವಾಗಿ ಮತ್ತು ಸೋದಾಹರಣವಾಗಿ ನಿರೂಪಿಸಿದ್ದರೆ ಹೆಚ್ಚು ಉಪಕಾರವಾಗುತ್ತಿತ್ತು. ದಿ. ಪಂಡಿತ ಭಾತ್‌ಖಂಡೆಯವರು ಸಾಕಷ್ಟು ವಿಸ್ತಾರವಾಗಿಯೇ ಚರ್ಚಿಸಿದ್ದ ವಿಚಾರವಿದು.

ಶ್ರುತಿಗಳ ವಿಚಾರವಾಗಿದ್ದ ಭ್ರಾಮಕವಾದ ಕಲ್ಪನೆಗಳಿಂದಲಾಗಿ ಪ್ರಯೋಗಿಸಲ್ಪಡುವ ಸ್ವರಗಳ ಕುರಿತಾಗಿಯೂ ಉಂಟಾಗಿದ್ದ ಅಪ್ರತಿಷ್ಠವಾದ ಮತಭೇದಗಳನ್ನೆಲ್ಲ ನಿರಸ್ತಗೊಳಿಸಿ ಲಕ್ಷ್ಯ ಸಂಗೀತದಲ್ಲಿ ಪ್ರಯೋಗಿಸಲ್ಪಡುವ ಸ್ವರಭೇದಗಳು ಹನ್ನೆರಡು ಮಾತ್ರ ಎಂಬ ಸಿದ್ಧಾಂತವನ್ನು ಪ್ರತಿಪಾದಿಸಿದವನು ದಕ್ಷಿಣದ ವೆಂಕಟಮಖಿ. ಅದನ್ನೇ ನ್ಯಾಯವೆಂದು ಸಮ್ಮತಿಸಿ ಆತನ 72 ಮೇಳ ವಿಭಾಗವನ್ನು ತತ್ತ್ವಶಃ ಒಪ್ಪಿಕೊಂಡು ಅವುಗಳಲ್ಲಿ ಹಿಂದುಸ್ಥಾನೀ ಪದ್ಧತಿಯ ಮಟ್ಟಿಗೆ ಪರ್ಯಾಪ್ತವೆಂದೆನಿಸಿದ 10 ಮೇಳಗಳನ್ನು ದಿ.ಭಾತ್ ಖಂಡೆಯವರು ಅಂಗೀಕರಿಸಿದ್ದಾಗಿದೆ ಎಂಬುದು ಅವರ ಲಕ್ಷ್ಯ ಸಂಗೀತದಿಂದ ಸ್ಪಷ್ಟವಾಗುವುದು:

"ದ್ವಿ ಸಪ್ತತಿ ಮೇಲಕೇಷು ತ್ಯಕ್ತ್ವಾತಾನನವಶ್ಯಕಾನ್।
ಸ್ವೀಕುರ್ಮೋದಶ ಸಂಖ್ಯಾಕಾನ್ ಲಕ್ಷ್ಯವರ್ತ್ಮನಿ ವಿಶ್ರುತಾನ್॥2॥
ಪ್ರಚರದ್ರೂಪಸಂಗೀತಮಶೇಷಂಸ್ಯಾತ್ ಪರಿಸ್ಫುಟಂ।
ತನ್ಮೇಲೇಷು ಸಮಾವಿಷ್ಟಮಿತಿ ಮರ್ಮವಿದಾಂ ಮತಂ॥3॥
('ಲಕ್ಷ್ಯಸಂಗೀತ', ದ್ವಿತೀಯಾಧ್ಯಾಯ)

ಮೇಲೆ ಹೇಳಿದ ಈ ಹತ್ತು ಮೇಳಗಳನ್ನವರು ದಾಕ್ಷಿಣಾತ್ಯ ಹೆಸರಿನಿಂದಲೇ ಕರೆದಿರುವರಲ್ಲದೆ ಅವುಗಳಿಗೆ ಹಿಂದುಸ್ಥಾನಿಯ ಪ್ರತಿನಾಮಗಳನ್ನೂ ಅಲ್ಲಲ್ಲಿ ಕೊಟ್ಟಿರುತ್ತಾರೆಂಬುದು ಗಮನಿಸತಕ್ಕ ವಿಚಾರ:

"ಶಂಕರಾಭರಣೇ ಮೇಲೇವೇಲಾವಲೀತಿ ನಾಮಕಃ
ಮೇಲಾನ್ಮಾಲವಗೌಳೀಯಾಜ್ಜಾತೋ ರಾಗೋ ಗುಣಪ್ರಿಯಃ
ಹರಪ್ರಿಯಾಖ್ಯಮೇಲೋಸೌಲಕ್ಷ್ಯೇಽತ್ರಕಾಫಿಸಂಜ್ಞಿತಃ
ನಟಭೈರವಿಕಾ ಮೇಲೀ ಪ್ರೋಕ್ತಾದೇಶೀ ಗುಣಪ್ರಿಯಾ"

ಇತ್ಯಾದಿ ಲಕ್ಷ್ಯಸಂಗೀತ ಗ್ರಂಥದ ವಾಕ್ಯಗಳಿಂದ ಇದು ಸ್ಪಷ್ಟವಾಗುವುದು. ಶ್ರೀ ಪುರಂದರೆಯವರು ತಮ್ಮ ಗ್ರಂಥದಲ್ಲಿ ಈ ದಾಕ್ಷಿಣಾತ್ಯ ನಾಮನಿರ್ದೇಶವನ್ನು ಯಾಕೆ ಕೊಡಲಿಲ್ಲವೋ! ಕೊಟ್ಟಿದ್ದರೆ ಮೂಲ ಗ್ರಂಥಕಾರರು ಗಮನಿಸಿದ್ದ ಸಮನ್ವಯ ದೃಷ್ಟಿಯನ್ನು ವಿದ್ಯಾರ್ಥಿಗಳು ಅರ್ಥ ಮಾಡಿಕೊಳ್ಳಬಹುದಿತ್ತು. ಮತ್ತು ನಮ್ಮ ಎರಡೂ ಸಂಪ್ರದಾಯಗಳ ಪ್ರಗತಿಯ ದೃಷ್ಟಿಯಿಂದ ಅದು ಅವಶ್ಯವಾಗಿತ್ತು.

ಜನ್ಯರಾಗಗಳ ಲಕ್ಷಣನಿರೂಪಣೆಯಲ್ಲಿ ದಿ. ಭಾತ್‌ಖಂಡೆಯವರ 'ಲಕ್ಷ್ಯಸಂಗೀತಕ್ಕೂ ಈ ಗ್ರಂಥಕ್ಕೂ ಕೆಲಮಟ್ಟಿಗೆ ವಿಸಂವಾದವಿರುವುದನ್ನೂ ಸೂಚಿಸಬೇಕಾಗುವುದು. ಉದಾಹರಣೆಗಾಗಿ 'ಸಿಂಧು ಭೈರವಿ' ರಾಗವು ಆಸಾವರೀ ಮೇಳಜನ್ಯವೆಂದು ಲಕ್ಷ್ಯಸಂಗೀತದಲ್ಲಿರುವುದಾದರೆ ಈ ಗ್ರಂಥದಲ್ಲಿ

ಅದನ್ನು ಭೈರವೀ ಮೇಳಜನ್ಯವೆಂದು ಕೊಡಲಾಗಿದೆ! (ಪುಟ 343) "ಸಿಂದು ಭೈರವಿರಾಗವು ಭೈರವಿ ಥಾಟಿನಲ್ಲಿಯ ಸಂಪೂರ್ಣ ರಾಗವಿದ್ದು ಧೈವತವು ವಾದಿಸ್ವರವಾಗಿದೆ" ಎನ್ನುತ್ತಾರೆ.
ಲಕ್ಷ್ಯ ಸಂಗೀತದಲ್ಲಿ ಆ ಲಕ್ಷಣಶ್ಲೋಕವು ಹೀಗಿದೆ:

"ಅಸಾವರೀ ಸುಮೇಲಾಚ್ಚ ಭೈರವೀಸಿಂಧುಪೂರ್ವಿಕಾ।
ಆರೋಹೇಚಾವರೋಹೇಽಪಿ ಸಂಪೂರ್ಣಾಧೈವತಾಂಶಿಕಾ॥"

ಇದು ಪ್ರಮಾದಿಕವಾದ ಸ್ಖಾಲಿತ್ಯವೋ, ಅಲ್ಲ ಲಕ್ಷ್ಯಾನುರೋಧವಾಗಿ ಉದಿಷ್ಟವೋ ಎಂಬುದನ್ನು ಗ್ರಂಥಕರ್ತರು ವ್ಯಕ್ತಪಡಿಸದಿರುವುದನ್ನು ದೋಷವೆಂದೇ ಹೇಳಬೇಕಾಗಿದೆ. ಇದಲ್ಲದೆ ಈ ಗ್ರಂಥದಲ್ಲಿ ಅಲ್ಲಲ್ಲಿ ಉದ್ಧರಿಸಿಕೊಟ್ಟಿರುವ ಸಂಸ್ಕೃತ ಶ್ಲೋಕಗಳು ತೀರ ತಪ್ಪಾಗಿರುವುದೂ ಈ ಗ್ರಂಥಕ್ಕೆ ಒಂದು ಕಳಂಕವೆಂದೇ ಹೇಳಬೇಕು. ಆ ಶ್ಲೋಕಗಳ ಅರ್ಥವನ್ನಾದರೂ ಕೊಡುತ್ತಿದ್ದರೆ ಇದು ಕ್ಷಮ್ಯವಾಗುತ್ತಿತ್ತು. ಒಪ್ಪೋಲೆಯಲ್ಲಿಯೂ ಈ ಶ್ಲೋಕಗಳ ಶುದ್ಧಪಾಠವನ್ನು ಕೊಟ್ಟಿಲ್ಲ. ದಿಙ್ಮಾತ್ರ ಉದಾಹರಣೆಯಾಗಿ ಅವುಗಳಲ್ಲಿ ಒಂದೆರಡು ಶ್ಲೋಕಗಳನ್ನು ನೋಡಬಹುದು:

"ಮಾರವಾಃ ಮೇಲಜೇ ನತ್ರರಾಗ: ತ್ರಜ್ಞೈತ್ರ ನಾಮಕಃ।
ಆರೋಹೇ ಚಾವರೋಹೇಽಪಿ ಮನಿಯುರ್ಜೋ ಗುಣಿಪ್ರಿಯಃ॥
ಸ್ಯಾದ್ವಾದೀ ಪಂಚಮೋ ಹಾತ್ರ ಸಂವಾದೀ ಷಡ್ಜದ್ವರಿತಃ।
ಗಾನಮಸ್ಯದಾಮಿರಾಚೀನಂ ಮರ್ದೇಸಾಯಂ ನಿರಂತರಂ॥"
(ಪುಟ 215)

"ಪೂರ್ವೀ ಮೇಲ ಸಮುಟಿಯೊತಾ ತ್ರಿವೇಣೀ ಲಕ್ಷ್ಯ ಸಂಮತಾ।"(ಪು. 179)
ಇದು ಮೂಲಗ್ರಂಥಕ್ಕೆ ವಿರುದ್ಧವಾದ ಅರ್ಥವನ್ನೇ ಕೊಡುವಂತಾಗಿದೆ. ಶುದ್ಧಪಾಠ 'ಲಕ್ಷ್ಯಸಂಮತಾ' ಎಂದಾಗಬೇಕು. ಇಂತಹ ಕೆಲವೊಂದು ಸಣ್ಣ ದೋಷಗಳನ್ನು ಬಿಟ್ಟರೆ ಒಟ್ಟಿನ ಮೇಲೆ ಈ ಗ್ರಂಥದಿಂದ ಹಿಂದುಸ್ಥಾನೀ ಪದ್ಧತಿಯ ಪ್ರೌಢ ವಿದ್ಯಾರ್ಥಿಗಳು ಹಾಗೂ ಸಂಗೀತ ಶಿಕ್ಷಕರು ವಿಶೇಷ ಪ್ರಯೋಜನವನ್ನು ಪಡೆದುಕೊಳ್ಳಬಹುದಾಗಿದೆ. ಲಕ್ಷ್ಯಲಕ್ಷಣಗಳೆರಡರಲ್ಲೂ ಪರಿಣತರಾದ ಈ ಗ್ರಂಥಕರ್ತರಿಂದ ಇನ್ನೂ ಹೆಚ್ಚಿನ ವಿಮರ್ಶಾತ್ಮಕವಾದ ಪ್ರೌಢಗ್ರಂಥಗಳನ್ನೂ ಶಾಲಾ ಕಾಲೇಜುಗಳಲ್ಲಿ ಸಂಗೀತದ ಸಾಮೂಹಿಕ ಶಿಕ್ಷಣಕ್ಕೆ ಮಾರ್ಗದರ್ಶಕವಾದ ಪಠ್ಯಗ್ರಂಥಗಳನ್ನೂ ಪ್ರತೀಕ್ಷಿಸೋಣ.

— **ಕುಕ್ಕಿಲ ಕೃಷ್ಣಭಟ್ಟ**

ಸಂಗೀತ ಮೀಮಾಂಸೆ: ಲೇ: ಎಂ. ಆರ್. ಶಂಕರ ಮೂರ್ತಿ: ಪ್ರಧಾನ ಸಂಪಾದಕರು: ಡಾ.ಜಿ. ಎಸ್. ಶಿವರುದ್ರಪ್ಪ; ಪ್ರ: ಕೆ. ಸಿ. ಶಿವಪ್ಪ, ಕೋ-ಆರ್ಡಿನೇಟರ್. ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-1: ಪುಟಗಳು: 116; ಬೆಲೆ: ರೂ. 4-00

ಮಾರ್ಗ, ದೇಶೀ ಎಂಬ ಎರಡು ಸಂಪ್ರದಾಯಗಳಾಗಿ ನಡೆದು ಬಂದಿರುವ ಭಾರತೀಯ ಸಂಗೀತದ ಇತಿಹಾಸ ಮತ್ತು ಶಾಸ್ತ್ರ ವಿಚಾರಗಳನ್ನು ಸಂಗೀತಾಭ್ಯಾಸಿಗಳಾದ ವಿದ್ಯಾರ್ಥಿಗಳಿಗೆ ಹಾಗೂ ಆಸಕ್ತಿಯುಳ್ಳ ಇತರರಿಗೆ ಸಂಕ್ಷಿಪ್ತರೂಪದಲ್ಲಿ ಪರಿಚಯ ಮಾಡಿಕೊಡುವ ಸದುದ್ದೇಶದಿಂದ ಬೆಂಗಳೂರು ವಿಶ್ವವಿದ್ಯಾಲಯದವರು ಪ್ರಕಾಶಕ್ಕೆ ತಂದಿರುವ ಗ್ರಂಥವಿದು. ಭಾರತೀಯ ಸಂಗೀತದ ಇತಿಹಾಸ, ಕರ್ಣಾಟಕ ಸಂಗೀತದ ಬೆಳವಣಿಗೆ, ಸಂಗೀತ, ಶಾಸ್ತ್ರೀಯ ಸಂಗೀತ, ಮಾರ್ಗ ಮತ್ತು ದೇಶೀ ಸಂಗೀತ, ಸಂಗೀತ ಶಕ್ತಿ, ಸಂಗೀತ ರಸಾನುಭವ, ಸಂಗೀತದಿಂದ ಸಮಾಜ ಕಲ್ಯಾಣ, ಸಾಹಿತ್ಯ ಸ್ವರ ಮತ್ತು ತಾಳ, ತಾಳ, ಜನಕ ಜನ್ಯರಾಗಗಳು, ವಾಗ್ಗೇಯಕಾರ, ಸಂಗೀತ ಮತ್ತು ಯೋಗ, ಸಂಗೀತಕಚೇರಿ, ಸಂಗೀತದಲ್ಲಿ ಮೂರು ಬಗೆ, ಸಂಗೀತದಲ್ಲಿ ಧ್ವನಿಸೌಂದರ್ಯ, ಶಾಸ್ತ್ರೀಯ ಮತ್ತು ಲಘು ಸಂಗೀತ, ಸಂಗೀತಗಾರನ ಹೊಣೆ

ಗಾಯಿಕೆ, ಸಂಗೀತ ರಸಿಕ ಮತ್ತು ವಿಮರ್ಶಕ, ಸಂಗೀತದ ಸಂಕೇತಶಾಸ್ತ್ರ, ಎಂಬ ವಿಷಯಗಳ 20 ಅಧ್ಯಾಯಗಳನ್ನೂ 166 ಮಂದಿ ವಾಗ್ಗೇಯಕಾರ ಹಾಗೂ ಶಾಸ್ತ್ರಕರ್ತರ ಪರಿಚಯಾತ್ಮಕವಾದ 'ನಮ್ಮ ಸಂಗೀತಜ್ಞರು' ಎಂಬ ಅನುಬಂಧವನ್ನೂ ಒಳಕೊಂಡಿವೆ. ಈ ಒಂದೊಂದರ ಕುರಿತು ಒಂದೊಂದು ಗ್ರಂಥಗಳನ್ನೇ ಬರೆಯಬೇಕಾಗುವಷ್ಟು ವ್ಯಾಪ್ತಿಯುಳ್ಳ ಹಾಗೂ ಘನವಾದ ಈ ವಿಷಯಗಳನ್ನು ಇಷ್ಟು ಚಿಕ್ಕ ಗ್ರಂಥದಲ್ಲಿ ಅಡಗಿಸುವುದು ಎಷ್ಟಾದರೂ ಕಷ್ಟದ ಕೆಲಸ. ಒಂದೆರಡು ಮಾತುಗಳಿಂದಷ್ಟೇ ಮುಗಿಸಿ ಬಿಡುವುದೆಂದರೆ ಅದರಿಂದ ಸಂಗೀತಶಾಸ್ತ್ರದ 'ಮೀಮಾಂಸೆ'ಯಾಗುವುದಕ್ಕಿಂತ ಸ್ಥೂಲ ಪರಿಚಯವಾಗುವುದೂ ಪ್ರಯಾಸವೆಂದೇ ಹೇಳಬೇಕು. ಪ್ರಾಯಶಃ ಅದರಿಂದಲೇ ಈ ಗ್ರಂಥಕರ್ತರು ಭಾರತೀಯ ಸಂಗೀತದ ಇತಿಹಾಸವೆಂಬ ಮೊದಲನೆಯ ಅಧ್ಯಾಯವನ್ನು, ಋಗ್ವೇದ, ಸಾಮವೇದ, ಬ್ರಾಹ್ಮಣ, ಸಂಹಿತೆ, ಶಿಕ್ಷಾ, ಪ್ರಾತಿಶಾಖ್ಯ, ರಾಮಾಯಣ, ಭಾರತ, ತೈತ್ತಿರೀಯ ಉಪನಿಷತ್ತು, ನಾರದೀ(?) ಹರಿವಂಶ, ಪುರಾಣಗಳು, ಭರತನ ನಾಟ್ಯಶಾಸ್ತ್ರಾದಿಗಳ ಮೊದಲಾಗಿ 1921ನೆಯ ಇಸವಿಯ ವರೆಗೆ ಹುಟ್ಟಿದ ಸಂಗೀತ ಶಾಸ್ತ್ರಗ್ರಂಥಗಳ ಸುದೀರ್ಘವಾದ ಪಟ್ಟಿಯನ್ನು ಕೊಟ್ಟು ಅವುಗಳಲ್ಲಿ ಸಂಗೀತದ 'ಆಲೋಚನೆ ಇದೆ' ಎಂದಷ್ಟೇ ಹೇಳಿ ಮುಗಿಸಿದ್ದಾರೆ.

ಎರಡನೆಯದಾದ ಕರ್ಣಾಟಕ ಸಂಗೀತದ ಬೆಳವಣಿಗೆಯೆಂಬ ಅಧ್ಯಾಯವೂ ಮೊದಲ ಅಧ್ಯಾಯದಲ್ಲಿ ಹೇಳಿದ ಭರತ ಮತಂಗಾದಿ ಪುರಾತನ ಹಾಗೂ ವೆಂಕಟಮಖಿಯೇ ಮೊದಲಾದ ಅರ್ವಾಚೀನ ಶಾಸ್ತ್ರಕರ್ತರ ಹಾಗೂ ಅವರು ರಚಿಸಿರುವ ಗ್ರಂಥಗಳ ಹೆಸರುಗಳೊಂದಿಗೆ ತ್ಯಾಗರಾಜರು, ದೀಕ್ಷಿತರು, ಶ್ಯಾಮಾಶಾಸ್ತ್ರಿಗಳು, ಮೈಸೂರು ಸದಾಶಿವರಾಯರು, ವೀಣೆಶೇಷಣ್ಣ, ದಾಸಕೂಟ, ಅಕ್ಕಮಹಾದೇವಿ, ಬಸವಣ್ಣ, ಸರ್ಪಭೂಷಣ ಶಿವಯೋಗಿ ಇತ್ಯಾದಿ ಕೆಲವು ಹೆಸರುಗಳನ್ನೂ ಹೆಚ್ಚಿಗೆ ಸೇರಿಸಿಕೊಂಡು ಕೊನೆಗೆ "ಇವರೆಲ್ಲರಿಂದಲೂ ತೆರೆದ ಮಾರ್ಗದಲ್ಲಿ ನಾವು ಸಾಗಬೇಕು" ಎಂಬ ಹಿತವಚನದಲ್ಲಿ ಪರಿಸಮಾಪ್ತಿಗೊಳ್ಳುತ್ತದೆ.

ಮೂರನೆಯದಾದ 'ಸಂಗೀತ' ಎಂಬ ಅಧ್ಯಾಯವೇ ಎಲ್ಲಕ್ಕಿಂತ ದೊಡ್ಡದು ಹಾಗೂ ಮುಖ್ಯವಾದ್ದು—ಹದಿನೇಳು ಪುಟಗಳಲ್ಲಿದೆ. ಗ್ರಂಥಕರ್ತರು ಇದರಲ್ಲಿ ಸಂಗೀತದ ನಾದ, ಶ್ರುತಿ, ಸ್ವರ, ಗ್ರಾಮ, ಜಾತಿ, ಮೂರ್ಛನೆ, ವರ್ಣ, ಅಲಂಕಾರಾದಿಗಳ ಲಕ್ಷಣಗಳನ್ನು ಸಂಕ್ಷೇಪತಃ ಕೊಟ್ಟಿರುತ್ತಾರೆ. ಅವುಗಳಲ್ಲಿ ಹೆಚ್ಚಿನವು ಅಸ್ಪಷ್ಟ ಹಾಗೂ ಶಾಸ್ತ್ರೋಕ್ತ ಲಕ್ಷಣಗಳಿಗಿಂತ ಭಿನ್ನವಾಗಿಯೂ ಸಂದೇಹಾಸ್ಪದವಾಗಿಯೂ ಕಾಣುವುದರಿಂದ ವಿದ್ಯಾರ್ಥಿಗಳೂ ವಿದ್ವಾಂಸರೂ ಆಯಾ ಶಾಸ್ತ್ರಗ್ರಂಥಗಳನ್ನು ಪರಿಶೀಲಿಸಿ ನಿಜಾಂಶವನ್ನು ಕಂಡುಕೊಳ್ಳುವುದೇ ಉಚಿತವೆಂದು ಸೂಚಿಸಬಯಸುತ್ತೇವೆ.

ಅಂಥ ಕೆಲವನ್ನು ಇಲ್ಲಿ ಉದಾಹರಿಸಬಹುದು:

1 ಒಂದೊಂದೂ ಸ್ಥಾಯಿಯಲ್ಲಿ ಉಂಟಾಗಬಹುದಾದ 22 ಶ್ರುತಿಗಳು ಎಂಬ ನಾದವಿಶೇಷಗಳನ್ನು ಕೆಲವು ವಿಧಿಗಳಿಗೆ ಒಳಪಡಿಸಿ ಚಿಕ್ಕ ಚಿಕ್ಕ ಗುಂಪುಗಳಾಗಿ ಧ್ವನಿಸಿದಾಗ ಆ ಶ್ರುತಿಗಳ ಗುಂಪುಗಳು ರಂಜನೆಯಿಂದ ಕೂಡಿದ ಸ್ವರವೆಂಬ ರೂಪವನ್ನು ಹೊಂದುತ್ತವೆ.(ಪು.20)

2 'ಸ' ಎಂಬ ಷಡ್ಜಸ್ವರ ಮೊದಲನೇ ನಾಲ್ಕು ಶ್ರುತಿಗಳನ್ನು ಒಂದರ ಹಿಂದೆ ಒಂದರಂತೆ ಸೇರಿಸಿ ಉಚ್ಚರಿಸುವುದರಿಂದ ಉಂಟಾಗುತ್ತದೆ. ಇತ್ಯಾದಿ. (ಪು. 20--21)

3 22 ಶ್ರುತಿಗಳೆಲ್ಲವನ್ನೂ ಸ್ವರಗಳಾಗಿ ಮಾಡಬೇಕಾದರೆ ಅವುಗಳನ್ನು ಕೆಲವು ವಿಧಿಗಳಿಗೆ ಒಳಪಡಿಸಬೇಕು. ಆದುದರಿಂದ ಸ್ವರಗಳನ್ನು ಉಂಟುಮಾಡುವಾಗ ಒಂದು ಸ್ಥಾಯಿಯಲ್ಲಿರುವ ಅಥವಾ ಬಳಿಯಲ್ಲಿರುವ ಶ್ರುತಿ ಸಮೂಹವನ್ನು, ಅಂದರೆ ಸ್ವರವನ್ನು ಆಧಾರವಾಗಿಟ್ಟುಕೊಂಡು ಅದರ ಅಂಶಗಳಾಗಿಯೇ ಬೇರೆಬೇರೆ ಸ್ವರಗಳು ರೂಪತಾಳುತ್ತವೆ. (20–21)

4 ಈಗಲೂ ಕೆಲವು ರಾಗಗಳನ್ನು ಮಧ್ಯಮಗ್ರಾಮದಲ್ಲೇ ಹಾಡುತ್ತಾರೆ.

5 ಶಂಕರಾಭರಣದಲ್ಲಿ (ರಾಗದಲ್ಲಿ) 'ಸ'ದಿಂದ ಮೊದಲಾಗುವ ಮೂರ್ಛನೆಯು ನವರೋಜ್ ರಾಗವಾಗುತ್ತದೆ. (27)

6 22 ಶ್ರುತಿಗಳಲ್ಲಿ 16 ಸ್ವರ ಸ್ಥಾನಗಳನ್ನು ಉಪಯೋಗಿಸಿಕೊಂಡು 72 ಮೇಳಕರ್ತರಾಗ

ಗಳ ರಚನೆಯಾಗಿದೆ......ನಾಲ್ಕರಿಂದ 22ರ ವರೆಗೂ ಸ್ವರಗಳ ಹೆಸರುಗಳೇ ಇವೆ. ಇವನ್ನು ವೆಂಕಟಮಖಿಯು ಚತುರ್ದಂಡಿಪ್ರಕಾಶಿಕೆಯಲ್ಲಿ ಕಾಣಬಹುದು. (24–25)

7 ಒಂದು ಸ್ವರವನ್ನು ಹೇಳುವಾಗ ನಾದವನ್ನು ಸಣ್ಣಗೆ ಮತ್ತು ದೊಡ್ಡದಾಗಿ ಮಾಡುವ ಒಂದು ಕ್ರಮಕ್ಕೆ ಅಲಂಕಾರವೆಂದು ಕರೆಯುತ್ತಾರೆ. ಇದು ಏಳು ವಿಧ...ಶಾಂತ ಮತ್ತು ಗಂಭೀರ ಈ ಏಳು ವಿಧವಾಗಲು ಸಾಧ್ಯ. ಇತ್ಯಾದಿ (27)

8 'ಯುತ್ತು ತಂತ್ರೀ. ಕೃತಂ ಪ್ರೋಕ್ತಂ ನಾನಾಂತೀದ್ಯ ಸಮಾಶ್ರಯಂ' (?) ಅರ್ಥ–ವಾದ್ಯ ಗೀತವು ತಂತೀವಾದ್ಯಗಳ ಜೊತೆಗೆ ಹಾಡಲ್ಪಡುತ್ತಿದ್ದರೆ ಅದು ಗಾಂಧರ್ವ. ಪ್ರಾಚೀನ ಮಾರ್ಗ ಸಂಗೀತವನ್ನು ವೀಣಾದಿ ವಾದ್ಯಗಳ ಜೊತೆಗೆ ಹಾಡುತ್ತಿದ್ದರು. ಈಗಿನ ದಿನಗಳಲ್ಲಿ ವೀಣೆಯು ಅಗತ್ಯವಿಲ್ಲ. ತಂಬೂರಿ ಶ್ರುತಿಯಿಂದ ಹಾಡುತ್ತೇವೆ(ಆದ್ದರಿಂದ ಇದು ದೇಶಿ). (ಪುಟ 38–39)

9 ಮತಂಗನು ಬೃಹದ್ದೇಶಿಯಲ್ಲಿ 'ಯಸ್ಮಾಂ ಶ್ರುತಿಸ್ವರ ಗ್ರಾಮ ಜಾತ್ಯಾದಿ ನಿಯಮೋ ನಹಿ'– ಅಂದರೆ, ಶ್ರುತಿ, ಸ್ವರ, ಗ್ರಾಮ, ಜಾತಿ ಇತ್ಯಾದಿಗಳ ನಿಯಮವಿಲ್ಲವೋ ಅದು ದೇಶಿ ಎಂದು ತಿಳಿಸಿದ್ದಾನೆ.(39)

10 ವಾಕ್ಯಾರ್ಥವನ್ನು ಹೊಂದಿರುವ ಶಬ್ದ ಧ್ವನಿಯನ್ನೊಳಗೊಂಡಿರುತ್ತದೆ. ಶಬ್ದ ಅಥವಾ ಸಪ್ಪಳ ಧ್ವನಿಯಿಂದ ಭಿನ್ನವಾಗಿರುತ್ತದೆ. ಅಲ್ಲದೆ ಅದು ಶ್ರವಣ ಯೋಗ್ಯವಾಗಿರುವುದಿಲ್ಲ. (16)

11 ಅನಾಹತನಾದದ ಅನುಭವವು ಸಂಗೀತದಿಂದ ಸಾಧ್ಯವಾಗುತ್ತದೆ. ಆದರೆ ಅದಕ್ಕೆ ಸ್ವಲ್ಪ ಭೌತಶಾಸ್ತ್ರದ ಪರಿಚಯವು ಬೇಕು...ಇತ್ಯಾದಿ (ಪು. 19)

12 ಆದಿ, ರೂಪಕ, ಮಿಶ್ರಛಾಪು, ಖಂಡಛಾಪು ತಾಳಗಳ ಪ್ರಮಾಣವಾದರೂ ಸರ್ವಲಘು. ಸರ್ವಲಘುವೆಂದರೆ ತಾಳದ ಪ್ರತಿಘಾತಕ್ಕೆ ಮಧ್ಯೆ ಬರುವ ಅಕ್ಷರಗಳು 3, 4–5, 7-9 ಆಗಿದ್ದರೂ 3-4-5-7-9 ಹೀಗೆ ಬರುವುದಕ್ಕೆ ಸರ್ವಲಘುವೆಂದು ಹೆಸರು(55) ತಾಳದಲ್ಲಿ ಧ್ರುತಕಾಲ, ಅನುದ್ರುತ, ಮಧ್ಯಮತಾಳ ಎರಡೂ ಎಂಟು ಬಗೆಗಳಿರುವ ತಾಳ (57)

13 ಭರತನ ನಾಟ್ಯಶಾಸ್ತ್ರದಲ್ಲಿ ಯಜುರ್ವೇದದಿಂದ ತಾಳವನ್ನು ತೆಗೆದುಕೊಳ್ಳಲಾಗಿದೆ. ಗಾಯನದಲ್ಲಿ ಸಾಹಿತ್ಯ, ಸ್ವರ, ತಾಳ, ರಸ ಎಂಬ ನಾಲ್ಕು ಪ್ರಭೇದಗಳುಂಟು ಈ ನಾಲ್ಕನ್ನು ನಾಲ್ಕು ವೇದಗಳಿಂದ ಗ್ರಹಿಸಲಾಗಿದೆ (51).

14 ರಾಮಾಯಣದಲ್ಲಿ ಭಿನ್ನಭಿನ್ನ ರಾಗಗಳು ಇವೆ(ಪು. 6). ಅಮರಕೋಶದ ಟೀಕಾಕಾರನಾದ ಕ್ಷೀರಸ್ವಾಮಿಯು ಗಾಂಧರ್ವದ ಬಗೆಗೆ ಬರೆಯುತ್ತಾ 'ಗಂಧರ್ವಸ್ಯಾಯಂ ಪ್ರಖ್ಯಾತರೇ ದೇವಗಾಯಕಾ' ದೇವತೆಗಳ ನಾಯಕರು ತುಂಬುರು ಮುಂತಾದವರು ಎಂದು ಹೇಳಿದ್ದಾನೆ. (38)

15 700 ವರ್ಣಗಳಿಂದ 72 ಮೇಳಕರ್ತರಾಗಗಳನ್ನೇ ಆಧಾರವಾಗಿಟ್ಟುಕೊಂಡು ಸಂಗೀತದ ವಿಕಾರ ಮಾಡಲಾಗಿದೆ (58) ಸಂಗೀತ ರತ್ನಾಕರದಲ್ಲಿ 30 ಗ್ರಾಮ್ಯ ರಾಗಗಳಿವೆ (59)

16 ವೈದಿಕ ಸಂಗೀತವನ್ನು ಪ್ರಸ್ತಾವ, ಹಿಂಕಾರ, ಉದ್ಗೀಥ, ಪ್ರತಿಹಾರ, ಉಪದ್ರವ, ನಿಧಾನ, ಪ್ರಣವ ಎಂದು 7 ವಿಧದಲ್ಲಿ ವಿಂಗಡಿಸಲಾಗಿತ್ತು (ಪು.4)

17 ಛಾಂದೋಗ್ಯದಲ್ಲಿ ಅನಿರುಕ್ತ, ನಿರುಕ್ತ, ಮೃದು ಮತ್ತು ಕ್ರೌಂಚ ಎಂಬ ಸ್ವರಗಳನ್ನು ಹೇಳಿದೆ. (4) ಇತ್ಯಾದಿ.

ಇನ್ನು ಮುಂದಿನ ಅಧ್ಯಾಯಗಳಲ್ಲಿ ಶಾಸ್ತ್ರೀಯ ಲಕ್ಷಣಗಳಿಲ್ಲದಿದ್ದರೂ. 'ವೆಂಕಟಮಖಿಯು ಮೇಳಪದ್ಧತಿಯು ಸಂಗೀತಕ್ಕೆ ಒಂದು ಶಾಸ್ತ್ರ ಲಕ್ಷಣವನ್ನು ಕೊಡಲು ಮಾತ್ರ ಪ್ರಯೋಜನವಾಯಿತು' (ಪು.60) 'ಪಂಕಾಂಭೋಜಿ ರಾಗವನ್ನು ಹಾಡಿದರೆ ಸ್ವಾರಸ್ಯವಿಲ್ಲ' (60) ಎಂದು ಮುಂತಾಗಿ ಈ ಗ್ರಂಥ ಕರ್ತರು ಕೊಡುವ ವಿಮರ್ಶನ ವಿಚಾರಗಳನ್ನು ವಿದ್ವಾಂಸರು ಮನ್ನಿಸಬಹುದೇ ಎಂಬ ಶಂಕೆಯುಂಟಾಗುತ್ತಿದೆ.

ಇದಲ್ಲದೆ ಈ ಗ್ರಂಥಕರ್ತರು ಕೊಟ್ಟಿರುವ ಪಾರಿಭಾಷಿಕ ಪದಗಳೂ ಸಂಸ್ಕೃತ ಶ್ಲೋಕಗಳೂ

ಬಹಳ ವಿರೂಪವಾಗಿ ಕಾಣುತ್ತವೆ. ಇವು ಪ್ರಾಯಶಃ ಮುದ್ರಣದೋಷವಿದ್ದರೂ ಇರಬಹುದು; ಏನಿದ್ದರೂ ಈ ಕೆಲವು ಶಬ್ದಗಳಿಗೆ ಅರ್ಥವಾಗುವಂತಿಲ್ಲ: ಔಮಾಪಾತ್ಯಂ. ಗ್ರಾಮಣೀಗಾನ. ತೇರನಂ. ದುರ್ದುರ ವರ್ಣನ. ಕರಾಕಾಲಾವಪ್ರಪೃತ್ತೀಷು. ಏತೇರ್ಥವೇಸ್ಸುಗಾಯಂತಿ. ಭೂಯಿಷ್ಠಾತ್ರಿ ಸ್ವರೇಷುಚ ಸಾಮಾನಿ. ತುಲಗಾಕವಿ. ಪ್ರತೀಕಾರಂ ಪುನಃ ಗಂಧರ್ವಾಣಾಂ. ಅತಮೋಡಿಗಲನ, ಧ್ರುತಕಾಲ. ನಾಟ್ಯಂ ಚವಿವಿಧಾಶ್ರವತ್, ತೇರವಂಜನ, ಇತ್ಯಾದಿ ಇತ್ಯಾದಿ.

'ಸ್ವರ ಸಂಕೇತ ಶಾಸ್ತ್ರ'ವೆಂಬ ಕೊನೆಯ ಅಧ್ಯಾಯದಲ್ಲಿ, 'ಸಂಕೇತಗಳ ವಿವರಣೆಯನ್ನು ಮೂರನೆ ಅನುಬಂಧದಲ್ಲಿ ವಿವರಿಸಲಾಗಿದೆ' ಎಂದು ಸೂಚಿಸಿದ್ದಾರೆ. ಆದರೆ ನಮಗೆ ದೊರೆತ ಪ್ರತಿಯಲ್ಲಿ ಎರಡನೇ ಮೂರನೇ ಅನುಬಂಧಗಳಿರುವುದಿಲ್ಲ. ಆ ಅನುಬಂಧಗಳ ವಿಷಯವೇನೆಂದೂ ತಿಳಿಯದು.

ಪ್ರಸ್ತಾಪನೆಯಲ್ಲಿ ಗ್ರಂಥಕರ್ತರು 'ಈ ಗ್ರಂಥವು ಉಪಯುಕ್ತ ವಿಷಯಗಳನ್ನೊಳಗೊಂಡಿದ್ದು ಸಂಗೀತ ಅಭ್ಯಾಸಿಗಳಿಗೆ–ವಿದ್ವಾಂಸರಿಗೆ ಉಪಯುಕ್ತವಾದರೆ ನನ್ನ ಶ್ರಮ ಸಾರ್ಥಕ. ಸಹೃದಯರು ಗುಣದೋಷವನ್ನು ವಿಮರ್ಶೆ ಮಾಡಿ ದೋಷಗಳನ್ನು ತಿಳಿಸಿದರೆ ಮುಂದೆ ಅವುಗಳನ್ನು ತಿದ್ದಿಕೊಳ್ಳಬಹುದು' ಎಂದು ವಿನಯದಿಂದ ಬಿನ್ನವಿಸಿರುವುದು ಇವರ ಸಹಜ ವಿನಮ್ರ ಸ್ವಭಾವದ ಹಾಗೂ ಸರಳ ಸೌಜನ್ಯದ ದ್ಯೋತಕವಾಗಿದೆ.

—ಕುಕ್ಕಿಲ ಕೃಷ್ಣಭಟ್ಟ

ಸಾರ್ವಜನಿಕದಲ್ಲಿ ಸಾತ್ತ್ವಿಕ: ಲೇ: ಡಿ.ವಿ.ಜಿ. : ಪ್ರ: ಪ್ರಕಟನ ಮತ್ತು ಪ್ರಚಾರೋಪನ್ಯಾಸ ವಿಭಾಗ. ಬೆಂಗಳೂರು ವಿಶ್ವವಿದ್ಯಾಲಯ. ಬೆಂಗಳೂರು; ಪುಟಗಳು:52; ಬೆಲೆ: ರೂ. 1.50

'ಮಾಸ್ತಿ ರಾಮಸ್ವಾಮಿ ತಿರುಮಲಮ್ಮ' ದತ್ತಿ ಉಪನ್ಯಾಸ ಮಾಲಿಕೆಯಲ್ಲಿ 1970ರ ಫೆಬ್ರವರಿಯಲ್ಲಿ ಡಾ. ಡಿ.ವಿ. ಗುಂಡಪ್ಪನವರು ಮಾಡಿದ ಎರಡು ಉಪನ್ಯಾಸಗಳ ಪ್ರಬಂಧರೂಪ ಈ ಕಿರಿಯ ಪುಸ್ತಕ. ಡಿ.ವಿ.ಜಿಯವರು ಇದನ್ನು ಲಘು ಪುಸ್ತಕ ಎಂದು ಕರೆದಿದ್ದಾರೆ. ಒಳಗೆ ಮನನೀಯವೂ ವಿಚಾರಾರ್ಹವೂ ಆದ ಗಂಭೀರ ವಿಷಯವೇ ಹೊರತು 'ಲಘು' ಜಾತಿಯದಲ್ಲ. ಕೆಲವೆಡೆ ಮಾಡಿರುವ ವ್ಯಾಖ್ಯೆ ಮಾತ್ರ 'ಲಘು'ವಾಗಿದೆ.

ಏಕಜನ ಪದೀಯತೆ. ನೀತಿನಿಷ್ಠೆ ಮತ್ತು ದೇಶಋಣ ಎಂಬ ಮೂರು ಭಾಗಗಳಲ್ಲಿ ಡಿ.ವಿ.ಜಿಯವರು ತಮ್ಮ ವಿಚಾರಧಾರೆಯನ್ನು ಹರಿಸಿದ್ದಾರೆ. ಭಾರತ ಜನ ಸಮುದಾಯದ ಒಗ್ಗಟ್ಟು. ಅವರ ಆವಶ್ಯಕತೆ: ಜೀವಹಿತ ಸಾಧಕವಾದ ಸಾತ್ತ್ವಿಕ ಸ್ವಾರ್ಥ ಮತ್ತು ಅದರೊಡನೆ ಇರಬೇಕಾದ ಹೃದಯ ವೈಶಾಲ್ಯಗಳನ್ನು ಸರಳವಾಗಿ ವಿವರಿಸಿದ್ದಾರೆ. ಒಗ್ಗಟ್ಟು, ಪ್ರಜಾಭಿಪ್ರಾಯ ಮತ್ತು ಸುಧಾರಣಾ ಮನೋಭಾವ ಎಂಬ ಮೂರು ವಿಷಯಗಳನ್ನಿಲ್ಲಿ ಪ್ರಸ್ತಾಪಿಸಿದ್ದಾರೆ.

'ರಾಷ್ಟ್ರ', ರಾಷ್ಟ್ರೀಯತೆ. 'ನ್ಯಾಷನಲಿಸ್ಮ್' ಎಂಬೀ ಪದಗಳಿಗೆ ಬದಲಾಗಿ 'ಏಕಜನಪದೀಯತೆ' ಎಂಬ ಮಾತನ್ನು ಉಪಯೋಗಿಸಿರುವುದೊಂದು ಇಲ್ಲಿಯ ವಿಶೇಷ. ರಾಷ್ಟ್ರ ಎಂಬ ಪದದಲ್ಲಿ ಭಾರತದ ಹಲವಾರು ರಾಜ್ಯಗಳ ಮತ್ತು ಭಾಷೆಗಳ ವೈಲಕ್ಷಣ್ಯ ಪೂರ್ಣವಾಗಿ ಮೂಡುವುದಿಲ್ಲ ಎಂದಾದರೆ 'ಏಕಜನಪದ' ಎಂಬ ಮಾತಿಗೂ ಅದೇ ಸಮಸ್ಯೆ ಎದುರಾಗುತ್ತದೆ. ಈ ಹೊಸ ಮಾತು ಕೇವಲ ಹೊಸದಾಗಿರುವುದರ ಹೊರತು ಯಾವ ವಿಶೇಷವಾದ ಅರ್ಥವನ್ನು. ಭಾವಕೋಶವನ್ನು. ಸೃಜಿಸಿಕೊಳ್ಳುವುದೊ ಎಂಬುದು ಆಲೋಚನೆ ಮಾಡಬೇಕಾದ ವಿಚಾರ. ಒಂದು ರಾಷ್ಟ್ರ ಎಂದರೆ ಕೇವಲ ನೆಲ ಅಲ್ಲ. ಆ ನೆಲವನ್ನಾಶ್ರಯಿಸಿ ಅಭಿಮಾನದಿಂದ ನಿಂತ ಜನಪದ ಎಂದೇ ಭಾವನೆ ಪ್ರಚಲಿತವಾಗಿದೆ.

ಜನತೆ ಮೊದಲು ಕರ್ತವ್ಯ ಪರಾಯಣರಾಗಬೇಕು. ಹಕ್ಕಿನ ಬಗ್ಗೆ ಗಮನ ಆಮೇಲೆ ಹರಿಯಬೇಕು. ಹಕ್ಕುದಾರಿಗಿಂತ ಮಾನವತ್ವವನ್ನು ಉಳಿಸಿಕೊಳ್ಳುವುದು ದೊಡ್ಡದು: ಎಲ್ಲಿಯಾದರೂ ಅನ್ಯಾಯವಾದರೆ. ಯಾರಾದರೂ ನಾಚಿಕೆಗೆಟ್ಟ ಕೆಲಸ ಮಾಡಿದರೆ 'ಅದು ತಪ್ಪು' ಎಂದು ಪ್ರತಿಭಟಿಸುವ ದಿಟ್ಟತನ ಧೈರ್ಯ ಇರಬೇಕು; ಸಮಸ್ತ ಜನರ ಮಾನ. ಪ್ರಾಣಗಳ ರಕ್ಷಣೆ ಯಾರು ಹೇಳದಿದ್ದರೂ ನಮ್ಮ ಕರ್ತವ್ಯ ಆಗಬೇಕು; ಅಂಧ ಪರಾನುಕರಣೆ ಸರಿಯಲ್ಲ. ನಮ್ಮ ದೇಶದ ಸಂಸ್ಕೃತಿ. ಹಿರಿಯ ಪರಂಪರೆಗಳಿಗನುಗುಣವಾಗಿ ನಮಗೆ ಹೊಂದುವಂತಹ ರಾಜ್ಯವ್ಯವಸ್ಥೆಯನ್ನು ರೂಪಿಸಿಕೊಳ್ಳಬೇಕು: ಒಳ್ಳೆಯ ರಾಜ್ಯವ್ಯವಸ್ಥೆಯಲ್ಲಿ

ಸಮಾನತ್ವ ಮತ್ತು ಪ್ರತ್ಯೇಕತೆ ಎರಡೂ ಹೊಂದಿಕೊಂಡು ಇರುವ ಅವಕಾಶವಿರಬೇಕು– ಈ ಮುಂತಾದ ಉತ್ತಮ ವಿಚಾರಗಳನ್ನೂ ಇಲ್ಲಿ ಕಾಣಬಹುದು.

ಇಂದಿನ ರಾಜಕಾರಣ ಮತ್ತು ಪ್ರಜಾಪ್ರಾತಿನಿಧ್ಯ ಒಂದು ರೀತಿಯ ಲಾಭದಾಯಕ ಕಸುಬೇ ಆಗಿ ಪ್ರಜೆಯ ಅಭಿಪ್ರಾಯ ತಿಳಿಸುವ ಬದಲು ಪ್ರತಿನಿಧಿ ತನ್ನ 'ಪಟ್ಟಭದ್ರ ಹಿತಾಸಕ್ತಿ'ಯ ಅಭಿಪ್ರಾಯವನ್ನೇ ತಿಳಿಸುವುದರಿಂದ ಪ್ರಜಾಭಿಪ್ರಾಯ ಅನೇಕ ಸಲ ಪ್ರಜಾಕಂಟಕವಾಗುತ್ತದೆ ಎಂದು ಹೇಳಿರುವುದೇನೊ ಸರಿ. ಆದರೆ–ಸರಕಾರ ತನ್ನ ಮಿತಿಯನ್ನು ಅರಿಯದಿದೆ. ಜನತೆಯ ವಿವಿಧ ವರ್ಗಗಳೂ ಇತಿಮಿತಿಯನ್ನು ಮರೆತು 'ಅತಿ'ಗೇ ಆಸೆ ಪಡುವುದು ಸಾಮಾನ್ಯ ಗೀಳಾಗಿದೆ: ಉಚಿತ ಮನೆ. ಉಚಿತ ವಿದ್ಯಾಭ್ಯಾಸ. ವೈದ್ಯ ಸೌಲಭ್ಯ. ವಾಹನ ಸೌಕರ್ಯ. ಕಾರ್ಖಾನೆಗಳ ಮಾಲೀಕರು ಏನೇನು ವೈಭವ ಅನುಭವಿಸುತ್ತಾರೊ ಅದೆಲ್ಲ ಪ್ರತಿಯೊಬ್ಬ ಕಾರ್ಮಿಕನಿಗೂ ಸಿಕ್ಕಬೇಕು. ಇದನ್ನು ಒದಗಿಸಲು ಹೊರಟ ಸರಕಾರ ಮಿತಿ ಮೀರಿದ ತೆರಿಗೆ ಹಾಕುತ್ತದೆ. ಜೀವನ ಹೆಚ್ಚು ಹೆಚ್ಚು ಕಷ್ಟವಾಗುತ್ತದೆ—ಎಂದು ಹೇಳಿರುವುದರ ಹಿಂದಿನ ಮನೋಭಾವ. ಹೀಗೆ ಹೇಳಿರುವುದರ ಧೋರಣೆ ಸರಿ ಎಂದು ಕಾಣುವುದಿಲ್ಲ. ವರ್ಗರಹಿತವಾದ ಸಮಾಜರಚನೆ ಮಾನವತೆಯ ಒಂದು ಮಹಾದರ್ಶ. ವರ್ಗರಹಿತ ಎಂಬುದು ಮುಖ್ಯವಾಗಿ ವರ್ಗ ಮನೋಭಾವ ರಹಿತ ಎಂಬುದನ್ನೂ ಇಲ್ಲಿ ಗಮನಿಸಬೇಕು. ಕಾರ್ಮಿಕರಿಗೆ ಅತಿ ಎನ್ನಬಹುದಾದ ಸಕಲ ವೈಭವಗಳೂ ಮಾಲೀಕರಿಗಿದ್ದಾಗ ಮಾತ್ರ ಏಕೆ ಮಾನ್ಯವಾಗಬೇಕು? ಎಲ್ಲ ಜನತೆಗೂ ಉತ್ತಮ ವಾದ ಆಹಾರ. ಮನೆ. ವಿದ್ಯೆ. ವೈದ್ಯ ಸೌಕರ್ಯ. ವಾಹನಸೌಕರ್ಯಗಳನ್ನು ಒದಗಿಸುವುದು ಜನತೆಯ ಸರಕಾರದ ಹೊಣೆ. ಇದು ಸಾಧ್ಯವಾಗದಿರುವುದಕ್ಕೆ ಆಸೆಯ 'ಅತಿ' ಕಾರಣವಲ್ಲ. ಸ್ವಾರ್ಥ. ಭ್ರಷ್ಟಾಚಾರ ಮುಂತಾದ ಮಾನವ ದೌರ್ಬಲ್ಯಗಳು ಕಾರಣ.

'ಮೆಜಾರಿಟಿ' ಅಭಿಪ್ರಾಯವೇ ಮಾನ್ಯವೆಂಬುದಾದರೆ ಸಹಸ್ರಾರು ವರ್ಷಗಳ ಸಂಪ್ರದಾಯ ಅಸಂಖ್ಯಾತ ಜನರ ಅಭಿಪ್ರಾಯವಾಗಿರುವುದರಿಂದ ಅದನ್ನೂ 'ಬಹುಜನ ಸಮ್ಮತಿ' ಎಂದು ಮಾನ್ಯ ಮಾಡಬೇಕಲ್ಲಾ ಎಂಬ ಚತುರವಾದ ವಾದಸರಣಿಯನ್ನೊಡ್ಡುತ್ತಾರೆ. ಒಂದುಕಾಲಕ್ಕೆ 'ಬಹುಜನ ಸಮ್ಮತಿ' ಆದದ್ದು ಎಲ್ಲ ಕಾಲಕ್ಕೂ ಹಾಗೇ ಆಗಿರಬೇಕೆಂದು ಹೇಗೆ ಹೇಳುವುದಕ್ಕಾಗುತ್ತದೆ? ಒಳ್ಳೆಯ ಸಂಪ್ರದಾಯ ಉಳಿಯಬೇಕಾದರೆ ತನ್ನ ಅಂತಃಸತ್ವದಿಂದಲೇ ಹೊರತು 'ಪ್ರೊಟೆಕ್ಷ'ನಿಂದಲ್ಲ. ಮಾರ್ಪಾಡು. ಬದಲಾವಣೆ ಬೆಳವಣಿಗೆಯಲ್ಲಿ ಅನಿವಾರ್ಯ. ಜನ ಸಮುದಾಯದ ಶ್ರೇಯಸ್ಸೇ ಗುರಿ ಎಂಬ ತಿಳಿವಳಿಕೆಯಿಟ್ಟುಕೊಂಡರೆ ಗುರಿಸಾಧನೆಗೆ ಹಿಂದೆ ಇದ್ದ ಸಂಪ್ರದಾಯವೋ. ಈಗಿನ ಮಾರ್ಪಾಡೊ ಯಾವುದು ಹೆಚ್ಚು ಅನುಕೂಲವೋ ಅದನ್ನೇ ಅನುಸರಿಸಬೇಕು. ಹಳೆಯದೆಂಬ ಒಂದೇ ಕಾರಣಕ್ಕೆ ಪೂರ್ವ ಸಂಪ್ರದಾಯವನ್ನೆಲ್ಲ ಹಳಿಯು ವುದು. ತಿರಸ್ಕರಿಸುವುದು ವಿವೇಕವಲ್ಲ ಎಂಬ ಡಿ.ವಿ.ಜಿ.ಯವರ ಮಾತು ಸಮಂಜಸವಾಗಿದೆ.

ನೀತಿ–ನಿಷ್ಠೆ ಎಂಬ ಎರಡನೆ ಭಾಗದಲ್ಲಿ ಗಾಂಧೀಜಿಯವರು ಹಾಕಿಕೊಟ್ಟಿರುವ ಸತ್ಯ. ಸೌಜನ್ಯ. ಸ್ವತಂತ್ರವಿಚಾರ ಮತ್ತು ಅಪರಿಗ್ರಹ ಎಂಬ ನಾಲ್ಕು ಸೂತ್ರಗಳನ್ನು ವಿವರಿಸಿದ್ದಾರೆ. ಮೊದಲ ಮೂರು ವಿಚಾರಗಳ ವಿವರಣೆ ಸರ್ವಸಮ್ಮತವಾಗಿದೆ. ನಾಲ್ಕನೆಯದಾದ 'ಅಪರಿಗ್ರಹ'ಕ್ಕೆ "ತನ್ನ ಅರ್ಹತೆಗೆ ಮೀರಿದ್ದನ್ನು ಬಯಸದಿರುವುದು. ಬಂದಾಗ ಸ್ವೀಕರಿಸದಿರುವುದು" ಎಂಬ ವಿವರಣೆಯ ಸರಳೀಕರಣ ಕೇವಲ ಆದರ್ಶದ ಮಾತಾಗಿ ಉಳಿಯಬಹುದೇ ವಿನಾ ಆಚರಣೆಯಲ್ಲಿ ಸಾಧ್ಯವಾಗುವುದಿಲ್ಲ. ಇದು ತುಂಬ ಜಟಿಲವೂ ಆತ್ಮವಿಮರ್ಶಕವೂ ಆದ ವಿಚಾರ.

ತನ್ನ ಅರ್ಹತೆ ತನಗೆ ತಿಳಿಯುವಷ್ಟು ಪ್ರಾಜ್ಞನಾದ ಪ್ರಜೆ ಇದ್ದರೆ ಅದು ಸ್ವ-ಸ್ವರೂಪಜ್ಞಾನಕ್ಕೆ ಕಿಂಚಿದೂನ ಅಷ್ಟೆ. ತನ್ನಲ್ಲಿ ಯೋಗ್ಯತೆ ಇದ್ದೂ ತಿಳಿಯದಿರುವ ಸಂಭವವೂ ಇರುತ್ತದೆ. ಇಲ್ಲದ ಯೋಗ್ಯತೆ ಇದೆ ಎಂದು ತಿಳಿಯುವ ಸ್ವಯಂ ಪ್ರತಿಷ್ಠೆ ಮಾತ್ರ ಸರ್ವಸಾಮಾನ್ಯ. ಅದರಲ್ಲೂ ವಿದ್ಯಾವಂತ ವರ್ಗದಲ್ಲಿಯ ಈ ಭ್ರಾಂತಿ ಹೆಚ್ಚು.

ಮೂರನೆಯ ಭಾಗದಲ್ಲಿ ದೇಶಋಣ ಎಂಬ ಮತ್ತೊಂದನ್ನು ಈಗಾಗಲೇ ವೈದಿಕಮತ ಪ್ರತಿಪಾದಿತವಾದ ದೇವಋಣ. ಋಷಿಋಣ. ಪಿತೃಋಣ ಎಂಬ ಮೂರು ಋಣಗಳಿಗೆ ಸೇರಿಸಬೇಕಾದುದು ಅಗತ್ಯ ಎಂಬ ವಿಚಾರವನ್ನು ಮಂಡಿಸಿದ್ದಾರೆ. ದೇಶಕ್ಕಾಗಿ ನಿಸ್ವಾರ್ಥವಾಗಿ ಸಲ್ಲಿಸಬೇಕಾದುದು 'ಸೇವೆ'

ಎಂಬ ಉಪಕಾರವಲ್ಲ; ಋಣಸಂದಾಯ ಎಂಬ ಉಪಕಾರಸ್ಮೃತಿ (ಕೃತಜ್ಞತೆ) ಎಂಬ ಡಿ.ವಿ.ಜಿಯವರ ಮಾತು ಶ್ರೇಷ್ಠವಾದುದು.

ಅನಂತರ ಲೇಖಕರು ಸ್ವತಂತ್ರ ಭಾರತದ ಚರಿತ್ರೆಯನ್ನು ಬುದ್ಧಿ ಹಾಗೂ ನೀತಿ ಪ್ರಸಕ್ತ ದೃಷ್ಟಿಯಿಂದ ಮೂರು ಯುಗಗಳಾಗಿ ವಿಂಗಡಿಸಿ ಕೊಟ್ಟಿರುವ ಸಂಗ್ರಹ ವಿವರಣೆ ಏಕದೃಷ್ಟಿಕೋನದ ಸಾಮಾನ್ಯೀಕರಣವಾಗಿದೆ. ಸಮಗ್ರದೃಷ್ಟಿಯ ಅಭಿಪ್ರಾಯವಾಗುವುದಿಲ್ಲ. ಹೇಳಿರುವ ರೀತಿ ರೋಚಕವಾಗಿದೆ. ಹರಟೆ ಜಾವಡಿಯ ಲಾಘವತೆಯಿಂದ ಕೂಡಿದೆ. ಇದರಲ್ಲಿಯ ಅಂಶ ಆಲೋಚನೆ ಮಾಡಬೇಕಾದುದೇ ಹೊರತು ಸ್ವೀಕರಿಸಬಹುದಾದ ತೀರ್ಮಾನವಾಗಲಾರದು.

ಕಡೆಯಲ್ಲಿ ಪ್ರತಿಯೊಬ್ಬ ಭಾರತೀಯನೂ ತನ್ನ ಪವಿತ್ರ ಕರ್ತವ್ಯವಾಗಿ ಮಾಡಬೇಕಾದ ಪ್ರತಿಜ್ಞೆಯ ಎಂಟು ವಿಧಿಗಳನ್ನು ಸೂತ್ರರೂಪದಲ್ಲಿ ಹೇಳಿದ್ದಾರೆ. ಇವು ಎಂಟೇ ಏಕಾಗಬೇಕು. ಆರಾಗಲೀ, ಹತ್ತಾಗಲಿ ಏಕಾಗಿರಬಾರದಾಗಿತ್ತು ಎಂಬ ಪ್ರಶ್ನೆಗೆ ಉತ್ತರ ಹೇಳುವುದು ಕಷ್ಟ. ಒಂದರಲ್ಲಿ ಇನ್ನಿತರ ವಿಧಿಗಳ ಅಂಶಗಳೂ ಸೇರಿರುವುದು. ಎಂಟರಲ್ಲಿ ಸಮಸ್ತ ವಿಚಾರವೂ ಅಡಕವಾಗಿಲ್ಲದಿರುವುದು ಇದಕ್ಕೆ ಕಾರಣ.

ಒಟ್ಟಿನಲ್ಲಿ ಈ ಎರಡು ಉಪನ್ಯಾಸಗಳಲ್ಲೂ ಡಿ.ವಿ.ಜಿಯವರ ಅನುಭವಪೂರ್ಣವಾದ ವಿಚಾರಧಾರೆಯನ್ನು ಕಾಣಬಹುದು. ಇದರ ಹಿಂದಿರುವುದು ಸಾಂಪ್ರದಾಯಿಕ ಮನೋಭಾವ ಎಂಬುದು ಸುಸ್ಪಷ್ಟವಾಗಿದೆ. ಅನುಭವ ಪರಿಪಾಕದಿಂದ ಬಂದಿರುವ ಅನೇಕ ವಿಚಾರಗಳು ಹೊಸವೇನೂ ಅಲ್ಲವಾದರೂ ಹೇಳಿರುವ ರೀತಿ ಸರಳವಾಗಿ ಮನಮುಟ್ಟುವಂತಿದೆ. ವಿವಾದಾಸ್ಪದವಾದ ಕೆಲವು ಅಭಿಪ್ರಾಯಗಳು ವಿಚಾರಪ್ರಚೋದಕವಾಗಿವೆ. ಜನತೆಯ ಬದುಕಿಗೆ ನೇರವಾದ, ತುರ್ತಾದ ಮತ್ತು ಜೀವಂತವಾದ ಸಂಬಂಧವಿರುವ ಅನೇಕ ಸಮಸ್ಯೆಗಳನ್ನು ಕುರಿತು ಪ್ರಸ್ತಾಪಿಸಿ ಡಿ.ವಿ.ಜಿಯವರು ವಿಚಾರವಂತರು ಈ ಬಗ್ಗೆ ಆಲೋಚನೆ ಮಾಡುವ ಹಾಗೆ ಮಾಡಿದ್ದಾರೆ. ಸಾಮಾಜಿಕ ಪ್ರಜ್ಞೆಯನ್ನು ಎಚ್ಚರಗೊಳಿಸಿದ್ದಾರೆ. ಈ ದೃಷ್ಟಿಯಿಂದ ಈ ಕಿರು ಹೊತ್ತಗೆಯ ಮೌಲ್ಯ ಬಹು ದೊಡ್ಡದು.

"ಉದ್ವೇಗ–ವಿಕಾರ ರಹಿತವಾದ ವೈಚಾರಿಕ ಮನೋಧರ್ಮವಿದ್ದರೆ ಕಕ್ಷಿ–ಪ್ರತಿಕಕ್ಷಿಗಳಲ್ಲಿ ಕಲಹವೇಳುವುದಿಲ್ಲ. ಅಭಿಪ್ರಾಯ ಭಿನ್ನತೆ ಇದ್ದಾಗಲೂ ಪರಸ್ಪರ ವಿಶ್ವಾಸ–ಗೌರವ ಉಳಿಯುತ್ತವೆ" ಎಂಬ ಅವರದೇ ಮಾತು ವಿಚಾರವಂತರೆಲ್ಲರೂ ಪಾಲಿಸಬೇಕಾದುದು.

— ಪ್ರಭುಪ್ರಸಾದ್

ವೀರಶೈವ ಸೋಷಿಯಲ್ ಫಿಲಾಸಫಿ: ಲೇ: ಡಾ. ಎಸ್.ಎಂ. ಹುಣಶ್ಯಾಳ್. ಎಂ.ಎ., ಪಿ. ಎಚ್‌ಡಿ., ಬಿ.ಟಿ: ಪ್ರ: ಅಮರವಾಣಿ ಪ್ರಿಂಟಿಂಗ್ ಪ್ರೆಸ್. ರಾಯಚೂರ್; ಪು. 96; ಬೆಲೆ: ರೂ. 2.00

ಭಾರತೀಯ ತತ್ತ್ವಶಾಸ್ತ್ರಕ್ಕೆ ದ್ವೈತಾದ್ವೈತ ಸಿದ್ಧಾಂತಗಳಷ್ಟೆ ಮುಖ್ಯವಾದ ಕೊಡುಗೆ ವೀರಶೈವ ಧರ್ಮಸಿದ್ಧಾಂತ. ಸಮನ್ವಯ ಮನೋಧರ್ಮವೇ ವೀರಶೈವದ ವಿಶೇಷತೆ. ಷಟ್ಸ್ಥಲ ಸಿದ್ಧಾಂತ ವೀರಶೈವದ ವಿನೂತನವಾದ. ವಿಶಿಷ್ಟವಾದ. ಕೊಡುಗೆ. ಷಟ್ಸ್ಥಲ. ಅಷ್ಟಾವರಣ. ಪಂಚಾಚಾರಗಳಲ್ಲಿ ಈ ಧರ್ಮದ ಸಾರವೆಲ್ಲ ಇದೆ. ಇದು ಕೇವಲ ಸಿದ್ಧಾಂತ ಪ್ರಧಾನವಲ್ಲ. ಅನುಷ್ಠಾನ ಎಲ್ಲರಿಗೂ ಸಾಧ್ಯವಾಗುವಂತಹ ವ್ಯಾವಹಾರಿಕ ಧರ್ಮ. ಉದ್ಧಾರಾಕಾಂಕ್ಷೆ ಇರುವ ಎಲ್ಲರಿಗೂ ಮುಕ್ತಿಸಾಧನೆಗೆ ಸಮಾನವಾದ ಅವಕಾಶವಿದೆ. ಜಾತಿಭೇದ. ವರ್ಗಭೇದ. ಸ್ತ್ರೀಪುರುಷಭೇದ. ಶಿವಭಕ್ತರಲ್ಲಿ ಸಲ್ಲದು. ಜಾತಿಯಿಂದ. ವೃತ್ತಿ ಸಂಪತ್ತುಗಳಿಂದ ಯಾರೂ ಮೇಲಲ್ಲ; ಯಾರೂ ಕೀಳಲ್ಲ. ಸ್ತ್ರೀ ಲೌಕಿಕನಿಗೆ ಭೋಗವಸ್ತುವಲ್ಲ; ಪರಮಾರ್ಥಿಗೆ ಮಾಯೆಯಲ್ಲ; ಸಾಧನಾ ಪಥದಲ್ಲಿ ಸಹಯಾತ್ರಿ. ಸಮಾಜದಲ್ಲಿ ಯಾರೂ ಸೋಮಾರಿಯಾಗಬಾರದು. ಭಿಕ್ಷಬೇಡಬಾರದು (ವೈರಾಗ್ಯದ ನೆವದಲ್ಲೂ). ಜೀವನದ ಅಗತ್ಯಕ್ಕಾಗಿ ಮಾತ್ರವಲ್ಲ. ಗುರುಲಿಂಗ ಜಂಗಮ ದಾಸೋಹಕ್ಕಾಗಿ ಪ್ರತಿಯೊಬ್ಬರೂ ವೈಯಕ್ತಿಕ ಚಿತ್ತಶುದ್ಧಿಯಿಂದ ದುಡಿಯಬೇಕು. ಜೊತೆಗೆ ಪರಧನ. ಪರಸ್ತ್ರೀಯ ನಿರ್ಲಿಪ್ತಿಯ ಛಲ ಇರಬೇಕು. ಲೋಭದಿಂದ ಸ್ವಾರ್ಥಕ್ಕಾಗಿ ಏನನ್ನೂ ಸಂಗ್ರಹಿಸಬಾರದು. ಭಕ್ತ–ಭಗವಂತರ ನಡುವೆ ಯಾರ ಮಧ್ಯಸ್ಥಿಕೆಯ ಅಗತ್ಯವೂ ಇಲ್ಲ. ಧಾರ್ಮಿಕ ಶೋಷಣೆಯ ಕೇಂದ್ರಗಳಾದ ದೇವಾಲಯಗಳಿಗೆ ಹೋಗಬಾರದು. ದೇಹವೇ ದೇಗುಲವೆಂದು ತಿಳಿದು ಅಂತರಂಗ–ಬಹಿರಂಗ–ಶುದ್ಧ

ವಾಗಿರತಕ್ಕದ್ದೇ ಬೇಕು. ಪ್ರೀತಿ. ದಯೆ. ಸ್ವಾಭಿಮಾನ. ವಿನಯ. ಸೌಜನ್ಯಗಳಿಂದ ಕೂಡಿದ ನಡವಳಿಕೆಯು ಸಮಾಜದ ಬಲವರ್ಧನೆಯನ್ನು ತಂದುಕೊಡುತ್ತದೆ. ದುಷ್ಪರಿಣಾಮಗಳನ್ನೂ ನೂರಾರು ಕ್ಷುದ್ರದೈವಗಳ ಪೂಜೆಯನ್ನೂ ವರ್ಜಿಸಬೇಕು. ಈ ಮುಂತಾದ ವೀರಶೈವ–ಸಾಮಾಜಿಕ–ತತ್ವವನ್ನು ಕನ್ನಡೇತರ ಬಹು ಜನರಿಗೆ ತಿಳಿಯಲೆಂದು ಡಾ. ಹುಂಡೇಕಾರ್ ಇಂಗ್ಲೀಷಿನಲ್ಲಿ ಈ ಗ್ರಂಥವನ್ನು ಬರೆದಿದ್ದಾರೆ. ಮೇಲಿನ ಮುಖ್ಯಾಂಶಗಳೆಲ್ಲ ಒಟ್ಟು 8 ಅಧ್ಯಾಯಗಳಲ್ಲಿ ಬಂದಿವೆ. ಮೊದಲ 3 ಅಧ್ಯಾಯಗಳಲ್ಲಿ ವೀರಶೈವ ಸಿದ್ಧಾಂತದ ಹಿನ್ನೆಲೆಯನ್ನು ವಿವರಿಸಿ. ದ್ವೈತಾದ್ವೈತ ಮುಂತಾದ ಬೇರೆ ಸಿದ್ಧಾಂತಗಳೊಂದಿಗೆ ತುಲನೆ ಮಾಡಿ ವೀರಶೈವದ ವಿಶೇಷತೆಯನ್ನು ತಿಳಿಸುವ ಯತ್ನವಿದೆ. ಆದರೆ ಇದೆಲ್ಲ ಗೋಜುಗೋಜಾದ ವಿಚಾರಗಳಿಂದಲೂ. ಆತುರದ ತೀರ್ಮಾನಗಳ ರಭಸದ ಮಾತುಗಳಿಂದಲೂ ಕೂಡಿ ಗೊಂದಲವಾಗಿದೆ. ತೌಲನಿಕ ಅಧ್ಯಯನದಲ್ಲಿ ವಿವಿಧ ಸಿದ್ಧಾಂತಗಳ ಸಾರವನ್ನು ಸಮರ್ಪಕವಾಗಿಡುವ ವಸ್ತುನಿಷ್ಠ ದೃಷ್ಟಿ ಇರಬೇಕು. ನಿಷ್ಪಕ್ಷವಾದ ನಿರ್ಣಾಯಕವಾದ ಪ್ರತಿಪಾದನೆಯಿರಬೇಕು. ಅಲ್ಲದೆ 'ಸ್ವಮತ ಮಂಡನೆ. ಪರ ಮತ ಖಂಡನೆ' ಸಾಂಪ್ರದಾಯಿಕ ಧರ್ಮ ಸಿದ್ಧಾಂತಿಗಳ ಸಂಪ್ರದಾಯವೇ ಆಗಿಬಿಟ್ಟಿದ್ದರೂ ಆಧುನಿಕ ವೈಚಾರಿಕ ಅಧ್ಯಯನ ದೃಷ್ಟಿಗೆ ಇದು ಸರಿ ಹೊಂದುವುದಿಲ್ಲ. ಒಂದೊಂದು ಸಿದ್ಧಾಂತಕ್ಕೂ ತನ್ನದೇ ಆದ ಒಂದು ಹಿನ್ನೆಲೆ. ಗುಣಾಂಶಗಳೂ ಇರುತ್ತವೆ. ದೃಷ್ಟಿ ಹಾಗೂ ಮನೋಧರ್ಮಗಳಲ್ಲಿ ಬೇರೆ ಬೇರೆ ಎಂದೆನಿಸಿದರೂ ಎಲ್ಲ ಸಿದ್ಧಾಂತಗಳೂ ಸತ್ಯಾನ್ವೇಷಣೆಯ ವಿವಿಧ ಮಾರ್ಗಗಳೇ ಹೊರತು ಪರಸ್ಪರ ವಿರೋಧಗಳಲ್ಲ. ಆಗಲೂಬಾರದು.

ಮುಂದಿನ ಮೂರು ಅಧ್ಯಾಯಗಳಲ್ಲಿ ಪ್ರಸ್ತುತ ಮುಖ್ಯವಿಷಯವಾದ ವೀರಶೈವ ಸಾಮಾಜಿಕ ತತ್ವ ಮತ್ತು ರಚನೆಯ ವಿವರ ಇದೆ. ಇದರಲ್ಲಿಯ ಕ್ರಾಂತಿಕಾರಕ ಸುಧಾರಣೆಗಳನ್ನೂ ಎಲ್ಲ ಮುಖ್ಯ ಅಂಶಗಳನ್ನೂ ನಿರೂಪಿಸಿದ್ದಾರೆ. ಮಠಗಳಿಗೆ ಗುರುಕ್ಕೆ ಪ್ರಾಧಾನ್ಯ ಕೊಟ್ಟು ವೀರಶೈವ ಹಳೆಯ ಜಾತಿ ಪದ್ಧತಿಯನ್ನು ನಿರ್ದಾಕ್ಷಿಣ್ಯವಾಗಿ ಬಿಂಬಿಸಿ ತೋರಿಸಿ ಹಾಕಿತೆಂಬುದನ್ನೇ ಪುಟ 45.51. 53. 59 ಮತ್ತು 69ರಲ್ಲಿ ಮತ್ತೆಮತ್ತೆ ಹೇಳುತ್ತಾರೆ. ಇದರ ನಡುವೆ ಜಾತಿವರ್ಣ ಪದ್ಧತಿಯನ್ನು ಒಪ್ಪುವ ಶ್ರೀಪತಿ ಪಂಡಿತನನ್ನು ಸಮರ್ಥಿಸುವ ಪ್ರಯತ್ನವೂ ಸೇರಿರುವುದು ತಮಾಷೆಯಾಗಿದೆ. ಪುನರುದ್ಧಾರದ ಹೆಸರ ವಲ್ಲದೆ ಈ ಭಾಗದಲ್ಲಿ ತಪ್ಪು ಕಲ್ಪನೆ ಬರುವಂತಹ ಕೆಲವು ವಿಚಾರಗಳೂ ಇವೆ. “Thus in the religious era the priestly class was the monied class and the devotees were the impoverished class for the simple reason that the priestly class became rich in course of time exploiting the devotees.” (p. 54) “So in the days of Basava the priests were the bankers.” . . . . . . “ But Basava protested against such a system ” (p 55) ಧಾರ್ಮಿಕ ಶೋಷಣೆಗೆ ಆರ್ಥಿಕ ವಿವರಣೆ ಕೊಡಲು ಹೋಗಿ ಇಂತಹ ಆಭಾಸ ವಾಗಿದೆ. ಬಸವಣ್ಣನವರ ಪ್ರತಿಭಟನೆ ಜನರ ಮೌಢ್ಯ ಮತ್ತು ಪುರೋಹಿತ ವರ್ಗದ ವಂಚನೆಯ ವಿರುದ್ಧವೇ ಹೊರತು ಆರ್ಥಿಕ ಕಾರಣಕ್ಕಾಗಿ ಅಲ್ಲ.

ಏಳನೆಯ ಅಧ್ಯಾಯದಲ್ಲಿ ಕ್ರಾಂತಿಕಾರಕ ಸುಧಾರಣೆಗಳನ್ನು ಆಚರಣೆಗೆ ತರುವಾಗ ಶರಣರು ಎದುರಿಸಿದ ಜೈನ ಹಾಗೂ ವೈದಿಕ ಸಂಪ್ರದಾಯನಿಷ್ಠರ ಪ್ರಚಂಡ ವಿರೋಧವನ್ನೂ ಹಿಂಸೆ ಕಿರುಕುಳ ಗಳನ್ನೂ ಪ್ರಸ್ತಾಪಿಸಿದ್ದಾರೆ. ಇಲ್ಲಿ ಒಂದು ಕಡೆ: “ Bijjala tried to criple the power of Basava.” (p. 90) ಎಂದು ಬರೆದಿರುವುದು ಹಾಸ್ಯಾಸ್ಪದವಾಗಿದೆ. ಬಿಜ್ಜಳ–ಬಸವಣ್ಣ ಪ್ರತಿಸ್ಪರ್ಧಿಗಳಾಗಿದ್ದರೋ ಎಂಬ ತಪ್ಪು ಭಾವನೆ ಉಂಟಾಗುತ್ತದೆ. ಆ ಕಾಲದಲ್ಲಿ ಬಿಜ್ಜಳ ತಾನೆ ಚಾಲುಕ್ಯ ಸಮ್ರಾಟನೆಂದುಕೊಳ್ಳುವಷ್ಟು ಸರ್ವಾಧಿಕಾರಿಯಾಗಿದ್ದ ಎಂದು ಇತಿಹಾಸ ಹೇಳುತ್ತದೆ.

ಬಿಜ್ಜಳ ಜೈನನೆಂಬ ವಿಚಾರ. ಜಗದೇವ ಬೊಮ್ಮರಸರು (ವೀರಶೈವ ಸೇನಾಧಿಕಾರಿಗಳೆಂದು ಇವರನ್ನು ಕರೆದಿರುವುದೂ ಅನುಚಿತವಾಗಿದೆ) ಬಿಜ್ಜಳನನ್ನು ಕೊಂದರು ಎಂಬ ವಿಚಾರ ವಿವಾದಾಸ್ಪದ ವಾಗಿವೆ.

ಹಾಗೆಯೇ ಶರಣರಿಗೂ ಕಲ್ಯಾಣದ ರಾಜಸೇನೆಗೂ ಘೋರ ಯುದ್ಧವಾಯಿತು (ಪು. 91) ಎಂಬ ವಿಚಾರದ ಬಗೆಗೂ ಇತಿಹಾಸದಲ್ಲಿ ಯಾವ ಆಧಾರವೂ ಇಲ್ಲ. ಐತಿಹಾಸಿಕ ಪ್ರಮಾಣಗಳಿಲ್ಲದಿರುವಾಗ ಶರಣರ ಆಚಾರ–ವಿಚಾರಗಳನ್ನು ಸ್ಪಷ್ಟವಾಗಿ ತಿಳಿಸುವ ಆಕರಗಳು ಅವರ ವಚನಗಳೇ. ಯುದ್ಧ, ಸೇನೆ ಮುಂತಾದ ಮಾತುಗಳೇ ಶರಣರ ಜೀವನಕ್ಕೂ ತತ್ತ್ವಕ್ಕೂ ವಿರೋಧವಾಗಿರುವಾಗ ನಮ್ಮ ಊಹೆ ಸದಾ ಸಮಂಜಸವಾದುದಾಗಿರಬೇಕು. ಚೆನ್ನಾಗಿ ತರಬೇತಾದ. ಸುಸಜ್ಜಿತವಾದ ಕಲ್ಯಾಣದ ರಾಜಸೇನೆಯೊಡನೆ ರಣರಂಗದಲ್ಲಿ (ಸ್ವರಕ್ಷಣೆಗಾದರೂ) ಘೋರವಾಗಿ ಹೋರಾಡಬೇಕಾದರೆ ಶರಣರು ಕಲ್ಯಾಣದಲ್ಲಿ ಶಿವಾನುಭವದಲ್ಲಿ ತೊಡಗಿದ್ದರೊ ಅಥವಾ ಗುಪ್ತವಾಗಿ ಯುದ್ಧ ಕಲೆಯಲ್ಲಿ ತರಬೇತಿ ಪಡೆಯುತ್ತಿದ್ದರೊ ಎಂಬ ಶಂಕೆ ಮೂಡುತ್ತದೆ. ಬಸವಾದಿ ಶರಣರು ಕಾಲವು ಪ್ರತಿಕೂಲವಾದಾಗ ನೊಂದು ಕಲ್ಯಾಣವನ್ನು ಬಿಟ್ಟು ಹೋಗಿರಬಹುದು. ಯಾವುದೋ ರಾಜಕಾರಣದ ಒಳಸಂಚು ಬಿಜ್ಜಳನ ಹತ್ಯೆಗೆ ಕಾರಣವಾಗಿ ಅದು ಶರಣರ ಮೇಲೆ ಉದ್ದೇಶಪೂರ್ವಕವಾಗಿ ಹೊರಿಸಲ್ಪಟ್ಟ ಮಿಥ್ಯಾಪವಾದವಾಗಿರಬಹುದು. ನಿರಸ್ತ್ರರಾಗಿ ಹೋಗುತ್ತಿದ್ದ ಶರಣರನ್ನು ಕಲ್ಯಾಣದ ರಾಜಸೇನೆ ಬೆನ್ನಟ್ಟಿ ಹೋಗಿರಲಾರದು. ಹೀಗೆಂದು ಊಹೆ ಮಾಡಬಾರದೇಕೆ?

ಕೊನೆಯ ಅಧ್ಯಾಯದಲ್ಲಿ ವಚನ ಯುಗದ ಅನಂತರ 17ನೆಯ ಶತಮಾನದ ವರೆಗೆ ಆದ ವೀರಶೈವ ಧರ್ಮ ಹಾಗೂ ಸಾಹಿತ್ಯಗಳ ಬೆಳವಣಿಗೆಯ ಸಾರಾಂಶವಿದೆ.

ಲೇಖಕರ ಸದುದ್ದೇಶವನ್ನೂ ಉತ್ಸಾಹವನ್ನೂ ಮೆಚ್ಚಬಹುದಾದರೂ ಅವರ ಪ್ರಯತ್ನ ಸಮರ್ಪಕವಾಗಿ. ತೃಪ್ತಿಕರವಾಗಿ ಆಗಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಶಬ್ದಾಡಂಬರ. ಹಿತವೆನಿಸದ ವಾಕ್ಯ ರಚನೆ. ವಸ್ತು ಪ್ರತಿಪಾದನೆಗೆ ಹೊಂದದ ಶೈಲಿಗಳಿಂದಾಗಿ ಇಲ್ಲಿಯ ಇಂಗ್ಲಿಷ್ ಭಾಷೆಯೂ ಸಮರ್ಪಕವಾಗಿಲ್ಲ. ಮುದ್ರಣ. ಪುಸ್ತಕದ ಅಂದಗೆಟ್ಟ ಹೊರರೂಪ. ಮತ್ತು ರಟ್ಟುಕಟ್ಟು (ಬೈಂಡಿಂಗ್) ಓದುಗರನ್ನು ಆಕರ್ಷಿಸುವುದಕ್ಕೂ ಓದುವ ಅನುಕೂಲಕ್ಕೂ ವಿರೋಧವಾಗಿವೆ.

—ಪ್ರಭುಪ್ರಸಾದ್

ಧರ್ಮ ಮತ್ತು ರಾಷ್ಟ್ರ : ಲೇ: ಡಾ। ಸುರೇಶಸ್ವಾಮಿ ಹಿರೇಮಠ (ಬಸಾಪಟ್ಟಿ);ಪ್ರ: ಶ್ರೀ ಷ। ಬ್ರ। ರಾಚೋಟಿ ಶಿವಾಚಾರ್ಯರು. ಮೆಹಕರ ಶ್ರೀಗುರು ಕಟ್ಟೀಮನಿ ಸಂಸ್ಥಾನ ಹಿರೇಮಠದ ಚರಪಟ್ಟಾಧಿಪತಿ; ಪುಟ:58: ಬೆಲೆ: 1.00

ಜಗತ್ತಿನಲ್ಲಿ ಇಂದು ಎಲ್ಲೆಲ್ಲಿ ನೋಡಿದರೂ ಪ್ರೀತಿ ಅನ್ಯೋನ್ಯತೆಗಳ ಬದಲು ಸ್ವಾರ್ಥ. ದ್ವೇಷಾಸೂಯೆ. ಆತ್ಮಘಾತಕವಾದ ಪೈಪೋಟಿ ಇರುವ ನಾಗರಿಕತೆಯೇ ಕಾಣುತ್ತಿದೆ. ವಿಜ್ಞಾನದ ಸಾಧನೆಗಳು ಅತ್ಯದ್ಭುತವಾಗಿವೆ. ಜೀವನ ಸೌಕರ್ಯಗಳು ಸಮೃದ್ಧವಾಗಿವೆ. ಆದರೂ ಯಾವ ದೇಶದಲ್ಲೂ ಮನಶಾಂತಿ ನೆಮ್ಮದಿಗಳಿಲ್ಲ. ಇದಕ್ಕೆಲ್ಲ ಕಾರಣ ಏನು? ಪರಿಹಾರ ಏನು? ಎಂಬ ವಿವೇಚನೆಯೇ ಈ ಪುಸ್ತಕದ ವಸ್ತು.

ಭಾರತೀಯ ಸನಾತನ ಧರ್ಮದಿಂದ ಆರಿಸಿದ್ದರೂ ಎಲ್ಲ ಜಾತಿ. ಧರ್ಮಗಳಿಗೂ ಸಮ್ಮತವಾದ ಸತ್ಯ. ಅಹಿಂಸೆ. ಅಸ್ತೇಯ. ಬ್ರಹ್ಮಚರ್ಯ. ದಯಾ. ಕ್ಷಮಾ. ದಾನ. ಪೂಜಾ. ಜಪ. ಧ್ಯಾನ ಎಂಬ ದಶ ಶೀಲಗಳನ್ನು ಲೇಖಕರು ಪ್ರತಿಪಾದಿಸಿ ಒಂದೊಂದು ಶೀಲವನ್ನೂ ವಿವರಿಸಿದ್ದಾರೆ. ಇವು ಸ್ವಭಾವದಲ್ಲಿ ಬರುವಂತೆ. ಜೀವನದಲ್ಲಿ ಸರ್ವತ್ರ ಅನುಷ್ಠಾನದಲ್ಲಿ ಬರುವಂತೆ ಮಕ್ಕಳ ಶಿಕ್ಷಣ ಕ್ರಮ ಇರಬೇಕು. ದೊಡ್ಡವರು ತಮ್ಮ ಹಾಗೂ ಲೋಕಹಿತಕ್ಕಾಗಿ ಈ ದಶಶೀಲಗಳನ್ನು ಆಚರಣೆಯಲ್ಲಿ ತರಬೇಕು. ಎಂದು ಆಶಿಸಿದ್ದಾರೆ. ಇಂದಿನ ವಾಸ್ತವ ಜಗತ್ತಿನಲ್ಲಿ ಕಾಣುವ ಅಸ್ತವ್ಯಸ್ತ. ಸಂಕೀರ್ಣತೆಗಳ ಬಗೆಗೆ ಕೋಪ. ವಿಷಾದ; ಇದು ಸರಿಹೋಗಿ ಲೋಕ ಚೆನ್ನಾಗಬೇಕೆಂಬ ಹಂಬಲ ಈ ಬರಹದ ಹಿನ್ನೆಲೆಯಾಗಿದೆ.

ಭಾರತೀಯ ಸ್ವತಂತ್ರ ಜೀವನವನ್ನು ಅವಲೋಕಿಸುತ್ತ ಲೇಖಕರು, ಪ್ರಜಾಪ್ರಭುತ್ವ. ಪ್ರಜೆಗಳೆಲ್ಲ ಸುಶಿಕ್ಷಿತರೂ ವಿವೇಕಿಗಳೂ ತಮ್ಮನ್ನು ನಿಸ್ವಾರ್ಥವಾಗಿ ದೇಶದ ಹಿತಕ್ಕೆ ದುಡಿಯುವ ಸಜ್ಜನರನ್ನು ಪ್ರತಿನಿಧಿಗಳನ್ನಾಗಿ ಆರಿಸಿದಾಗ. ಸಫಲವಾಗುತ್ತದೆ; ಕೇವಲ ಪ್ರಲೋಭನದಿಂದ ಪಡೆಯುವ ಅಧಿಕಾರ ಪಡೆದ ಅಂಕಿತರು ಅಧಿಕಾರಕ್ಕಾಗಿ ಹಣಕ್ಕಾಗಿ ಬಾಯಿ ಬಿಡುವ. ಯಾವ ಶೀಲವೂ ಇಲ್ಲದ ಸ್ವಾರ್ಥಿಗಳು

ದುರ್ವ್ಯಸನಗಳೂ ಅವರನ್ನೇ ಆಳಿ, ಅವರೇ ಅವಳಿತವಾದರೆ ಇಡೀ ದೇಶ ಪತನದ ಹಾದಿ ಹಿಡಿಯುತ್ತದೆ–ಎಂದು ಎಚ್ಚರಿಕೆ ನೀಡುತ್ತಾರೆ.

ಮತಪಂಥಗಳ ಅಭಿವೃದ್ಧಿ ಆಯಾ ಪಂಥಗಳ ಧಾರ್ಮಿಕ–ನೈತಿಕ–ಜೀವನದ್ವಾರಾಗಬೇಕು. ಜನಸಾಮಾನ್ಯರ ಅಜ್ಞಾನ, ಬಡತನಗಳನ್ನೇ ತಮ್ಮ ಮತಪ್ರಸಾರಕ್ಕೆ ಅನುಕೂಲವಾಗಿ ಮಾಡಿಕೊಂಡು ನಾನಾ ಪ್ರಲೋಭನೆಗಳನ್ನೊಡ್ಡಿ ಮತಾಂತರಗೊಳಿಸುವುದೆಂತಹ ಧರ್ಮ? ಲೋಕದಲ್ಲಿ ಜಾತಿ–ಪಂಥಗಳಿಗಿಂತ ಭೇದಭಾವನೆಯಿಲ್ಲದೆ ಜಗತ್ತಿನ ಎಲ್ಲರ ಹಿತಕ್ಕಾಗಿ ದುಡಿಯುವ ಮಾನವ ಧರ್ಮ ದೊಡ್ಡದು. ಒಂದು ದೇಶದಲ್ಲಿ ಸ್ವಾರ್ಥ ಸ್ವಪ್ರತಿಷ್ಠೆಗಳ ಸಂಕುಚಿತ ಮನೋಭಾವ ಸಮಷ್ಟಿ ಹಿತಕ್ಕಾಗಿ ವಿಶಾಲವಾದ ರಾಷ್ಟ್ರೀಯ ಪ್ರಜ್ಞೆಯಾಗಿ ಬೆಳೆಯಬೇಕು. ಹಾಗೆಯೇ ಇಡೀ ಜಗತ್ತಿನಲ್ಲಿ ದೇಶದೇಶಗಳ ಸ್ವಾರ್ಥ ಸ್ವಪ್ರತಿಷ್ಠೆಗಳು ವಿಶ್ವಮಾನವೀಯ ಪ್ರಜ್ಞೆಯಲ್ಲಿ ಕರಗಿಹೋಗಬೇಕು.

ಹೀಗೆ ಈ ಎಲ್ಲ ವಿವೇಕಶೀಲವಾದ ವಿಚಾರಗಳನ್ನೊಳಗೊಂಡಿದ್ದರೂ ಪುಸ್ತಕ ಮೇಲ್ನೋಟಕ್ಕೆ ನಿರರ್ಥಕವಾಗಿದೆ. ಪ್ರಸ್ತಾವನೆಯ ರೂಪದ ಮೊದಲ 38 ಪುಟಗಳನ್ನು ನೋಡುವುದರಲ್ಲಿ ಓದುಗ ತನ್ನ ಆಸಕ್ತಿಯೆಲ್ಲವನ್ನೂ ಕಳೆದುಕೊಳ್ಳುತ್ತಾನೆ. ಪುಸ್ತಕಕ್ಕಿಟ್ಟ ಹೆಸರೇ ನೀರಸವಾಗಿದೆ. ಮುಖಪತ್ರ, ಮುದ್ರಣ, ಪುಸ್ತಕ ಪ್ರಕಟನೆಯೂ ಒಂದು ಕಲೆ ಎಂಬುದನ್ನು ಪೂರ್ಣವಾಗಿ ಮರೆತರೆ ಆಗುವುದೇ ಹೀಗೆ. ಭಾಷೆ, ಶೈಲಿ, ಬರವಣಿಗೆಯ ವಿಧಾನ ಎಲ್ಲವೂ ಯಾವುದೋ ಓಬಿರಾಯನ ಕಾಲದಲ್ಲಿದ್ದಂತೆ ಇವೆ. ಅತಿ ಆಡಂಬರಯುಕ್ತವಾದ ಭಾಷೆಯಲ್ಲಿ ಬೇಸರಗೊಳಿಸುವ ಪುರಾಣದ ಶೈಲಿಯಲ್ಲಿ. ತೀರ ಸಾಧಾರಣವೂ ಸ್ವಯಂಸ್ಪಷ್ಟವೂ ಆದ ಸಂಗತಿಗಳನ್ನು ಮಂದಗತಿಯಲ್ಲಿ ತಿಳಿಸುವಂತಹ ಪುಸ್ತಕದ ಆರಂಭವಂತೂ ಅತಿ ನಿರುತ್ಸಾಹವನ್ನುಂಟುಮಾಡುತ್ತದೆ. ನೋಡಿದ ತತ್‌ಕ್ಷಣ ಹೀಗೆ ಕಾಣುವ ಪುಸ್ತಕವನ್ನು ಓದಬೇಕೆಂಬ ಆಸೆಯಾಗಲಿ ಕುತೂಹಲವಾಗಲಿ ಯಾರಿಗೂ ಬಾರದಿದ್ದರೆ ಆಶ್ಚರ್ಯವೇನಿಲ್ಲ.

—ಪ್ರಭುಪ್ರಸಾದ್

ಸಮಾಜಶಾಸ್ತ್ರ : ಲೇಖಕರು: ಹೆಚ್. ಚನ್ನಬಸವಯ್ಯ, ವೈ. ಆರ್. ಮೋಹನ್. ಟಿ. ಆರ್. ಶ್ಯಾಮಭಟ್ ಮತ್ತು ಉಮಾ ಲಕ್ಷ್ಮಣ್ : ಪ್ರಕಾಶಕರು: ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು : ಪುಟಗಳು 304; ಬೆಲೆ: ರೂ. 5

ಸಮಾಜಶಾಸ್ತ್ರ ಎಂಬ ಪುಸ್ತಕ ಬೆಂಗಳೂರು ವಿಶ್ವವಿದ್ಯಾಲಯದ 5ನೆಯ ಪಠ್ಯೇತರ ಪುಸ್ತಕ. ಈ ಗ್ರಂಥದಲ್ಲಿ ಹನ್ನೊಂದು ಅಧ್ಯಾಯಗಳಿವೆ. ಮೊದಲನೆಯ ಅಧ್ಯಾಯದಲ್ಲಿ ಪಾಶ್ಚಾತ್ಯ ಲೇಖಕರ ದೃಷ್ಟಿಕೋನದಲ್ಲಿ ಸಮಾಜಶಾಸ್ತ್ರ ಬೆಳವಣಿಗೆಯನ್ನು ಸಂಕ್ಷಿಪ್ತವಾಗಿ ತಿಳಿಸಿ, ಭಾರತದ ಕೆಲವು ಪ್ರಮುಖ ಸಮಾಜಶಾಸ್ತ್ರಜ್ಞರ ಹೆಸರುಗಳನ್ನು ತಿಳಿಸಿದ್ದಾರೆ. ಇವರ ಸಂಶೋಧನೆಯ ವಿಚಾರವಾಗಿ ಹಲವು ವಾಕ್ಯಗಳನ್ನಾದರೂ ಹೇಳಬಹುದಾಗಿತ್ತು. ಈ ಅಧ್ಯಾಯದಲ್ಲಿ ಸಮಾಜಶಾಸ್ತ್ರದ ಕೆಲವು ವ್ಯಾಖ್ಯೆಗಳನ್ನು ಹೇಳಿ ಚರ್ಚಿಸಿದ್ದರೆ ಸಮಾಜಶಾಸ್ತ್ರದ ಸ್ವರೂಪ ಮತ್ತು ವ್ಯಾಪ್ತಿಯನ್ನು ಗ್ರಹಿಸಲು ಅನುಕೂಲವಾಗುತ್ತಿತ್ತು. ಈ ಅಧ್ಯಾಯದಲ್ಲಿ ಸಮಾಜಶಾಸ್ತ್ರಕ್ಕೂ ಇತರ ಸಮಾಜವಿಜ್ಞಾನಗಳಿಗೂ ಇರುವ ಸಂಬಂಧವನ್ನು ಹೇಳಲಾಗಿದೆ. ಅಧ್ಯಾಯದ ಕೊನೆಯ ಭಾಗದಲ್ಲಿ ಸಮಾಜಶಾಸ್ತ್ರದ ಅಭ್ಯಾಸದ ವಿಧಾನಗಳನ್ನು ಸಂಕ್ಷೇಪವಾಗಿ ನಿರೂಪಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಮೂಲಭೂತ ಕಲ್ಪನೆಗಳನ್ನು ವಿವರಿಸಲಾಗಿದೆ. ಗ್ರಾಮ ಮತ್ತು ನಗರ ಸಮುದಾಯಗಳ ಸ್ವರೂಪ ಮತ್ತು ವ್ಯತ್ಯಾಸಗಳನ್ನು ತಿಳಿಸಲಾಗಿದೆ. ಈ ವಿಷಯವನ್ನು ಹೆಚ್ಚು ವಿವರಣೆಯೊಂದಿಗೆ ಬೇರೊಂದು ಅಧ್ಯಾಯದಲ್ಲಿ ನಿರೂಪಿಸಬಹುದಾಗಿತ್ತು. ಇಂದಿನ ಜೀವನದ ಬಗೆಯಲ್ಲಿ ಮಹತ್ವ ಪರಿಣಾಮವನ್ನುಂಟುಮಾಡುತ್ತಿರುವ ನಗರದ ಜೀವನದ ಬಗೆಯನ್ನೂ ಅದಕ್ಕೆ ಕಾರಣವಾದ ಅಂಶಗಳನ್ನೂ ವಿವರಿಸಿ, ನಗರ ಜೀವನದ ಪ್ರವೃತ್ತಿಗಳ ಭವಿಷ್ಯರಾಹಿತ್ಯವನು ಸ್ವಲ್ಪ ಚರ್ಚಿಸಬಹುದಾಗಿತ್ತು.

ಮೂರನೆಯ ಅಧ್ಯಾಯದಲ್ಲಿ ಮಾನವ ಮತ್ತು ಅವನ ಆವರಣವನ್ನು ನಾಲ್ಕರಿಂದ ಒಂಬತ್ತರ

ವರೆಗಿನ ಅಧ್ಯಾಯಗಳಲ್ಲಿ ಕುಟುಂಬ ಮತ್ತು ವಿವಿಧ ಸಾಮಾಜಿಕ ಸಂಸ್ಥೆಗಳನ್ನೂ ಸಾಕಷ್ಟು ವಿವರಣೆಗಳೊಂದಿಗೆ ನಿರೂಪಿಸಲಾಗಿದೆ.

ಆರ್ಥಿಕ ಸಂಸ್ಥೆಗಳ ನಿರೂಪಣೆಯ ಅಧ್ಯಾಯ ಬಹಳ ಸಂಕ್ಷೇಪವಾಗಿದೆ. ಆದಿವಾಸಿಗಳ ಸಮಾಜದ ಆರ್ಥಿಕ ಕಲಾಪಗಳನ್ನು ತಿಳಿಸಿ ಇಂದಿನ ಆರ್ಥಿಕ ವ್ಯವಸ್ಥೆ ಕ್ರಮವಾಗಿ ವಿಕಾಸಗೊಂಡ ರೀತಿಯನ್ನು ತಿಳಿಸಿದ್ದರೆ ಉತ್ತಮವಾಗುತ್ತಿತ್ತು. ಆಧುನಿಕ ಸಮಾಜದಲ್ಲಿರುವ ಪ್ರಮುಖ ಆರ್ಥಿಕ ವ್ಯವಸ್ಥೆಗಳಾದ ಬಂಡವಾಳ ಪದ್ಧತಿ, ಸಮಾಜವಾದ ಇವುಗಳ ವಿಷಯವಾಗಿ ಸ್ವಲ್ಪ ವಿಶದವಾಗಿ ಚರ್ಚಿಸಿ, ಇಂದು ಅನೇಕ ರಾಷ್ಟ್ರಗಳು ಅನುಸರಿಸುತ್ತಿರುವ ಮಿಶ್ರ ಆರ್ಥಿಕ ವ್ಯವಸ್ಥೆಯ ಬೆಳವಣಿಗೆಯ ನಿರೂಪಣೆಯ ಆವಶ್ಯಕತೆಯನ್ನು ತಿಳಿಸಿದ್ದಿದ್ದರೆ. ಮಾನವ ಸಮಾಜದ ಆರ್ಥಿಕ ಜೀವನದ ಪೂರ್ಣದೃಷ್ಟಿಯ ಅರಿವಿಗೆ ಸಹಾಯಕವಾಗುತ್ತಿತ್ತು.

ಈ ಗ್ರಂಥದ ಹತ್ತನೆಯ ಅಧ್ಯಾಯದಲ್ಲಿ ಸಾಮಾಜಿಕ ನಿಯಂತ್ರಣವನ್ನು ವಿವರಿಸಲಾಗಿದೆ. ಈ ಅಧ್ಯಾಯದ ಪ್ರತಿಯೊಂದು ಭಾಗದಲ್ಲೂ ಹೆಚ್ಚಾಗಿ ಮ್ಯಾಕ್ ಐವರ್ ಮತ್ತು ಪೇಜರ 'ಸೊಸೈಟಿ' ಎಂಬ ಗ್ರಂಥದ ಏಳು, ಎಂಟು ಮತ್ತು ಒಂಬತ್ತನೆಯ ಅಧ್ಯಾಯಗಳನ್ನು ಬಳಸಿಕೊಂಡು ಬರೆಯಲಾಗಿದೆ. ಈ 'ಏಕಪುಸ್ತಕ ನಿಷ್ಠೆ'ಯನ್ನು ಸ್ವಲ್ಪ ಸಡಲಿಸಿ, ಮಿಕ್ಕ ಸಮಾಜಶಾಸ್ತ್ರ ಗ್ರಂಥಗಳ ಆಧಾರದ ಮೇಲೆ ವಿಷಯ ನಿರೂಪಣೆ ಮಾಡಿದ್ದಿದ್ದರೆ. 'ಸೊಸೈಟಿ' ಎಂಬ ಉದ್ಗ್ರಂಥವನ್ನು ಅಲಕ್ಷ್ಯ ಮಾಡಿದಂತಾಗುತ್ತಿರಲಿಲ್ಲ. ಆಗ ಈ ವಿಷಯದಲ್ಲಿ ಓದುಗರಲ್ಲಿ ಇನ್ನೂ ಹೆಚ್ಚು ಆಸಕ್ತಿಯನ್ನು ಮೂಡಿಸುತ್ತಿತ್ತೆಂದು ಧಾರಾಳವಾಗಿ ಹೇಳಬಹುದು.

ಈ ಗ್ರಂಥದ ಕೊನೆಯ ಅಧ್ಯಾಯದಲ್ಲಿ ಸಾಮಾಜಿಕ ಬದಲಾವಣೆಯನ್ನು ಆಳವಾಗಿ ಪರಿಶೀಲಿಸಿ, ವಿಜ್ಞಾನದ ಆಧುನಿಕ ಬೆಳವಣಿಗೆಯ ಹಲವು ಅಂಶಗಳನ್ನು ಸಂಕ್ಷೇಪವಾಗಿ ತಿಳಿಸಿ. ಅವುಗಳ ಪರಿಣಾಮಗಳನ್ನು ನಿರೂಪಿಸಲಾಗಿದೆ. ಸಾಮಾಜಿಕ ಬದಲಾವಣೆಯ ಸಮಗ್ರ ಚಿತ್ರವನ್ನು ವಿದ್ವತ್‌ಪೂರ್ಣವಾಗಿ ಚರ್ಚಿಸಿರುವುದು ಅಭಿನಂದನೀಯ.

ಈ ಪುಸ್ತಕದಲ್ಲಿ ಸಮೂಹಗಳ ವಿಷಯವಾಗಿ ಕೆಲವು ಅಂಶಗಳನ್ನು ವಿವರಿಸಿ ಒಂದು ಅಧ್ಯಾಯದ ರಚನೆಯ ಆವಶ್ಯಕತೆ ಇದ್ದಿತು. ಹಾಗೆಯೇ ಸಮಾಜೀಕರಣದ ವಿಷಯವಾಗಿ ಹಲವು ವಿಚಾರಗಳನ್ನು ತಿಳಿಸಿದ್ದರೆ ಪುಸ್ತಕದ ಉಪಯುಕ್ತತೆ ಹೆಚ್ಚುತ್ತಿತ್ತು.

ಹಲವಾರು ಸಮಾಜಶಾಸ್ತ್ರ ಪುಸ್ತಕಗಳ ಆಧಾರದ ಮೇಲೆ ರಚಿತವಾಗಿರುವ ಈ ಗ್ರಂಥದಲ್ಲಿ, ಆಧಾರಗ್ರಂಥಗಳನ್ನು ಹೇಳದೆ ಇರುವುದು ಒಂದು ಗಣನೀಯವಾದ ನ್ಯೂನತೆ ಎಂದು ಅನಿವಾರ್ಯವಾಗಿ ಹೇಳಬೇಕಾಗಿದೆ. ಆಧಾರ ಗ್ರಂಥಗಳನ್ನು ಸೂಚಿಸಿದ್ದರೆ ವಿದ್ಯಾರ್ಥಿಗಳಿಗಲ್ಲದೆ ಉಪಾಧ್ಯಾಯರಿಗೂ ಹೆಚ್ಚು ಅನುಕೂಲವಾಗುತ್ತಿತ್ತು. ಹಾಗೆಯೇ ವಿಷಯಸೂಚಿಯನ್ನು ಕೊಟ್ಟಿದ್ದರೆ ಓದುಗರಿಗೆ ಹೆಚ್ಚು ಸಹಾಯವಾಗುತ್ತಿತ್ತು.

ಸಮಾಜಶಾಸ್ತ್ರದ ಸಂಪಾದಕೀಯ ಮಂಡಲಿ ಅಧ್ಯಕ್ಷರು ಒಂದು ಪೀಠಿಕೆಯನ್ನು ಬರೆಯದೇ ಇರುವುದು ಒಂದು ರೀತಿಯಲ್ಲಿ ಸೋಜಿಗವನ್ನುಂಟುಮಾಡುತ್ತದೆ. ಪುಸ್ತಕದ ರಚನೆಯ ಉದ್ದೇಶ. ಯಾವ ವಿದ್ಯಾರ್ಥಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಪುಸ್ತಕವನ್ನು ರಚಿಸಲಾಗಿದೆ ಎಂಬುದನ್ನು ತಿಳಿಸುವ ಅಗತ್ಯವಿತ್ತು. ಈ ಕೊರತೆಯನ್ನು ಸಂಪಾದಕೀಯ ಮಂಡಲಿಯ ಸದಸ್ಯರಲ್ಲಿ ಯಾರಾದರೂ ನಿವಾರಿಸಬಹುದಾಗಿತ್ತು.

ಒಟ್ಟಿನಲ್ಲಿ ಹೇಳುವುದಾದರೆ ಬೆಂಗಳೂರು ವಿಶ್ವವಿದ್ಯಾಲಯದ 'ಸಮಾಜಶಾಸ್ತ್ರ'. ಎಂಬ ಗ್ರಂಥ ಸಮಾಜಶಾಸ್ತ್ರ ಸಾಹಿತ್ಯಕ್ಕೆ ಉತ್ತಮವಾದ ಕೊಡುಗೆ. ಈ ಗ್ರಂಥಕರ್ತರ ಆಳವಾದ ಜ್ಞಾನ ಮತ್ತು ಪಾಂಡಿತ್ಯಗಳಿಗೆ ಅವರ ಬರವಣಿಗೆಗಳು ಸಾಕ್ಷಿಗಳಾಗಿವೆ. ಕನ್ನಡದಲ್ಲಿ ಈ ರೀತಿಯ ಹಲವಾರು ಗ್ರಂಥಗಳು ರಚಿತವಾದಲ್ಲಿ ಸಮಾಜಶಾಸ್ತ್ರದ ಅಧ್ಯಯನದ ಅಭಿವೃದ್ಧಿಗೆ ದಾರಿಯಾಗುತ್ತದೆ.

—ಎಚ್. ಎಂ. ಸದಾಶಿವಯ್ಯ

ಸಾಮಾಜಿಕ ಮನೋವಿಜ್ಞಾನ: ಲೇಖಕರು: ಆರ್. ಎಂ. ಫಣಿರಾಯ: ಪ್ರಕಾಶಕರು: ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು: ಬೆಲೆ: ರೂ. 4.25

ಗ್ರಂಥಕರ್ತರಾದ ಶ್ರೀ ಫಣಿರಾಯ ಅವರು ಪುಸ್ತಕವನ್ನು ಚೆನ್ನಾಗಿ ಬರೆದಿದ್ದಾರೆ. ಇದರಲ್ಲಿ ಯಾವ ಸಂಶಯವೂ ಇಲ್ಲ. ಇಂಥ ಪುಸ್ತಕವನ್ನು ಪ್ರಕಟಿಸಿ ಬೆಂಗಳೂರು ವಿಶ್ವವಿದ್ಯಾಲಯದ ಅಧಿಕಾರಿಗಳು ವಿದ್ಯಾರ್ಥಿವೃಂದಕ್ಕೆ ಸಹಾಯ ಮಾಡಿದ್ದಾರೆ. ಗ್ರಂಥಕರ್ತರು ಬಹಳ ಸರಳವಾದ ಶೈಲಿಯನ್ನು ಬಳಸಿದ್ದಾರೆ. ಬಿ. ಎ. ತರಗತಿಯಲ್ಲಿ ಓದುವ ವಿದ್ಯಾರ್ಥಿಗಳ ಅವಶ್ಯಕತೆಗಳೇನೆಂಬುದನ್ನು ಗ್ರಂಥಕರ್ತರು ಚೆನ್ನಾಗಿ ಅರಿತಿದ್ದಾರೆ. ಪುಸ್ತಕದಲ್ಲಿ ಸೂಚಿತವಾಗಿರುವ ಅಧ್ಯಾಯಗಳ ಶೀರ್ಷಿಕೆಗಳನ್ನು ನೋಡಿದರೆ 13, 14, 15ನೆಯ ಅಧ್ಯಾಯಗಳಲ್ಲಿರುವ ವಿಷಯಗಳನ್ನು ಪಠ್ಯವಿಷಯಗಳನ್ನಾಗಿ ಹೊಸದಾಗಿ ಸಾಮಾಜಿಕ ಮನೋವಿಜ್ಞಾನದ ಕ್ಷೇತ್ರದಲ್ಲಿ ಸೇರಿಸಿದಂತೆ ಕಂಡುಬರುತ್ತದೆ. ಇದು ಸೂಕ್ತವಾದ ಕೆಲಸವಾಗಿದೆ. ಏಕೆಂದರೆ, ಗ್ರಂಥಕರ್ತರು ಪುಸ್ತಕದ ಒಂದು ಭಾಗದಲ್ಲಿ ಸೂಚಿಸಿರುವಂತೆ ಎಲ್ಲಾ ಅಂತಸ್ಥಿನ ಪ್ರಾಣಿಗಳಲ್ಲಿಯೂ ಸಾಮಾಜಿಕ ಜೀವನವಿರುತ್ತದೆ. ಅಂಥ ಜೀವನದ ಅಧ್ಯಯನ ಸಾಮಾಜಿಕ ಮನೋವಿಜ್ಞಾನಕ್ಕೆ ಸೇರಿರುತ್ತದೆ. ಈ ಪುಸ್ತಕದಲ್ಲಿರುವ ಒಂದು ಕೊರತೆಯೆಂದರೆ ಪುಸ್ತಕದ ಅಥವಾ ಅಧ್ಯಾಯಗಳ ಕೊನೆಯಲ್ಲಿ ಸಹಾಯಕ ಗ್ರಂಥಗಳ ಪಟ್ಟಿ ಇಲ್ಲದಿರುವುದು. ಸಾಮಾಜಿಕ ಮನೋವಿಜ್ಞಾನ ಇತ್ತೀಚೆಗೆ ವಿಪುಲವಾಗಿ ಬೆಳೆದಿದೆ. ವಿದ್ಯಾರ್ಥಿಗಳಿಗಾಗಿ ಈ ಪುಸ್ತಕವನ್ನು ಬರೆದಿರುವುದರಿಂದ ಗ್ರಂಥಕರ್ತರು ಇತ್ತೀಚಿನ ಪುಸ್ತಕಗಳನ್ನೂ ಲೇಖನಗಳನ್ನೂ ಬಳಸಬಹುದಾಗಿತ್ತು. ಇದರಿಂದ ಮನೋವಿಜ್ಞಾನವನ್ನು ಎಂ.ಎ. ತರಗತಿಗಳಲ್ಲಿ ಓದಬಯಸುವ ವಿದ್ಯಾರ್ಥಿಗಳಿಗೆ ಒಳ್ಳೆಯ ಪ್ರವೇಶವನ್ನು ದೊರಕಿಸಿ ಕೊಟ್ಟಂತಾಗುತ್ತಿತ್ತು. ಅನೇಕ ಕಾರಣಗಳಿಂದ ಗ್ರಂಥಕರ್ತರು ಈ ಕೆಲಸಕ್ಕೆ ಕೈ ಹಾಕದೆ ಇರಬಹುದು. ಇಷ್ಟಾದರೂ ಈ ಪುಸ್ತಕ ಓದುವವರ ಮೆಚ್ಚಿಗೆಗೆ ಪಾತ್ರವಾಗಬಹುದೆಂದು ನಿರೀಕ್ಷಿಸಬಹುದು. ಗ್ರಂಥಕರ್ತರು ಬಳಸಿರುವ ಪಾರಿಭಾಷಿಕ ಶಬ್ದಗಳು ಮನೋವಿಜ್ಞಾನದ ಕ್ಷೇತ್ರಕ್ಕೆ ಮತ್ತು ಭಾಷೆಯ ಬೆಳವಣಿಗೆಗೆ ಸಹಾಯಕವಾಗಿವೆ.

—ಟಿ. ಆರ್. ರಾವ್

ಭಾರತ ಪಾಕಿಸ್ತಾನಗಳೊಂದಿಗೆ ಸೋವಿಯೆತ್ ಸಂಬಂಧ: ಲೇಖಕರು: ದೇವೇಂದ್ರ ಕೌಶಿಕ್; ಅನುವಾದ: 'ಸೌರಭ': ಪ್ರಕಾಶಕರು: ನವಕರ್ನಾಟಕ ಪಬ್ಲಿಕೇಷನ್ಸ್ (ಪ್ರೈ) ಲಿಮಿಟೆಡ್, ಕೆಂಪೇಗೌಡ ಚೌಕ, ಬೆಂಗಳೂರು-9: ಪುಟ: 182: ಬೆಲೆ: ರೂ. 1.50

ವ್ಯಕ್ತಿ ತನ್ನ ತಿಳಿವಳಿಕೆಯಿಂದ ತಾನು ಉದ್ಧಾರವಾಗುವುದು ಮಾತ್ರವಲ್ಲದೆ, ತನ್ನ ನೆರೆಹೊರೆಯವರನ್ನೂ ಮುಂದಕ್ಕೆ ತರಬೇಕು: ಅದಕ್ಕಾಗಿ ಬೇಕಾದ ಸಹಕಾರ, ಸ್ನೇಹ, ಮತ್ತು ಸೌಜನ್ಯಗಳ ವಾತಾವರಣವನ್ನುಂಟುಮಾಡಬೇಕು. ಈ ಮಾತು ವ್ಯಕ್ತಿಗೆ ಅನ್ವಯಿಸುವಂತೆ ರಾಷ್ಟ್ರಕ್ಕೂ ಅನ್ವಯಿಸುತ್ತದೆ.

ಸ್ನೇಹ ಮತ್ತು ಸೌಜನ್ಯಗಳ ವಾತಾವರಣದಲ್ಲಿ ನೆರೆಹೊರೆಯ ರಾಷ್ಟ್ರಗಳು ಪರಸ್ಪರ ಅರಿತು ನಡೆದರೆ, ಆ ರಾಷ್ಟ್ರಗಳು ಮುಂದುವರಿಯುವುದು ಮಾತ್ರವಲ್ಲದೆ, ಜಗತ್ತಿನಲ್ಲಿ ಶಾಂತಿ ನೆಲೆಸಲು ಸಹಾಯವಾಗುತ್ತದೆ. ಬರೀ ಯುದ್ಧದಿಂದ ಏನನ್ನೂ ಸಾಧಿಸಿದಂತಾಗುವುದಿಲ್ಲ.

ಜಗತ್ತಿನ ಪ್ರಬಲ ರಾಷ್ಟ್ರಗಳಲ್ಲಿ ಒಂದಾದ ಸೋವಿಯೆತ್ ದೇಶ, ತನ್ನ ನೆರೆಹೊರೆಯ ರಾಷ್ಟ್ರಗಳಾದ ಭಾರತ ಮತ್ತು ಪಾಕಿಸ್ತಾನಗಳೊಂದಿಗೆ ನಡೆದುಕೊಂಡ ರೀತಿ-ನೀತಿಗಳನ್ನು, ಹಲವು ಘಟ್ಟಗಳಲ್ಲಿ ಆ ದೇಶಗಳೊಂದಿಗೆ ವ್ಯವಹರಿಸುವಾಗ ಅದು ತಾಳಿದ ಧೋರಣೆಯನ್ನು, ಆ ದಿಕ್ಕಿನಲ್ಲಿ ಅದು ಪಡೆದ ಅನುಭವಗಳನ್ನು ಈ ಪುಸ್ತಕದಲ್ಲಿ, ಐದು ಅಧ್ಯಾಯಗಳಲ್ಲಿ ವಿವರವಾಗಿ ವಿವರಿಸಲಾಗಿದೆ.

ಸ್ವಾತಂತ್ರ್ಯಪೂರ್ವದಿನಗಳಲ್ಲಿ ಈ ದೇಶಗಳೊಂದಿಗೆ ಸೋವಿಯೆತ್ ದೇಶ ಹೊಂದಿದ್ದ ಸಂಬಂಧವನ್ನು ಮೊದಲು ಪ್ರಸ್ತಾಪಿಸಲಾಗಿದೆ. ಅನಂತರ ಸೋವಿಯೆತ್ ದೇಶದಲ್ಲಿ ಆದ ಕ್ರಾಂತಿಯ ಫಲವಾಗಿ ಆರ್ಥಿಕ, ರಾಜಕೀಯ ಶೈಕ್ಷಣಿಕ ಮೊದಲಾದ ನಾನಾ ರಂಗಗಳಲ್ಲಿ ಅದು ಅಪಾರ ಸಾಧನೆ ಮಾಡಿ ಒಂದು ಪ್ರಬಲ ರಾಷ್ಟ್ರವಾಗಿ ಬೆಳೆದಿದ್ದು, ಅದರ ಜೊತೆಗೆ ನೆರೆ ರಾಷ್ಟ್ರಗಳೊಂದಿಗೆ ಸಂಬಂಧ ಹೊಂದಲು ಅದು

ನಡೆಸಿದ ಪ್ರಯತ್ನಗಳು ಈ ಮೊದಲಾದ ವಿಷಯಗಳನ್ನು ಹೇಳಲಾಗಿದೆ. ಈ ಸ್ನೇಹ ಸಂಬಂಧದಲ್ಲಿ ಪಾಕಿಸ್ತಾನಕ್ಕಿಂತ ಭಾರತವೇ ಹಿತವಾದ ಸ್ನೇಹವನ್ನು ಹೊಂದಿತೆಂದೂ, ಮೇಲಿಂದ ಮೇಲೆ ಈ ಎರಡೂ ರಾಷ್ಟ್ರಗಳ ಆಡಳಿತಗಾರರು ಬದಲಾದರೂ, ಸ್ನೇಹದ ವಾತಾವರಣ ಕೆಡದೆ ಮುಂದುವರಿಯಿತೆಂದೂ ವಿವರಿಸಿದೆ. ಭದ್ರತಾ ಸಮಿತಿಯಲ್ಲಿ ಗೋವಾ, ಕಾಶ್ಮೀರ ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ ಚರ್ಚೆಗಳು ನಡೆದಾಗ, ಸೋವಿಯೆತ್ ದೇಶ ಭಾರತದ ಪರವಾಗಿ ವಾದಿಸಿತೆಂದು ಹೇಳಿ, ಇದಕ್ಕೆ ಸೋವಿಯೆತ್ ದೇಶದ ನಿಷ್ಪಕ್ಷಪಾತ ಮನೋಭಾವವೇ ಕಾರಣ ಎನ್ನಲಾಗಿದೆ.

1965ರಲ್ಲಿ ಭಾರತ ಪಾಕಿಸ್ತಾನಗಳ ನಡುವೆ ಯುದ್ಧ ನಡೆದಾಗ ಈ ಎರಡು ದೇಶಗಳ ನಡುವೆ 'ಸ್ನೇಹ ಸೇತುವೆ'ಯೊಂದನ್ನು ನಿರ್ಮಿಸಲು ಪ್ರಥಮವಾಗಿ ಪ್ರಯತ್ನಿಸಿದ್ದು ಸೋವಿಯೆತ್ ದೇಶ. ಅದರ ಮುಂದಿನ ಬೆಳವಣಿಗೆಯೇ ತಾಷ್ಕೆಂಟ್ ಘೋಷಣೆ. ಈ ವಿಷಯವನ್ನು ಪ್ರಸ್ತಾಪಿಸಿ, ದೇಶದೇಶಗಳ ನಡುವೆ ಮಧುರವಾದ ಬಾಂಧವ್ಯ ಮೂಡಿಸುವಲ್ಲಿ ಸೋವಿಯೆತ್ ದೇಶ ಸದಾ ಪ್ರಯತ್ನಿಸುತ್ತಿತ್ತು ಎಂಬ ಅಂಶವನ್ನು ಹೇಳಲಾಗಿದೆ. ಇದೇ ಸೋವಿಯೆತ್ ದೇಶದ ಧೋರಣೆಯೂ ಹೌದು ಎಂಬುದು ಈ ಪುಸ್ತಕದಿಂದ ವ್ಯಕ್ತವಾಗುತ್ತದೆ.

ಪ್ರಾವ್ದಾ, ದಿ ಗಾರ್ಡಿಯನ್, ನ್ಯೂ ಟೈಮ್ಸ್, ಹಿಂದೂ ಮೊದಲಾದ ಪತ್ರಿಕಾ ವರದಿಗಳು, ಭದ್ರತಾ ಮಂಡಲಿಯ ಅಧಿಕೃತ ದಾಖಲೆಗಳು—ಇವುಗಳ ಆಧಾರದ ಮೇಲೆ ಶ್ರೀ ದೇವೇಂದ್ರ ಕೌಶಿಕ್ ಅವರು ಇಂಗ್ಲಿಷಿನಲ್ಲಿ ಬರೆದಿದ್ದ ಈ ಪುಸ್ತಕವನ್ನು 'ಸೌರಭ' ಅವರು ಕನ್ನಡಿಸಿದ್ದಾರೆ. ಅವರು ಅನುವಾದಕಾರ್ಯವನ್ನು ಶ್ರದ್ಧೆ ಉತ್ಸಾಹಗಳಿಂದ ಮಾಡಿದ್ದಾರೆ. ಸಮರ್ಪಕವಾದ ಸಂಯೋಜನೆ ಇರುವುದರಿಂದ, ಒಂದು ಒಟ್ಟು ನೋಟ ಸಾಧ್ಯವಾಗಿದೆ. ಮುದ್ರಣವೂ ಚೆನ್ನಾಗಿದೆ.

ಇತ್ತೀಚಿನ ದಿನಗಳಲ್ಲಿ ಭಾರತ ಮತ್ತು ಸೋವಿಯೆತ್ ದೇಶಗಳ ನಡುವೆ ಸ್ನೇಹ ಒಪ್ಪಂದವೊಂದು ಆಗಿದೆ. ಅದು ಹಲವು ರಂಗಗಳಲ್ಲಿ ಉಜ್ವಲವಾಗಿ ಕಂಗೊಳಿಸಿಯೂ ಇದೆ. ಈ ಸಮಯದಲ್ಲಿ ಈ ಪುಸ್ತಕ ಕನ್ನಡದಲ್ಲಿ ಪ್ರಕಟವಾಗಿರುವುದು ಸಂತೋಷದ ಸಂಗತಿ.

—ಎಸ್. ಚನ್ನಪ್ಪ

MUPM—W O 10499—2025 cpies—18-11-1972

ಮಾನವಿಕ ಕರ್ಣಾಟಕ

ವಾರ್ಷಿಕ ಚಂದಾ

(ಅಂಚೆವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	೪ ರೂ.
ಸಾಮಾನ್ಯ ಚಂದಾದಾರರಿಗೆ	೬ ರೂ.
ಸಂಸ್ಥೆಗಳಿಗೆ	೮ ರೂ.
ಆಜೀವ ಸದಸ್ಯತ್ವ	೧೦೦ ರೂ.

ಡೈರೆಕ್ಟರ್
'ಪ್ರಸಾರಾಂಗ'
ಮಾನಸಗಂಗೋತ್ರಿ
ಮೈಸೂರು–೬